VEC,Library
005285

ನಾ ಕಂಡ ಜರ್ಮನಿ

ಹೊ. ಶ್ರೀನಿವಾಸಯ್ಯ

ನಾ ಕಂಡ ಜರ್ಮನಿ

125

ಪ್ರವಾಸ

ಹೊ. ಶ್ರೀನಿವಾಸಯ್ಯ

VEC,Library
005285

VIJAYA EVENING COLLEGE,
LIBRARY
BANGALORE-4.
ACCN. NO. 5285
SECTION "A"
COST Rs. 2=70
Date 6/7/76 Librarian.

ಸುರುಚಿ ಪ್ರಕಾಶನ
ಸರಸ್ವತೀಪುರಂ, ಮೈಸೂರು–570009

NAA KANDA GERMANY—A Travelogue in Kannada by H. Sreenivasaiah, Bangalore, Published by Suruchi Prakashana, Mysore-9. Second Edition 1976.

ಎರಡನೆಯ ಮುದ್ರಣ : ೧೯೭೬

© ಹೊ. ಶ್ರೀನಿವಾಸಯ್ಯ

ಪ್ರಕಾಶಕರು
ಎಚ್. ವಿಜಯಲಕ್ಷ್ಮಿ, ಬಿ.ಎ

ಮುದ್ರಕರು
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಒಂದು ಮಾತು

ಈ ಕಿರಿಯ ಪ್ರವಾಸ ಸಾಹಿತ್ಯವನ್ನು ಕನ್ನಡದಲ್ಲಿ ಬರೆಯಲು ಪ್ರೇರೇಪಿಸಿ ಬೆಳಕಿಗೆ ತಂದ ನನ್ನ ಹಿರಿಯರಾದ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರಿಗೆ ನನ್ನ ಪ್ರಣಾಮ. ಮೊದಲನೆಯ ಮುದ್ರಣಕ್ಕೆ ಶ್ರೀ ಬಿ. ಪುಟ್ಟಸ್ವಾಮಯ್ಯನವರು, ಎರಡನೆಯ ಮುದ್ರಣಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ ದೇ. ಜವರೇಗೌಡರವರು ಮುನ್ನುಡಿಯನ್ನೂ, ಶ್ರೀ ಶರ್ಮಾಜಿಯವರು ಪ್ರಸ್ತಾವನೆಯನ್ನೂ ಬರೆದು ಹರಸಿದ್ದಾರೆ. ಕನ್ನಡ ನಾಡಿನ ವಾಚಕರ ಆಶೀರ್ವಾದದಿಂದ ಈ ಪುಸ್ತಕ ಸಂಗ್ರಹಗೊಂಡು ಮೂರನೆಯ ಮುದ್ರಣ ಕಾಣುತ್ತಿದೆ. ಎಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಹೊ. ಶ್ರೀನಿವಾಸಯ್ಯ

ಈ ಗ್ರಂಥವನ್ನು ಪ್ರಿ-ಯೂನಿವರ್ಸಿಟಿ ಎರಡನೆಯ ತರಗತಿಗೆ, 1976–77ನೇ ಸಾಲಿಗೆ ಪಠ್ಯಪುಸ್ತಕವನ್ನಾಗಿ ಗೊತ್ತುಮಾಡಿದ್ದರಿಂದ ಮತ್ತೊಂದು ಮುದ್ರಣ ವನ್ನು ತರುವಂತಾಯಿತು. ಈ ಉಪಕಾರಕ್ಕಾಗಿ ಪ್ರಿ-ಯೂನಿವರ್ಸಿಟಿ ಶಿಕ್ಷಣ ಮಂಡಲಿಗೆ ನಾನು ಕೃತಜ್ಞ.

ಮೇ 15, 1976 ಹೊ. ಶ್ರೀನಿವಾಸಯ್ಯ

ಅನುಕ್ರಮ

೧	ಪ್ರಯಾಣಕ್ಕೆ ಮುನ್ನ	೫
೨	ಹಡಗಿನಲ್ಲಿ	೭
೩	ಜರ್ಮನಿಗೆ ಆಗಮನ	೧೯
೪	ಮೊದಲ ದಿನಗಳು	೨೫
೫	ಕಾರ್ಖಾನೆಯಲ್ಲಿ	೩೦
೬	ಸಸ್ಯಾಹಾರದ ಹಟ	೪೦
೭	ಮಂಜಿನ ಮುಸುಕಿನಲ್ಲಿ	೪೬
೮	ಜರ್ಮನಿಯ ಜನ	೫೨
೯	ಸಾಮಾಜಿಕ ಆಚಾರಗಳು	೬೧
೧೦	ಎಚ್ಚೆತ್ತ ಜರ್ಮನಿ	೬೬
೧೧	ಗೆಳೆಯರೊಡನೆ	೮೪
೧೨	ಜರ್ಮನಿಯ ಹಬ್ಬಗಳು	೯೭
೧೩	ಭಾರತ–ಜರ್ಮನಿ	೧೦೫
೧೪	ಯಾಂತ್ರಿಕ ನಿಪುಣತೆ ಮತ್ತು ಕೈಗಾರಿಕೆ	೧೧೭
೧೫	ಜರ್ಮನಿಯ ಶಾಲೆಗಳು–ಯುವಕ ನಿಲಯಗಳು	೧೨೯
೧೬	ತಾಯ್ನಾಡಿಗೆ	೧೩೭

೧. ಪ್ರಯಾಣಕ್ಕೆ ಮುನ್ನ

> ಕಲಿಯುವುದಕ್ಕೆ ಕೊನೆಯಿಲ್ಲ. ಆಯಸ್ಸು ಮಾತ್ರ ಬಹಳ ಕಡಮೆ. ಅದರಲ್ಲಿ ವಿಘ್ನಗಳೂ ಬಹಳ. ಅದರಲ್ಲಿ ಸಾರವನ್ನು ಮಾತ್ರ ಗ್ರಹಿಸಿ, ನೀರಸವನ್ನು ತ್ಯಜಿಸಬೇಕು.
>
> —ಪಂಚತಂತ್ರ

ಹುಟ್ಟಿದ್ದು ಬಡತನದಲ್ಲಿ. ಪಾಶ್ಚಿಮಾತ್ಯ ದೇಶಗಳನ್ನು ನೋಡಬೇಕೆಂಬ ಆಸೆ ಚಿಕ್ಕಂದಿನಿಂದಲೂ ಇದ್ದರೂ, ಬಡತನ ಯೋಚನೆಯನ್ನು ದೂರಮಾಡಿತ್ತು, ಹಗಲು ಕಂಡ ಕನಸಿನಂತೆ.

ಇಂಜಿನಿಯರಿಂಗ್ ಕಾಲೇಜು ಬಿಟ್ಟು ಹಿಂದೂಸ್ಥಾನ ವಿಮಾನ ಕಾರ್ಖಾನೆಗೆ ಸೇರಿದಮೇಲೆ ಭಾರತ ಸರ್ಕಾರದ ಸಹಾಯದಿಂದ ಹಿಂದೂಸ್ಥಾನ ವಿಮಾನ ಕಾರ್ಖಾನೆಯ ಮೂಲಕ ಜರ್ಮನಿಗೆ ಹೋಗುವ ಅವಕಾಶ ಸಿಕ್ಕಿತು. ನನ್ನ ಜೀವನದಲ್ಲಿ ಇದೊಂದು ಯೋಗ.

ಹವಾಗುಣ, ಭಾಷೆ ಬೇರೆ. ಆ ದೇಶ ನನಗೆ ಹೊಂದುತ್ತದೆಯೇ ಎಂಬ ಯೋಚನೆಗಳು ಬಂದರೂ, ಸ್ನೇಹಿತರ ಸಹಾಯದಿಂದ ವಿಚಾರ ತಿಳಿದು, ಎಲ್ಲವೂ ದೂರವಾದವು. ನನ್ನ ಪಯಣದ ಹಡಗು ಲಾಯ್ಡ್ ಟ್ರೆಸ್ಟಿನೊ ಕಂಪನಿಯ 'ವಿಕ್ಟೋರಿಯಾ' ಎಂದು ಗೊತ್ತಾಯಿತು.

ನಾನು ಬಹಳ ದಿನದಿಂದ ಖಾದಿಪ್ರೇಮಿ. ಆದ್ದರಿಂದ ಖಾದಿಯನ್ನು ಬಿಟ್ಟು ಬೇರೆ ಬಟ್ಟೆ ಹೊಲಿಸಲು ಮನಸ್ಸು ಬರಲಿಲ್ಲ. ಖಾದಿಯಲ್ಲಿ ಜರ್ಮನರಿಗೆ ಒಪ್ಪುವಂತಹ ಬಟ್ಟೆ ಹೊಲಿಸಲು ಕಷ್ಟ ಎಂದು ಭಾವನೆಯಾಯಿತು. ಮೊದಲು ನನ್ನ ಸ್ನೇಹಿತರು "ದಪ್ಪ ಬಟ್ಟೆ ಹೊಲಿಸಿಕೊಳ್ಳಿ, ಅಲ್ಲಿ ವಿಪರೀತ ಚಳಿ" ಎಂದು ಕಾಗದ ಬರೆದ ಕಾರಣ ಬಟ್ಟೆ ದಪ್ಪವಾದಷ್ಟೂ ಅನುಕೂಲವಾಯಿತು. ಖಾದಿಯಲ್ಲೇ ಎಲ್ಲಾ ಬಟ್ಟೆಗಳನ್ನೂ ಹೊಲಿಸಿದೆ. ಯೂರೋಪು ದೇಶಕ್ಕೆ ಹೋಗುತ್ತಿರುವುದರಿಂದ ಅಲ್ಲಿಯ ರೀತಿಯ ಬಟ್ಟೆ ಹೆಚ್ಚು ಬೇಕಾದವು.

ನಾನು ಸಂಪೂರ್ಣ ಸಸ್ಯಾಹಾರಿ. ಆದುದರಿಂದ ಆಹಾರದ ಕೊರತೆ ಹೆಚ್ಚಾಯಿತು. ಅನೇಕರು ಹೇಳುತ್ತಿದ್ದ ಮಾತು ಜ್ಞಾಪಕಕ್ಕೆ ಬಂತು: "ಜರ್ಮನರಲ್ಲಿ ಅನೇಕರು ಸಸ್ಯಾಹಾರಿಗಳಿದ್ದಾರೆ. ಆಹಾರದ ವಿಚಾರದಲ್ಲಿ ಯಾರೂ ಬಲವಂತ ಮಾಡುವುದಿಲ್ಲ. ಹಾಲು ಹಣ್ಣು ಹೆಚ್ಚಾಗಿ ಸಿಗುತ್ತದೆ."

ಈ ಮಾತು ಹೆಚ್ಚು ಭರವಸೆ ಕೊಟ್ಟವು. ಅವುಗಳ ಜೊತೆಗೆ ಗಾಂಧೀಜಿಯ ಆತ್ಮಚರಿತ್ರೆಯನ್ನು ಓದಿದ್ದು ಹೆಚ್ಚು ಹುರುಪನ್ನು ಕೊಟ್ಟಿತು. ಅವರು ಸಸ್ಯಾಹಾರದ ವಿಚಾರವಾಗಿ ಬರೆದಿರುವ ಲೇಖನಗಳನ್ನು ಮತ್ತೊಮ್ಮೆ ಓದಿದ ಮೇಲೆ, "ಸಸ್ಯಾಹಾರಿಯಾಗಿ ಇರಬಹುದೇ ?" ಎಂಬ ಪ್ರಶ್ನೆ ಮಾಯವಾಗಿ ಸಸ್ಯಾಹಾರಿಯಾಗಿ ಇರಲು ಮನಸ್ಸು ಮಾಡಿದರೆ ಖಂಡಿತ ಸಾಧ್ಯ ಎಂದು ಧೈರ್ಯ ಬಂತು.

ಭಾಷೆಯ ತೊಡಕಿನ ಪ್ರಶ್ನೆ; ಆ ಜನರು ಭಾರತೀಯರ ವಿಚಾರದಲ್ಲಿ ಹೇಗೆ ನಡೆದುಕೊಳ್ಳುತ್ತಾರೋ ಎಂಬ ಭಯ ; ಅನುಭವಿಸಿದಮೇಲೇ ಗೊತ್ತಾಗುತ್ತದೆ ಎಂದು ಸುಮ್ಮನಾದೆ.

ಬಡತನದಲ್ಲಿ ಬೆಳೆದು ಹಲವು ಮಕ್ಕಳನ್ನು ನೀಗಿಕೊಂಡು ಬಳಲಿದ ತಾಯಿ, ಕಷ್ಟಸುಖಗಳಲ್ಲಿ ಜೊತೆಗಾಗಿ ನಿಂತ ಪತ್ನಿ, ಇಬ್ಬರ ಅಗಲುವಿಕೆಯೂ ದುಃಖಕರವೇ. ನನ್ನ ಭವಿಷ್ಯದ ದೃಷ್ಟಿಯಿಂದ ಅದನ್ನು ಸಹಿಸಿಕೊಳ್ಳಬೇಕಾಯಿತು. ಗೆಳೆಯರ ಶುಭಾಶಯಗಳೊಂದಿಗೆ ಪಯಣಕ್ಕೆ ಮೊದಲಿಟ್ಟೆ.

ಡಿಸೆಂಬರ್ ೯ ಭಾರತ ದೇಶವನ್ನು ಬಿಡುವ ದಿನ. ಮಧ್ಯಾಹ್ನ ಎರಡು ಗಂಟೆಗೆ ಬೊಂಬಾಯಿಯ ಬಲಾರ್ಡ್ ಪಿಯರ್ ಬಂದರಿಗೆ ಸಾಮಾನುಗಳ ಜೊತೆಗೆ ಹೋದೆ. ನನ್ನ ಸಾಮಾನುಗಳಿಗೆ ನನ್ನ ಹೆಸರಿನ ಚೀಟಿಗಳನ್ನು (ನನ್ನ ಹೆಸರು 'ಎಸ್' ಎಂಬ ಅಕ್ಷರದಿಂದ ಮೊದಲಾಗುವುದರಿಂದ ಆ ಅಕ್ಷರದ ಚೀಟಿಯನ್ನೂ, ಬೊಂಬಾಯಿಂದ ಜಿನೋವಾಗೆ ಹೋಗುವ ಸಾಮಾನು ಎಂಬ ಚೀಟಿಯನ್ನೂ) ಅಂಟಿಸಿದೆ. ಜೊತೆಗೆ ನನ್ನ ಸಾಮಾನು ಕೇವಲ ೩–೪ ಇದ್ದುದರಿಂದ ಎಲ್ಲವನ್ನೂ ಕ್ಯಾಬಿನ್‌ನಲ್ಲಿ ಇಡುವಂತೆ ಚೀಟಿ ಅಂಟಿಸಿ, ಬಂದರಿನಲ್ಲಿ ಇರುವ ಕೂಲಿಯವರ ಕೈಗೆ ಸಾಮಾನುಗಳನ್ನು ಕೊಟ್ಟೆ. ನನ್ನಲ್ಲಿ ಇರುವ ಹಣ, ಅವರು ಕೇಳಿರುವ ಕೆಲವು ಸಾಮಾನುಗಳ ಪಟ್ಟಿಯನ್ನು ತಯಾರು ಮಾಡಿದೆ. ನಿಗದಿಯಾದುದಕ್ಕಿಂತ ಹೆಚ್ಚಾಗಿ ಹೊರದೇಶಕ್ಕೆ ಭಾರತದ ಹಣ ತೆಗೆದುಕೊಂಡು ಹೋಗುವ ಹಾಗಿಲ್ಲ. ಒಂದು ಪೌಂಡು ಕಾಫೀ ಪುಡಿ, ಒಂದು ಪೌಂಡು ಟೀ ಸ್ವಂತ ಉಪಯೋಗಕ್ಕಾಗಿ ತೆಗೆದುಕೊಂಡು ಹೋಗಬಹುದು. ಸುಂಕದವರ ಹಾಗೂ ವೈದ್ಯರ ತನಿಖೆ ಆದಮೇಲೆ ಹಡಗು ಹತ್ತಿದೆ.

೨. ಹಡಗಿನಲ್ಲಿ

ಸ್ವಾತಂತ್ರ್ಯವು ಸ್ವೇಚ್ಛೆಯಲ್ಲ. ವ್ಯಕ್ತಿಸ್ವಾತಂತ್ರ್ಯಕ್ಕೆ ನಾನು ಬೆಲೆ ಕೊಡುತ್ತೇನೆ. ಆದರೆ ಅನಿಯಂತ್ರಿತ ವ್ಯಕ್ತಿಸ್ವಾತಂತ್ರ್ಯವು ಕಾಡು ಮೃಗದ ನೀತಿಯಂತಾಗುವುದು.

—ಗಾಂಧೀಜಿ

ನಾನು ಯಾವಾಗಲೂ ಪ್ರಯಾಣಿಕರ ಹಡಗನ್ನು ನೋಡಿರಲಿಲ್ಲ. 'ವಿಕ್ಟೋರಿಯಾ' ಎಂಬ ಹೆಸರಿಗೆ ತಕ್ಕಂತೆ ಹಡಗು ಅಂದವಾಗಿ ಕಾಣುತ್ತಿತ್ತು. ಹಡಗು ಹತ್ತಿದ ಒಡನೆಯೇ ಹಡಗಿನ ಟಿಕೆಟ್ಟಿನ ತನಿಖೆ ಆದಮೇಲೆ ನಾನು ಊಟಕ್ಕೆ ತಿಂಡಿಗೆ ಕುಳಿತುಕೊಳ್ಳಬೇಕಾದ ಮೇಜಿನ ನಂಬರ್ ಮತ್ತು ವೇಳೆಯನ್ನು ಬರೆದುಕೊಟ್ಟು, ನಾನು ಇರಬೇಕಾದ ಕ್ಯಾಬಿನ್‌ಗೆ ಹೇಗೆ ಹೋಗಬೇಕೆಂದು ತೋರಿಸಿದರು. ಮೊದಲನೆ ಸಾರಿಯಾದುದರಿಂದ ಸ್ವಲ್ಪ ತಡಕುವಂತಾಯಿತು. ಅನೇಕ ಪ್ರಯಾಣಿಕರ ಸ್ನೇಹಿತರು ನೆಂಟರಿಷ್ಟರು ಬಂದು ಬೀಳ್ಕೊಡುತ್ತಿದ್ದರು. ಹಿಂದಿನ ರೇವಿನಿಂದ ಬಂದ ಹಡಗಿನ ಪ್ರಯಾಣಿಕರು ಬೊಂಬಾಯಿ ನೋಡಿ ಹಿಂದಿರುಗಿ ಹಡಗಿಗೆ ಬರುತ್ತಿದ್ದರು. ನೋಡಿದವರು ಹಡಗಿನಲ್ಲೇ ಆಡುತ್ತಿದ್ದರು. ಅಂತೂ ಏನೋ ಒಂದು ಸಡಗರ. ಎಲ್ಲಿ ನೋಡಿದರೂ ಹೊಸ ಮುಖಗಳು. ಹಡಗಿನ ಡೆಕ್ ಮೇಲೆ ಒಂದು ಸಣ್ಣ ಬಾರ್ ಇತ್ತು. ಅಲ್ಲಿ 'ಮೃದುಪಾನೀಯ ಮಾತ್ರ' (Soft drinks only) ಎಂದು ಬರೆದಿದ್ದರು. ನನಗೆ ಮೊದಲು ಅರ್ಥವಾಗಲಿಲ್ಲ. ಅನಂತರ ತಿಳಿಯಿತು. ಬೊಂಬಾಯಿಯಲ್ಲಿ ಪಾನನಿರೋಧವಿರುವುದರಿಂದ ಹಡಗಿನಲ್ಲಿ ಮದ್ಯವನ್ನು ಮಾರುವುದಿಲ್ಲ. ನನಗೆ ಈ ಮದ್ಯಪಾನದ ವಿಷಯ ಗೊತ್ತಿಲ್ಲವಾದುದರಿಂದ ಅಷ್ಟು ಬೇಗ ಹೊಳೆಯಲಿಲ್ಲ.

ರಾತ್ರಿ ೧೦ ಗಂಟೆಗೆ ಹಡಗು ಹೊರಡಲಿತ್ತು. ಹೊರಗಡೆ ಬಂದು ಹಡಗಿನ ಚಿತ್ರವುಳ್ಳ ಒಂದು ಕಾರ್ಡಿನಲ್ಲಿ, ಹಡಗು ಹತ್ತಿ ಬೊಂಬಾಯಿ ಬಿಟ್ಟೆನೆಂದು ಮನೆಗೆ ಪತ್ರ ಬರೆದೆ. ಡೆಕ್ ಮೇಲೆ ಬಂದು ಸಮುದ್ರವನ್ನು ನೋಡುತ್ತಾ ಕುಳಿತೆ. ರಾತ್ರಿ ಸರಿಯಾಗಿ ೧೦ ಗಂಟೆಗೆ ಹಡಗು ಹೊರಟಿತು. ಇದೇ ಮೊದಲನೆ ಸಮುದ್ರ ಪ್ರಯಾಣ. ಹಡಗು ಬಂದರನ್ನು ಬಿಟ್ಟು ದೂರ ಹೋದ ಹಾಗೆಲ್ಲಾ ದೀಪದ ಬೆಳಕಿನಲ್ಲಿ ಬೊಂಬಾಯಿ ವಿಶಾಲವಾಗಿ ಕಾಣುತ್ತಿತ್ತು. ಇನ್ನು ಒಂದು ವರ್ಷಕಾಲ ಈ ದೇಶವನ್ನು ನೋಡುವ ಹಾಗಿಲ್ಲ. ಅರ್ಧಗಂಟೆಯಲ್ಲಿ

ಬೊಂಬಾಯಿ ಮರೆಯಾಯಿತು. ಭಾರತ ಕಾಣದಂತಾಯಿತು. ಸುತ್ತಲೂ ಸಮುದ್ರ. ಮಧ್ಯೆ ಸಮುದ್ರವನ್ನು ಭೇದಿಸಿಕೊಂಡು ಹೋಗುತ್ತಿರುವ ಈ ಬಿಳಿಯ ಹಡಗು. ಈ ದೃಶ್ಯವನ್ನು ನೋಡುತ್ತಾ ನಿಂತಿದ್ದು, ಇನ್ನು ೧೩ ದಿನ ಗಳು ಹೇಗೆ ಪ್ರಯಾಣ ಮಾಡಬೇಕೆಂದು ಮನಸ್ಸಿನಲ್ಲಿ ಯೋಚಿಸಿಕೊಂಡು ಕ್ಯಾಬಿನ್ ಹುಡುಕಿಕೊಂಡು ಹೋಗಿ ಮಲಗಿದೆನು.

ವಿಕ್ಟೋರಿಯಾ ಹಡಗು ಇಟಲಿ ದೇಶದ ಲಾಯ್ಡ್ ಟ್ರಿಸ್ಟಿನೊ (Lloyd Trestino) ಎಂಬ ಕಂಪನಿಗೆ ಸೇರಿದ್ದು. ೧೧,೬೦೦ ಟನ್ ತೂಕದ ಡೀಸೆಲ್ ಇಂಜಿನ್ ಉಳ್ಳ ಬಿಳಿಯ ಬಣ್ಣದ ಸುಂದರ ರೂಪದ ಹೊಸ ಮಾದರಿಯ, ಹವಾನಿಯಂತ್ರಿತವಾದ (Air-conditioned) ಹಡಗು. ಇದರಲ್ಲಿ ಮೊದಲ ನೆಯ ತರಗತಿ, ಪ್ರವಾಸಿಗರ (Tourist) ತರಗತಿ ಎಂಬ ಎರಡು ಭಾಗ. ನಾನು ಹೋಗುತ್ತಿರುವುದು ಪ್ರವಾಸಿಗರ ತರಗತಿಯಲ್ಲಿ. ಈ ಹಡಗು ಸಿಂಗಪೂರ ದಿಂದ (ಬೊಂಬಾಯಿ ಮೂಲಕ) ಜಿನೋವಾಕ್ಕೆ ಹೋಗುತ್ತದೆ. ಬೊಂಬಾ ಯಿಂದ ಜಿನೋವಾಗೆ ಹೋಗಲು ೧೩ ದಿನ ಹಿಡಿಯುತ್ತದೆ. ಹಡಗು ಒಂದು ತೇಲುವ ಪಟ್ಟಣವೆಂದೇ ಹೇಳಬಹುದು. ನಾನು ಇದ್ದ ಕ್ಯಾಬಿನ್ ಹಡಗಿನ ಮುಂಭಾಗದಲ್ಲಿತ್ತು. ಹಡಗಿನ ಟಿಕೆಟ್ಟಿನ ದರ ಕ್ಯಾಬಿನ್ ಇರುವ ಸ್ಥಳವನ್ನು ಅವಲಂಬಿಸಿ ಹೆಚ್ಚುಕಡಮೆಯಾಗುತ್ತದೆ. ನಾನು ಇದ್ದ ಕ್ಯಾಬಿನ್‌ನಲ್ಲಿ ೪ ಹಾಸಿಗೆ. ನನ್ನ ಮಂಚದ ಮೇಲೆ ಇನ್ನೊಬ್ಬರ ಮಂಚ. ರಾತ್ರಿ ಓದಲು ದೀಪ, ಮೇಜು, ಕುರ್ಚಿ ಮುಂತಾದುವು ಇದ್ದುವು. ಮೇಸ್ತ್ರಿಯನ್ನೂ ಕೆಲಸಗಾರರನ್ನೂ ಕರೆಯಲು ಒತ್ತುಗಂಟೆ (Calling Bell) ಇತ್ತು. ಮಲಗುವ ಕೋಣೆ ಯಲ್ಲದೆ ಬಟ್ಟೆ ಇಡಲು ಒಂದು ಬೀರು, ಮುಖ ತೊಳೆಯಲು ತಣ್ಣೀರು, ಬಿಸಿನೀರು ಬರುವ ನಲ್ಲಿ, ನಿಲುಗನ್ನಡಿ, ಬಟ್ಟೆ ಬದಲಾಯಿಸಲು ಸಣ್ಣ ಒಂದು ಬಟ್ಟೆಯ ತೆರೆ, ಮುಖ ಒರೆಸಲು ಸ್ನಾನಕ್ಕೆ ಟವೆಲ್ಲುಗಳು ಸಹ ಇದ್ದುವು. ಪ್ರತಿ ನಿತ್ಯ ಹಾಸಿಗೆ ಸರಿಮಾಡಿ ಕ್ಯಾಬಿನನ್ನು ಚೊಕ್ಕಟಮಾಡಲು ಆಳುಗಳಿದ್ದರು.

ಹಡಗಿನ ಆಳುಗಳು ಎಲ್ಲ ಕೆಲಸವನ್ನೂ ಮಾಡುತ್ತಾರೆ. ಇಲ್ಲಿ ಕ್ಯಾಬಿನ್ ಚೊಕ್ಕಟಮಾಡುತ್ತಾರೆ. ಮಧ್ಯಾಹ್ನ ಊಟದ ಮನೆಯಲ್ಲಿ ಊಟ ಬಡಿಸು ತ್ತಾರೆ. ಪುನಃ ಹಡಗಿನ ಒಳಭಾಗದ ದಾರಿಗಳನ್ನು ಪಳಪಳನೆ ಹೊಳೆಯು ವಂತೆ ಚೊಕ್ಕಟಮಾಡುತ್ತಾರೆ. ಹಗಲು ರಾತ್ರಿ ದುಡಿಯುತ್ತಾರೆ. ಹಡಗು ಜಿನೋವಾ ಸೇರಿದಾಗ ೮ ದಿನ ಬಿಡುವು. ೨ ವರ್ಷಕ್ಕೆ ಒಮ್ಮೆ ಬೇರೆ ಬೇರೆ ಹಡಗಿಗೆ ವರ್ಗವಾಗುವುದೂ ಉಂಟು.

ಹಡಗಿನಲ್ಲಿ ಎ, ಬಿ, ಸಿ ಎಂಬ ಮೂರು ಅಂತಸ್ತುಗಳು, ಮಹಡಿಗಳಿದ್ದ

ಹಾಗೆ. ಡೆಕ್ ಮೇಲೆ ಬಂದರೆ ವಿಶಾಲವಾಗಿ ಓಡಾಡಬಹುದು. ಸಮುದ್ರದ ಅಲೆಗಳ ಆನಂದವನ್ನು ಕಾಣಬಹುದು ಅನೇಕರು ಆರಾಮ ಕುರ್ಚಿ ಹಾಕಿಕೊಂಡು ಬಿಸಿಲು ಕಾಯಿಸುತ್ತಾ ವಿಶಾಲ ಸಮುದ್ರವನ್ನು ನೋಡುತ್ತಾ ಕುಳಿತಿರುತ್ತಾರೆ. ಕಾಲ ಕಳೆಯಲು ಕಷ್ಟವಾದಾಗ ಟೇಬಲ್ ಟೆನಿಸ್, ಡೆಕ್ ಟೆನಿಸ್ ಆಡುತ್ತಾರೆ. ಕೆಲವರು ಹೆಣ್ಣುಮಕ್ಕಳೊಡನೆ ರಿಂಗ್ ಆಟ ಆಡುತ್ತಾರೆ. ಇನ್ನು ಕೆಲವರಿಗೆ ಈಜುಕೊಳದ ನೀರು. ಹಡಗಿನಲ್ಲಿ ಪಾಶ್ಚಿಮಾತ್ಯರ ಸಂಖ್ಯೆ ಹೆಚ್ಚು. ಮೈಮೇಲೆ ಬಟ್ಟೆಯ ತುಂಡು ಕೂಡ ಇದೆಯೋ ಇಲ್ಲವೋ ಎನ್ನುವ ಹಾಗೆ ಬಟ್ಟೆ ಧರಿಸಿ ನೀರಿಗೆ ಧುಮುಕುತ್ತಾರೆ. ಹಾಗೇ ನೀರಿನಿಂದ ಎದ್ದು ಬಿಸಿಲು ಕಾಯಿಸುತ್ತಾರೆ. ಕಣ್ಣಿಗೆ ಕರಿಯ ಕನ್ನಡಕ ಹಾಕಿ ಮಲಗುತ್ತಾರೆ. ನಮ್ಮ ದೇಶದಲ್ಲಿ ಹಳ್ಳಿಯಲ್ಲಿ ಸ್ವಲ್ಪ ಬಟ್ಟೆ ಹಾಕುವುದು ಕಡಮೆಯಾದರೆ ಅನಾಗರಿಕರು ಎನ್ನುತ್ತೇವೆ. ಹಡಗಿನಲ್ಲಿ ಹೀಗೆ ಮಾಡಿದರೆ ಪಾಶ್ಚಿಮಾತ್ಯ ನಾಗರಿಕತೆ ಎಂದು ಹೊಗಳುತ್ತೇವೆ. ಈ ಈಜುವವರನ್ನು ನೋಡುತ್ತಾ ಆನಂದಪಡುವವರು ಎಷ್ಟೋ ಜನ. ಈಜುವ ಕೊಳದ ಎದುರಿಗೆ ಒಂದು ಸಣ್ಣ ಬಾರ್. ಹಡಗಿನವರು ಕೊಡುವ ಆಹಾರ ಸಾಲದೆಂದು ಇಲ್ಲಿ ತಮ್ಮ ಸ್ವಂತ ದುಡ್ಡು ಖರ್ಚುಮಾಡಿ ಮದ್ಯಪಾನದಲ್ಲಿ ಈಜುವವರು ಎಷ್ಟೋ ಜನ! ಭಾರತೀಯರಿಗೆ ಇನ್ನೂ ಇದು ಹೊಸದಾದುದರಿಂದ ಸ್ವಲ್ಪ ಅಂಜಿಕೆ. ಕೆಲವರಿಗಂತೂ ಸುಖಪಡಲು ಇದೇ ಸಮಯ.

ಈಜುವ ಕೊಳ ಬೇಡ ಎನ್ನುವವರಿಗೆ 'ಬಾಲ್ ಡಾನ್ಸ್'. ಈ ಕುಣಿತಕ್ಕಾಗಿ ಒಂದು ದೊಡ್ಡ ಅಂಗಳ ಇದೆ. ಅಲ್ಲಿ ನಿತ್ಯವೂ ಬೇಕಾದ ಹಾಗೆ ಕುಳಿತು ಕಾಲ ಕಳೆಯಬಹುದು. ಅಲ್ಲಿಯೂ ಸಹ ಮಾದಕಪಾನದ ಅಂಗಡಿ ಇದೆ. ಗ್ರಾಮೋಫೋನ್ ರಿಕಾರ್ಡುಗಳನ್ನು ಕೇಳಬಹುದು. ಸಂಕ್ಷೇಪವಾಗಿ ಪ್ರಪಂಚದ ಸಮಾಚಾರಗಳನ್ನೊಳಗೊಂಡ ಒಂದು ಸಣ್ಣ ಪತ್ರಿಕೆಯನ್ನು ಪ್ರಕಟಿಸುತ್ತಾರೆ. ಇದನ್ನು ಓದಬಹುದು. ಜೊತೆಗೆ ಒಂದು ಪುಸ್ತಕ ಭಂಡಾರ. ಅದರಲ್ಲಿ ಭಾರತದ ಪುಸ್ತಕಗಳೇ ಇಲ್ಲ. ಅನೇಕ ಭಾಷೆಯ ಹಳೆಯ ಪುಸ್ತಕಗಳಿವೆ. ೪–೫ ತಿಂಗಳ ಹಿಂದಿನ ವಾರಪತ್ರಿಕೆಗಳೂ ಮಾಸಪತ್ರಿಕೆಗಳೂ, ಇವೂ ಬೇಸರವಾದರೆ ಮನೆಗೆ ಪತ್ರ ಬರೆಯಲು ಮೇಜುಗಳೂ, ಇವೆ. ಇಸ್ಪೀಟು, ಬ್ರಿಡ್ಜ್ ಮುಂತಾದ ಚಪಲವುಳ್ಳವರ ಅನುಕೂಲಕ್ಕಾಗಿ ಒಂದು ಕೊಠಡಿ ಇದೆ. ಕೆಲವರು ಈ ಕೊಠಡಿಯನ್ನು ಬಿಟ್ಟು ಏಳುವುದೇ ಇಲ್ಲ. ಊಟಕ್ಕಾಗಿ ದೊಡ್ಡ ನಿಲುಗನ್ನಡಿಗಳಿಂದ ಅಲಂಕೃತವಾದ ಸುಂದರ ಚೊಕ್ಕಟ ಕೊಠಡಿ. ಊಟದ ವೇಳೆಯಲ್ಲಿ ಮಾತ್ರ ಉಪಯೋಗಿಸುತ್ತಾರೆ. ಅದಕ್ಕೆ ಸೇರಿದಂತೆ ಅಡುಗೆಮನೆ.

ಶಾಕಾಹಾರದಿಂದ ಮಾಂಸಾಹಾರದವರಿಗೆ ಎಲ್ಲವನ್ನೂ ತಯಾರಿಸಬೇಕು. ಪ್ರಯಾಣದ ದಿನಗಳಿಗೆ ಬೇಕಾದ ಆಹಾರ, ಹಣ್ಣು, ಮಾಂಸ, ತರಕಾರಿ ಎಲ್ಲವನ್ನೂ ಶೇಖರಿಸಿ, ಕೆಡದಂತೆ ಇಡಬೇಕು. ಇದಕ್ಕಾಗಿ ಪ್ರತಿ ಬಂದರಿನಲ್ಲಿಯೂ ಆಹಾರಗಳನ್ನು ಶೇಖರಿಸುತ್ತಿದ್ದರು.

ಮದ್ಯಗಳನ್ನು ಮಾರುವ ಬಾರ್‌ಗಳಲ್ಲದೆ ಉಡುಗೊರೆ-ಬಹುಮಾನ ಕೊಡುವುದಕ್ಕೆ ಯೋಗ್ಯವಾದ ಕೆಲವು ಸಾಮಾನುಗಳನ್ನು ಮಾರುವ ಅಂಗಡಿಯೂ ಇತ್ತು. ಕ್ಷೌರದ ಅಂಗಡಿ, ಅಗಸನ ಅಂಗಡಿಗಳೂ ಇದ್ದವು. ಬೆಲೆ ಸುಮಾರಾಗೇ ಕೈಕಚ್ಚುತ್ತಿತ್ತು. ೪-೫ ಕ್ಯಾಬಿನಿಗೆ ಸೇರಿದಂತೆ ಒಟ್ಟಿ ಚೊಕ್ಕಟ ಮಾಡಿ ಇಸ್ತ್ರಿ ಮಾಡಿಕೊಳ್ಳಬಹುದಾದ ಒಂದು ಕೊಠಡಿ. ನಾವೇ ಸ್ವಂತವಾಗಿ ಮಾಡಿಕೊಳ್ಳಬಹುದು.

'ಪರ್ಸರ್ ಆಫೀಸ್' ಎಂಬ ಒಂದು ಸಣ್ಣ ಕಛೇರಿ ಇದೆ. ಗೊತ್ತಾದ ವೇಳೆಯಲ್ಲಿ ಮಾತ್ರ ತೆರೆಯುತ್ತಾರೆ. ಇಲ್ಲಿ ಹಣ ಬದಲಾವಣೆ ಮಾಡಬಹುದು. ಇಲ್ಲಿಯೇ ಏನಾದರೂ ಬೇಕಾದರೆ ವಿಚಾರಣೆ ಮಾಡಬಹುದು. ಇಲ್ಲಿ ಒಂದು ಅಂಚೆಪೆಟ್ಟಿಗೆ ಸಹ ಇದೆ. ಸ್ಟ್ಯಾಂಪ್ ಮಾಡುತ್ತಾರೆ. ಹಿಂದೂಸ್ಥಾನಕ್ಕೆ ಪತ್ರ ಬರೆಯುವವರು ಹಡಗು ಒಂದು ರೇವುಪಟ್ಟಣಕ್ಕೆ ಹೋಗುವುದಕ್ಕೆ ಒಂದು ಗಂಟೆ ಮುಂಚೆ ಆ ಪೆಟ್ಟಿಗೆಯಲ್ಲಿ ಹಾಕಬೇಕು. ರೇವು ಯಾವ ದೇಶಕ್ಕೆ ಸೇರಿದೆಯೋ ಆಯಾ ದೇಶದ ಸ್ಟ್ಯಾಂಪು ಮಾರುತ್ತಾರೆ. ಡೆಕ್ಕಿನಲ್ಲಿ ಒಂದು ದೊಡ್ಡ ಭೂಪಟ ಹಾಕಿ ಅದರಲ್ಲಿ ಹಡಗು ಹೋಗುವ ಮಾರ್ಗ ತೋರಿಸಿದ್ದಾರೆ. ಪ್ರತಿ ಮಧ್ಯಾಹ್ನ ೧೨ ಗಂಟೆಗೆ ಹಡಗು ಎಲ್ಲಿ ಹೋಗುತ್ತಿದೆ ಎಂಬುದನ್ನು ಸೂಚಿಸುತ್ತಾರೆ. ಹೋಗುವ ದಿಕ್ಕು, ಗಾಳಿ ಹೇಗಿದೆ, ಎಷ್ಟು ದೂರ ಬಂದಿದೆ, ಹಡಗು ಇನ್ನು ಎಷ್ಟುದೂರ ಹೋಗಬೇಕು, ಯಾವಾಗ ಮುಂದಿನ ಬಂದರು ಸೇರುತ್ತದೆ, ಹವಾ ಹೇಗಿದೆ—ಇವೆಲ್ಲವೂ ಸೇರಿದ ಒಂದು ಪ್ರಕಟಣೆ ಹಾಕುತ್ತಾರೆ. ಜೊತೆಗೆ ಪ್ರತಿನಿತ್ಯದ ಮನೋರಂಜನೆಯ ಕಾರ್ಯಕ್ರಮ. ಈ ಕಾರ್ಯಕ್ರಮಗಳಲ್ಲಿ ಬಾಲ್ ಡಾನ್ಸ್ ಬಹಳ ಆಕರ್ಷಣೀಯ. ಸಂಗೀತ ನಿಂತಾಗ ವೈನ್, ಬಿಯರ್ ಸೇವನೆ ಆಗಬೇಕು. ಇಲ್ಲಿ ಯಾವ ಭೇದವೂ ಇಲ್ಲ. ಕರೆದ ಗಂಡಸರೊಂದಿಗೆಲ್ಲ ಹೆಣ್ಣು ಕುಣಿಯಬೇಕು. ಇದೇ ಒಂದು ಖುಷಿ. ಭಾರತೀಯರು ಈಗೀಗ ಯೂರೋಪು ಕಡೆಗೆ ಹೋಗುತ್ತಿರುವುದರಿಂದ ಈ ತರದ ಕುಣಿತ ಕಲಿತಿರುವವರು ಕಡಮೆ. ಭಾರತದಲ್ಲಿ ಇದಕ್ಕೆ ಎಲ್ಲರಿಗೂ ಅವಕಾಶವಿಲ್ಲ. ಹಡಗು ಹತ್ತಿದ ಒಡನೆಯೇ ಸ್ವರ್ಗವನ್ನು ಸೇರಿದವರಂತೆಯೂ, ಸ್ವಾತಂತ್ರ್ಯದೇವತೆಯೇ ಕೈಗೆ ಸಿಕ್ಕಿದವರಂತೆಯೂ ಇರುತ್ತಾರೆ. ಭಾರತದಲ್ಲಿದ್ದಾಗ ಅವರಿವರ ಅಂಜಿಕೆ,

ನುನೆಯುವರ ಬೆದರಿಕೆ ; ಅವಕಾಶವೇ ಕಡಮೆ. ಮನಸ್ಸು ಇದ್ದರೂ ನೆರೆಹೊರೆಯುವರ, ಕಂಡವರ ಹೆದರಿಕೆಗೆ ಬೂದಿ ಮುಚ್ಚಿದ ಕೆಂಡದಂತೆ ಇರುತ್ತಾರೆ. ಇಲ್ಲಿ ತಮ್ಮನ್ನು ಕಂಡವರು ಗುರುತಿಸುವವರು ಯಾರೂ ಇಲ್ಲ. ಗುರುತಿಸಿದರೂ ಅವರೂ ಅದೇ ದೋಣಿಯಲ್ಲಿ ಸಾಗುವವರೇ. ಪಾಶ್ಚಿಮಾತ್ಯರ ಜೊತೆಗೆ ಕುಣಿಯಲು ಇವರು ಯಥೇಚ್ಛವಾಗಿ ಕುಡಿಯಲು ಪ್ರಾರಂಭಿಸುತ್ತಾರೆ. ಕೆಲವರಿಗೆ ಅಭ್ಯಾಸವೇ ಇರದಿರುವುದರಿಂದ ಹಾಗೇ ಅಮಲು ಏರುವುದೂ ಉಂಟು. ಕುಣಿಯಲು ಜೊತೆಗೆ ಬರುವ ಹೆಣ್ಣು ಮಗಳಿಗೆ ಕುಡಿಸಲು ತಮ್ಮ ಹಣದ ಚೀಲ ಖಾಲಿ ಮಾಡುತ್ತಾರೆ. ನಾನು ಕಂಡಹಾಗೆ ಅನೇಕರು ಗಂಡಹೆಂಡಿರಂತೆ ಕಾಣುತ್ತಿದ್ದರು. ಆದರೆ ಅವರು ಬೇರೆಬೇರೆ ಊರುಗಳಲ್ಲಿ ಇಳಿದಾಗ ಗೊತ್ತಾಯಿತು —ಅವರು ಬೇರೆ ಬೇರೆ ಜನ ಎಂದು.

'ಹೌಸೀ ಹೌಸೀ' ಒಂದು ದುಡ್ಡು ಕಳೆದುಕೊಳ್ಳುವ ಆಟ. ಎಲ್ಲರಿಗೂ ಒಂದು ಅಥವಾ ಎರಡು ಷಿಲಿಂಗ್‌ಗೆ ಒಂದು ಹಾಳೆ ಕಾಗದವನ್ನು ಮಾರುತ್ತಾರೆ. ಅದರಲ್ಲಿ ಕೆಲವು ಅಂಕಿಗಳಿರುತ್ತವೆ. ಒಬ್ಬೊಬ್ಬರಲ್ಲಿ ಒಂದೊಂದು ಅಂಕೆ. ಎಲ್ಲರೂ ಈ ಅಂಕಿಗಳಿರುವ ಹಾಳೆಗಳನ್ನು ಕೊಂಡನಂತರ ಹಡಗಿನ ಪ್ರತಿನಿಧಿಯೊಬ್ಬ ಒಂದು ಡಬ್ಬದಿಂದ ಒಂದೊಂದಾಗಿ ಅಂಕಿ ಇರುವ ಕಾಗದ ತೆಗೆದು ಓದುತ್ತಾನೆ. ಆ ಅಂಕಿ ನಮ್ಮ ಕಾಗದದಲ್ಲಿ ಇದ್ದರೆ ಅದನ್ನು ಹೊಡೆದುಹಾಕಬೇಕು. ಹೀಗೆ ಯಾರು ತಮ್ಮ ಹಾಳೆಯಲ್ಲಿ ಇರುವ ಎಲ್ಲಾ ಅಂಕಿಗಳನ್ನು ಮೊದಲು ಹೊಡೆದುಹಾಕುತ್ತಾರೋ ಅವರಿಗೆ ಬಹುಮಾನ. ಮತ್ತೊಂದು ಆಟ ಕುದುರೆಯ ಜೂಜು. ಮೊದಲು ನಿಜವಾದ ಕುದುರೆ ಜೂಜೇ ಆಗುತ್ತದೆ ಎಂದು ತಿಳಿದಿದ್ದೆ. ಆದರೆ ಇಲ್ಲಿ ಇರುವುದು ಮರದ ಸಣ್ಣ ಆಟದ ಕುದುರೆ. ಅವುಗಳಿಗೆ ನಂಬರು. ೬-೭ ಕುದುರೆಗಳನ್ನು ಸಾಲಾಗಿ ನಿಲ್ಲಿಸುತ್ತಾರೆ. ಚೌಕದ ಮನೆಗಳಿರುವ ಒಂದು ಬಟ್ಟೆ ಹಾಕಿ ಕೊನೆಯಲ್ಲಿ ಒಂದು ಗೆರೆ ಎಳೆದಿರುತ್ತಾರೆ. ದಾಳ ಬಿಟ್ಟು ಅದರಲ್ಲಿ ಬರುವ ಅಂಕಿಯ ಕುದುರೆಯನ್ನು ಒಂದು ಸಾರಿ ಒಂದು ಮನೆ ದಾಟಿಸುತ್ತಾರೆ. ಮೊದಲು ಯಾವ ಕುದುರೆ ಕೊನೆ ಮುಟ್ಟುತ್ತದೆಯೋ ಆ ನಂಬರಿನ ಕಾರ್ಡು ಕೊಂಡವರಿಗೆ ಮೊದಲನೇ ಬಹುಮಾನ. ಈ ಆಟಗಳೆಲ್ಲಾ ಕಾಲ ಕಳೆಯಲು ಗೊತ್ತಿಲ್ಲದೆ, ದುಡ್ಡು ಹೆಚ್ಚಾಗಿರುವವರ ಹುಚ್ಚಾಟ. ನನ್ನಂತಹ ಬರಗೈಯವರಿಗೆ ಆಟ ನೋಡುವುದಕ್ಕಿಂತ ದುಡ್ಡು ಕಳೆದುಕೊಂಡವರ ಮುಖ ನೋಡುವುದರಲ್ಲೇ ಎಷ್ಟೋ ವಿನೋದ. ಈ ಆಟಗಳಿಲ್ಲದ ದಿನ ಸಿನಿಮಾ ತೋರಿಸುತ್ತಾರೆ. ಅಂತೂ ಸಂಜೆ ಕಾಲ ಕಳೆಯಲು ಯಾವುದಾದರೂ ಒಂದು ಇದ್ದೇ ಇರುತ್ತದೆ.

ಬೆಳಗ್ಗೆ ಎದ್ದರೆ ಫಲಾಹಾರ. ಫಲಾಹಾರಕ್ಕೆ ಮೊಟ್ಟೆ, ಬ್ರೆಡ್. ಬೆಣ್ಣೆ, ಪಾರಿಡ್ಜ್, ಹಣ್ಣಿನ ರಸ, ಕಾಫಿ ಅಥವಾ ಟೀ, ಒಂದು ಹಣ್ಣು—ಇಷ್ಟು. ನಾನು ಮೊಟ್ಟೆ ತೆಗೆದುಕೊಳ್ಳುವುದಿಲ್ಲವಾದ್ದರಿಂದ ಅದು ಅವರಿಗೇ ಲಾಭ. ೮ ಗಂಟೆಗೆಲ್ಲಾ ಮುಗಿಯುತ್ತಿತ್ತು ಫಲಾಹಾರ. ಹಾಗೆ ಹೀಗೆ ಡೆಕ್ಕಿನ ಮೇಲೆ ಓಡಾಡುವುದರಲ್ಲಿ, ಪತ್ರಿಕೆ ಓದುವುದರಲ್ಲಿ ೧೧-೩೦ ಆಗುತ್ತಿತ್ತು. ಊಟ ಮಾಡಲು ಮೊದಲೇ ಗೊತ್ತುಮಾಡಿದ ಮೇಜಿನಲ್ಲೇ ಕುಳಿತುಕೊಳ್ಳಬೇಕು. ನನ್ನ ಮೇಜಿನ ಜೊತೆಗಾರರೆಲ್ಲರೂ ಭಾರತೀಯರೇ. ನಾನು ಒಬ್ಬನೇ ಸಸ್ಯಾಹಾರಿ. ಫೋರ್ಕ್ ಸ್ಪೂನ್‌ಗಳನ್ನು ಹೆಚ್ಚು ಉಪಯೋಗಿಸಿ ರೂಢಿಯಿಲ್ಲ. ಅವರಿವರನ್ನು ಸುತ್ತಲೂ ನೋಡಿ ಕಲಿತಂತೆ ಆಯಿತು. ಮೇಜಿನ ಮರ್ಯಾದೆ (Table manners) ಉಳಿಸಿಕೊಂಡೆ. ಕ್ಯಾಬಿನ್ನಿನಲ್ಲಿದ್ದ ಬ್ಯಾನರ್ಜಿಯೂ ಸಹ ನನ್ನ ಮೇಜಿನಲ್ಲೇ ಇದ್ದರು. ಊಟದ ಪಟ್ಟಿಯನ್ನು ಪ್ರಕಟಿಸಿ ಮೇಜಿನ ಮೇಲೆ ಇಟ್ಟಿದ್ದರು. ಅದನ್ನು ನೋಡಿದರೆ ನನಗೆ ಹೆಚ್ಚು ಅರ್ಥವಾಗಲಿಲ್ಲ. ಮಾಂಸಾಹಾರಗಳೇ ಹೆಚ್ಚು. ಕಡೆಗೆ ಬಡಿಸುವವನು ಬಂದು ಕೇಳಿದಾಗ ಹೇಳಿದೆ: "ನಾನು ಸಸ್ಯಾಹಾರಿ. ಮೊಟ್ಟೆ, ಮೀನು ಸಹ ತಿನ್ನುವುದಿಲ್ಲ. ನನಗೆ ಸಸ್ಯಾಹಾರ ಯಾವುದು ಇದ್ದರೂ ತಾ." ನಗುನಗುತ್ತಾ ಹೋಗಿ ಅವನು ಸಸ್ಯಾಹಾರ ಮಾತ್ರ ತಂದ. ಹಿಂದೂ ದೇಶದ ಒಬ್ಬ ಅಡಿಗೆಯವನು ಈ ಹಡಗಿನಲ್ಲಿ ಇದ್ದಾನೆ. ಈತ ಹಿಂದೂ ದೇಶದ ಅಡಿಗೆ ಮಾಡುತ್ತಾನೆ. ಮೊದಮೊದಲು ಮಾಂಸಾಹಾರಿಗಳು ನನ್ನ ಪಕ್ಕದಲ್ಲಿ ಕುಳಿತು ಊಟಮಾಡುವಾಗ ನನಗೆ ಅಸಹ್ಯವಾಗುತ್ತಿತ್ತು. ಅನಂತರ ರೂಢಿ ಆಯಿತು. ಬಡಿಸುವವನೂ ಸಹ ಬಹಳ ವಿಶ್ವಾಸದಿಂದ ಕೇಳಿದ್ದನ್ನು ತಂದುಕೊಡುತ್ತಿದ್ದ. ಮಧ್ಯಾಹ್ನ ೪-೩೦ಕ್ಕೆ ಬಿಸ್ಕತ್ ಮತ್ತು ಟೀ ಕೊಡುತ್ತಿದ್ದರು. ಪುನಃ ೬-೩೦ಕ್ಕೆ ಊಟ. ಮತ್ತೊಂದು ಗುಂಪು ೭-೩೦ಕ್ಕೆ. ಸಸ್ಯಾಹಾರಿಗಳಿಗೆ ನಿತ್ಯವೂ ಸಾಮಾನ್ಯವಾಗಿ ಒಂದೇ ತರದ ಆಹಾರ. ಇಷ್ಟರಮಟ್ಟಿಗಾದರೂ ಸಸ್ಯಾಹಾರ ಸಿಗುತ್ತಿದೆಯಲ್ಲ ಎಂದು ಸಂತೋಷ ನನಗೆ. ಊಟಕ್ಕೆ ಎಲ್ಲರೂ ಒಟ್ಟಿಗೆ ಕುಳಿತುಕೊಳ್ಳಬೇಕು. ಮಕ್ಕಳಿಗೆ ಬೇರೆಯ ಆಹಾರ. ತಾಯಂದಿರು ಮೊದಲೇ ಕೇಳಿ ತೆಗೆದುಕೊಳ್ಳಬಹುದು.

ಹುಣ್ಣಿಮೆಯ ಚಂದ್ರ ಸಮುದ್ರದಲ್ಲಿ ಹಾಲು ಚೆಲ್ಲಿದ್ದ. ಸಮುದ್ರದ ಅಲೆಗಳು ಅಂಜದೆ ಅಳುಕದೆ ಹಡಗಿಗೆ ಹೊಡೆಯುತ್ತಿದ್ದವು. ಬೆಳಗ್ಗೆ ಸೂರ್ಯ ಸಮುದ್ರದಿಂದ ಉದಯಿಸಿದಂತೆ ಕಾಣುತ್ತಿತ್ತು. ಸಂಜೆಗೆ ಕೆಂಡವನ್ನು ನೀರಿನಲ್ಲಿ ಅದ್ದಿದಂತೆ ಸಮುದ್ರದ ಅಲೆಗಳ ಮಧ್ಯೆ ಅದೃಶ್ಯನಾಗುತ್ತಿದ್ದ. ಈ ಎರಡು

ದೃಶ್ಯಗಳೂ ನನ್ನ ಕಣ್ಣಿಗೆ ಕಟ್ಟಿದಂತಿವೆ. ಇವೆರಡರ ಮಧ್ಯೆ ಅಲೆಗಳ ಬಡಿದಾಟ. ಹಾರುವ ಮೀನುಗಳು ನೀರಿನಿಂದ ಹಾರಿ ಬೀಳುವುದು ಬೇರೆ.

ಪ್ರತಿದಿನವೂ ಗಡಿಯಾರವನ್ನು ಅರ್ಧಗಂಟೆ ಹಿಂದಕ್ಕೆ ಹಾಕುತ್ತಿದ್ದರು. ಕಾರಣ, ನಮ್ಮ ದೇಶಕ್ಕೂ ಗ್ರೀನಿಚ್‌ಗೂ ೫½ ಗಂಟೆ ಹೆಚ್ಚುಕಡಮೆ ಇದೆ. ಜರ್ಮನಿಗೂ ಗ್ರೀನಿಚ್‌ಗೂ ಒಂದು ಗಂಟೆ ಹೆಚ್ಚುಕಡಮೆ ಇದೆ. ಜರ್ಮನಿಯಲ್ಲಿ ಮಧ್ಯಾಹ್ನ ೧೨ ಗಂಟೆ ಆದರೆ ಹಿಂದೂ ದೇಶದಲ್ಲಿ ಸಂಜೆ ೪½ ಗಂಟೆ. ಈ ರೀತಿಯ ವ್ಯತ್ಯಾಸವನ್ನು ಸರಿಮಾಡುವುದಕ್ಕಾಗಿ ಸಾಮಾನ್ಯವಾಗಿ ಪ್ರತಿ ನಿತ್ಯ ರಾತ್ರಿ ೧೨ ಗಂಟೆಗೆ ಸರಿಯಾಗಿ ಗಡಿಯಾರಗಳನ್ನು ಅರ್ಧ ಗಂಟೆ ಹಿಂದೆ ಹಾಕುತ್ತಿದ್ದರು.

ಒಂದು ದಿನ ಹಡಗಿನಲ್ಲಿ ಸೈರನ್ ಕೂಗಿಸಿದರು. ಹಡಗು ಕಷ್ಟದಲ್ಲಿ ಇದೆ, ಈ ಹಡಗನ್ನು ಬಿಟ್ಟುಬಿಡಬೇಕಾಗುತ್ತದೆ ಎಂದು. ಎಲ್ಲರೂ ಪ್ರಾಣಸಂರಕ್ಷಕ ಅಂಗಿಯನ್ನು (Life Saving Jacket) ಕಟ್ಟಿಕೊಂಡು ಹಡಗಿನವರು ಹೇಳಿದ ರೀತಿಯಲ್ಲಿ ಒಂದು ಕಡೆ ಸೇರಬೇಕು. ಅಲ್ಲಿ ಹಡಗನ್ನು ಬಿಟ್ಟು ಸಣ್ಣ ದೋಣಿಗಳಲ್ಲಿ ಹೇಗೆ ಹೋಗಬೇಕು ಎಂಬುದನ್ನು ತೋರಿಸಿದರು. ಅಭ್ಯಾಸಕ್ಕೆ ಮಾತ್ರ ಇದು.

ಪ್ರತಿ ಭಾನುವಾರ ಕ್ರೈಸ್ತರಿಗಾಗಿ ಪ್ರಾರ್ಥನೆ. ಒಬ್ಬ ಪಾದ್ರಿ ಇದ್ದೇ ಇರುತ್ತಾನೆ. ಒಂದು ಆಸ್ಪತ್ರೆ ಇದೆ. ಡಾಕ್ಟರ್ ಇರುತ್ತಾರೆ. ಆದರೆ ಹಣ ಸುರಿಯಬೇಕು. ಮಕ್ಕಳನ್ನು ಆಡಿಸಲು ಒಂದು ಕೊಠಡಿ ಇದೆ. ಅವರನ್ನು ನೋಡಿಕೊಳ್ಳಲು ಒಬ್ಬ ನರ್ಸ್ ಇರುತ್ತಾಳೆ. ಮಕ್ಕಳಿಗಾಗಿ ಬೇರೆ ಸ್ಥಳ ಏರ್ಪಡಿಸಿದ್ದಾರೆ. ಒಂದು ದಿನ 'ಮಕ್ಕಳ ದಿನ'ವೆಂದು ಕರೆದು ಮಕ್ಕಳಿಗೂ ಅವರ ತಂದೆತಾಯಿಗಳಿಗೂ ವಿಶೇಷ ಊಟ ಏರ್ಪಡಿಸಿದ್ದರು. ಆ ದಿನ ಮಕ್ಕಳು ಬಣ್ಣಬಣ್ಣದ ಬಟ್ಟೆಗಳನ್ನು ತೊಟ್ಟು ಸಂಜೆಗೆ ಎಲ್ಲರೂ ಸೇರಿದರು. ಚೆನ್ನಾಗಿ ವಿಚಿತ್ರ ಬಟ್ಟೆ ತೊಟ್ಟ ಮಕ್ಕಳಿಗೆ ಹಡಗಿನವರು ಬಹುಮಾನಗಳನ್ನು ಕೊಟ್ಟರು.

ಹಡಗಿನಲ್ಲಿ ಒಬ್ಬ ಫೋಟೋ ತೆಗೆಯುವವನಿದ್ದ. ಯಾರು ಕೇಳಿದರೂ ಅವರ ಫೋಟೋ ತೆಗೆದುಕೊಡುತ್ತಿದ್ದ. ನೃತ್ಯಗಳ ಕಾಲದಲ್ಲಿ ಒಟ್ಟಿಗೆ ಇದ್ದಾಗ ಫೋಟೋಗಳನ್ನು ತೆಗೆಯುತ್ತಿದ್ದ. ಆದರೆ ಬೆಲೆ ಮಾತ್ರ ಬಹಳ.

ಹಡಗು ಬೊಂಬಾಯಿ ಬಿಟ್ಟ ಎರಡನೇ ದಿನ ಕರಾಚಿಯನ್ನು ಸೇರಿತು. ಬೆಳಗ್ಗೆ ಸೇರಿದ್ದು ರಾತ್ರಿ ಕರಾಚಿ ಬಿಟ್ಟಿತು. ಹಡಗಿನವರು ಕರಾಚಿಯನ್ನು ನೋಡುವ ಅವಕಾಶ ಕಲ್ಪಿಸಿದರು. ಕರಾಚಿ ಪೋಲೀಸಿನವರೇ ಹಡಗಿಗೆ ಬಂದು ಹಡಗು ಬಂದರಿನಲ್ಲಿ ಇರುವವರೆಗೆ ಕರಾಚಿಯಲ್ಲಿ ಹಡಗು ಇಳಿಯಲು ಅಪ್ಪಣೆ

ಕೊಟ್ಟರು. ಪಾಸ್‌ಪೋರ್ಟನ್ನು ಅವರಲ್ಲಿ ಇಟ್ಟುಕೊಂಡು ಅದಕ್ಕೆ ಬದಲಾಗಿ ಒಂದು ಅಪ್ಪಣೆಯ ಚೀಟಿ ಕೊಟ್ಟರು. ಹಡಗಿನಿಂದ ಇಳಿಯಬೇಕಾದರೆ ಬಂದರಿನಲ್ಲಿದ್ದ ಕರಾಚಿಯ ಪೋಲೀಸರು "ನಿಮ್ಮಲ್ಲಿ ಎಷ್ಟು ಪಾಕಿಸ್ತಾನದ ದುಡ್ಡು ಇದೆ?" ಎಂದು ಕೇಳಿದರು. "ಇಲ್ಲ" ಎಂದೆವು. "ಇಲ್ಲಿ ಬೇರೆ ಯಾವ ನಾಣ್ಯಗಳನ್ನೂ ತೆಗೆದುಕೊಳ್ಳುವುದಿಲ್ಲ. ನಿಮ್ಮಲ್ಲಿ ಪೌಂಡು ಇದ್ದರೆ ಕೊಡಿ, ಪಾಕಿಸ್ತಾನದ ದುಡ್ಡು ಕೊಡುತ್ತೇವೆ" ಎಂದು ಹೇಳಿ ಒಂದು ಪೌಂಡಿಗೆ ೯ ಪಾಕಿಸ್ತಾನದ ರೂಪಾಯಿಗಳನ್ನು ಕೊಟ್ಟರು. ಇದು ಸರ್ಕಾರದ ದರ. ನಾನು ಹಡಗು ಇಳಿದು ಹೊರಗಡೆ ಹೋಗಿ ಸೈಕಲ್-ರಿಕ್ಷಾ ಗೊತ್ತುಮಾಡಿಕೊಂಡು ಊರು ಸುತ್ತಿದೆ. ಗಾಂಧೀ ಪಾರ್ಕ್, ಗೌರ್ನರ್ ಜನರಲ್ ಅವರ ಮನೆ ಮತ್ತು ಮುಖ್ಯ ಬೀದಿಗಳನ್ನು ಸುತ್ತಿದೆ. ಸ್ವಲ್ಪ ಗಲೀಜು. ಆದುದರಿಂದ ಹೆಚ್ಚು ಸುತ್ತಲು ಮನಸ್ಸು ಬರಲಿಲ್ಲ. ಕಡೆಗೆ ಸೈಕಲ್-ರಿಕ್ಷಾದವನನ್ನು ವಾಪಸ್ ಕರೆದುಕೊಂಡು ಹೋಗು ಎಂದು ಹೇಳಿ ಬಂದರಿಗೆ ಬಂದೆ. ಮೊದಲೇ ಮಾತ ನಾಡಿದಂತೆ ೪ ರೂ. ಕೊಡಲು ಹೋದರೆ ಅವನು ಗಲಾಟೆಗೆ ಪ್ರಾರಂಭಿಸಿದ, ೬ ರೂಪಾಯಿ ಕೊಡಬೇಕೆಂದು. ಸದ್ದುಮಾಡದೆ, ಇವರ ಕಾಟ ಸಾಕೆಂದು, ಕೊಟ್ಟು ಹಡಗು ಹತ್ತಿದೆ. ಹಡಗಿಗೆ ಬಂದ ಒಡನೆಯೇ ಉಳಿದ ದುಡ್ಡನ್ನು ಬದಲಾಯಿಸಲು, ಹಿಂದೆ ಬದಲಾಯಿಸಿ ಕೊಟ್ಟವನನ್ನು ಕೇಳಲು ಆತ ತಾನು ಬದಲಾಯಿಸಲೇ ಇಲ್ಲ ಎಂದ. ಸಂಜೆ ಪರ್ಸರ್ ಆಫೀಸಿನಲ್ಲಿ ಬದಲಾಯಿಸು ವಂತೆ ಕೇಳಲು, ಆತ ಪಾಕಿಸ್ತಾನದ ರೂಪಾಯಿಗೆ ಬೇರೆ ಯಾವ ದುಡ್ಡನ್ನೂ ಬದಲಾಯಿಸುವುದಿಲ್ಲವೆಂದೂ, ಪಾಕಿಸ್ತಾನದ ದುಡ್ಡನ್ನು ಹಡಗಿನಲ್ಲಿ ತೆಗೆದು ಕೊಳ್ಳುವುದಿಲ್ಲವೆಂದೂ ಹೇಳಿದ. ಅಷ್ಟು ದುಡ್ಡೂ ನಷ್ಟವಾಯಿತು. ಕಡೆಗೆ ಪೋರ್ಟ್ ಸೈಯದ್‌ನಲ್ಲಿ ಪಾಕಿಸ್ತಾನದ ರೂಪಾಯಿಗೆ ಒಂದು ಪೌಂಡಿನಂತೆ ಬದಲಾಯಿಸಿದೆವು. ಸಂಜೆ ಮಿಕ್ಕ ಪ್ರಯಾಣಿಕರು ಕರಾಚಿಯಿಂದ ವಾಪಸ್ ಬಂದಮೇಲೆ ತಮ್ಮ ತಮ್ಮ ದುಡ್ಡಿನ ಬದಲಾವಣೆಯ ಕಷ್ಟಗಳನ್ನು ಹೇಳಿ ಕೊಂಡು ಎಲ್ಲರೂ ನಗುವವರೇ. ರಾತ್ರಿ ೧೦ ಗಂಟೆಗೆ ಹಡಗು ಕರಾಚಿ ಬಿಟ್ಟಿತು.

ಮೂರು ದಿನವಾದನಂತರ ಹಡಗು ಏಡನ್ ಸೇರಿತು. ರಾತ್ರಿ ಹತ್ತು ಗಂಟೆ. ಇದು ಮುಕ್ತ ರೇವು (Free Port). ಆದುದರಿಂದ ಯಾರ ಅಪ್ಪಣೆಯೂ ಬೇಕಾಗಿಲ್ಲ. ಹಡಗಿನಿಂದ ಇಳಿದು ಸಣ್ಣ ದೋಣಿಗಳಲ್ಲಿ ಬಂದರಿಗೆ ಹೋಗಬೇಕು. ಹಡಗು ಬಂದರಿಗೆ ಬಲುದೂರ. ಇಲ್ಲಿ ಸುಂಕವಿಲ್ಲ ದಿರುವುದರಿಂದ ಎಲ್ಲಾ ಸಾಮಾನುಗಳ ಬೆಲೆ ಕಡಮೆ ಎಂದು ಯೂರೋಪಿಗೆ

ಹೋಗುವವರು ಇಲ್ಲಿ ತಮಗೆ ಬೇಕಾದ ಸಾಮಾನು ಕೊಳ್ಳುವರು. ರಾತ್ರಿ ೧೧–೧೨ ಗಂಟೆ ಆಗಿದ್ದರೂ ಹಡಗಿನ ಪ್ರಯಾಣಿಕರಿಗಾಗಿ ಅಂಗಡಿ ಬಾಗಿಲು ತೆಗೆದಿದ್ದರು. ನಾನು ಸಾಮಾನು ಕೊಳ್ಳದಿದ್ದರೂ ಒಂದು ಸುತ್ತು ಊರು ಸುತ್ತಿ ಹಡಗಿಗೆ ವಾಪಸ್ ಬಂದೆ. ಹಡಗು ಏಡನ್ ಬಂದರನ್ನು ಬಿಟ್ಟಾಗ ರಾತ್ರಿ ೩ ಗಂಟೆ.

ಏಡನ್ ಬಿಟ್ಟು ಹಡಗು ಕೆಂಪು ಸಮುದ್ರವನ್ನು ಸೇರಿತು. ಎರಡು ಕಡೆಯೂ ಮರುಭೂಮಿ, ಮಧ್ಯೆ ಸಮುದ್ರ. ಹೆಸರು ಕೆಂಪು ಸಮುದ್ರ. ಆದರೆ ನೀರು ಕೆಂಪು ಬಣ್ಣ ಅಲ್ಲ. ಹಡಗು ಸೂಯಜ್ ಬಂದರಿಗೆ ಸೇರಿದ ಮೇಲೆ ಸೂಯಜ್ ಕಾಲುವೆ ಅಧಿಕಾರಿಗಳ ಅಪ್ಪಣೆಗೆ ಒಳಗಾಗಿರಬೇಕು. ಆದುವರೆಗೆ ಕ್ಯೂನಲ್ಲಿ ನಿಂತಿದ್ದ ಹಡಗುಗಳನ್ನು ಬಿಟ್ಟನಂತರ ಈ ಹಡಗನ್ನು ಬಿಡುತ್ತಾರೆ. ಸೂಯಜ್‌ನಿಂದ ಕೈರೋಗೆ ಹೋಗಿ ಸಂಜೆ ಪೋರ್ಟ್ ಸೈಯದ್‌ಗೆ ಬಂದು ಹಡಗು ಹತ್ತಬಹುದು. ಇದನ್ನು ಹಡಗಿನ ಅಧಿಕಾರಿಗಳೇ ಏರ್ಪಡಿಸಿದ್ದರು. ಇದಕ್ಕೆ ೯ ಪೌಂಡು ಖರ್ಚು. ಹಡಗು ಸಣ್ಣ ಕಾಲುವೆ ಯಲ್ಲಿ ಹೋಗುವಂತೆ ಈ ಇಕ್ಕಟ್ಟಾದ ಸೂಯಜ್ ಕಾಲುವೆಯನ್ನು ಸೇರಿತು. ಮೊದಲಿಗೆ ಎರಡು ಕಡೆಯಲ್ಲೂ ಮನೆಗಳನ್ನು ಕಾಣಬಹುದು. ಅನಂತರ ಎರಡು ಕಡೆಯಲ್ಲೂ ಮರಳುಗಾಡು. ಅಲ್ಲಲ್ಲಿ ಹಸಿರು ಮರಗಳು. ಒಂಟೆಗಳ ಮೇಲೆ ಪ್ರಯಾಣ ಮಾಡುವ ಅರಬ್ಬರು. ಕಾಲುವೆಯ ಉದ್ದಕ್ಕೂ ಎರಡು ಪಕ್ಕದಲ್ಲಿ ರಸ್ತೆ. ಹಡಗು ಬಹಳ ನಿಧಾನವಾಗಿ ಹೋಗುತ್ತದೆ. ಉಸ್ಮಾನಿಯಾ ಎಂಬ ಕಡೆ ಸಣ್ಣ ಸರೋವರ ಇದೆ. ಇಲ್ಲಿ ಹಡಗುಗಳು ನಿಲ್ಲಬಹುದು. ಇಲ್ಲಿಂದ ಪುನಃ ಕಾಲುವೆಯನ್ನು ಸೇರುತ್ತದೆ ಹಡಗು. ರಾತ್ರಿ ಹಡಗು ಪೋರ್ಟ್ ಸೈಯದ್‌ಗೆ ಬಂದು ತಲುಪಿತು. ಇಲ್ಲಿ ಬೆಳಗ್ಗೆ ಕೈರೋ ನೋಡಲು ಹೋಗಿದ್ದ ಪ್ರಯಾಣಿಕರು ಬಂದು ಹತ್ತಿದರು. ಇಲ್ಲಿ ಊರು ನೋಡಲು ಈಜಿಪ್ಟಿನ ಪೋಲೀಸರು ಅಪ್ಪಣೆ ಕೊಟ್ಟರು. ಹಡಗು ನಿಂತಿದ್ದ ೪–೫ ಗಂಟೆಗಳ ಕಾಲ ಊರು ಸುತ್ತಿದೆ. ಕೆಲವು ಅಂಗಡಿಗಳು ಹಡಗಿಗಾಗಿ ತೆರೆದಿದ್ದವು. ಇಲ್ಲಿ ಚರ್ಮದ ಸಾಮಾನು ಅಗ್ಗ. ಪಾಶ್ಚಿಮಾತ್ಯರು ಇಲ್ಲಿ ವಿಪರೀತ ಸಾಮಾನು ಕೊಂಡರು. ಹಡಗಿನ ಹತ್ತಿರಕ್ಕೆ ಸಣ್ಣ ದೋಣಿಗಳಲ್ಲಿ ಸಾಮಾನುಗಳನ್ನು ತಂದು "ಬಹಳ ಅಗ್ಗ" (Very cheap Sir, very cheap) ಎಂದು ಮಾರುತ್ತಿದ್ದರು. ಹಡಗು ಮಧ್ಯರಾತ್ರಿಯಲ್ಲಿ ರೇವನ್ನು ಬಿಟ್ಟು ಮೆಡಿಟರೇನಿ ಯನ್ ಸಮುದ್ರವನ್ನು ಸೇರಿತು.

ಬೆಳಗಾಗುವ ಹೊತ್ತಿಗೆ ಸಮುದ್ರದಲ್ಲಿ ಅಲೆಗಳೆದ್ದು ಹಡಗು ಮೇಲಕ್ಕೂ

ಕೆಳಕ್ಕೂ ತೂಗುತ್ತ ಹೋಗುತ್ತಿತ್ತು. ಅನೇಕರು ಹಾಸಿಗೆಯಿಂದ ಏಳಲೇ ಇಲ್ಲ. ಎಲ್ಲರಿಗೂ ಸಮುದ್ರಜ್ವರ. ಬೆಳಗ್ಗೆ ಎದ್ದು ಕಾಫಿ ಕುಡಿಯಲು ಹೋದೆ; ಕುಡಿದೊಡನೆಯೇ ವಾಂತಿಯಾಯಿತು. ಹಡಗಿನವರು ಹೊಟ್ಟೆಗೆ ನೀರಿನ ಪದಾರ್ಥ ಸೇರಿಸಬಾರದೆಂದು ಹೇಳಿದರು. ಹಡಗಿನ ಮೇಲೆ ನಿಲ್ಲುವುದಕ್ಕೆ ಆಗುತ್ತಿರಲಿಲ್ಲ. ಅಲೆಗಳ ಹೊಡೆತಕ್ಕೆ ಹಡಗು ಒಂದು ಕಾಗದದ ಹಾಳೆ ಯಂತೆ ಮೇಲಕ್ಕೂ ಕೆಳಕ್ಕೂ ಆಡುತ್ತಿತ್ತು. ಪ್ರಕೃತಿಯ ಇದುರಿಗೆ ಈ ಮಾನವನ ಯಂತ್ರವೇ ? ಒಬ್ಬ ಅಫಘಾನಿಸ್ಥಾನದವನು ಹೇಳುತ್ತಿದ್ದ ಹಾಗೆ "ಹಡಗು ಪ್ರೇಮಿಗಳ ಯಂತ್ರ" (Ship is a love making machine) ಎಂದುಕೊಂಡೆ. ಸಮುದ್ರದಲ್ಲಿ ಹಡಗು ಹತ್ತಿದ ಕೂಡಲೇ ಬೇರೆ ಪ್ರಪಂಚ ವನ್ನೇ ಸೇರಿದವರಂತೆ ಆಗುತ್ತದೆ ಈ ಜನಕ್ಕೆ. ಒಂದು ಸಾರಿ ಅನಿಸುತ್ತದೆ: ಹಡಗು ಹತ್ತಿ ಇಳಿಯುವ ಹೊತ್ತಿಗೆ ಇವರು ತಮ್ಮ ಮನೆಮಠಗಳನ್ನೇ ಮರೆ ಯುತ್ತಾರೆ, ಎಂದು.

ಕೆಲವು ಯುವತಿಯರು ದುಡ್ಡಿನ ಸಂಪಾದನೆಗೆ ಬಂದಂತೆ ಕಾಣುತ್ತದೆ. ಯಾವಾಗ ನೋಡಿದರೂ ಅವರಿವರನ್ನು ಜೊತೆಗೆ ಹಾಕಿಕೊಂಡು ಓಡಾಡು ವುದೇ ಇವರ ಕೆಲಸ. ಹಡಗಿಗೆ ಕೊಟ್ಟಿರುವ ಪ್ರಯಾಣದ ಖರ್ಚನ್ನಾದರೂ ಇವರು ಬೇರೆಯವರಿಂದ ವಸೂಲುಮಾಡುತ್ತಿದ್ದರು.

ಅರವಿಂದ ಆಶ್ರಮಕ್ಕೆ ಸೇರಿದ ಒಬ್ಬ ಫ್ರೆಂಚ್ ಮಹಿಳೆ ತನ್ನ ದೇಶಕ್ಕೆ ಹಿಂದಿರುಗುತ್ತಿದ್ದಳು. ಆಕೆ ಯಾರೊಡನೆಯೂ ಹೆಚ್ಚು ಮಾತನಾಡುತ್ತಿರ ಲಿಲ್ಲ. ಯಾವಾಗಲೂ ಡೆಕ್ಕಿನ ಮೇಲೆ ಓಡಾಡುತ್ತಿದ್ದಳು. ಒಂದು ಪುಸ್ತಕ ಹಿಡಿದು ಓದುತ್ತಿರುವುದನ್ನು ಕಾಣಬಹುದು. ಆಕೆ ಭಾರತೀಯ ಹುಡುಗರಿಗೆ ಫ್ರಾನ್ಸ್ ದೇಶದ ವಿಷಯ ಹೇಳುತ್ತಿದ್ದಳು—ಪ್ಯಾರಿಸ್ ಅನ್ನು ನೋಡ ಬೇಕಾದ ಕಾಲ, ಯುವಕ ಸಂಘಗಳ ವಿಚಾರ, ಇತ್ಯಾದಿ ಎಲ್ಲವನ್ನು ತಿಳಿಸು ತ್ತಿದ್ದಳು.

ಮೊದಲನೆಯ ತರಗತಿಯಲ್ಲಿ ಸಿರಿಯಾದಲ್ಲಿನ ಭಾರತದ ರಾಯಭಾರಿ ಪಯಣ ಬೆಳೆಸುತ್ತಿದ್ದರು. ಅವರೊಡನೆ ಭಾರತೀಯರೆಲ್ಲರೂ ಸೇರಿ ಮಾತ ನಾಡಿದೆವು. ಅವರು ಭಾರತ ಸರಕಾರದ ಅಂತರರಾಷ್ಟ್ರೀಯ ರಾಜಕೀಯ ವಿಚಾರವನ್ನು ಬಹಳ ವಿವರವಾಗಿ ಹೇಳಿ ಪಾಶ್ಚಿಮಾತ್ಯ ದೇಶಕ್ಕೆ ಹೋಗುವ ಭಾರತೀಯರು ಭಾರತದ ಹೆಸರನ್ನು ಮುಂದೆ ತರಬೇಕೆಂದು ಬುದ್ಧಿಹೇಳಿದರು.

ಭಾರತೀಯರಲ್ಲಿ ಒಬ್ಬೊಬ್ಬರು ಒಂದೊಂದು ತರ. ಒಟ್ಟಿಗೆ ಸೇರುವುದೂ ಕಷ್ಟ. ಹಡಗು ಹತ್ತಿದಮೇಲೆ ಪೂರ್ಣ ಸ್ವಾತಂತ್ರ್ಯ ಬಂದುಬಿಟ್ಟಿರುತ್ತದೆ.

ಮನಸ್ಸು ಬಂದಂತೆ ಆಡಬೇಕು. ಹಡಗಿನಲ್ಲಿ ಅವಕಾಶವೂ ಇದೆ. ಮನಸ್ಸಿಗೆ ಬಂದಂತೆ ಮದ್ಯಸೇವನೆ ಮಾಡುವುದು, ಕಂಡ ಕಂಡ ಹುಡುಗಿಯರ ಜೊತೆಯಲ್ಲಿ ಕುಣಿಯುವುದು. ಸಂಜೆಗೆ ಯಾರ ಜೊತೆಯಲ್ಲಿ ಕುಣಿಯಬೇಕೆಂದು ಬೆಳಗ್ಗಿನಿಂದಲೇ ಮಾತು. ಇಂತಹವರೇ ಭಾರತ ಸರಕಾರವನ್ನು ಟೀಕಿಸುವುದು. ಪಾಶ್ಚಿಮಾತ್ಯರಲ್ಲಿ ಒಬ್ಬರೂ ಹೊರಗಡೆ ತಮ್ಮ ಸರಕಾರದ ವಿಚಾರ ಮಾತನಾಡಿದ್ದು ನಾನು ಕೇಳಲಿಲ್ಲ. ತಮ್ಮ ಸರಕಾರವನ್ನು ಹೊರಗೆ ದೂಷಿಸುವುದು ಭಾರತೀಯರ ಗುಣವೆಂದು ತೋರುತ್ತದೆ.

ಹಡಗಿನಲ್ಲಿ ಭಾರತೀಯರೆಂದರೆ ಸ್ವಲ್ಪ ಅಲಕ್ಷ್ಯ. ಒಬ್ಬ ಪಂಜಾಬಿ ಯುವಕ ಯಾವಾಗಲೂ "ನೀವು ಭಾರತೀಯರನ್ನು ಕಂಡರೆ ಸರಿಯಾಗಿ ಕಾಣುವುದಿಲ್ಲ. ಪತ್ರಿಕೆಗಳಿಗೆ ಬರೆಯುತ್ತೇನೆ. ಈ ವಿಚಾರವನ್ನು ಸರಕಾರದವರಿಗೆ ತಿಳಿಸುತ್ತೇನೆ. ಯಾರೂ ಈ ಹಡಗಿನಲ್ಲಿ ಪ್ರಯಾಣ ಮಾಡಬಾರದೆಂದು ಹೇಳುತ್ತೇನೆ" ಎಂದು ಹೆದರಿಸುತ್ತಿದ್ದ.

ಹಡಗಿನಲ್ಲಿ ಹೆಚ್ಚು ಆಟ ಆಡಿಕೊಂಡು ಯಾವಾಗಲೂ ತಮಾಷೆಯಾಗಿ ಕಾಲ ಕಳೆಯುತ್ತಿದ್ದವರೆಂದರೆ ಬೇರೆ ಹಡಗಿನಲ್ಲಿ ಕೆಲಸ ಮಾಡಿಕೊಂಡಿದ್ದು ರಜದ ಮೇಲೆ ತಮ್ಮ ಊರಿಗೆ ಹಿಂತಿರುಗುತ್ತಿದ್ದ ನೀಗ್ರೋ ಯುವಕರು. ಬಣ್ಣಬಣ್ಣದ ಬಟ್ಟೆಗಳನ್ನು ಹಾಕಿಕೊಂಡು ಹಡಗಿನಲ್ಲೆಲ್ಲಾ ಓಡಾಡುತ್ತಿದ್ದರು.

ಹಡಗು ಇಟಲಿ ದೇಶದ ನೇಪಲ್ಸ್ ಪಟ್ಟಣಕ್ಕೆ ಬಂದಿತು. "ನೇಪಲ್ಸ್ ನೋಡಿ ಸಾಯಿ" ಎನ್ನುತ್ತಾರೆ. ಸುಂದರವಾದ ಊರು. ಇಲ್ಲಿಂದ ಕಾರಿನಲ್ಲಿ ಪಾಂಪೆಗೆ ಹೋಗಿ, ಅಲ್ಲಿ ರೋಮನರ ಸಾಮ್ರಾಜ್ಯದ ವಿಶಿಷ್ಟ ವೈಭವವನ್ನು ನೋಡುವ ಅವಕಾಶ ಸಿಕ್ಕಿತು. ಸರಕಾರದವರು ಎಲ್ಲವನ್ನೂ ಕಾಪಾಡಿ ಇಟ್ಟಿದ್ದಾರೆ. ಪ್ರವೇಶಧನ ವಿಪರೀತ ಹೆಚ್ಚು. ಮಾತಿಗೆ ಮೊದಲು ಕಾಸು ಕಾಸು ಎನ್ನುತ್ತಾರೆ ಇಲ್ಲಿಯ ಜನ. ೪–೫ ಜನ ಭಾರತೀಯರು ಒಟ್ಟಿಗೆ ಹೋಗಿದ್ದೆವು. ಪಾಂಪೆಯನ್ನು ಪೂರ್ತಿ ನೋಡಿ ಹಡಗಿಗೆ ಬಂದೆವು. ರಾತ್ರಿ ಹಡಗು ನೇಪಲ್ಸ್ ಬಿಟ್ಟಿತು. ಹಡಗಿನಲ್ಲಿರುವುದು ಇದೇ ಕಡೆಯ ದಿನ. ನಾಳೆ ಬೆಳಗ್ಗೆ ಜಿನೋವಾ ಸಿಗುತ್ತದೆ. ಅನೇಕರಿಗೆ ತೇಲುವ ಲೋಕವಾದ ಈ ಹಡಗನ್ನು ಬಿಡಲು ದುಃಖ. ಕೆಲವರಿಗೆ ೧೩ ದಿನದ ಈ ಸಮುದ್ರ ಪ್ರವಾಸ ಬೇಸರವಾಗಿ ಯಾವಾಗ ನೆಲ ಕಂಡೇವು ಎನ್ನುತ್ತಿದ್ದರು. ಮುಖ್ಯ ಕಛೇರಿಯ ಮುಂದೆ ಬಕ್ಷೀಸು (Tips) ಎಂದು ದೊಡ್ಡ ಹಲಗೆ ತೂಗುಹಾಕಿದ್ದರು. ಕೆಲಸಗಾರರು ಕೆಲಸಮಾಡಿದ್ದಕ್ಕೆ ಈ ಲಂಚ ಬೇರೆ. ಎಲ್ಲಾ ಪ್ರಯಾಣಿಕರೂ ಅವರಿಗೆ ದುಡ್ಡು ಕೊಡಬೇಕಂತೆ.

ಹಡಗು ಜಿನೋವಾ ಹತ್ತಿರ ಬಂತು. ಇಟಲಿಯ ಬೆಟ್ಟಗುಡ್ಡಗಳಲ್ಲಿ ಇರುವ ಊರು ಜಿನೋವಾ. ಹಡಗಿನಿಂದ ಇಳಿದೆ. ಸಾಮಾನುಗಳೆಲ್ಲಾ ಸುಂಕದ ಮನೆಯ ಹತ್ತಿರ ಎಸ್.ಡಿ. ಎಂಬ ಗುರುತು ಇದ್ದ ಕಡೆ ಇದ್ದವು. ಸಾಮಾನು ಹುಡುಕಿದಮೇಲೆ ಸುಂಕ ಏನೂ ಕೊಡಬೇಕಾಗಿಲ್ಲವೆಂದು ತಿಳಿದಮೇಲೆ ಟ್ಯಾಕ್ಸಿಯಲ್ಲಿ ಹಾಕಿಕೊಂಡು ರೈಲ್ವೆ ನಿಲ್ದಾಣಕ್ಕೆ ಹೊರಟೆ. ೪ ಜನ ಭಾರತೀಯರು ಒಟ್ಟಿಗೆ ಒಂದು ಟ್ಯಾಕ್ಸಿಯಲ್ಲಿ ಹೋದೆವು. ಒಬ್ಬೊಬ್ಬರು ೧,೫೦೦ ಲೀರಾ ಕೊಡಬೇಕೆಂದು ಕೇಳಿದಮೇಲೆ ಕೊಟ್ಟೆವು. ಇನ್ನೊಬ್ಬ ಇಟಲಿ ದೇಶದವ. ಒಂದು ಟ್ಯಾಕ್ಸಿಯಲ್ಲಿ ಬಂದ. ಆತ ೩.೨೦ ಲೀರಾಗಳನ್ನು ಮಾತ್ರ ಕೊಟ್ಟ. ಬಂದರಿಗೆ ರೈಲ್ವೆ ನಿಲ್ದಾಣ ಬಹಳ ಹತ್ತಿರ. ಇದು ಟ್ಯಾಕ್ಸಿಯವರ ಮೋಸ. ಸುಮಾರು ೧೪೦ ಇಟಲಿಯ ಲೀರಾಗಳಿಗೆ ೧ ರೂಪಾಯಿ ಸಮ. ನಾವು ೪ ಜನ ಸೇರಿ ೬,೦೦೦ ಲೀರಾ ಒಂದು ಟ್ಯಾಕ್ಸಿಗೆ ಕೊಟ್ಟೆವು. ಬೆಂಗಳೂರಿಗೆ ಹೊಸದಾಗಿ ಬಂದವರನ್ನು ಸುಭಾಷ್‌ನಗರದ ಸುತ್ತಲೂ ಒಂದು ಸುತ್ತು ಸುತ್ತಿಸಿ ಪಕ್ಕದಲ್ಲೇ ಇರುವ ತೋಟದಪ್ಪನ ಛತ್ರಕ್ಕೆ ಬಿಡುವ ಕುದುರೆ ಗಾಡಿಯವನಂತೆ ಆಯಿತು.

ರೈಲ್ವೆ ನಿಲ್ದಾಣಕ್ಕೆ ಸಂಜೆ ಬಂದೆ. ಜರ್ಮನಿಗೆ ಹೊರಡುವ ರೈಲು ೭ ಗಂಟೆಗೆ. ಇಲ್ಲೇ ಊಟ ಮುಗಿಸಿ ಹೋಗಬೇಕೆಂದು ಹೋಟೆಲು ಹುಡುಕಿಕೊಂಡು ಹೊರಟೆ. ಸ್ವಲ್ಪ ಕಾಯಿ ಪಲ್ಯ ತಿಂದು, ಬ್ರೆಡ್ ಕಾಫಿ ತೆಗೆದುಕೊಂಡದ್ದಕ್ಕೆ ೫ ರೂ. ಬಿಲ್ಲು ಕೈಗೆ ಕೊಟ್ಟ. ಇಲ್ಲಿಯ ಜನರಿಗೆ ಇಟಲೀ ಭಾಷೆ ಬಿಟ್ಟು ಬೇರೆ ಭಾಷೆ ಇಲ್ಲ. ಭಾಷೆ ಬರದೆ ಕೇಳಿದಷ್ಟು ದುಡ್ಡು ಕೊಟ್ಟು ಬಂದೆ. ಬ್ಯಾಂಕಿಗೆ ಹೋಗಿ ಪೌಂಡಿಗೆ ಜರ್ಮನಿಯ ಮಾರ್ಕುಗಳನ್ನು ತೆಗೆದುಕೊಂಡೆ. ಬಹಿರ್ದೇಶಕ್ಕೆ ಹೋಗಬೇಕೆಂದು ಕಕ್ಕಸು ಎಲ್ಲಿದೆ ಎಂದು ತಿಳಿದುಕೊಂಡು ಹೋದರೆ ಅಲ್ಲಿ ೫೦ ಲೀರಾ ಕೊಟ್ಟರೆ ಒಳಗೆ ಬಿಡುತ್ತಾರೆ ! ನನಗೆ ಇದೇನು ಮಲಮೂತ್ರ ವಿಸರ್ಜಿಸಲೂ ದುಡ್ಡು ಕೊಡಬೇಕಲ್ಲ ಎನ್ನಿಸಿತು. ಚಳಿಗಾಳಿ ಬೀಸಲು ಪ್ರಾರಂಭಿಸಿತು. ಉದ್ದನೆಯ ಕೋಟು, ಕೈಗೆ ತೊಗಲಿನ ಚೀಲ ಧರಿಸಿ ಜರ್ಮನಿಗೆ ಹೋಗುವ ರೈಲು ಹತ್ತಿದೆ.

೩. ಜರ್ಮನಿಗೆ ಆಗಮನ

ರಸವೇ ಜನನ ; ವಿರಸವೇ ಮರಣ ; ಸಮರಸವೇ ಜೀವನ.

—ದ. ರಾ. ಬೇಂದ್ರೆ

ಜಿನೋವಾದಿಂದ ಜರ್ಮನಿಯ ಹ್ಯಾಂಬುರ್ಗ್‌ಗೆ ಒಂದು ರೈಲು ಹೋಗುತ್ತದೆ. ಆ ರೈಲನ್ನು ಹತ್ತಿ ಇಟಲಿ ದೇಶವನ್ನು ಬಿಟ್ಟೆ. ಎರಡನೆಯ ತರಗತಿಯಾದುದರಿಂದ ಮಲಗಲು ನಮ್ಮ ದೇಶದ ರೈಲಿನ ಹಾಗೆ ಎಲ್ಲಾ ಅನುಕೂಲಗಳೂ ಇರುತ್ತವೆ ಎಂದು ನಾನು ತಿಳಿದಿದ್ದೆ. ಆದರೆ ಅದರಲ್ಲಿ ಕುಳಿತುಕೊಳ್ಳಲು ಮಾತ್ರ ಸ್ಥಳ ಇತ್ತು. ೧-೨-೩ ತರಗತಿಗಳಿಗೆ ಮೆತ್ತೆಯ ಬಣ್ಣ ಒಂದು ಬಿಟ್ಟರೆ ನನಗೆ ಹೆಚ್ಚಿನ ವ್ಯತ್ಯಾಸವೇನೂ ಕಾಣಲಿಲ್ಲ. ಒಂದೇ ಗಾಡಿಯಲ್ಲಿ ಮೂರು ತರಗತಿಗಳಿವೆ. ಸಿಗರೇಟು ಸೇದುವವರಿಗೆ ಬೇರೆ ಗಾಡಿಗಳೇ ಇವೆ. ಎಲ್ಲಾ ಗಾಡಿಗಳಲ್ಲೂ ಸಿಗರೇಟು ಸೇದುವ ಹಾಗಿಲ್ಲ. ಚಳಿಯಾದುದರಿಂದ ರೈಲುಗಾಡಿಯ ಕಿಟಕಿ ಬಾಗಿಲುಗಳನ್ನೆಲ್ಲಾ ಭದ್ರವಾಗಿ ಮುಚ್ಚಿರುವುದರ ಜೊತೆಗೆ ಗಾಡಿಯ ಒಳಗೆ ಸುತ್ತಲೂ ನೀರಿನ ಆವಿಯ ಪೈಪುಗಳನ್ನು ಹಾಕಿ, ಗಾಡಿಯನ್ನು ಶಾಖವಾಗಿ ಇಟ್ಟು, ಜನಗಳು ಬೆಚ್ಚಗೆ ಕೂಡುವಂತೆ ಏರ್ಪಡಿಸಿದ್ದರು. ನಾನು ಕುಳಿತ ರೈಲುಗಾಡಿಯ ತುಂಬಾ ಹಡಗಿನಲ್ಲಿ ಬಂದ ಜರ್ಮನಿಯ ಜನರೇ ಕುಳಿತಿದ್ದಂತೆ ಇತ್ತು. ಇಟಲಿಯ ಗಡಿ ಬಿಟ್ಟು ಸ್ವಿಟ್ಜರ್ಲೆಂಡನ್ನು ಸೇರುವುದಕ್ಕೆ ಮುಂಚೆ ರೈಲ್ವೆ ನಿಲ್ದಾಣದಲ್ಲಿ ರೈಲು ನಿಲ್ಲಿಸಿ, ಸುಂಕದವರೂ ಪಾಸ್‌ಪೋರ್ಟ್‌ನ ಪೋಲೀಸಿನವರೂ ಬಂದು ಎಲ್ಲಾ ತನಿಖೆ ನಡೆಸುತ್ತಾರೆ. ಸ್ವಿಟ್ಜರ್ಲೆಂಡಿನ ಪೋಲೀಸರೂ ತನಿಖೆ ನಡೆಸುತ್ತಾರೆ. ಸ್ವಿಟ್ಜರ್ಲೆಂಡಿನ ಮೂಲಕ ರಾತ್ರಿಯಲ್ಲಿ ಹಾದುಹೋಗುವುದರಿಂದ ಹೆಚ್ಚು ನೋಡಲು ಆಗಲಿಲ್ಲ. ಆದರೂ ಬೆಳದಿಂಗಳ ಬೆಳಕಿನಲ್ಲಿ ಬೆಣ್ಣೆಯಿಂದ ಅಲಂಕೃತವಾದಂತೆ ಕಾಣುತ್ತಿದ್ದ ಮಂಜಿನಿಂದ ಮುಸುಕಿದ್ದ ಆಲ್ಪ್ಸ್ ಪರ್ವತಗಳನ್ನು ನೋಡುವ ಸುಯೋಗ ದೊರಕಿತು. ಇದೇ ಮೊದಲನೆಯ ಸಾರಿ ಹೀಗೆ ಮಂಜು ಕವಿದಿದ್ದ ಬೆಟ್ಟಗಳನ್ನು ನಾನು ನೋಡಿದ್ದು. ಎಲ್ಲಿ ನೋಡಿದರೂ ಮಂಜು. ಬೆಳಗಿನ ಜಾವದ ಹೊತ್ತಿಗೆ ರೈಲು ಜರ್ಮನಿಯ ಗಡಿ ಮುಟ್ಟಿತು. ಸ್ವಿಟ್ಜರ್ಲೆಂಡಿನ ಮತ್ತು ಜರ್ಮನಿಯ ಗಡಿಯಲ್ಲಿ ಬಾಸೆಲ್ ಎಂಬ ಊರಿದೆ. ಇದಕ್ಕೆ ಎರಡು ರೈಲ್ವೆ ನಿಲ್ದಾಣ. ಒಂದು ಜರ್ಮನಿಗೆ ಸೇರಿದ್ದು, ಇನ್ನೊಂದು

ಸ್ವಿಡ್ಜರ್ಲೆಂಡಿಗೆ ಸೇರಿದ್ದು. ರೈಲುಗಾಡಿಯನ್ನು ಇಲ್ಲಿ ನಿಲ್ಲಿಸಿ ಎರಡೂ ದೇಶದ ಸುಂಕದವರೂ ಪೋಲೀಸಿನವರೂ ಬಂದು ತನಿಖೆ ಮಾಡುತ್ತಾರೆ. ನಿಗದಿಯಾದ ದುಡ್ಡಿಗಿಂತ ಹೆಚ್ಚು ತೆಗೆದುಕೊಂಡು ಹೋಗಕೂಡದು. ಬಾಯಲ್ಲಿ ಹೇಳಿದರೆ ಸಾಕು, ಒಪ್ಪಿಕೊಳ್ಳುತ್ತಾರೆ. ಜರ್ಮನಿಯ ಪೋಲೀಸ್‌ನವನು ಬಂದ. ನೋಡಲು ಸ್ವಲ್ಪ ಹೆದರಿಕೆಯಾಗುವ ಹಾಗೇ ಇದ್ದ. ಅದರಲ್ಲೂ ಚಿಕ್ಕವಯಸ್ಸಿನಿಂದಲೇ "ಜರ್ಮನರು ಸ್ವಲ್ಪ ಭಾರೀ ಮನುಷ್ಯರು, ಹೆಚ್ಚು ಕರುಣೆಗಳಲ್ಲ" ಎಂದು ಕೇಳಿದ್ದೆ. ಅದೂ ಸ್ವಲ್ಪ ಹೆದರಿಕೆ. ಬಂದಕೂಡಲೇ ಜರ್ಮನಿಯಲ್ಲಿ "ನಮಸ್ಕಾರ, ಪಾಸ್‌ಪೋರ್ಟ್ ಕೊಡು" ಎಂದು ಕೇಳಿದ. ಮೊದಲೇ ಜರ್ಮನ್ ಭಾಷೆ ಸ್ವಲ್ಪ ಕಲಿತಿದ್ದರೂ ಅತ ಆಡಿದ ಮಾತು ಏನೂ ಅರ್ಥವಾಗಲಿಲ್ಲ. ಕಡೆಗೆ ಕೈಸನ್ನೆಮಾಡಿ ಕೇಳಿದ. ತೋರಿಸಿದೆ. ಮತ್ತೆ ಎಷ್ಟು ದಿನ ಇರುತ್ತೀ, ಏತಕ್ಕಾಗಿ ಜರ್ಮನಿಗೆ ಹೋಗುತ್ತಿದ್ದೀ ಎಂದು ಜರ್ಮನಿಯ ಭಾಷೆಯಲ್ಲೇ ಕೇಳಿದ. ಏನೂ ಅರ್ಥವಾಗಲಿಲ್ಲ. ಪಕ್ಕದ ಕಂಪಾರ್ಟ್‌ಮೆಂಟಿನಲ್ಲಿದ್ದ ಇಂಗ್ಲಿಷ್ ಬರುವ ಜರ್ಮನನು ಬಂದು ಇಂಗ್ಲಿಷಿಗೆ ಭಾಷಾಂತರ ಮಾಡಿ ಹೇಳಿದ. ಆಗ ವಿವರಿಸಿ ಹೇಳಿದೆ. ಕಡೆಗೆ ನಕ್ಕು ಪಾಸ್‌ಪೋರ್ಟ್ ವಾಪಸ್ ಕೊಡುತ್ತಾ "ಬಹಳ ಸಂತೋಷ, ಜರ್ಮನಿಯಲ್ಲಿ ಇರುವಷ್ಟು ದಿನ ಬಹಳ ಸಂತೋಷವಾಗಿ ಕಾಲ ಕಳೆಯಿರಿ" ಎಂದು ಹೇಳಿ ಹೊರಟುಹೋದ. ಅದನ್ನು ಆ ಇಂಗ್ಲಿಷ್ ಬರುತ್ತಿದ್ದ ಜರ್ಮನನು ಭಾಷಾಂತರ ಮಾಡಿ ಹೇಳಿದ ಮೇಲೆ ಸಮಾಧಾನವಾಯಿತು. ಜರ್ಮನಿಯ ಪೋಲೀಸಿನವನಿಗೂ ಸಹ ಇಷ್ಟು ದೇಶಪ್ರೇಮ, ಪ್ರೀತಿವಿಶ್ವಾಸ ಇದೆಯಲ್ಲ ಎಂದು ಆನಂದಪಟ್ಟೆ.

ರೈಲು ಜರ್ಮನಿಯ ಗಡಿಯನ್ನು ಸೇರಿ ಗುಡ್ಡಗಾಡಿನಿಂದ ಕೂಡಿದ ಬವೇರಿಯಾ ಪ್ರದೇಶವನ್ನು ಹಾದು ಫ್ರಾಂಕ್‌ಫುರ್ಟ್ ಕಡೆಗೆ ಹೊರಟಿತು. ರೈಲಿನಲ್ಲೇ ತಿಂಡಿ, ಕಾಫಿ ಮುಗಿಸಿದೆ. ಕ್ರಿಸ್ಮಸ್ ಹಬ್ಬವಾದುದರಿಂದ (ಡಿಸೆಂಬರ್ ೨೩) ರೈಲಿನಲ್ಲಿ ಹೆಚ್ಚು ಜನ ಇರಲಿಲ್ಲ. ಅದರಲ್ಲೂ ೨ನೇ ತರಗತಿಯಲ್ಲಿ ಯಾರೂ ಇರಲೇ ಇಲ್ಲ ಎಂದು ಹೇಳಬಹುದು. ಆ ಮಂಜನ್ನು ನೋಡಿ, ಆ ಚಳಿಯಲ್ಲಿ ರೈಲು ಇಳಿದು ಹೋಗುವುದು ಹೇಗೆ, ಇನ್ನು ಒಂದು ವರ್ಷ ಕಾಲ ಈ ದೇಶದಲ್ಲಿ ಇರುವುದು ಹೇಗೆ?—ಎಂದು ಯೋಚನೆಯಾಯಿತು.

ಉತ್ತರ ಏಷ್ಯಾದಿಂದ ಬೇಟೆಗಾರರು, ಕಾಡುಜನರು ಈ ಮಧ್ಯ ಯೂರೋಪಿನಲ್ಲಿ ಸುಮಾರು ಕ್ರಿ.ಪೂ. ೧೨೦೦ರಲ್ಲಿ ಬಂದು ನೆಲೆಸಿದರು. ಕ್ರಿ.ಪೂ. ೪೦೦ರ ಹೊತ್ತಿಗೆ ರೈನ್ ನದಿಯ ಸಂಸ್ಕೃತಿ ಬೆಳೆದು ಅದರ ಸುತ್ತಮುತ್ತಲೂ ನೆಲಸಿದರು.* ಕ್ರಿ.ಶ. ೪೦೦ರಲ್ಲಿ ರೋಮನರ ಸಾಮ್ರಾಜ್ಯ ಬಂತು. ಕಡೆಗೆ

ಕ್ರಿ.ಶ. ೮೦೦ರಲ್ಲಿ ಜರ್ಮನಿಯ ಚಾರಲ್ಸ್ ಮಾಗ್ನೆಯ ರೋಮ್ ಸಾಮ್ರಾಜ್ಯದ ಚಕ್ರವರ್ತಿಯಾದ. ಹೀಗೆ ಉತ್ತಮ ಸ್ಥಿತಿಗೆ ಬಂದ ಜರ್ಮನಿ ಕ್ಯಾಥೊಲಿಕ್, ಪ್ರಾಟೆಸ್ಟೆಂಟ್ ಜನಾಂಗಗಳ ಬೇರೆ ಬೇರೆ ವಿಭಾಗಗಳಾಗಿ ಒಡೆಯಿತು. ಬೇರೆ ಬೇರೆ ರಾಜ್ಯಗಳೇ ಆದುವು. ಜರ್ಮನಿಯ ಸುಪ್ರಸಿದ್ಧ ಬಿಸ್‌ಮಾರ್ಕ್ ಎಲ್ಲವನ್ನೂ ಪುನಃ ಒಟ್ಟು ಸೇರಿಸಿ ೧೮೭೧ರಲ್ಲಿ ಜರ್ಮನಿ ರಾಜ್ಯ ಕಟ್ಟಿದ. ಹೀಗೆ ಬೆಳೆದುಬಂದ ರಾಜ್ಯ ಈಗ ಅರ್ಧ ಶತಮಾನದಲ್ಲಿ ಎರಡು ಯುದ್ಧಗಳನ್ನು ಕಂಡಿತು. ೧೯೪೫ರ ವರೆಗೆ ಎರಡನೆ ಜಗತ್ತಿನ ಮಹಾ ಯುದ್ಧವಾಗಿ ಜರ್ಮನಿ ಚಿಲ್ಲರೆಚಿಲ್ಲರೆಯಾಗಿ ೪ ಭಾಗಗಳಾಯಿತು. ಪುನಃ ಇಂಗ್ಲೀಷ್, ಫ್ರೆಂಚ್, ಅಮೆರಿಕನರು ಸೇರಿ ಪಶ್ಚಿಮ ಜರ್ಮನಿ, ರಷ್ಯಾದವರು ಆಳುತ್ತಿರುವ ಪೂರ್ವ ಜರ್ಮನಿ—ಹೀಗೆ ಎರಡು ಭಾಗ ಆಗಿದೆ. ಯುದ್ಧದಲ್ಲಿ ಈ ಜನ ಎಲ್ಲವನ್ನೂ ಕಳೆದುಕೊಂಡಿದ್ದಾರೆ. ಪುನಃ ರಾಜ್ಯ ಕಟ್ಟುತ್ತಿದ್ದಾರೆ. ಎಷ್ಟರಮಟ್ಟಿಗೆ ರಾಜ್ಯ ಕಟ್ಟಿದ್ದಾರೋ ನೋಡಬೇಕು, ಎಂದುಕೊಂಡೆ. ಒಂದೊಂದು ಸಾರಿ ಈ ಹಾಳಾಗಿರುವ ದೇಶಕ್ಕೆ ಬಂದು ನಾನು ಕೈಗಾರಿಕೆ ಕಲಿಯಬೇಕೆ ಎನಿಸುತ್ತಿತ್ತು.

ಜರ್ಮನಿಯ ಹೆಸರನ್ನು ಪ್ರಪಂಚದಲ್ಲಿ ಕೇಳದವರಿಲ್ಲ. ಇದು ಯೂರೋಪಿನ ಮಧ್ಯಭಾಗದಲ್ಲಿದೆ. ಹವಾಗುಣವೋ ಬಿಸಿಲಿನಿಂದ ಹಿಡಿದು ನದಿಯ ನೀರು ಗಡ್ಡೆ ಕಟ್ಟುವಷ್ಟು ಚಳಿಯವರೆಗೆ. ಬವೇರಿಯಾದಂತಹ ಕಾಡು ಪ್ರದೇಶ, ದ್ರಾಕ್ಷಿಯ ತೋಟಗಳಿಂದ ಕೂಡಿದ ರೈನ್ ನದಿಯ ಪ್ರದೇಶ, ಮಟ್ಟವಾದ ಉತ್ತರ ಜರ್ಮನಿಯ ಬಯಲು; ಜೊತೆಗೆ ರೈಲು ರಸ್ತೆ, ವಾಹನ ರಸ್ತೆ, ನೀರು ತುಂಬಿದ ಕಾಲುವೆಗಳು. ಕಬ್ಬಿಣಕ್ಕೆ, ಕಲ್ಲಿದ್ದಲಿಗೆ ತೌರುಮನೆ ಎಂದರೆ ಏನೂ ತಪ್ಪಾಗಲಾರದು. ಪಶ್ಚಿಮ ಯೂರೋಪಿನ ೧೦೦ಕ್ಕೆ ೨೪ರಷ್ಟು ಕಲ್ಲಿದ್ದಲು, ೧೦೦ಕ್ಕೆ ೨೫ರಷ್ಟು ಕಬ್ಬಿಣ ಜರ್ಮನಿಯಲ್ಲಿ ಸಿಗುತ್ತದೆ. ಇಷ್ಟಾದರೂ ಲಂಡನ್, ಪ್ಯಾರಿಸ್‌ನಂತೆ ದೊಡ್ಡದಾಗಿ ಒಂದೇ ಊರು ಬೆಳೆದಿಲ್ಲ. ೬೯೦ ಲಕ್ಷ ಜನ ೧೮ ದೊಡ್ಡ ಪಟ್ಟಣಗಳಲ್ಲಿ ಇದ್ದಾರೆ. ಅನೇಕ ಪ್ರಸಿದ್ಧ ವೈದ್ಯರು, ಇಂಜಿನಿಯರುಗಳು, ತತ್ವಜ್ಞಾನಿಗಳು, ಕವಿಗಳು, ಕೆಲವು ರಾಜಕೀಯ ಪಟುಗಳು ಈ ದೇಶದಲ್ಲಿ ಜನ್ಮತಾಳಿದರು. ಇಂತಹ ದೇಶಕ್ಕೆ ನಾನು ಈಗ ಹೋಗಬೇಕು. ರೈಲಿನಲ್ಲಿ ಹೋಗುತ್ತಿರಬೇಕಾದರೆ ಜರ್ಮನಿಯ ಹಿಂದಿನ ಚಿತ್ರಗಳು ಕಣ್ಣಿನ ಮುಂದೆ ಬಂದು ಹೋದವು.

ಸಂಜೆ ೩ ಗಂಟೆಗೆಲ್ಲಾ ಕತ್ತಲಾಯಿತು. ಫ್ರಾಂಕ್‌ಫುರ್ಟ್‌ನಲ್ಲಿ ಭಾರತ ರಾಯಭಾರಿ ಕಚೇರಿಯ ಪ್ರತಿನಿಧಿ ರೈಲಿನ ಹತ್ತಿರ ಬಂದು ನನ್ನನ್ನು ವಿಚಾರಿಸಿ,

ಬ್ರೌನ್ಸ್‌ವೈಗ್‌ನಲ್ಲಿ ನನಗೆ ಎಲ್ಲ ಏರ್ಪಾಡುಗಳೂ ಆಗಿದೆಯೆಂದೂ, ನಾನು ಕೆಲಸ ಮಾಡುವ ಕಾರ್ಖಾನೆ ಸಾಲಿಸ್‌ಗಿಟರ್ ವಾಟನ್‌ಸ್ಟೇಟ್ ಎಂಬ ಕಡೆ ಇದೆ ಎಂದೂ ಹೇಳಿ ಹೋದರು. ಸಂಜೆ ೬ ಗಂಟೆಗೆ ನಾನು ಹೋಗಬೇಕಾಗಿದ್ದ ಬ್ರೌನ್ಸ್‌ವೈಗ್‌ಗೆ, ಕ್ರೈನ್‌ಸನ್ ಎಂಬ ಕಡೆ ರೈಲು ಬದಲಾಯಿಸ ಬೇಕಾಯಿತು. ರೈಲು ಇಳಿದು ಬೇರೆ ರೈಲು ಹತ್ತಬೇಕು. ಸಾಮಾನು ಹೆಚ್ಚಾಗಿದ್ದುದರಿಂದ ನಾನೇ ಎತ್ತಿಕೊಂಡು ಹೋಗಲು ಆಗಲಿಲ್ಲ. ನಮ್ಮ ದೇಶದಂತೆ ಇಲ್ಲಿ ಕೂಲಿಯವರು ಬರುತ್ತಾರೆಂದು ಕಾದೆ; ಆದರೆ ಬರಲಿಲ್ಲ. ಆಗ ಅಲ್ಲಿಯ ರೈಲ್ವೆ ಅಧಿಕಾರಿಗಳಿಗೆ ಹೇಳಿದಾಗ ಕೂಲಿಯವನನ್ನು ಕೂಗಿದರು. ಆಗ ಅವನು ಬಂದು ಬೇರೆ ಪ್ಲಾಟ್‌ಫಾರಂಗೆ ಸಾಮಾನನ್ನು ಒಂದು ಮೋಟಾರು ಉಳ್ಳ ಗಾಡಿಯಲ್ಲಿ ಸಾಗಿಸಿಕೊಂಡು ಹೋದ. ರೈಲಿಗೆ ಇಟ್ಟ ಮೇಲೆ ೫ ರೂಪಾಯಿ ಕೊಡಬೇಕಾಗಿ ಬಂತು. (೫ ಜರ್ಮನಿಯ ಮಾರ್ಕು ಸುಮಾರು ೫ ರೂಪಾಯಿಗೆ ಸಮ.) ಇಲ್ಲಿಂದ ಬ್ರೌನ್ಸ್‌ವೈಗ್‌ಗೆ ಹೋಗುವ ರೈಲಿನಲ್ಲಿ ಕುಳಿತ ಮೇಲೆ ವಾಟನ್‌ಸ್ಟೇಟ್‌ಗೆ ಹೋಗಲು ಪ್ರಯಾಣಿಕರನ್ನು ದಾರಿ ಕೇಳಿದೆ. ಯಾರಿಗೂ ಇಂಗ್ಲಿಷ್ ಬಾರದು. ಬರುವ ಎರಡು ಜರ್ಮನ್ ಪದದಲ್ಲೇ ಕೇಳಿದೆ. ಆಗ ಹೇಳಿದರು, ವಾಟನ್‌ಸ್ಟೇಟ್ ಬ್ರೌನ್ಸ್‌ವೈಗ್‌ನ ಒಂದು ಭಾಗ ಎಂದು. ಆದರೆ ಅದು ಬ್ರೌನ್ಸ್‌ವೈಗ್‌ನಿಂದ ೩೨ ಕಿ.ಮೀ. ದೂರವಿದೆ. ನೆಲಮಂಗಲ ಬೆಂಗಳೂರಿನ ಭಾಗ ಎಂದ ಹಾಗೆ. ಬ್ರೌನ್ಸ್‌ವೈಗ್‌ಗೆ ಬಂದು ರೈಲು ಇಳಿದ ಕೂಡಲೇ ರೈಲಿನ ಗಾರ್ಡನ್ನು ಕೇಳಿ, ವಾಟನ್‌ಸ್ಟೇಟಿಗೆ ಹೋಗುವ ರೈಲು ಈಗ ಹೋಗುವುದಿಲ್ಲವೆಂದು ತಿಳಿದು, ಕೂಲಿಯವನನ್ನು ಕರೆಯುವಂತೆ ಹೇಳಿದೆ. ಆತನೂ ಅಲ್ಲಿ ಒಬ್ಬ ಗೌರವಯುತ ಮನುಷ್ಯ. ಕರೆದರೇನೇ ಬರುವುದು. ಟೋಪಿಗೆ ಹೊಲಿದುಬಿಟ್ಟಿರುತ್ತಾನೆ ತನ್ನ ಹೆಸರನ್ನು. ಆ ಕೂಲಿಯವನು ಬಂದು ಸಾಮಾನುಗಳನ್ನೆಲ್ಲ ಒಂದು ಗಾಡಿಗೆ ಹಾಕಿಕೊಂಡು ಹೊರಗಡೆ ಬಂದ. ಎಲ್ಲಿ ಹೋಗಬೇಕು? ಕಡೆಗೆ ಆತನಿಗೆ ಕೈಸನ್ನೆ ಮಾಡಿ ಹೋಟಲಿಗೆ ಕರೆದುಕೊಂಡು ಹೋಗುವಂತೆ ಹೇಳಿದೆ. ಸುತ್ತಮುತ್ತಲ ಜನ ನಮ್ಮನ್ನು ನೋಡುತ್ತಿದ್ದರು. ಚಳಿ ಬೇರೆ ಬಲವಾಗಿತ್ತು. ಒಳಗಡೆ ಸ್ವೆಟರ್, ಮೇಲೆ ಉದ್ದವಾದ ನಿಲುವುಕೋಟು ಹಾಕಿ, ಕೈಗೆ ತೊಗಲಿನ ಕೈಚೀಲ ಸೇರಿಸಿದ್ದೆ. ಕೂಲಿಯವನು ರೈಲ್ವೆನಿಲ್ದಾಣದ ಇದುರಿಗೆ ಇರುವ ಹೋಟಲಿಗೆ ಕರೆದುಕೊಂಡು ಹೋದ. ದಿನಕ್ಕೆ ೧೦ ಮಾರ್ಕು. ಇನ್ನೂ ಹೊಸದಾದುದರಿಂದ ಅದರ ಬೆಲೆ ತಿಳಿಯುವುದು ಕಷ್ಟವಾಯಿತು.

ಎಲ್ಲವೂ ಹೊಸದು. ನಾನು ಇಳಿದುಕೊಂಡ ಕೊಠಡಿ ಬಹಳ ದೊಡ್ಡದು.

ಯಾವುದನ್ನು ಉಪಯೋಗಿಸಬೇಕೋ, ಯಾವುದನ್ನು ಉಪಯೋಗಿಸಬಾರದೋ ತಿಳಿಯದು. ಹೊಟ್ಟೆ ಹಸಿವು ಹೆಚ್ಚಾಗಿದ್ದುದರಿಂದ ಹೋಟೆಲಿಗೆ ಹೋದೆ. ನನ್ನ ಬಣ್ಣ ನೋಡಿ ನಗುವವರು ಕೆಲವರು. ಹೋಟೆಲಿನಲ್ಲಿ ಇದ್ದವರೆಲ್ಲ ಮುಖ ನೋಡುತ್ತಿದ್ದರು. ಕಡೆಗೆ ಹೋಟೆಲಿನ ಮಾಣಿ ಒಬ್ಬಳು ಬಂದಳು. "ನಾನು ಸಸ್ಯಾಹಾರಿ. ಬ್ರೆಡ್, ಬೆಣ್ಣೆ ಬೇಕು. ಜೊತೆಗೆ ನೀರು ಬೇಕು" ಎಂದು ಹೇಳಿದೆ. ಬಿಳಿಯ ಬ್ರೆಡ್ ಬೇಕೊ, ಬ್ರೌನ್ ಬ್ರೆಡ್ ಬೇಕೊ ಎಂದು ಕೇಳಿದಳು. ನನಗೆ ಆ ವ್ಯತ್ಯಾಸ ಗೊತ್ತಿರಲಿಲ್ಲ. ಬಿಳಿಯದು ಎಂದು ಹೈಳಿದೆ. ಬಿಳಿಯ ವೈನ್ ಬೇಕೊ, ಕೆಂಪು ವೈನ್ ಬೇಕೊ ಎಂದು ಕೇಳಿದಳು. "ನಾನು ವೈನ್ ಕುಡಿಯುವುದಿಲ್ಲ" ಎಂದು ಹೇಳಿದೆ. ಕೆಲವು ಜರ್ಮನ್ ಪದಗಳೊಡನೆ ಇಂಗ್ಲಿಷ್ ಮಾತನಾಡಿ ಅವಳಿಗೆ ಅರ್ಥವಾಗುವಂತೆ ಮಾತನಾಡಲು ಪ್ರಯತ್ನಿಸಿದೆ. ಆಕೆ ಸ್ವಲ್ಪ ನಕ್ಕು ನಾನು ಕೇಳಿದ್ದನ್ನೆಲ್ಲಾ ತಂದು ಇಟ್ಟು, ಜೊತೆಗೆ ನೀರಿನ ಬದಲು ಒಂದು ದೊಡ್ಡ ಸೀಸೆ ಸೋಡಾ ವಾಟರ್ ತಂದು ಇಟ್ಟಳು. ನನಗೆ ಅರ್ಥವಾಗಲಿಲ್ಲ. ಪುನಃ ನೀರು ಕೇಳಿದೆ. ಆಕೆಗೆ ಅರ್ಥವಾಗಲಿಲ್ಲ. ನನ್ನ ಜೋಬಿನಲ್ಲಿದ್ದ ಜರ್ಮನ್-ಇಂಗ್ಲಿಷ್ ನಿಘಂಟನ್ನು ತೆಗೆದು ನೀರಿಗೆ 'ವಾಸರ್' ಎಂಬ ಪದ ಸರಿಯೇ ಎಂದು ನೋಡಿ, ಪುನಃ ಕೇಳಿದೆ. ಕಡೆಗೆ ನಲ್ಲಿ ತೋರಿಸಿದೆ. ಆಕೆ ನಗಲಾರದಷ್ಟು ನಕ್ಕು ಒಂದು ಗ್ಲಾಸ್ ನೀರು ತಂದುಕೊಟ್ಟಳು. ಇದೇಕೋ ನನಗೆ ಅವಮಾನ ಮಾಡುತ್ತಿದ್ದಾಳೆ ಎಂದು ಒಳಗೊಳಗೇ ಸಿಟ್ಟು ಬಂದರೂ ಅದನ್ನು ಯಾರ ಮೇಲೆ ತೋರಿಸಲಿ! ಕಡೆಗೆ ಹೇಗೋ ತಿಂದು ಮುಗಿಸಿದೆ. ಅಲ್ಲಿ ಹೋಟೆಲಿಗೆ ಯಾರು ಇಳಿದುಕೊಳ್ಳಲು ಬಂದರೂ ಒಂದು ಫಾರ್ಮನ್ನು ಭರ್ತಿಮಾಡಿ ಕೊಡಬೇಕು. ಅದನ್ನು ಪೋಲೀಸಿಗೆ ಕಳುಹಿಸಿಕೊಡುತ್ತಾರೆ. ಆ ಫಾರ್ಮ್ ಭರ್ತಿಮಾಡಿ ಮಲಗಿದೆ. ಮಾರನೆ ದಿನ ಹೋಟೆಲಿನ ದುಡ್ಡು ಕೊಟ್ಟು ಬೆಳಗ್ಗೆ ವಾಟನ್ ಸ್ಟೆಟ್‌ಗೆ ಹೋಗುವ ರೈಲು ಹತ್ತಿದೆ.

ಬ್ರೌನ್ಸ್‌ವೈಗ್‌ನಿಂದ ವಾಟನ್‌ಸ್ಟೆಟ್‌ಗೆ ಹೋಗುತ್ತಿದ್ದದ್ದು ಡೀಸಲಿನ ರೈಲು-ಬಸ್ಸು. ಒಂದೇ ಗಾಡಿ. ಬಸ್ಸಿನ ತರಹ ಇತ್ತು. ಬಹಳ ವೇಗವಾಗಿಯೂ ಹೋಗುತ್ತಿತ್ತು. ವಾಟನ್‌ಸ್ಟೆಟ್‌ಗೆ ಸುಮಾರು ೩೨ ಕಿ.ಮೀ. ದೂರ. ಸಣ್ಣ ಊರು. ರೈಲು ಇಳಿದು ಸಾಮಾನು ರೈಲ್ವೆ ನಿಲ್ದಾಣದಲ್ಲಿ ಇಟ್ಟು ನಾನು ಕೆಲಸಮಾಡಬೇಕಾಗಿದ್ದ 'ಲಿಂಕೇ ಹಾಫ್‌ಮನ್ ಬುಷ್' ಎಂಬ ಕಾರ್ಖಾನೆಯನ್ನು ಹುಡುಕಲು ಹೊರಟೆ. ಊರಿನಲ್ಲಿ ಹೆಚ್ಚು ಜನರ ಓಡಾಟವಿಲ್ಲ. ಎಲ್ಲ ಕಡೆಯಲ್ಲೂ ಮಬ್ಬು. ಆಗಲೇ ೧೦ ಗಂಟೆ. ಕಾರ್ಖಾನೆಯ ಹತ್ತಿರ ಹೋದಾಗ

ಮುಂದಿನ ಬಾಗಿಲು ಹಾಕಿತ್ತು. ಆ ದಿನ ಡಿಸೆಂಬರ್ ೨೪ನೇ ತಾರೀಕು; ಕ್ರಿಸ್ಮಸ್ ಹಬ್ಬ. ಎಲ್ಲ ಕಾರ್ಖಾನೆಗಳ ಬಾಗಿಲೂ ಹಾಕಿದ್ದಾರೆ. ಇದು ನನಗೆ ತಿಳಿಯದು. ಅಲ್ಲಿ ಇದ್ದ ಕಾವಲುಗಾರನು ತನ್ನ ಬೆಚ್ಚನೆಯ ಕೊಠಡಿಗೆ ಬರ ಮಾಡಿಕೊಂಡು ವಿಶ್ವಾಸದಿಂದ ಕಂಡು ಮಾತನಾಡಿಸಿದ. ಆದರೆ ಆತನು ಹೇಳುವುದು ನನಗೆ ಅರ್ಥವಾಗಲಿಲ್ಲ. ಕಷ್ಟಪಟ್ಟು ಸ್ವಲ್ಪ ಜರ್ಮನ್ ಪದ ಗಳನ್ನೂ ಸೇರಿಸಿ ಇಂಗ್ಲಿಷಿನಲ್ಲಿ ಮಾತನಾಡಿ ಬಂದ ವಿಷಯುವನ್ನು ತಿಳಿಸಿದೆ. 'ಲಿಂಕೇ ಹಾಫ್‌ಮನ್ ಬುಷ್' ಎಂಬ ಕಾರ್ಖಾನೆಯಲ್ಲಿ ಕೆಲಸಮಾಡಲು ಇಂಡಿಯಾ ದೇಶದಿಂದ ಬಂದಿದ್ದೇನೆಂದು ತಿಳಿಸಿದೆ. ನಾನು ಹೇಳಿದ್ದು ಅವನಿಗೆ ಅರ್ಥವಾಯಿತೋ ಇಲ್ಲವೋ, ಆತ ಇದು ಫಾಮಸ್ ಕಾರ್ಖಾನೆ ಎಂದು ಹೇಳಿದ. "ನಾನು ಆ ಕಾರ್ಖಾನೆಗೆ ಬಂದಿಲ್ಲ" ಎಂದು ಹೇಳಿದೆ. ಕಡೆಗೆ ರೈಲು ಗಾಡಿಗಳನ್ನು ಮಾಡುವ ಕಾರ್ಖಾನೆ ಅದೇ ಎಂದು ತಿಳಿದು ಅಲ್ಲಿಗೇ ಬಂದಿದ್ದೇನೆಂದು ಮುಂದೆ ತಿಳಿಯಿತು. ಆ ಕಾರ್ಖಾನೆಯ ಹೆಸರು 'ಫಾಮಸ್ ಲಿಂಕೇ ಆಫ್‌ಮನ್ ಬುಷ್'. ಸಾಮಾನ್ಯವಾಗಿ ಫಾಮಸ್ ಎಂದು ಕರೆಯುತ್ತಾರೆ ಎಂದು ತಿಳಿಯಿತು. ಕಡೆಗೆ ಕಾವಲುಗಾರನಿಗೆ ಏನೂ ತಿಳಿಯದೆ, ಕೆಲವು ಅಧಿಕಾರಿಗಳಿಗೆ ಹೀಗೆ ಹಿಂದೂಸ್ಥಾನದಿಂದ ಬಂದಿದ್ದಾರೆಂದು ಟೆಲಿಫೋನ್ ಮೂಲಕ ತಿಳಿಸಿದ. ಅವರು ಮಾತನಾಡಿ ಕಡೆಗೆ ಒಂದು ಗೆಸ್ಟ್‌ಹೌಸ್‌ನಲ್ಲಿ ಇರುವಂತೆ ಹೇಳಿ ಕಾರನ್ನು ಕಳುಹಿಸಿಕೊಟ್ಟರು. ಸಾಮಾನುಗಳನ್ನು ತೆಗೆದು ಕೊಂಡು ಹೋಗಿ ವಾಟನ್‌ಸ್ಟೇಟ್‌ನಿಂದ ೧೦-೧೨ ಮೈಲಿ ದೂರದಲ್ಲಿರುವ ಲೇಬನ್‌ಸ್ಟಡ್ ಎಂಬಲ್ಲಿ ಇರುವ ಗೆಸ್ಟ್‌ಹೌಸ್ ಹೋಟೆಲನ್ನು ಸೇರಿದೆ.

೪. ಮೊದಲ ದಿನಗಳು

> ತನ್ನ ಮನಸ್ಸು ಜಯಿಸಿದವನಿಗೆ ಇಡೀ ಲೋಕವನ್ನೇ ಜಯಿಸಿದಂತಿರುತ್ತದೆ. ಪಾದರಕ್ಷೆಗಳನ್ನು ಹಾಕಿಕೊಂಡವನಿಗೆ ಭೂಮಿಗೆಲ್ಲಾ ಚರ್ಮ ಹಾಸಿದಂತೆ ತೋರುತ್ತದೆ.
>
> —ಸುಭಾಷಿತ

ಲೇಬನ್‌ಸ್ಟಡ್‌ನ ಗೆಸ್ಟ್‌ಹೌಸ್ ಎಂಬ ಹೋಟೆಲ್ ಸೇರಿದೊಡನೆ ಅಲ್ಲಿಯ ನೌಕರರು ಬಂದು ನನ್ನ ಸಾಮಾನುಗಳನ್ನು ತೆಗೆದುಕೊಂಡು ನಾನು ಇಳಿದುಕೊಳ್ಳಬೇಕಾದ ಕೊಠಡಿ ತೋರಿಸಿದರು. ನಾವು ಇಬ್ಬರು ಇದ್ದುದರಿಂದ ಇಬ್ಬರಿಗೂ ಒಂದೊಂದು ರೂಮು ತೋರಿಸಿದರು. ಒಂದು ದಿನಕ್ಕೆ ಒಂದು ರೂಮಿಗೆ ೧೫ ಮಾರ್ಕು (ಸುಮಾರು ೧೫ ರೂ.). ಇದು ಬಹಳ ಹೆಚ್ಚೆಂದು ಇಬ್ಬರಿಗೂ ಒಂದು ಕೊಠಡಿ ಸಾಕೆಂದು ಹೇಳಿ ಎರಡು ಮಂಚ ಹಾಕಿಸಿಕೊಂಡೆವು. ವಿಶಾಲವಾದ ದೊಡ್ಡ ಕೊಠಡಿ. ಆದರೆ ದಿನಕ್ಕೆ ೧೫ ಮಾರ್ಕಿನಂತೆ ೫ ದಿನಕ್ಕೆ ೭೫ ಮಾರ್ಕು ಆಗುತ್ತದಲ್ಲ ಎಂಬುದೇ ಯೋಚನೆ. ಆದರೂ ಭಾಷೆಯ ತೊಡಕಿನಿಂದ ನಮಗೆ ಹೆಚ್ಚು ಹೇಳಲು ತೋರಲಿಲ್ಲ. ಅನಂತರ ಊಟಕ್ಕೆ ಊಟದ ಕೊಠಡಿಗೆ ಬಂದೆವು. ಆ ಹೋಟೆಲನ್ನು ನಡೆಸುತ್ತಿದ್ದ ಯಜಮಾನ ಬಂದು ನಮ್ಮನ್ನು ಬಹಳ ಆದರಿಸಿ "ಏನು ಊಟ ಮಾಡುತ್ತೀರಿ ?" ಎಂದು ಕೇಳಿದ. ನಾವು ಜರ್ಮನ್–ಇಂಗ್ಲಿಷ್ ಬೆರೆಸಿ, ಜೊತೆಗೆ ಜೇಬಿನಲ್ಲಿ ಇದ್ದ ನಿಘಂಟಿನ ಸಹಾಯದಿಂದ, ನಾವು ಸಸ್ಯಾಹಾರಿಗಳೆಂದು ತಿಳಿಸಿದೆವು. ಆತನಿಗೆ ನಾವು ಏನು ತಿನ್ನುತ್ತೇವೆ, ಏನು ಬೇಕು ಎಂಬುದು ತಿಳಿಯಲಿಲ್ಲ. ಕಡೆಗೆ ಆತನ ಸ್ನೇಹಿತ ಶ್ರೀ ರಾಡೆಮಹರ್ ಎಂಬುವರನ್ನು ಟೆಲಿಫೋನ್ ಮೂಲಕ ಕರೆಸಿಕೊಂಡ. ಆತನಿಗೆ ಇಂಗ್ಲಿಷ್ ಬರುತ್ತಿತ್ತು. ಶ್ರೀ ರಾಡೆಮಹರ್‌ರವರು ನಮ್ಮ ಸಹಾಯಕ್ಕೆ ಬಂದರು. ನಮ್ಮಲ್ಲಿ ಬಂದು ಇಂಗ್ಲಿಷಿನಲ್ಲಿ ಮಾತನಾಡಿಸಿದೊಡನೆಯೇ ನಮಗೆ ನಮ್ಮ ದೇಶದಿಂದ ಒಬ್ಬ ಭಾರತೀಯ ಮಾತನಾಡಿಸಿದಷ್ಟು ಸಂತೋಷವಾಯಿತು "ನಾವು ಸಸ್ಯಾಹಾರಿಗಳು, ಯಾವ ತರಹದ ಮಾಂಸವನ್ನೂ ತಿನ್ನುವುದಿಲ್ಲ. ಮೊಟ್ಟೆ, ಮೀನು ಸಹ ತಿನ್ನುವುದಿಲ್ಲ. ಮದ್ಯ ಪದಾರ್ಥಗಳನ್ನೂ ಕುಡಿಯುವುದಿಲ್ಲ" ಎಂದು ಹೇಳಿದೆ. ಆತನಿಗೆ ಆಶ್ಚರ್ಯವಾಗಿ "ಇನ್ನೇನು ಸಿಗುತ್ತದೆ, ಇಲ್ಲಿ ತಿನ್ನ

ಲಿಕ್ಕೆ?" ಎಂದ. ಕಡೆಗೆ ಹೋಟೆಲಿನ ಯಜಮಾನನಿಗೆ ಹೇಳಿ ಕೆಲವು ತರಕಾರಿಗಳನ್ನು ಬೇಯಿಸಿ ಬ್ರೆಡ್ ಮತ್ತು ಬೆಣ್ಣೆ ಸಹಿತ ತರಿಸಿ ಸಂಜೆಗೆ ಅನ್ನ ಮಾಡುತ್ತೇನೆ ಎಂದು ತಿಳಿಸಿದ. ಬಾಯಾರಿಕೆಯಾದುದರಿಂದ ನೀರು ಕೇಳಿದೆ. ಹಿಂದಿನ ದಿನದಂತೆ ಒಂದು ದೊಡ್ಡ ಸೀಸೆ ತಂದುಕೊಟ್ಟ ಆ ಬಡಿಸುವವನು. ಆಗ ಶ್ರೀ ರಾಡೆಮಹರ್‌ರವರನ್ನು ಕೇಳಿದೆ: "ನಾನು ನೀರು ಕೇಳಿದರೆ ಏಕೆ ಸೋಡಾ ತಂದುಕೊಡುತ್ತಾರೆ ಮತ್ತು ಏಕೆ ನಗುತ್ತಾರೆ?" "ಇಲ್ಲಿ ಯಾರೂ ನೀರು ಕುಡಿಯುವುದಿಲ್ಲ. ಊಟ ಮಾಡುವಾಗ ಬಿಯರ್ ಅಥವಾ ವೈನ್ ಕುಡಿಯುತ್ತಾರೆ. ಹೆಚ್ಚು ಬಾಯಾರಿಕೆ ಆಗುವುದೂ ಇಲ್ಲ. ಅದಕ್ಕಾಗಿ, ನೀವು ನೀರು ಕೇಳಿದಿರಲ್ಲ ಎಂದು ನಗುತ್ತಾರೆ, ಅಷ್ಟೆ" ಎಂದು ಹೇಳಿದರು. ಶ್ರೀ ರಾಡೆಮಹರ್‌ರವರು ನಮ್ಮನ್ನು ಬಹಳ ವಿಶ್ವಾಸದಿಂದ ಕಂಡರು. ಜರ್ಮನಿಗೆ ಬಂದ ಒಡನೆಯೇ ನಮಗೆ ಸಹಾಯ ಮಾಡಿದವರೆಂದರೆ ಶ್ರೀ ರಾಡೆಮಹರ್. ಇವರು ರೈಸ್‌ವರ್ಕ್ ಎಂಬ ಕಬ್ಬಿಣ ಕಾರ್ಖಾನೆಯಲ್ಲಿ ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್ ಆಗಿದ್ದರು. ಅಮೆರಿಕಾಕ್ಕೆ ಹೋಗಿ ಬಂದ ಅವರು ಇಂಗ್ಲಿಷ್ ಚೆನ್ನಾಗಿ ಮಾತನಾಡಬಲ್ಲರು. ಮಾರನೆ ದಿನ ಮನೆಗೆ ಊಟಕ್ಕೆ ಆಹ್ವಾನವಿತ್ತರು. "ಏನು ಬೇಕೋ ಕೇಳಿ, ಹೋಟೆಲಿನ ಮಾಲಿಕ ಎಲ್ಲ ಅನುಕೂಲಗಳನ್ನೂ ಮಾಡಿಕೊಡುತ್ತಾರೆ" ಎಂದು ಹೇಳಿದರು. ಆದರೆ ದಿನಕ್ಕೆ ಬರೇ ಕೊಠಡಿಗೆ ೧೫ ಮಾರ್ಕು ಆದರೆ ಇನ್ನು ಊಟ ತಿಂಡಿಗೆ ಎಷ್ಟು ಆಗುತ್ತದೋ ಎಂಬ ಹೆದರಿಕೆ ಇತ್ತು. ಆದ್ದರಿಂದ ಏನು ಕೇಳಲೂ ಮನಸ್ಸು ಬರಲಿಲ್ಲ.

ಹೋಟೆಲ್ ಬಿಟ್ಟು ಹೊರಗಡೆ ಹೊರಟರೆ ಬೀದಿಯ ಎರಡೂ ಕಡೆ ಇರುವ ಮನೆಯ ಹೆಂಗಸರು ಕಿಟಕಿಗಳಿಂದ ನಮ್ಮನ್ನು ಇಣಿಕಿ ನೋಡುವುದಲ್ಲದೆ ದಾರಿಯಲ್ಲಿ ಹುಡುಗರೂ ನೋಡುತ್ತಿದ್ದರು. ಜೊತೆಗೆ "ನೀಗ್ರೋ" ಎಂದು ಸಹ ಕೂಗುತ್ತಿದ್ದರು. ನಮಗೆ ಇದು ಹೊಸದಾದುದರಿಂದ ಸ್ವಲ್ಪ ಅವಮಾನವಾದಂತೆ ಆಗುತ್ತಿತ್ತು. ಹಿಂದೂ ದೇಶದಿಂದ ಆ ಊರಿಗೆ ಹೋದವರು ನಾವೇ ಮೊದಲು. ಇದರ ಜೊತೆಗೆ ಚಳಿಗಾಳಿ ಬೇರೆ ಬೀಸುತ್ತಿತ್ತು. ಲೇಬನ್‌ಸ್ಟಡ್ ಒಂದು ಚೊಕ್ಕಟವಾದ ಊರು. ರೈಸ್‌ವರ್ಕ್ ಎಂಬ ಕಬ್ಬಿಣ ಕಾರ್ಖಾನೆಯ ಕೆಲಸಗಾರರಿಗಾಗಿ ಕಟ್ಟಿದ್ದು. ಪಟ್ಟಣಗಳಿಗೆ ದೂರವಾದರೂ ಎಲ್ಲ ಅನುಕೂಲಗಳೂ ಇದ್ದವು.

ನಾನು ಹೋಟೆಲ್‌ನಲ್ಲಿ ಊಟಕ್ಕೆ ಕುಳಿತಾಗ ಅಲ್ಲಿ ಬಂದು ಹೋಗುವವರಿಗೂ ಹೋಟೆಲ್ ಮಾಲಿಕನಿಗೂ ಇದ್ದ ವಿಶ್ವಾಸವನ್ನುಕಂಡು ಸ್ವಲ್ಪ ಆಶ್ಚರ್ಯವೇ

ಆಯಿತು. ಬಡಿಸುವವನು ಏನು ಬೇಕು ಎಂದು ಬಹಳ ವಿನಯದಿಂದ ಕೇಳಿ ಆ ದಿನದ ಅಡಿಗೆಪಟ್ಟಿ ಕೊಡುತ್ತಾನೆ. ಏನು ಬೇಕಾದರೂ ಕೇಳಿ ತೆಗೆದು ಕೊಳ್ಳಬಹುದು. ಸ್ವಲ್ಪವೂ ಕೋಪದ ಮುಖವಿಲ್ಲದೆ ನಗುನಗುತ್ತ ಎಲ್ಲವನ್ನೂ ತಂದುಕೊಡುತ್ತಾನೆ. ಹೋಟೆಲಿನ ಯಜಮಾನನಾಗಲಿ, ಯಜಮಾನಿ ಯಾಗಲಿ, ಅವರ ಮಕ್ಕಳಾಗಲಿ ಬಂದರೆ ಮೇಜುಗಳ ಹತ್ತಿರ ಹೋಗಿ ವಿನಯ ದಿಂದ ಕ್ಷೇಮಸಮಾಚಾರ ವಿಚಾರಿಸಿ ಅತಿಥಿಗಳ ವಿಶ್ವಾಸವನ್ನು ಸಂಪಾದಿಸು ತ್ತಾರೆ. ಊಟದ ಕಾರ್ಡಿನಲ್ಲಿ ತಿಂಡಿಯ ಬೆಲೆ ಮಾತ್ರ ಹಾಕಿರುತ್ತಾರೆ. ಬಡಿಸುವುದಕ್ಕೆ (Serving) ೧೦ಕ್ಕೆ ೧ ಭಾಗದಂತೆ ಬಿಲ್ಲಿಗೆ ಸೇರಿಸುತ್ತಾರೆ. ಪುನಃ ಊಟ ಮುಗಿಸಿ ಎದ್ದಮೇಲೆ ನಿಲುವಂಗಿಯನ್ನು ಹಾಕಿಕೊಳ್ಳಲು ಸಹಾಯಮಾಡಿ "ನಮಸ್ಕಾರ, ಹೋಗಿಬರುವಿರಾ ?" ಎಂದು ಹೇಳಿ ಬಹಳ ವಿನಯದಿಂದ ಬೀಳ್ಕೊಡುತ್ತಾರೆ. ನಮ್ಮ ದೇಶದ ಹೋಟೆಲ್‌ಗಳಲ್ಲಿ ಇದನ್ನು ನೋಡದಿದ್ದ ನನಗೆ ಇದೆಲ್ಲ ಬಹಳ ಹೊಸದು. ಇದನ್ನು ನೋಡಿದಾಗ ನಮ್ಮ ದೇಶದಲ್ಲಿಯೂ ಹೀಗೆಯೇ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅನ್ನಿಸಿತು.

ನಾನು ಇಳಿದುಕೊಂಡಿದ್ದ ಹೋಟಲಿನ ಯಜಮಾನನ ಮಗ ಸ್ವಾಪಲ್ ಹೌಸ್ ಎಂಬ ಹುಡುಗನಿಗೆ ಸ್ವಲ್ಪ ಇಂಗ್ಲಿಷ್ ಬರುತ್ತಿತ್ತು. ಆತ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದ. ಜೊತೆಗೆ ಹೋಟೆಲಿನ ಕೆಲಸದಲ್ಲಿ ತಂದೆತಾಯಂದಿರಿಗೆ ಸಹಾಯ ಮಾಡುತ್ತಿದ್ದ. ಈತನ ತಂಗಿಯೂ ಸಹ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದಳು. ನಮಗೆ ಈ ಹುಡುಗನೊಡನೆ ಮಾತನಾಡಿ ಬೇಜಾರು ಕಳೆಯಲು ಅವಕಾಶವಾಯಿತು. ಇಂಡಿಯಾ ದೇಶದ ಅನೇಕ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುವುದರ ಜೊತೆಗೆ ಆತನಿಗೆ ಹಿಂದೂಸ್ಥಾನದ ಊಟ ತಿಂಡಿಗಳನ್ನು ಮಾಡುವುದನ್ನೂ ತಿಳಿದುಕೊಳ್ಳಬೇಕೆಂದು ಚಪಲ ಹೆಚ್ಚು. ತಾನು ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರೂ ಫ್ರಾನ್ಸ್‌ಗೆ ಹೋಗಿ ಒಳ್ಳೆಯ ಅಡಿಗೆ ಮಾಡುವುದನ್ನು ಕಲಿತು, ಅಡಿಗೆಯವನಾಗಿ ಹೋಟೆಲ್ ನಡೆಸ ಬೇಕೆಂದೇ ಆತನ ಆಸೆ. ಹೋಟೆಲ್‌ನ ಯಜಮಾನಿ ಸಹ ಬಹಳ ವಿಶ್ವಾಸ ದಿಂದ ಕಾಣುವುದರ ಜೊತೆಗೆ ನಮ್ಮೊಡನೆ ಕುಳಿತು ಹಿಂದೂಸ್ಥಾನದ ವಿಷಯ ಗಳನ್ನು ವಿವರವಾಗಿ ತಿಳಿದುಕೊಳ್ಳುತ್ತಿದ್ದಳು. ಪ್ರಪಂಚ ದಿನದಿನಕ್ಕೆ ಬಹಳ ಸಣ್ಣದಾಗುತ್ತಿದೆ. ರೈಲುಗಾಡಿ, ವಿಮಾನ, ಹಡಗುಗಳು ಬಂದು ವಿಶಾಲ ವಾದ ಭೂಮಿ ಒಂದೇ ಪಟ್ಟಣದಂತೆ ಕಾಣುತ್ತದೆ. ಇಂಡಿಯಾ ದೇಶವಿರು ವುದು ಎಲ್ಲಿ? ಜರ್ಮನಿ ಎಲ್ಲಿ? ಅಲ್ಲಿಂದ ಇಲ್ಲಿಗೆ ಬರಲು ಹಿಂದೆ ಸಾಧ್ಯವಾಗು ತ್ತಿತ್ತೆ? ಈಗ ವಿಮಾನದಲ್ಲಿ ಒಂದು ಊರಿನಿಂದ ಪಕ್ಕದ ಊರಿಗೆ ಹೋಗು

ನಂತೆ ೫ ದಿನಗಳಲ್ಲಿ ಅಲ್ಲಿಂದ ಇಲ್ಲಿಗೆ ಬರಬಹುದು. ಇದೇ ರೀತಿ ಪ್ರಪಂಚದಲ್ಲೆಲ್ಲ ಒಂದೇ ಭಾಷೆಯಾಗಿ ಒಬ್ಬರನ್ನು ಒಬ್ಬರು ಅರ್ಥ ಮಾಡಿಕೊಳ್ಳುವಂತಾಗಿ ಪ್ರಪಂಚದಲ್ಲಿ ಶಾಂತಿ ಬರುವಂತೆ ಆದರೆ ಸಾಕು. ಗಾಂಧೀಜಿ, ನೆಹರು ಅವರ ಹೆಸರನ್ನು ಕೇಳಿದ್ದೇವೆ. ಇಂತಹ ನಾಯಕರು ಎಲ್ಲ ದೇಶಗಳಲ್ಲಿ ಹುಟ್ಟಿ ಪ್ರಪಂಚವನ್ನು ಒಂದು ಮಾಡಬೇಕು ಎಂದು ಹೇಳುತ್ತಿದ್ದರು. ಇದು ಅವರು ಕಳೆದ ಯುದ್ಧದಲ್ಲಿ ಪಟ್ಟ ಕಷ್ಟಗಳನ್ನು ನೆನೆಸಿಕೊಂಡು ಅಂದ ಮಾತು ಎನಿಸಿತು ನನಗೆ.

ಶ್ರೀ ರಾಡೆಮಹರ್‌ರವರು ಡಿಸೆಂಬರ್ ೨೫ನೆ ತಾರೀಕು ಕ್ರಿಸ್ಮಸ್ ಹಬ್ಬಕ್ಕೆ ಸಂಜೆಗೆ ಅವರ ಮನೆಗೆ ಕರೆದರು. ಜೊತೆಗೆ ಅವರ ಸ್ನೇಹಿತರನ್ನೂ ಅವರ ಕುಟುಂಬದವರನ್ನೂ ಕರೆದಿದ್ದರು. ಮನೆಗೆ ಹೋದ ಕೂಡಲೆ ಅವರ ಪತ್ನಿಯನ್ನು ಪರಿಚಯ ಮಾಡಿಕೊಟ್ಟರು. ಅವರಿಗೂ ಸ್ವಲ್ಪ ಸ್ವಲ್ಪ ಇಂಗ್ಲಿಷ್ ಬರುತ್ತಿತ್ತು. ಬಂದ ಅತಿಥಿಗಳಿಗೂ ಪರಿಚಯ ಮಾಡಿಕೊಟ್ಟರು. ಸಸ್ಯಾಹಾರಿ ಎಂದು ತಿಳಿದಿದ್ದುದರಿಂದ ಬ್ರೆಡ್, ಬಿಸ್ಕತ್, ಕಾಫಿಯನ್ನು ಕೊಟ್ಟರು. ಭಾರತದ ವಿಚಾರ ತಿಳಿದುಕೊಳ್ಳಬೇಕೆಂಬ ಕುತೂಹಲ. ಹೆಂಡತಿಯ ಫೋಟೋ ತೋರಿಸೆಂದರು. ಹಣೆಗೆ ಕುಂಕುಮ ಏಕೆ ಇಡುವುದು? ಇಲ್ಲಿಂದ ಪ್ರಾರಂಭವಾದ ಪ್ರಶ್ನೆಗಳ ಸುರಿಮಳೆಗೆ ಕೊನೆಮೊದಲಿಲ್ಲದ ಹಾಗೆ ಆಯಿತು. ಶ್ರೀ ರಾಡೆಮಹರ್‌ರವರ ಸ್ನೇಹಿತರಿಗೆ ಇಂಗ್ಲಿಷ್ ಬಾರದು. ಅವರ ಕುಟುಂಬದಲ್ಲಿ ಯಾರಿಗೂ ಇಂಗ್ಲಿಷ್ ಬಾರದು. ನಾನು ಮಾತನಾಡುವ ಜರ್ಮನ್ ಭಾಷೆಯಲ್ಲಿ ಅವರಿಗೆ ನಮ್ಮ ಅಭಿಪ್ರಾಯವನ್ನು ಸರಿಯಾಗಿ ತಿಳಿದುಕೊಳ್ಳಲಾಗುತ್ತಿರಲಿಲ್ಲ. ಅದರಿಂದಾಗಿ ಪ್ರತಿ ಮಾತಿಗೂ ರಾಡೆಮಹರ್‌ರವರು ಭಾಷಾಂತರ ಮಾಡಬೇಕಾಯಿತು. ಆ ದಿನ ಸಂಜೆ ಬಹಳ ಸಂತೋಷವಾಗಿ ಕಾಲ ಕಳೆದೆ. ಇಷ್ಟು ದಿನದ ಬೇಸರ ಆ ದಿನ ಕಳೆಯಿತು. ಶ್ರೀ ರಾಡೆಮಹರ್‌ರವರು "ನೀವು ಇಲ್ಲೇ ಇರಿ. ಯಾವ ರೀತಿಯ ಸಹಾಯ ಬೇಕಾದರೂ ಮಾಡಿಕೊಡಲು ಸದಾ ಸಿದ್ಧ" ಎಂದು ಧೈರ್ಯ ಕೊಟ್ಟರು.

೩–೪ ದಿನಗಳು ಹೀಗೆ ಕಾಲ ಕಳೆದು, ಕ್ರಿಸ್ಮಸ್ ರಜಾ ಮುಗಿದು ಬಾಗಿಲು ತೆಗೆದಮೇಲೆ ಕಾರ್ಖಾನೆಗೆ ಹೋಗಬೇಕಾಗಿತ್ತು. ಹಿಂದಿನ ದಿನ ಹೋಟೆಲ್ ಯಜಮಾನನ ಮಗನ ಹತ್ತಿರ ಮಾತನಾಡುತ್ತಿದ್ದಾಗ ಊಟಕ್ಕೆ ಎಷ್ಟು ಕೊಡಬೇಕಾಗುತ್ತದೆ? ಎಂಬ ಪ್ರಶ್ನೆ ಬಂತು. ಆಗ ಆತ ಹೇಳಿದ: ನೀವು ಫಾನೂಸ್ ಕಾರ್ಖಾನೆಯ ಅತಿಥಿಗಳು. ನೀವು ಏನು ಬೇಕಾದರೂ ತೆಗೆದುಕೊಳ್ಳಬಹುದು. ಎಲ್ಲ ಬಿಲ್ಲುಗಳನ್ನೂ ಕಾರ್ಖಾನೆಗೆ ಕಳುಹಿಸುತ್ತೇವೆ.

ಇಲ್ಲಿ ಇರುವವರೆಗೆ ನೀವು ಅವರ ಅತಿಥಿಗಳು. ಒಂದು ಕಾಸೂ ಕೊಡಬೇಕಾಗಿಲ್ಲ" ಎಂದು ಹೇಳಿದ. ಇಷ್ಟು ದಿನ ಇದ್ದ ದುಡ್ಡು ಎಷ್ಟು ಆಗುತ್ತದೆಯೋ ಎಂಬ ಹೆದರಿಕೆ ದೂರವಾಯಿತು. ಹೋಟೆಲ್‌ನವರು ರೂಮಿನಲ್ಲಿ ತಂದು ಇಡುತ್ತಿದ್ದ ಹಣ್ಣು ಹಾಲು ಸಹ ನಾವು ಮುಟ್ಟುತ್ತಿರಲಿಲ್ಲ, ದುಡ್ಡು ಹೆಚ್ಚಾಗಿ ಕೊಡಬೇಕಾಗುತ್ತದಲ್ಲ ಎಂದು. ಬೇರೆ ಬೇರೆ ಕೊಠಡಿಗಳನ್ನು ಕೊಟ್ಟರೂ ಒಂದೇ ಸಾಕೆಂದು ಹೇಳಿದೆವು. ಮೊದಲೇ ಕೇಳಿ ಈ ವಿಚಾರ ಇತ್ಯರ್ಥ ಮಾಡಿಕೊಂಡಿದ್ದರೆ ಚೆನ್ನಾಗಿತ್ತು ಎಂದು ಆಗ ಹೊಳೆಯಿತು. ಅನ್ಯಾಯವಾಗಿ ತಂದುಕೊಟ್ಟದ್ದನ್ನೆಲ್ಲಾ ಹಾಗೇ ವಾಪಸ್ ಕಳಿಸಿದೆವಲ್ಲ ಎಂದು ಮನಸ್ಸಿಗೆ ಸ್ವಲ್ಪ ಅಸಮಾಧಾನವಾಯಿತು. ಹೋಟೆಲ್ ಬಿಟ್ಟು ಬರಬೇಕಾದರೆ ಎಲ್ಲರೂ ಬಹಳ ವಿಶ್ವಾಸದಿಂದ ಬೀಳ್ಕೊಟ್ಟರು.

ಕಾರ್ಖಾನೆಯ ಮೂಲಕ ಇದೇ ಊರಿನಲ್ಲಿ ಒಂದು ಕುಟುಂಬದವರ ಜೊತೆಯಲ್ಲಿ ೨-೩ ದಿನ ಇದ್ದೆ. ಅವರು ಬಡವರು. ಮನೆ ಯಜಮಾನನಿಗೆ ಕೆಲಸವಿಲ್ಲ. ಪೂರ್ವ ಜರ್ಮನಿಯ ನಿರಾಶ್ರಿತರು. ಜರ್ಮನ್ ಭಾಷೆ ಬಿಟ್ಟರೆ ಬೇರೆ ಭಾಷೆ ಬಾರದು. ನಮಗೆ ಜರ್ಮನ್ ಚೆನ್ನಾಗಿ ಮಾತನಾಡಲು ಬಾರದು. ಕೆಲವು ಸಂಭಾಷಣೆಗಳು ಕೈಸನ್ನೆ, ನಿಘಂಟಿನ ಸಹಾಯದಿಂದ ನಡೆಯುತ್ತಿದ್ದವು. ಆದರೆ ಒಳ್ಳೆಯ ಜನ. ಆ ಎರಡು ಮೂರು ದಿನಗಳಲ್ಲೇ ಬ್ರೌನ್ಸ್‌ವೈಗ್‌ಗೆ ಹೋಗಿ ಭಾರತೀಯರ ವಿಳಾಸವನ್ನು ತಿಳಿದುಕೊಂಡು ಬಂದು ನನಗೆ ತಿಳಿಸಿದರು. ನಾನು ತಿನ್ನುತ್ತಿದ್ದ ಬರೀ ಬ್ರೆಡ್, ಬೆಣ್ಣೆ ಮತ್ತು ಕಾಫಿಯನ್ನು ನೋಡಿ ಇದಾದರೂ ಏಕೆ? ಅನ್ನುತ್ತಿದ್ದರು. ೨-೩ ದಿನ ಇವರ ಮನೆಯಲ್ಲಿ ಇದ್ದನಂತರ ಬ್ರೌನ್ಸ್‌ವೈಗ್‌ಗೆ ಕೊಠಡಿ ಬದಲಾಯಿಸಿದೆ. ಕೊಠಡಿ ಬಿಡುವಾಗ ಬಹಳ ದುಃಖದಿಂದ ಕಳುಹಿಸಿಕೊಟ್ಟರು.

೫. ಕಾರ್ಖಾನೆಯಲ್ಲಿ

ಹೆಚ್ಚು ಕೆಲಸ ಮಾಡಿದಷ್ಟೂ ಹೆಚ್ಚು ಕೆಲಸ ಮಾಡುವ ಶಕ್ತಿ ಬೆಳೆಯುತ್ತದೆ. ಹೆಚ್ಚು ಕಾರ್ಯಾಸಕ್ತನಾದಷ್ಟೂ ಹೆಚ್ಚು ವಿರಾಮ ನನಗೆ ದೊರೆಯುತ್ತದೆ.

—ಹ್ಯಾಜಂಟ್

ಮೊದಲನೆಯ ದಿನ ಕಾರ್ಖಾನೆಗೆ ಹೋಗುವುದಕ್ಕಾಗಿ ಬೆಳಗ್ಗೆ ಬೇಗ ಎದ್ದು ನಾನು ಕೆಲಸಮಾಡಬೇಕಾಗಿದ್ದ ರೈಲುಗಾಡಿಗಳನ್ನು ತಯಾರಿಸುವ 'ಫಾಮುಸ್ ಲಿಂಕ್ ಹಾಫ್‌ಮನ್ ಬುಷ್' ಕಾರ್ಖಾನೆಗೆ ಹೋಗುವ ಬಸ್ಸು ಹತ್ತಿ ಹೋದೆವು. ಆಗ ಬಹಳ ಚಳಿ. ನಾನು ಇಲ್ಲಿಂದಲೇ ಚಳಿಗೆ ತಕ್ಕಂತೆ ದೊಡ್ಡ ಕೋಟುಗಳನ್ನು ಹೊಲಿಸಿಕೊಂಡು ಹೋಗಿದ್ದೆ. ಆ ದಿನ ನನ್ನ ಹತ್ತಿರ ಇದ್ದ ಹಸಿರು ಕೋಟು ಹಾಕಿಕೊಂಡು ಹೋದೆ. ನನ್ನ ಜೊತೆಗಾರರು ನೀಲಿ ಕೋಟು ಧರಿಸಿಕೊಂಡು ಬಂದರು. ಕಾರ್ಖಾನೆಗೆ ಹೋದಾಗ ಒಬ್ಬ ಅಧಿಕಾರಿಯನ್ನು ನೋಡಿದೆ. ಅವರಿಗೆ ಇಂಗ್ಲಿಷ್ ಬಾರದು. ನನಗೆ ಜರ್ಮನ್ ಭಾಷೆ ಪೂರಾ ಅರ್ಥವಾಗದು; ಹೆಚ್ಚು ಮಾತನಾಡಲೂ ಬಾರದು. ಕಡೆಗೆ ಕಾರ್ಖಾನೆಯ ಭಾಷಾಂತರಕಾರರಾದ ಶ್ರೀ ನಾಯಿಮನ್ ಎಂಬುವರನ್ನು ಕರೆದರು. ಅವರ ಮೂಲಕ ಸಂಭಾಷಣೆ ನಡೆಸಿದೆ. ಭಾರತ ಸರಕಾರದ ರಾಯಭಾರಿಗಳು ಪತ್ರ ಸಹ ಕಳುಹಿಸಿದ್ದರು. ಮರುದಿನದಿಂದ ಕೆಲಸಕ್ಕೆ ಬರಬೇಕೆಂದು ಹೇಳಿ, ಒಂದು ವರ್ಷಕಾಲ ಯಾವ ಯಾವ ಭಾಗಗಳಲ್ಲಿ ಕೆಲಸ ಮಾಡಬೇಕೆಂಬ ವೇಳಾ ಪಟ್ಟಿ ಕೊಡುವುದಾಗಿಯೂ, ಮೊದಲು ಕಾರ್ಖಾನೆಯ ವರ್ಕ್‌ಷಾಪಿನಲ್ಲಿ ಕೆಲಸಮಾಡಬೇಕೆಂದೂ, ಅದಕ್ಕೆ ತಕ್ಕಂತಹ ಬಟ್ಟೆ ಮತ್ತು ಬೂಟ್ಸು ತರ ಬೇಕೆಂದೂ, ಇಲ್ಲವಾದರೆ ಈ ಬಟ್ಟೆಗಳು ಕೊಳೆಯಾಗುತ್ತವೆಂದೂ ಹೇಳಿದರು. ಮಿಕ್ಕ ಎಲ್ಲ ಅನುಕೂಲಗಳನ್ನೂ ಏರ್ಪಡಿಸಿದರು. ಅವರು ಏರ್ಪಡಿಸಿದ ಕೊಠಡಿ ಗಳ ವಿಳಾಸವನ್ನು ಸಹ ಕೊಟ್ಟರು. ನಾವು ಹೊರಗಡೆ ಹೋಗುವಾಗಲೂ ಬರುವಾಗಲೂ ಅಲ್ಲಿ ಕೆಲಸಮಾಡುವ ಹೆಂಗಸರು, ಗಂಡಸರು ಎಲ್ಲರೂ ನಮ್ಮನ್ನು ನೋಡುವುದಲ್ಲದೆ ನಗುತ್ತಲೂ ಇದ್ದರು. ನನಗೆ ಸಹಿಸಿಕೊಳ್ಳಲಾಗದೆ ಶ್ರೀ ನಾಯಿಮನ್‌ರವರನ್ನು "ನಾವು ಕಪ್ಪಗಿದ್ದೇವೆಂದು ನಗುತ್ತಾರೆಯೆ? ಇವರು ಯಾರೂ ಇಂಡಿಯಾ ದೇಶದವರನ್ನು ಕಂಡೇ ಇಲ್ಲವೇ? ಏಕೆ ನಗು

ತ್ತಾರೆ?" ಎಂದು ಕೇಳಿದೆ. ಅದಕ್ಕೆ ಅವರು "ನೀವು ಕಪ್ಪಗಿದ್ದೀರೆಂದು ನಗುತ್ತಿಲ್ಲ. ನಿಮ್ಮ ಕೋಟು ಬಹಳ ಚೆನ್ನಾಗಿದೆ. ಆ ಕೋಟಿನ ಬಣ್ಣ ನೋಡಿ ನಗುತ್ತಿದ್ದಾರೆ, ಅಷ್ಟೆ. ನೀವು ಹಸಿರು ಬಣ್ಣದ ಕೋಟು ಹಾಕಿದ್ದೀರಿ; ನಿಮ್ಮ ಸ್ನೇಹಿತರು ನೀಲಿ ಬಣ್ಣದ ನಿಲುವುಕೋಟು ಹಾಕಿದ್ದಾರೆ. ಈ ಎರಡು ಬಣ್ಣಗಳನ್ನು ಇಲ್ಲಿ ಗಂಡಸರು ಉಪಯೋಗಿಸುವುದಿಲ್ಲ. ಈ ಬಣ್ಣದ ಕೋಟುಗಳನ್ನು ಹೆಂಗಸರು ಹಾಕಿಕೊಳ್ಳುತ್ತಾರೆ. ಗಂಡಸರು ಕಪ್ಪು, ಕಂದು ಇಂತಹ ಬಣ್ಣದ ನಿಲುವುಕೋಟುಗಳನ್ನು ಧರಿಸುತ್ತಾರೆ. ಅದಕ್ಕೆ ನಿಮ್ಮನ್ನು ನೋಡಿ ನಗುತ್ತಿದ್ದಾರೆ" ಎಂದು ಹೇಳಿ ನಮ್ಮಲ್ಲಿದ್ದ ಕೋಟುಗಳಿಗೆ ಕಪ್ಪು ಅಥವಾ ಕಂದು ಬಣ್ಣಗಳನ್ನು ಹಾಕಿಸುವಂತೆ ಹೇಳಿದರು. ಅದರಂತೆ ಕೋಟುಗಳ ಬಣ್ಣ ಬದಲಾಯಿಸಿದೆವು. ಕಾರ್ಖಾನೆಯವರೇ ಈ ನಾಯಿಮನ್‌ರನ್ನು ಜೊತೆಗೆ ಕಳುಹಿಸಿಕೊಟ್ಟು ನಮಗೆ ಬೇಕಾದ ಸಾಮಾನು ತೆಗೆದುಕೊಳ್ಳಲು ಸಹಾಯ ಮಾಡಿದರು.

ಬೆಳಗ್ಗೆ ೫ ಗಂಟೆಗೆ ಎದ್ದು, ೬ ಗಂಟೆಯೊಳಗಾಗಿ ಮನೆ ಬಿಟ್ಟು, ಒಂದು ಟ್ರಾಮನ್ನು ಹತ್ತಿ ೧೫ ನಿಮಿಷ ಪ್ರಯಾಣ ಮಾಡಿದನಂತರ ಇಳಿದು ಪುನಃ ಕಾರ್ಖಾನೆಗೆ ಹೋಗುವ ಬಸ್ಸನ್ನು ಹತ್ತಬೇಕಾಗಿತ್ತು. ಮೊದಲನೆ ದಿನ ಇಂಗ್ಲಿಷ್ ಮಾತನಾಡುವ ಶ್ರೀ ನಾಯಿಮನ್ ನನ್ನನ್ನು ಬಸ್ಸಿನಲ್ಲಿ ಇದ್ದವರಿಗೆಲ್ಲಾ ಪರಿಚಯ ಮಾಡಿಕೊಟ್ಟು "ದೂರ ದೇಶದಿಂದ ಬಂದಿದ್ದಾರೆ. ಒಂದು ವರ್ಷಕಾಲ ನಮ್ಮ ಜೊತೆಯಲ್ಲಿ ಇರುತ್ತಾರೆ. ಎಲ್ಲರೂ ಸಹಕರಿಸಬೇಕು" ಎಂದು ಹೇಳಿದರು. ಅನೇಕ ಸಾರಿ ಬಸ್ಸು ಭರ್ತಿಯಾಗಿ ಸ್ಥಳ ಇಲ್ಲದಿದ್ದರೂ ನಮ್ಮಿಬ್ಬರಿಗೆ ಕೂತುಕೊಳ್ಳಲು ಸ್ಥಳ ಕೊಟ್ಟು ತಾವು ನಿಂತುಕೊಳ್ಳುತ್ತಿದ್ದರು. ಬಸ್ಸು ಹತ್ತಿದ ಕೂಡಲೆ ಕೈಕುಲುಕಿಸಿ ನಮಸ್ಕರಿಸುವುದು ಅವರ ಸ್ವಭಾವ. ಆಕಸ್ಮಾತ್ ಒಂದು ದಿನ ಬಾರದಿದ್ದರೆ ಬಸ್ಸಿನಲ್ಲಿ ಎಲ್ಲರೂ ಕೇಳುವವರೇ. ಬಸ್ಸು ಕಾರ್ಖಾನೆಗೆ ೭-೩೦ಕ್ಕೆ ಹೋಗುತ್ತಿತ್ತು. ನಾನು ಕೆಲಸಮಾಡುವ ಕಾರ್ಖಾನೆ ನಾನು ವಾಸಮಾಡುತ್ತಿದ್ದ ಬ್ರೌನ್ಸ್‌ವೈಗ್‌ನಿಂದ ಸುಮಾರು ೨೦ ಮೈಲಿ ದೂರದಲ್ಲಿತ್ತು. ನಿತ್ಯವೂ ಬಸ್ಸಿನಲ್ಲಿ ಹೋಗಿ ಬರಬೇಕು. ವಾಟನ್‌ಸ್ಟೆಟ್ ಎಂಬ ಊರು. ಇಲ್ಲಿ ಫಾಮಸ್ ಎಂಬ ಕಾರ್ಖಾನೆ ಯುದ್ಧವಾಗುವುದಕ್ಕೆ ಮುಂಚೆ ಇತ್ತು. ಲಿಂಕೇ ಆಫ್‌ಮನ್ ಬುಷ್ ಎಂಬ ಸುಪ್ರಸಿದ್ಧ ರೈಲುಗಾಡಿ ಕಟ್ಟುವ ಕಾರ್ಖಾನೆ ಪೂರ್ವ ಜರ್ಮನಿಯ ಬ್ರಿಸ್ಲೊ ಎಂಬ ಊರಿನಲ್ಲಿ ಇದ್ದುದು, ಯುದ್ಧವಾದನಂತರ ಫಾಮಸ್ ಕಾರ್ಖಾನೆಯ ಜೊತೆಗೆ ಸೇರಿಕೊಂಡು ಈಗ ಕೆಲಸಮಾಡುತ್ತಿದೆ. ಸುಮಾರು ೩,೦೦೦ ಜನ ಕೆಲಸಗಾರ

ರಿದ್ದಾರೆ. ಬೆಳಗ್ಗೆ ೭-೩೦ರಿಂದ ೪ ಗಂಟೆಯವರೆಗೆ ನಿತ್ಯವೂ ಕೆಲಸ ನಡೆದು ಶನಿವಾರ ೧ ಗಂಟೆಗೆ ರಜ ಕೊಡುತ್ತಾರೆ. ಮಧ್ಯೆ ೧೦ ನಿಮಿಷ ಕಾಫಿಗೂ ಮತ್ತು ೨೦ ನಿಮಿಷ ಊಟಕ್ಕೂ ಬಿಡುವು ಕೊಟ್ಟಿರುತ್ತಾರೆ.

ಜರ್ಮನಿಯಲ್ಲಿ ಯಾವುದೇ ಕಾರ್ಖಾನೆಯಲ್ಲಿ ಕೆಲಸಮಾಡಲು ಸರ್ಕಾರದ ಅಪ್ಪಣೆ ಬೇಕು. ಮತ್ತೆ ಉದ್ಯೋಗ ವಿನಿಮಯ ಕೇಂದ್ರದ ಮೂಲಕವೇ ಕೆಲಸಕ್ಕೆ ಸೇರಬೇಕು. ನಾನು ಸರ್ಕಾರದ ವತಿಯಿಂದ ಹೋಗಿದ್ದೆ. ಕಾರ್ಖಾನೆಯವರೇ ಎಲ್ಲವನ್ನೂ ಏರ್ಪಡಿಸಿದ್ದರು. ಕೆಲಸ ಬಿಡುವುದಕ್ಕೆ, ಕೆಲಸದಿಂದ ತೆಗೆಯುವುದಕ್ಕೆ ೩ ತಿಂಗಳ ಮುನ್ಸೂಚನೆ ಕೊಡಬೇಕು. ಆಗ ಈ ಉದ್ಯೋಗ ವಿನಿಮಯ ಕೇಂದ್ರಕ್ಕೆ ತಿಳಿಸಿದರೆ ಅವರು ಕೆಲಸವಿರುವ ಕಡೆ ತಿಳಿಸುತ್ತಾರೆ. ಕೆಲಸವಿಲ್ಲದ್ದರಿಂದ ಕೆಲಸ ಸಿಗುವವರೆಗೂ ಸರ್ಕಾರದವರು ಸ್ವಲ್ಪ ದುಡ್ಡು ಕೊಡುತ್ತಿರುತ್ತಾರೆ. ಯುದ್ಧದಲ್ಲಿ ಕೈಕಾಲು ಕಳೆದುಕೊಂಡವರನ್ನು ಕಡೆಯ ಪಕ್ಷ ೧೦೦ಕ್ಕೆ ೩ ಜನರನ್ನಾದರೂ ಕಾರ್ಖಾನೆಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಇದರಿಂದ ಕೈ ಇಲ್ಲದವರು, ಕಾಲು ಇಲ್ಲದವರು, ಕಣ್ಣು ಇಲ್ಲದವರು ಕೆಲಸಮಾಡುವುದನ್ನು ಕಾಣಬಹುದು. ಅವರವರಿಗೆ ಯೋಗ್ಯವಾದ ಕೆಲಸ ಮಾಡುತ್ತಾರೆ. ಇದರ ಜೊತೆಗೆ ಪೂರ್ವ ಜರ್ಮನಿಯಿಂದ ಬರುವ ನಿರಾಶ್ರಿತರಿಗೆ ಮೊದಲು ಕೆಲಸ ಕೊಡುತ್ತಾರೆ. ಕಾರ್ಖಾನೆಯವರು ಕೆಲಸ ಕೊಡುವುದಲ್ಲದೆ ಮನೆಯನ್ನೂ ಹುಡುಕಿ ಕೊಡಬೇಕು. ಮನೆ ಹುಡುಕಿ ಕೊಟ್ಟು ಅವರ ಸಾಮಾನುಗಳನ್ನು ಸಾಗಿಸಲು ಸಹಾಯ ಮಾಡುತ್ತಾರೆ. ಕೆಲಸಗಾರನ ಮನಸ್ಸಿಗೆ ಹೆಚ್ಚು ಮನೆಯ ಕಡೆ ತೊಂದರೆಗಳು ತಲೆಹಾಕದೆ, ಕೆಲಸಮಾಡಲು ಏನು ಏನು ಅನುಕೂಲ ಬೇಕೋ ಅದೆಲ್ಲವನ್ನೂ ಒದಗಿಸುತ್ತಾರೆ. ಬೇರೆ ಊರಿನಲ್ಲಿದ್ದು ಈ ಊರಿಗೆ ಕೆಲಸಕ್ಕೆ ಬಂದರೆ ತನ್ನ ಕುಟುಂಬದಿಂದ ಬೇರೆಯಾಗಿರುವುದರಿಂದ ಆತನಿಗೆ ಈ ಊರಿನಲ್ಲಿ ಮನೆಯನ್ನು ಒದಗಿಸಿಕೊಡುತ್ತಾರೆ. ಆತ ಪ್ರತಿ ವಾರದ ಕೊನೆಯಲ್ಲಿ ತನ್ನ ಕುಟುಂಬವನ್ನು ನೋಡಿಕೊಂಡು ಬರಲು ಆಗುವ ರೈಲು ಖರ್ಚನ್ನು ಕಾರ್ಖಾನೆಯವರು ಕೊಡುತ್ತಾರೆ. ಆತ ಎರಡು ಕಡೆ ಕುಟುಂಬವನ್ನು ನಡೆಸಬೇಕಾದುದರಿಂದ ಆತನ ಸಂಪಾದನೆಯಲ್ಲಿ ೧,೫೦೦ ರೂ.ಗೆ ಆದಾಯತೆರಿಗೆ ಹಾಕುವುದಿಲ್ಲ. ಪ್ರತಿಯೊಬ್ಬ ಕೆಲಸಗಾರನೂ ಆರೋಗ್ಯಕ್ಕಾಗಿ ವಿಮೆ ಮಾಡಬೇಕು. ಇದರಿಂದ ಮನೆಯಲ್ಲಿ ಯಾರು ಖಾಯಿಲೆ ಬಿದ್ದರೂ ಡಾಕ್ಟರಿಗೆ ಹೇಳಿಕಳುಹಿಸಿದರೆ ಸಾಕು, ಅವರು ಔಷಧಿ ಕೊಡುತ್ತಾರೆ. ಕಾರ್ಖಾನೆಯವರು ಕೊಡುವ ಒಂದು ಪತ್ರ ಡಾಕ್ಟರಿಗೆ ಕೊಟ್ಟರೆ ಅವರು ದುಡ್ಡು ಇಲ್ಲದೆಯೇ ಔಷಧಿ ಕೊಡುತ್ತಾರೆ. ಅವರು ಆ

ದುಡ್ಡನ್ನು ವಿಮಾ ಇಲಾಖೆಯಿಂದ ಪಡೆಯುತ್ತಾರೆ. ಕೆಲಸಗಾರನು ಖಾಯಿಲೆ ಬಿದ್ದಾಗ ೧೩ತಿಂಗಳು ಕಾರ್ಖಾನೆಯವರು ಸಂಬಳ ಕೊಡುತ್ತಾರೆ; ೬ ತಿಂಗಳ ವರೆಗೆ ಆರೋಗ್ಯ ವಿಮೆಯವರು ಕೊಡುತ್ತಾರೆ. ಅನಂತರ ೬ ತಿಂಗಳು ಅರ್ಧ ಸಂಬಳ ಕೊಡುತ್ತಾರೆ.

ಕೆಲಸಗಾರ ಆದಾಯತೆರಿಗೆ ಬಹಳ ಹೆಚ್ಚಾಗಿ ಕೊಡುತ್ತಾನೆ. ಅದನ್ನು ನೋಡಿದರೆ ಭಾರತದಲ್ಲಿ ಕೊಡುವುದು ಬಹಳ ಕಡಿಮೆ. ಬ್ರಹ್ಮಚಾರಿ ಹೆಚ್ಚಾಗಿ ಆದಾಯ ತೆರಿಗೆ ಕೊಡಬೇಕು. ಮದುವೆಯಾದರೆ ಕಡಿಮೆಯಾಗುತ್ತದೆ. ಅನಂತರ ಮಕ್ಕಳಾದರೆ ಇನ್ನೂ ಕಡಿಮೆ. ನಾಲ್ಕು ಮಕ್ಕಳಿದ್ದರೆ ತೆರಿಗೆ ಇಲ್ಲ. ಜೊತೆಗೆ ೩ ಮಕ್ಕಳಿದ್ದರೆ ಸರ್ಕಾರದವರು ಸುಮಾರು ೩೦ ರೂ. ಹೆಚ್ಚಾಗಿ ಕೊಡುತ್ತಾರೆ. ಆದಾಯತೆರಿಗೆ ಜೊತೆಗೆ ಸಾವಿನ ತೆರಿಗೆ, ಆರೋಗ್ಯ ವಿಮೆ, ನಿರಾಶ್ರಿತರಿಗೆ ಸಹಾಯ, ನಿರುದ್ಯೋಗ ವಿಮೆ ಎಂದು ಹೀಗೆ ಅನೇಕ ತೆರಿಗೆ ಗಳನ್ನು ಸಂಬಳದಲ್ಲಿ ಹಿಡಿಯುತ್ತಾರೆ. ಇಷ್ಟು ತೆರಿಗೆ ಕೊಟ್ಟರೂ ಹಿಂದೂಸ್ಥಾನ ದಲ್ಲಿ ಗೊಣಗುವಂತೆ ಅಲ್ಲಿಯ ಜನ ಗೊಣಗುವುದಿಲ್ಲ. ತೆರಿಗೆ ಏಕೆ ಕೊಡುತ್ತಾ ರೆಂದು ಎಲ್ಲರಿಗೂ ಗೊತ್ತು. ತೆರಿಗೆ ಕೊಡದಿದ್ದರೆ ಸರ್ಕಾರ ನಡೆಯುವುದಿಲ್ಲ ಎಂದು ತಿಳಿದಿದ್ದಾರೆ.

ವರ್ಷಕ್ಕೆ ೨೦ ದಿನ ರಜ. ಇದನ್ನು ಬೇಸಿಗೆಯಲ್ಲಿ ಮಾತ್ರ ಉಪಯೋಗಿಸು ತ್ತಾರೆ. ಎಲ್ಲರೂ ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತು ಕೆಲಸ ಮಾಡು ತ್ತಾರೆ. ಏಳು ವರ್ಷ ಕೆಲಸ ಮಾಡಿದವರಿಗೆ ೧೫ ದಿನ ರಜಾನೀಡಿ ಆರೋಗ್ಯ ವಾದ ಸ್ಥಳಕ್ಕೆ ಕಳುಹಿಸಿಕೊಟ್ಟು, ಅಲ್ಲಿ ಕಾರ್ಖಾನೆಯ ಖರ್ಚಿನಲ್ಲಿ ಒಂದು ಅನುಕೂಲವಾದ ಹೋಟೆಲಿನಲ್ಲಿ ವಿಶ್ರಾಂತಿ ಪಡೆಯುವ ಅವಕಾಶ ಕಲ್ಪಿಸಿ ಕೊಡುತ್ತಾರೆ. ಇದು ಆತನ ಆರೋಗ್ಯಕ್ಕೆ ಹಿತಕರ.

ಸಾಮಾನ್ಯ ಕೆಲಸಗಾರರಿಂದ ಹಿಡಿದು ದೊಡ್ಡ ಅಧಿಕಾರಿಗಳವರೆಗೂ ಎಲ್ಲರೂ ಒಂದು ಕೈಚೀಲ ಹಿಡಿದುಕೊಂಡು ಬರುತ್ತಾರೆ. ಅದರಲ್ಲಿ ಕಾರ್ಖಾ ನೆಯ ಕಾಗದಗಳು, ಅವನ ಪೆನ್ನು ಮುಂತಾದ ಸಾಮಾನು, ಹಣ್ಣು, ಬ್ರೆಡ್, ಮಧ್ಯಾಹ್ನದ ಊಟ ಎಲ್ಲ ಇರುತ್ತದೆ. ಅದನ್ನು ಒಂದು ದೊಡ್ಡ ಚೀಲವೆಂದೇ ಹೇಳಬಹುದು. ಮನೆಯಲ್ಲಿ ಕಾಫಿ ಕುಡಿದು ಕಾರ್ಖಾನೆಗೆ ಬರುತ್ತಾರೆ. ಮುಕ್ಕಾಲು ಪಾಲು ಜನ ಹಾಲನ್ನೇ ಕುಡಿಯುತ್ತಾರೆ. ಕೆಲವರು ಕಾಫಿ ಟೀ ಗಳನ್ನು ಮಾಡುವುದೂ ಉಂಟು. ಸಾಮಾನ್ಯವಾಗಿ ಎಲ್ಲರೂ ಮನೆಯಿಂದ ಬ್ರೆಡ್ ಬೆಣ್ಣೆ ತಂದಿರುತ್ತಾರೆ. ಅದನ್ನು ತಿಂದು ಹಾಲು ಕುಡಿಯುತ್ತಾರೆ. ಪುನಃ ೧೨ ಗಂಟೆ ಹೊತ್ತಿಗೆ ಊಟ. ಅನೇಕರು ಮನೆಯಿಂದ ತಂದ ಬ್ರೆಡ್ಡನ್ನು

ತಿಂದು ಹಾಲು, ಕಾಫಿ ಕುಡಿಯುತ್ತಾರೆ. ಕಾರ್ಖಾನೆಯ ಕ್ಯಾಂಟೀನಿನಲ್ಲಿ ಎಲ್ಲ ಸಾಮಾನುಗಳನ್ನೂ ಸುಲಭ ಬೆಲೆಗೆ, ಎಂದರೆ ಹೋಟೆಲಿನ ಅರ್ಧ ಬೆಲೆಗೆ, ಮಾರುತ್ತಾರೆ. ನಿತ್ಯವೂ ಬದಲಾವಣೆ ಇದ್ದೇ ಇರುತ್ತದೆ. ೩ ಸಾವಿರ ಜನಕ್ಕೆ ಕ್ಯಾಂಟೀನು ಹಿಡಿಯದಿದ್ದರೂ ಒಂದೊಂದು ವಿಭಾಗದವರು ಒಂದೊಂದು ವೇಳೆಯಲ್ಲಿ ಬಂದು ಊಟಮಾಡುತ್ತಾರೆ. ಪ್ರತಿದಿನ ಊಟದ ಟಿಕೆಟ್ ಕೊಳ್ಳಬೇಕು. ತಾವೇ ತಟ್ಟೆಚಮಚಗಳನ್ನು ತೆಗೆದುಕೊಳ್ಳಬೇಕು. ಹೊರಗಡೆಯಿಂದ ಬಂದವರಿಗೆ ಮಾತ್ರ ಬಡಿಸುವವರು ಬಂದು ಊಟ ಬಡಿಸುತ್ತಾರೆ. ಯಾವಾಗ ಬೇಕಾದರೂ ಕ್ಯಾಂಟೀನಿಗೆ ಹೋಗಬಹುದು. ಅಲ್ಲೇ ನಿಂತು ಯಾರೂ ಕಾಲ ಕಳೆಯುವುದಿಲ್ಲ. ಕೆಲವು ಕಾರ್ಖಾನೆಗಳಲ್ಲಿ ಮಾದಕ ಪಾನೀಯಗಳನ್ನು ಮಾರುವುದಿಲ್ಲ. ಆದರೆ ಎಲ್ಲ ಕಾರ್ಖಾನೆಗಳಲ್ಲಿ ಬಿಯರ್ ಮಾರುತ್ತಾರೆ. ನೀರು ಕುಡಿಯುವುದು ಕಡಮೆ; ಇಲ್ಲವೆಂದೇ ಹೇಳಬಹುದು. ಆ ಚಳಿಗೆ ನೀರಿನ ಅವಶ್ಯಕತೆಯೂ ಇಲ್ಲ. ಎಲ್ಲರೂ ಹೆಚ್ಚಾಗಿ ಬಿಯರ್ ಕುಡಿಯುತ್ತಾರೆ. ಕೋಕಾ ಕೋಲಾ, ಜೂಸ್ ಸಹ ಸಿಗುತ್ತವೆ. ಅನೇಕರು ಕೆಲವು ಸಲ ಮಿತಿಮೀರಿ ಕುಡಿದು ಬುದ್ಧಿ ಕೆಡಿಸಿಕೊಳ್ಳುವುದೂ ಉಂಟು. ಕೆಲಸಗಾರ ಸಂಜೆ ಮನೆಗೆ ಹೋದಮೇಲೆ ಬ್ರೆಡ್ ಮತ್ತು ಮಾಂಸಾಹಾರ ತೆಗೆದುಕೊಳ್ಳುತ್ತಾನೆ. ಕೆಲವರು ಬಿಸಿ ಊಟ ಮಾಡುವುದೂ ಉಂಟು.

ಜರ್ಮನಿಯಲ್ಲಿ ಹುಟ್ಟಿದ ಹಬ್ಬವೆಂದರೆ ಎಲ್ಲ ಹಬ್ಬಗಳಿಗಿಂತ ದೊಡ್ಡ ಹಬ್ಬ. ಕಾರ್ಖಾನೆಗಳಲ್ಲಿ ಕೆಲಸಗಾರರು ರಜಾದ ಮೇಲಿದ್ದರೂ ಸಹ ಆ ದಿನ ಕೆಲಸಕ್ಕೆ ಬಂದು ಹೋಗುತ್ತಾರೆ. ಸ್ನೇಹಿತರೆಲ್ಲರೂ ಸೇರಿ ಆ ದಿನ ಆತನಿಗೆ ಸೂಕ್ತವಾದ ಬಹುಮಾನ ಕೊಡುತ್ತಾರೆ. ಶುಭಾಶಯವನ್ನು ಕೋರಲು ಬಂದವರಿಗೆಲ್ಲ ಪಾನಕಪೂಜೆ ಇದ್ದಂತೆ ವೈನ್ ಸೇವೆ ನಡೆಯುತ್ತದೆ. ಕೆಲವರು ಅದಕ್ಕಾಗಿಯೇ ಬರುತ್ತಾರೆ ಎಂದು ಹೇಳಿದರೆ ತಪ್ಪಲ್ಲ. ಕೆಲವರ ಹುಟ್ಟಿದ ಹಬ್ಬದ ದಿನ ಮಾದಕಪಾನ ಸ್ವಲ್ಪ ತಲೆಗೆ ಏರಿ, ಮನೆಯಲ್ಲೂ ಇನ್ನೂ ಸ್ವಲ್ಪ ಸೇವೆ ನಡೆಸಿ, ೨–೩ ದಿನ ಕಾರ್ಖಾನೆಗೆ ಬಾರದೆ ಇರುವುದೂ ಉಂಟು. ಮೇಲಿನ ಅಧಿಕಾರಿಗಳು ತಮ್ಮ ಡೈರಿಯಲ್ಲಿ ತನ್ನ ಕೈಕೆಳಗೆ ಕೆಲಸಮಾಡುವವರ ಹುಟ್ಟಿದ ತಾರೀಕು ಗುರುತುಹಾಕಿಕೊಂಡು ಆ ದಿನ ಬೆಳಗ್ಗೆ ಬಂದು ಶುಭವನ್ನು ಕೋರಿ ಮದ್ಯವನ್ನು ಕುಡಿದು ಹೋಗುತ್ತಾರೆ. ಕೆಲವು ಸಾರಿ ತನ್ನ ಸ್ನೇಹಿತನ ಹುಟ್ಟಿದ ಹಬ್ಬವನ್ನು ಆಚರಿಸುವ ರಭಸದಲ್ಲಿ ತಾನೇ ಹೆಚ್ಚಾಗಿ ಕುಡಿದು ತಲೆ ಕೆಡಿಸಿಕೊಳ್ಳುವವರೂ ಉಂಟು. ಒಂದು ಸಾರಿ ಒಬ್ಬ ಹುಟ್ಟಿದ ಹಬ್ಬ ಆಚರಿಸಿದಾಗ ನನ್ನನ್ನು ಕರೆದ. ನಾನು ಸುಮ್ಮನೆ ನಿಂತುಕೊಂಡೆ. ಅವನು

ಮದ್ಯವನ್ನು ಕೊಡಲು ಬಂದ. ನಾನು 'ಒಲ್ಲೆ' ಎಂದೆ. ಆತನಿಗೆ ಅವಮಾನ ಮಾಡಿದ ಹಾಗಾಯಿತು. ಅನಂತರ ಸ್ವಲ್ಪ ಚರ್ಚೆಯೂ ನಡೆಯಿತು. "ನನ್ನ ಸಂತೋಷಕ್ಕಾಗಿ ಕೊಡುತ್ತಿದ್ದೇನೆ. ಇದು ಇಲ್ಲಿಯ ಪದ್ಧತಿ. ನೀನು ನಮ್ಮ ದೇಶಕ್ಕೆ ಬಂದು ನಮ್ಮ ಸ್ನೇಹಿತನಾಗಿ ನಾನು ಕೊಟ್ಟ ಮದ್ಯವನ್ನು ಸ್ವಲ್ಪವೂ ಕುಡಿಯದಿದ್ದರೆ ನನ್ನನ್ನು ಅವಮಾನ ಮಾಡಿದಂತೆ" ಎಂಬುದೇ ಅವನ ವಾದ. ಆದರೆ ಕುಡಿಯುವುದು ಕೆಟ್ಟದ್ದು ಎಂದು ತಿಳಿದಿರುವವನು ಕುಡಿಯುವುದು ಹೇಗೆ ಸಾಧ್ಯ? ನನ್ನ ಧ್ಯೇಯವನ್ನು ಮುರಿಯುವುದರಿಂದ ನನ್ನನ್ನು ಅವಮಾನ ಮಾಡಿದ ಹಾಗೆ ಅಲ್ಲವೆ....? ಎಂದು ಪ್ರತಿ ಹೇಳಿ, ಕುಡಿಯಲು ನನಗೇನು ಅಭ್ಯಂತರ? ಮದ್ಯ ಬಿಟ್ಟು ಹಣ್ಣಿನ ರಸ, ಕಾಫಿ, ಹಾಲು ಯಾವುದನ್ನು ಬೇಕಾದರೂ ಕುಡಿಯುತ್ತೇನೆ ಎಂದು ತಮಾಷೆ ಮಾಡಿದೆ.

ಇಲ್ಲಿ ಆಳಿಗೂ, ಅಧಿಕಾರಿಗಳಿಗೂ ಹೆಚ್ಚು ವ್ಯತ್ಯಾಸ ಕಾಣುವುದಿಲ್ಲ. ಕಡಮೆ ಎಂದರೆ ಒಬ್ಬ ಕೆಲಸಗಾರನಿಗೆ ೩೦೦ ರೂ. ಸಂಬಳ. ದೊಡ್ಡ ಡೈರೆಕ್ಟರ್‌ಗೆ ೩೦೦೦ ರೂಪಾಯಿ. ನಮ್ಮಲ್ಲಿ ಇದ್ದ ಹಾಗೆ ೩೦ ರಿಂದ ೩೦೦೦ ರೂಪಾಯಿವರೆಗೆ ಅಂತರ ಇಲ್ಲ. ಡೈರೆಕ್ಟರ್ ಆದವನು ತನ್ನ ಕಛೇರಿಯ ಬಾಗಿಲಿಗೆ ಬಂದಾಗ ಬಾಗಿಲು ತೆಗೆದು ನಿಂತಿರುವ ಜವಾನನ ಕೈಕುಲುಕಿಸಿ "ನಮಸ್ಕಾರ, ನಿದ್ದೆ ಚೆನ್ನಾಗಿ ಆಯಿತೇ? ಹೇಗೆ ಇದೀರಾ?" ಎಂದು ವಿಶ್ವಾಸದ ಮಾತು ಆಡಿ ಒಳಗೆ ಹೋಗುತ್ತಾನೆ. ಮನೆಗೆ ಹೋಗುವಾಗ "ಪುನಃ ನೋಡೋಣ" (Auf wieder sehen) ಎಂಬ ಉಪಚಾರದ ಮಾತು ಹೇಳುತ್ತಾನೆ. ಅಧಿಕಾರಿ ಆಳನ್ನೂ ಕೂಡ ತನ್ನಂತಹ ಒಬ್ಬ ಮನುಷ್ಯನಂತೆ ಕಂಡು ವಿಶ್ವಾಸದಿಂದ ಮಾತನಾಡಿಸುತ್ತಾನೆ. ಕೆಲಸ ಮಾಡುವಾಗ ಆತ ಅಧಿಕಾರಿ, ಈತ ಆಳು. ಇಬ್ಬರೂ ಅವರವರ ಕೆಲಸ ಮಾಡಬೇಕು. ಅವರವರ ಅಧಿಕಾರದ ಗೌರವ ಅವರವರಿಗೆ ಇದ್ದೇ ಇದೆ. ಹಿಂದೂಸ್ಥಾನದಲ್ಲಿ ಒಬ್ಬ ಅಧಿಕಾರಿ ಕಛೇರಿಗೆ ಬಂದ ಒಡನೆ ಆತನ ಆಳು ಬಂದು ಕಾರಿನ ಬಾಗಿಲು ತೆಗೆದು ಅವನ ಉದ್ದಕ್ಕೂ ಅಡ್ಡಬಿದ್ದು ಕೆಳಗೂ ಮೇಲೂ ಓಡಾಡದಿದ್ದರೆ ಒಂದು ಅಥವಾ ಎರಡು ರೂಪಾಯಿ ಜುಲ್ಮಾನೆ. ತಪ್ಪಿದರೆ ಕೆಲಸಕ್ಕೆ ಧಕ್ಕೆ ಬಂದರೂ ಬರಬಹುದು. ಇನ್ನೊಂದು ದೃಷ್ಟಿಯಲ್ಲಿ, ಆಳನ್ನು ಸ್ವಲ್ಪ ಸರಸವಾಗಿ ಅಧಿಕಾರಿಗಳು ಮಾತನಾಡಿಸಿದರೆ ಮಾರನೆಯ ದಿನ ಆ ಆಳು ಅಧಿಕಾರಿಗಳ ಮೇಜಿನ ಮೇಲೆ ಕೂಡಲೂ ಹೇಸುವುದಿಲ್ಲ. ಆದಕ್ಕಾಗಿ ಇಬ್ಬರೂ ತಮ್ಮ ತಮ್ಮ ಸ್ವಂತ ಜವಾಬ್ದಾರಿ ಏನು ಎಂಬುದನ್ನು ತಿಳಿದುಕೊಳ್ಳುವುದರ ಜೊತೆಗೆ ಒಬ್ಬರಲ್ಲಿ ಒಬ್ಬರಿಗೆ ವಿಶ್ವಾಸ ಸಹ ಇರಬೇಕು. ಅಲ್ಲಿಯ ಅಧಿಕಾರಿಗಳ ಮನೆಯಲ್ಲಿ

ಯಾವ ಆಳೂ ಕೆಲಸಮಾಡುವುದಿಲ್ಲ. ನಮ್ಮ ದೇಶದಲ್ಲಿ ಒಬ್ಬೊಬ್ಬ ಅಧಿಕಾರಿಯ ಮನೆಯಲ್ಲಿ ೩-೪ ಜನ ಕಛೇರಿಯ ಆಳುಗಳು ಕೆಲಸಮಾಡುತ್ತಾರೆ. ಹಾಗೆ ಕೆಲಸಮಾಡದಿದ್ದರೆ ತನ್ನ ಕೆಲಸಕ್ಕೆ ಊನಬರಬಹುದು ಎಂಬ ಹೆದರಿಕೆ. ಜರ್ಮನಿಯಲ್ಲಿ ಕೆಲಸಗಾರರಿಗೆ ತಮ್ಮ ಅಧಿಕಾರಿಗಳನ್ನು ಕಂಡರೆ ಯಾವ ಭಯವೂ ಇಲ್ಲ. ಧೈರ್ಯದಿಂದ ಎಲ್ಲಾ ಕೇಳುತ್ತಾರೆ. ಮಾತಿನಲ್ಲೂ ವಿಶ್ವಾಸ. ಕಾರ್ಖಾನೆಗೆ ಹೋಗುವಾಗ ಎಲ್ಲರೂ ಒಂದೇ ತರದ ಬಟ್ಟೆ ಹಾಕಿರುತ್ತಾರೆ. ಇವನು ಅಧಿಕಾರಿ, ಈತ ಆಳು ಎಂದು ಹೇಳುವುದು ಕಷ್ಟ. ಕೆಲಸಕ್ಕೆ ಇಳಿದಾಗ ಕೆಲಸಗಾರ ತನ್ನ ಕೆಲಸಕ್ಕೆ ತಕ್ಕಂತಹ ಬಟ್ಟೆ ಹಾಕಿರುತ್ತಾನೆ. ಕೆಲಸ ಮುಗಿಸಿ ಸಂಜೆ ಪೇಟೆಯಲ್ಲಿ ಹೋಗುವಾಗಲಂತೂ ವ್ಯತ್ಯಾಸವೇ ಕಾಣುವುದಿಲ್ಲ.

ಕೆಲಸಗಾರರು ಕಾರ್ಖಾನೆಗೆ ಬಂದ ಒಡನೆ ಕೆಲಸ ಪ್ರಾರಂಭಿಸುತ್ತಾರೆ. ಪ್ರತಿ ಕೆಲಸಗಾರನಿಗೂ ಒಂದೊಂದು ಬೀರು. ತಾನು ಹಾಕಿಕೊಂಡು ಬಂದ ಬಟ್ಟೆಯನ್ನು ತೆಗೆದು ಅಲ್ಲಿ ಇಟ್ಟು, ಕೆಲಸದ ಬಟ್ಟೆಯನ್ನು ಹಾಕಿಕೊಳ್ಳುತ್ತಾನೆ. ಇದರಿಂದ ಅವನು ಯಾವ ಕೆಲಸಮಾಡಲೂ ಹಿಂದೆಗೆಯುವುದಿಲ್ಲ. ಕೊಳೆಯಾದರೂ ಚಿಂತೆಯಿಲ್ಲ. ಸಂಜೆ ಹೊತ್ತಿಗೆ ಮೈ-ಕೈ ಎಲ್ಲ ಕೊಳೆಯಾಗಿರುತ್ತದೆ. ಸಂಜೆ ಹೋಗುವಾಗ ಚೆನ್ನಾಗಿ ಕೈಕಾಲು ತೊಳೆದುಕೊಳ್ಳುವುದಕ್ಕಲ್ಲದೆ ಸ್ನಾನಮಾಡಲೂ ಬಿಸಿನೀರನ್ನು ಒದಗಿಸಿದ್ದಾರೆ. ಸಂಜೆ ಶುಭ್ರವಾಗಿ ಸ್ನಾನಮಾಡಿ ಬಟ್ಟೆ ಬದಲಾಯಿಸಿಕೊಂಡು ಕಾರ್ಖಾನೆಯನ್ನು ಬಿಡುತ್ತಾನೆ. ದುಡಿತವೆಂದರೆ ಇಲ್ಲಿ ನೋಡಬೇಕು. ಒಂದು ನಿಮಿಷ ಸಹ ವ್ಯರ್ಥವಾಗಿ ಕಾಲ ಕಳೆಯುವುದಿಲ್ಲ. ಅವರವರ ಕೆಲಸ ಮಾಡಿಕೊಂಡು ಹೋಗುತ್ತಾರೆ. ಪ್ರತಿಯೊಬ್ಬನಿಗೂ ತಾನು ದುಡಿಯದಿದ್ದರೆ ದೇಶ ಮುಂದುವರಿಯುವುದಿಲ್ಲವೆಂಬ ಭಾವನೆ ಇದೆ. ಕೆಲಸಕ್ಕೆ ತಕ್ಕ ಸಂಬಳ. ಕಾರ್ಖಾನೆಯವರು ಸಾಧ್ಯವಾದಷ್ಟು ಮಟ್ಟಿಗೂ ಕೆಲಸಗಾರರ ತೊಂದರೆ ತೊಡಕುಗಳನ್ನು ಕಡಮೆ ಮಾಡಲು ಪ್ರಯತ್ನಿಸುತ್ತಾರೆ. ಪೇಟೆಗೆ ಹೋಗಬೇಕೆಂದರೆ ಸೌಕರ್ಯ ಒದಗಿಸಿಕೊಡುತ್ತಾರೆ. ಪ್ರತಿ ಕೆಲಸಗಾರನಿಗೂ ತನ್ನ ಕೆಲಸದ ಜವಾಬ್ದಾರಿ ಚೆನ್ನಾಗಿದೆ. ಕೆಲಸಗಾರನ ಮೇಲೆ ಉಸ್ತುವಾರಿ ಕಡಮೆ. ತನ್ನ ಕೆಲಸವನ್ನು ತಾನೇ ತನಿಖೆ ಮಾಡಿಕೊಳ್ಳುತ್ತಾನೆ. ಒಂದು ಸಾರಿ ನಾನು ಕೆಲಸಮಾಡುತ್ತಿದ್ದ ಕಾರ್ಖಾನೆಯಲ್ಲಿ ಒಂದು ಸಣ್ಣ ಸಾಮಾನು ತಯಾರಿಸುವುದರಲ್ಲಿ ಒಂದು ಸಮಸ್ಯೆ ಬಂತು. ಆ ಸಾಮಾನನ್ನು ಲಕ್ಷಗಟ್ಟಲೆ ತಯಾರು ಮಾಡಬೇಕಾಗಿತ್ತು. ಒಂದು ಸಾಮಾನನ್ನು ಮಾಡಲು ೧೦ ನಿಮಿಷ ಬೇಕು. ಅದನ್ನು ಆದಷ್ಟು ಕಡಮೆ ಮಾಡಿ, ಇರುವ ಯಂತ್ರಗಳಲ್ಲಿ ೬-೭ ನಿಮಿಷಗಳಲ್ಲಿ ಮಾಡಿದರೆ ಕಾರ್ಖಾನೆಗೆ

ಸಾವಿರಾರು ರೂಪಾಯಿ ಲಾಭವಾಗುತ್ತಿತ್ತು. ಇದಕ್ಕೆ ಅಲ್ಲಿಯ ಡೈರೆಕ್ಟರ್ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಈ ಸಾಮಾನನ್ನು ೬-೭ ನಿಮಿಷ ದಲ್ಲಿ ಮಾಡುವಂತೆ ಏರ್ಪಾಡುಮಾಡಿದರೆ ಆ ಸಂಬಂಧಪಟ್ಟ ಕೆಲಸಗಾರರಿಗೆ ೧೦೦ ರೂಪಾಯಿ ಕೊಡುತ್ತೇನೆ ಎಂದು ಹೇಳಿದರು. ಎರಡು ದಿನದೊಳಗೆ ಕೆಲಸಗಾರರು ಸೇರಿ ಪ್ರಯತ್ನಪಟ್ಟು ಉಪಾಯವನ್ನು ಕಂಡುಹಿಡಿದರು. ಡೈರೆಕ್ಟರ್ ಒಂದು ಭಾನುವಾರ ಆದಕ್ಕೆ ಸಂಬಂಧಪಟ್ಟ ಕೆಲಸಗಾರರನ್ನು ಒಂದು ದೂರದ ಊರಿಗೆ ಕರೆದುಕೊಂಡು ಹೋಗಿ ೧೦೦ ರೂಪಾಯಿ ಖರ್ಚು ಮಾಡಿ ಸಂತೋಷವಾಗಿ ಕಾಲ ಕಳೆದುಕೊಂಡು ಬಂದರು. ಈ ರೀತಿಯ ಪ್ರೋತ್ಸಾಹ, ಉತ್ಸಾಹ ನಮ್ಮ ದೇಶದಲ್ಲಿ ಬರುವುದು ಯಾವಾಗ ?

ಕಾರ್ಖಾನೆಯಲ್ಲಿ ಕೆಲಸ ಮಾಡಿಕೊಂಡು ಸಂಜೆಯ ಶಾಲೆಯಲ್ಲಿ ಓದು ವವರ ಸಂಖ್ಯೆ ಬಹಳ. ಬೆಳಗ್ಗೆಯಿಂದ ಸಂಜೆಯವರೆಗೂ ಕಾರ್ಖಾನೆಯಲ್ಲಿ ಕೆಲಸಮಾಡಿ ರಾತ್ರಿ ಪಾಠಶಾಲೆಗೆ ಹೋಗಿ ತಮಗೆ ಬೇಕಾದ ತಾಂತ್ರಿಕ ಶಿಕ್ಷಣ ಪಡೆಯುತ್ತಾರೆ. ಈ ಶಾಲೆಗಳನ್ನು ಸರ್ಕಾರದವರು ಮತ್ತು ಕಾರ್ಖಾನೆ ಯವರು ಒಪ್ಪಿಕೊಂಡು, ಪ್ರತಿ ೬-೧೨ ತಿಂಗಳಿಗೆ ಪರೀಕ್ಷೆ ನಡೆಯುತ್ತದೆ. ಈ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದರೆ ಸಂಬಳವೂ ಹೆಚ್ಚಾಗುತ್ತದೆ. ಕಾರ್ಖಾನೆಯವರು ಸಹ ಇಂತಹ ಶಾಲೆಗಳು ಏರ್ಪಡಿಸಿದ ಕಾರ್ಯಕ್ರಮ ಗಳಲ್ಲಿ ಕೆಲಸಗಾರರು ಭಾಗವಹಿಸಲು ಅವಕಾಶದ ಜೊತೆಗೆ ಅನುಕೂಲವನ್ನೂ ಮಾಡಿಕೊಡುತ್ತಾರೆ. ಕೆಲಸಗಾರರು ಅವರವರು ಮಾಡುವ ಕೆಲಸಕ್ಕೆ ತಕ್ಕಂತಹ ವಿಷಯಗಳಲ್ಲಿ ಉತ್ತಮ ಶಿಕ್ಷಣ ಪಡೆಯುತ್ತಾರೆ.

ಇದಲ್ಲದೆ ಒಂದೊಂದು ಕಾರ್ಖಾನೆಯಲ್ಲೂ ಒಂದೊಂದು ತರಪೇತು ಶಾಲೆ ಇರುತ್ತದೆ. ಹುಡುಗಹುಡುಗಿಯರು ತಮ್ಮ ೯ ವರ್ಷದ ಶಾಲೆ ಮುಗಿಸಿ ಈ ಶಾಲೆಗೆ ಬಂದು ಸೇರುತ್ತಾರೆ. ಇವರು ಶಾಲೆಯಲ್ಲಿ ಪಾಠ ಕಲಿಯು ವುದಲ್ಲದೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾರೆ. ವಾರಕ್ಕೆ ಇಷ್ಟು ದಿನ ಎಂದು ಕಾರ್ಖಾನೆಯಲ್ಲಿ ಕೆಲಸ ಮಾಡಬೇಕು. ಒಬ್ಬೊಬ್ಬ ಒಂದೊಂದು ವಿಷಯದಲ್ಲಿ ಹೆಚ್ಚು ತರಪೇತು ಪಡೆಯುತ್ತಾನೆ. ಈ ಹುಡುಗರಿಗೆ ೧೦೦ ರೂಪಾಯಿಯಿಂದ ಹಿಡಿದು ಅವರವರ ವಯಸ್ಸಿಗೆ ತಕ್ಕಂತೆ ವೇತನ ಸಿಗುತ್ತದೆ. ಹಾಗೆ ೩ ವರ್ಷಕಾಲ ತರಪೇತು ಪಡೆದು ಕಾರ್ಖಾನೆಗೆ ಸೇರುತ್ತಾನೆ. ಈ ಶಾಲೆಯಿಂದ ಬರುವ ಪ್ರತಿ ಹುಡುಗನೂ ಒಬ್ಬ ತಜ್ಞ ಆಗುತ್ತಾನೆ. ಈ ಕಾರ್ಖಾನೆಯ ಶಾಲೆಯಲ್ಲಿ ತರಪೇತು ತೆಗೆದುಕೊಂಡು ಆದಮೇಲೆ ಎಲ್ಲಿ ಬೇಕಾದರೂ ಹೋಗಿ ಕೆಲಸ ಮಾಡಬಹುದು. ಯಾವ ನಿರ್ಬಂಧವೂ ಇಲ್ಲ.

ಕೆಲಸಗಾರ ಹಾಕಿಕೊಳ್ಳುವ ಸಮವಸ್ತ್ರಕ್ಕೆ ಕಾರ್ಖಾನೆಯಲ್ಲಿ ಗೌರವವಿದೆ. ಯಾರೂ ಅದನ್ನು ಅಲ್ಲಗಳೆಯುವುದಿಲ್ಲ. ಡೈರೆಕ್ಟರ್ ಸಹ ಕಾರ್ಖಾನೆ ಒಳಗೆ ಕೆಲಸಮಾಡುವ ಕಡೆ ಹೋಗುವಾಗ ಉದ್ದವಾದ ನಿಲುವುಕೋಟನ್ನು ಧರಿಸಿ ಹೋಗುತ್ತಾನೆ. ತಾನು ಎಲ್ಲ ಕೆಲಸಕ್ಕೂ ಕೈಹಾಕುತ್ತಾನೆ. ಇದರಿಂದ ಈ ಕೆಲಸ ಕೀಳು, ಈ ಕೆಲಸ ಮೇಲು ಎಂಬ ಭಾವನೆ ಬರುವುದಿಲ್ಲ. ಯಾವ ಕೆಲಸಗಾರರ ಹತ್ತಿರ ಹೋದರೂ ಭಾರತದ ಮೇಲೆ ವಿಶ್ವಾಸ ತೋರಿಸುತ್ತಾರೆ. ಅನೇಕ ಪ್ರಶ್ನೆ ಕೇಳುತ್ತಾರೆ. ರಾಜಕೀಯದಿಂದ ಹಿಡಿದು ನಮ್ಮ ದೇಶದ ಆನೆಗಳವರೆಗೆ ಎಲ್ಲ ವಿಷಯಗಳೂ ಬರುತ್ತವೆ. ಜರ್ಮನ್ ಭಾಷೆ ಬಾರದಿದ್ದರೆ ಸ್ವಲ್ಪ ಕಷ್ಟ. ಸ್ವಲ್ಪ ಸಮಾಧಾನವಾಗಿ, ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರ ಕೊಡಬೇಕು.

ಚಳಿಗಾಲದಲ್ಲಿ ಕಾರ್ಖಾನೆಯಲ್ಲಿ ಕೆಲಸಮಾಡುವುದು ಕಷ್ಟವೇ ಸರಿ. ಕಾರ್ಖಾನೆಯಲ್ಲಿ ಬಿಸಿನೀರನ್ನು ಪೈಪಿನ ಮೂಲಕ ಕಾರ್ಖಾನೆಯ ಎಲ್ಲ ಕೊಠಡಿಗಳಿಗೂ ಹಾಯಿಸಿ ಬೆಚ್ಚಗೆ ಇಟ್ಟಿರುತ್ತಾರೆ. ಜೊತೆಗೆ ಬಿಸಿ ಗಾಳಿಯನ್ನು ಬಿಡುತ್ತಾರೆ.

ಕೆಲಸಗಾರರಿಗೆ ಪ್ರತಿ ಶುಕ್ರವಾರ ಒಂದು ವಾರದ ಸಂಬಳ ಕೊಡುತ್ತಾರೆ. ತಿಂಗಳ ಮಧ್ಯೆ ಹಿಂದಿನ ತಿಂಗಳಿನ ಸಂಬಳ ಲೆಕ್ಕಹಾಕಿ ಬಾಕಿ ಹಣವನ್ನು ಆ ವಾರದ ಸಂಬಳದ ಜೊತೆಗೆ ಕೊಡುತ್ತಾರೆ. ತಿಂಗಳ ಸಂಬಳದವರಿಗೆ ತಿಂಗಳ ಕೊನೆಯ ದಿನ ಕೊಡುತ್ತಾರೆ.

ಕಾರ್ಖಾನೆಯ ಕೆಲಸಗಾರರ ಸಂಘದ ಕಛೇರಿ ಕಾರ್ಖಾನೆಗೆ ಸೇರಿದಂತೆಯೇ ಇರುತ್ತದೆ. ನನಗೆ ಅಲ್ಲಿಯ ನಾಯಕರೊಡನೆ ಮಾತನಾಡುವ ಅವಕಾಶ ಸಿಕ್ಕಿತು. ಎಲ್ಲ ಕೆಲಸಗಾರರು ಸೇರಿ ಎರಡು ವರ್ಷಕ್ಕೆ ಒಂದು ಸಾರಿ ೨೪ ಜನ ಸದಸ್ಯರ ಒಂದು ಸಮಿತಿ ಚುನಾಯಿಸುತ್ತಾರೆ. ಈ ಸಮಿತಿಯವರು ಕಾರ್ಖಾನೆಯ ಎಲ್ಲ ವಿಭಾಗಗಳಿಂದಲೂ ಚುನಾಯಿಸಿ ಬಂದಿರುತ್ತಾರೆ. ಇವರಲ್ಲಿ ೫ ಜನರನ್ನು ಸಂಘದ ಕೆಲಸ ಮಾಡಲು ಆಯ್ಕೆ ಮಾಡುತ್ತಾರೆ. ಇವರು ಕಾರ್ಖಾನೆಯ ಕೆಲಸ ಮಾಡುವುದಿಲ್ಲ. ಒಬ್ಬ ಅಧ್ಯಕ್ಷ, ಇಬ್ಬರು ಕಾರ್ಯದರ್ಶಿಗಳು ಮತ್ತು ಇಬ್ಬರು ತೀರ್ಮಾನಗಾರರು ಇರುತ್ತಾರೆ. ಈ ತೀರ್ಮಾನಗಾರರು ಕೆಲಸಗಾರರಿಗೂ ಅಧಿಕಾರಿಗಳಿಗೂ ಕೆಲಸದ ವಿಚಾರವಾಗಿ ವ್ಯತ್ಯಾಸ, ವ್ಯಾಜ್ಯ ಬಂದಾಗ ತೀರ್ಮಾನಿಸುತ್ತಾರೆ. ಕೆಲಸಗಾರ ಇವರಲ್ಲಿ ಹೋಗಿ ಹೇಳಿಕೊಳ್ಳುತ್ತಾನೆ. ಕಾರ್ಯದರ್ಶಿಗಳು ಮಿಕ್ಕ ಎಲ್ಲ ಕೆಲಸಗಳನ್ನೂ ನಡೆಸಿಕೊಂಡು ಹೋಗುತ್ತಾರೆ. ಅಧ್ಯಕ್ಷ ಇವರೆಲ್ಲರ ಮೇಲಿನ ಅಧಿಕಾರಿ. ಅವನೊಬ್ಬ ಕಾರ್ಖಾನೆಯ ಮ್ಯಾನೇಜರ್ ತರಹವೇ ಇರುತ್ತಾನೆ. ಇವನು ಅಧಿಕಾರಿ

ಗಳೊಂದಿಗೆ ಮಾತನಾಡಿ ಕೆಲಸಗಾರರಿಗೂ ಅಧಿಕಾರಿಗಳಿಗೂ ನಡುವೆ ಒಪ್ಪಂದ ಏರ್ಪಡಿಸುತ್ತಾನೆ. ಈ ಐದು ಜನರು ಕಾರ್ಖಾನೆಯ ಕೆಲಸ ಮಾಡದಿದ್ದರೂ ಕಾರ್ಖಾನೆಯವರು ಇವರು ಈ ಅಧಿಕಾರದಲ್ಲಿರುವತನಕ ಅವರಿಗೆ ಬರುತ್ತಿರುವ ಸಂಬಳವನ್ನು ಕೊಡುತ್ತಾರೆ. ಎರಡು ವರ್ಷಗಳನಂತರ ಚುನಾವಣೆಯಲ್ಲಿ ಬದಲಾವಣೆಯಾದರೆ ಪುನಃ ಆತ ತಾನು ಹಿಂದೆ ಮಾಡುತ್ತಿದ್ದ ಕೆಲಸಕ್ಕೆ ಹಿಂದಿರುಗುತ್ತಾನೆ. ೨೪ ಜನ ಸದಸ್ಯರುಳ್ಳ ಸಮಿತಿ ೮ ದಿನಕ್ಕೆ ಒಂದು ಸಾರಿ ಕಾರ್ಖಾನೆ ನಡೆಯುತ್ತಿರುವ ವೇಳೆಯಲ್ಲಿ ತಮ್ಮ ತಮ್ಮ ವಿಭಾಗದ ಕಷ್ಟ ನಿಷ್ಠುರಗಳನ್ನು, ಬೇಕಾದ ಅನುಕೂಲಗಳನ್ನು ಕೂಲಂಕಷವಾಗಿ ಚರ್ಚಿಸಿ ಅಧಿಕಾರಿಗಳಿಗೆ ತಿಳಿಸುತ್ತಾರೆ.

ಮೂರು ತಿಂಗಳಿಗೊಮ್ಮೆ ಕೆಲಸಗಾರರ ಸಭೆ ಕಾರ್ಖಾನೆಯಲ್ಲಿ ಸೇರುತ್ತದೆ. ಅಧಿಕಾರಿಗಳು, ಕೆಲಸಗಾರರ ನಾಯಕರು ಮಾತನಾಡುತ್ತಾರೆ. ಅಧಿಕಾರಿಗಳು ಆ ಮೂರು ತಿಂಗಳಲ್ಲಿ ಆದ ಕೆಲಸ, ಆದಾಯ, ಖರ್ಚು, ಲಾಭ-ನಷ್ಟ ಗಳನ್ನು ತಿಳಿಸುತ್ತಾರೆ. ಜೊತೆಗೆ ಮುಂದಿನ ಯೋಜನೆಯನ್ನು ತಿಳಿಸುತ್ತಾರೆ. ಕೆಲಸಗಾರರ ನಾಯಕ ತಾನು ಮೂರು ತಿಂಗಳಲ್ಲಿ ಮಾಡಿದ ಕೆಲಸ, ಬೇಕಾದ ಅನುಕೂಲಗಳು, ಅಧಿಕಾರಿಗಳಿಗೂ ತನಗೂ ಏನಾದರೂ ವ್ಯತ್ಯಾಸಗಳು ಬಂದಿದ್ದರೆ ಅದರ ವಿವರಗಳು—ಎಲ್ಲವನ್ನೂ ತಿಳಿಸುತ್ತಾನೆ. ಇವರ ಜೊತೆಗೆ ಜರ್ಮನಿಯ ಕೆಲಸಗಾರರ ಸಂಘದಿಂದ ಒಬ್ಬಾತ ಬಂದು ಜರ್ಮನಿಯ ಇತರ ಕಾರ್ಖಾನೆಗಳ ವಿಷಯ ಮುಂತಾದುವುಗಳನ್ನು ತಿಳಿಸುತ್ತಾನೆ. ಕೆಲಸಗಾರರು ಯಾರು ಬೇಕಾದರೂ ಮಾತನಾಡಬಹುದು,ಏನು ಬೇಕಾದರೂ ಕೇಳಬಹುದು. ಕೆಲಸಗಾರರು ತಾವು ಕೆಲಸಮಾಡುವ ಕಾರ್ಖಾನೆಯನ್ನು ತಮ್ಮ ಸ್ವಂತ ಕಾರ್ಖಾನೆಯಂತೆ ಭಾವಿಸಿ ಮಾತನಾಡುತ್ತಾರೆ. ಕಾರ್ಖಾನೆಯನ್ನು ಮುಂದೆ ತರುವ ರೀತಿಯನ್ನು ತಿಳಿಸುವುದರ ಜೊತೆಗೆ ತಮಗೆ ಬೇಕಾದ ಅನುಕೂಲ ಗಳನ್ನು ಕೇಳುತ್ತಾರೆ. ಈ ರೀತಿಯ ಚರ್ಚೆಗಳನ್ನು ಕಾರ್ಖಾನೆಯ ಅಧಿಕಾರಿ ಗಳು ಆಹ್ವಾನಿಸುತ್ತಾರೆ. ಇದರಿಂದ ಕಾರ್ಖಾನೆ ಉತ್ತಮವಾಗುವುದೆಂದು ಅವರ ಅಭಿಪ್ರಾಯ.

ಮೆಟಾಲ್ ಎಂಬ ಜರ್ಮನಿಯ ಕೆಲಸಗಾರರ ಒಂದು ಸಂಘವಿದೆ. ಇದಕ್ಕೆ ಸದಸ್ಯರಾಗಲು ವಾರಕ್ಕೆ ಇಷ್ಟು ಎಂದು ಸಂಬಳ ಇದ್ದಂತೆ ಕೊಡಬೇಕು. ಕೆಲಸಗಾರರ ಹಿತರಕ್ಷಣೆಗೆ ಮೀಸಲಾದ ಒಂದು ವಾರ್ತಾಪತ್ರಿಕೆ ಈ ಸಂಸ್ಥೆ ಯಿಂದ ಪ್ರಕಟವಾಗುತ್ತದೆ.

೬. ಸಸ್ಯಾಹಾರದ ಹಟ

ಮನೋವಿಕಾರಕ್ಕೆ ಕಾರಣಗಳಿದ್ದರೂ ವಿಕಾರವಶರಾಗದವರೇ ಧೀರರು.

—ಕಾಳಿದಾಸ

ಹಿಂದೂಸ್ಥಾನದಿಂದ ಹೊರದೇಶಕ್ಕೆ ಹೋಗುವ ಜನರಿಗೆ ಮುಖ್ಯವಾಗಿ ಆಹಾರ ಸಮಸ್ಯೆ ಬಹಳ ದೊಡ್ಡದು. ಆಹಾರದಲ್ಲಿ ದೇಶದೇಶಕ್ಕೂ ವ್ಯತ್ಯಾಸವಿದೆ. ದಕ್ಷಿಣದಿಂದ ಉತ್ತರ ಭಾರತಕ್ಕೆ ಹೋದರೇನೇ ವ್ಯತ್ಯಾಸ ಕಾಣುತ್ತದೆ. ಇನ್ನು ದೇಶವನ್ನೇ ಬಿಟ್ಟು ಬೇರೆ ದೇಶಕ್ಕೆ ಹೋದರೆ, ಭಾಷೆ ಹೇಗೋ ಹಾಗೇ ಊಟ ತಿಂಡಿಗಳಲ್ಲೂ ವ್ಯತ್ಯಾಸ; ಅದರಲ್ಲೂ ಸಸ್ಯಾಹಾರಿಯಾದವನಿಗೆ ತೊಂದರೆ ಹೆಚ್ಚು.

ನಾನು ಹಡಗಿಗೆ ಹತ್ತಿದ ಕೂಡಲೆ ಆಹಾರ ಸಮಸ್ಯೆ ಪ್ರಾರಂಭಿಸಿತು. ಆದರೂ ಅಲ್ಲಿ ಅನೇಕ ಭಾರತೀಯರು ಪ್ರಯಾಣ ಮಾಡುತ್ತಿದ್ದುದರಿಂದ ಭಾರತೀಯರ ಆಹಾರ ಸಿಗುತ್ತಿತ್ತು. ಆದರೆ ಸಸ್ಯಾಹಾರಿಗಳು ಕಡಮೆ. ಕೆಲವರು ಸಸ್ಯಾಹಾರಿಗಳಾಗಿದ್ದರೂ ಪಾಶ್ಚಿಮಾತ್ಯ ದೇಶಗಳ ಆಹಾರಕ್ಕೆ ಸರಿಹೋಗೋಣವೆಂದು ಹಡಗಿನಿಂದಲೇ ಮಾಂಸಾಹಾರ ಪ್ರಾರಂಭಿಸಿದರು. ಸಸ್ಯಾಹಾರಿಗಳಾಗಿಯೇ ಇರಬೇಕೆಂಬ ಹಟ ಇರುವವರು ಬಹಳ ವಿರಳ. ಮೊದಲ ಎರಡು ದಿನ ಜೊತೆಗಾರರೂ ಬಡಿಸುವವರೂ ನಕ್ಕರು. "ಬಡಿಸಿದ್ದು ಸಸ್ಯಾಹಾರ ಹೌದೆ ಅಲ್ಲವೆ?" ಎಂದು ಪ್ರತಿಸಾರಿಯೂ ಕೇಳುತ್ತಿದ್ದೆ. ಹಡಗಿನಲ್ಲಿ ಸಸ್ಯಾಹಾರಿಗಳಿಗೆ ಅನ್ನ-ಸಾರು, ಟೊಮಾಟೊ ಸಾರು, ಹಸಿ ತರಕಾರಿ, ಹಣ್ಣು, ಐಸ್‌ಕ್ರೀಂ, ಕಾಫಿ ಸಿಗುತ್ತಿತ್ತು. ಮಾಂಸಾಹಾರಿಗಳಿಗೆ ಹೇರಳವಾದ ಆಹಾರ ಸಿಗುತ್ತಿತ್ತು. ಆಹಾರಕ್ಕೆ ಹಡಗಿನಲ್ಲಿ ಯಾವ ತೊಂದರೆಯೂ ಆಗಲಿಲ್ಲ. ಆಗಾಗ ಹಪ್ಪಳ, ಬಜ್ಜಿ ಸಹ ಸಿಗುತ್ತಿತ್ತು.

ಜರ್ಮನಿಗೆ ಹೋದ ನಾಲ್ಕು ದಿನ ಹೋಟೆಲ್‌ನಲ್ಲಿ ಇದ್ದುದರಿಂದ ಹಿಂದೆ ತಿಳಿಸಿದಂತೆ ಒಬ್ಬರ ಸಹಾಯದಿಂದ ಸಸ್ಯಾಹಾರ ಸಿಗುವಂತೆ ಏರ್ಪಡಿಸಿದ್ದೆ. ಅನಂತರ ಒಂದು ಕುಟುಂಬದವರ ಜೊತೆಯಲ್ಲಿರಬೇಕಾಯಿತು. ಬರೀ ಬ್ರೆಡ್ ಮತ್ತು ಹಣ್ಣುಗಳನ್ನು ತಿಂದು ಕೆಲವು ದಿನ ಕಾಲ ಕಳೆದೆ. ಕಡೆಗೆ ಒಂದು ದಿನ ಅಕ್ಕಿ ಸಿಗುತ್ತದೆ ಎಂದು ತಿಳಿದು, ತಂದು ಮನೆಯಲ್ಲಿ ಅನ್ನ-ಸಾರು ಮಾಡಿ ಊಟಮಾಡಿದೆ. ಬಂದ ಒಂದು ತಿಂಗಳಿಗೆ ಊಟಮಾಡಿದಂತೆ ಆಯಿತು.

ತಾಯಿಯವರು ಕೊಟ್ಟ ಮೆಣಸಿನ ಪುಡಿ, ಚಟ್ನಿಪುಡಿ ಉಪಯೋಗಕ್ಕೆ ಬಂತು. ಅವರು ಕಳುಹಿಸಿದ ಉಪ್ಪಿನಕಾಯಿಯ ಬೆಲೆ ಆ ದಿನ ತಿಳಿಯಿತು. ನಾನಿದ್ದ ಕುಟುಂಬದವರಿಗೆ ರುಚಿ ನೋಡಲೆಂದು ಸ್ವಲ್ಪ ಉಪ್ಪಿನಕಾಯಿ ಕೊಟ್ಟೆ. ಯಾವತ್ತೂ ಕಾರ ತಿನ್ನದ ಈ ಜನ ಆ ಉಪ್ಪಿನಕಾಯಿ ಬಾಯಿಗಿಟ್ಟ ಒಡನೆ ಹೊರತೆಗೆದು ೭-೮ ಲೋಟ ನೀರು-ವೈನು ಕುಡಿದರು ! ಕಾರ ತಡೆಯಲಾರದೆ ಹೋದರು. ಜೊತೆಗೆ ನಾನು ತಿನ್ನುವುದು ನೋಡಿ ಅವರ ಕಣ್ಣಿನಲ್ಲಿ ನೀರು ಬರುತ್ತಿತ್ತು ! ಹೀಗೆ ಅಭ್ಯಾಸವಾದದ್ದು ಕಡೆಗೆ ಒಂದು ತಿಂಗಳಲ್ಲಿ ಇದ್ದ ಚಟ್ನಿಪುಡಿ, ಉಪ್ಪಿನಕಾಯಿ ಎಲ್ಲ ಮುಗಿದುಹೋಯಿತು. ನಾನು ಅರ್ಧ ತಿಂದಿದ್ದರೆ ನಾನು ಇದ್ದ ಕುಟುಂಬದವರು ಅರ್ಧ ಮುಗಿಸಿದರು. ಅವರಿಗೆ ಕಡೆಕಡೆಗೆ ರುಚಿ ಹತ್ತಿತು.

ಬ್ರೌನ್ಸ್‌ವೈಗ್ ಸೇರಿದ ಮೂರನೆ ದಿನ ಅಲ್ಲಿ ಮೊದಲಿನಿಂದಲೂ ಓದಿಕೊಂಡಿದ್ದ ಒಬ್ಬ ಬಂಗಾಳೀ ಯುವಕನನ್ನು ಹುಡುಕಿಕೊಂಡು ಹೊರಟೆ. ಆತ ಸಿಕ್ಕಿದ್ದು ಒಂದು ಸಂತೋಷ. ಆತ ಆಗಲೆ ೩ ವರ್ಷದಿಂದ ಇಲ್ಲಿ ಇದ್ದಾನೆ. ಚೆನ್ನಾಗಿ ಜರ್ಮನ್ ಭಾಷೆ ಮಾತನಾಡಬಲ್ಲ. ಆತನಿಗೆ ನಾನು ಸಸ್ಯಹಾರಿಯೆಂದೂ ಮಾದಕ ಪಾನಗಳನ್ನು ಸೇವಿಸುವುದಿಲ್ಲವೆಂದೂ ತಿಳಿಸಿ ಇಲ್ಲಿ ಏನು ಸಿಗುತ್ತದೆ, ಹೇಗೆ ಇರಬೇಕು, ಎಲ್ಲವನ್ನೂ ಕೇಳಿದೆ. ಆತ "ನಾನು ೩ ವರ್ಷದಿಂದ ಇಲ್ಲಿ ಇದ್ದೇನೆ. ನಿಮ್ಮ ಮಡಿಯನ್ನೆಲ್ಲಾ ಸಮುದ್ರದಲ್ಲಿ ಹಾಕಿ ಬನ್ನಿ. ಇಲ್ಲಿಗೆ ಬಂದಮೇಲೆ ಮಾಂಸ ತಿನ್ನಬೇಕು, ಕುಡಿಯಬೇಕು; ಇಲ್ಲದಿದ್ದರೆ ನಿಮಗೆ ಚಳಿ ತಡೆಯಲು ಕಷ್ಟ. ನಾನೂ ನಿಮ್ಮ ಹಾಗೇ ಇದ್ದೆ. ಈಗ ಎಲ್ಲವನ್ನೂ ತಿನ್ನುತ್ತೇನೆ. ಇಲ್ಲಿಗೆ ಬಂದಮೇಲೆ ಜರ್ಮನಿಯ ದೇಶದ ಜನರ ಹಾಗೆ ನೀವೂ ಇರಬೇಕು. ನಿಮ್ಮ ಮಡಿ ಎಲ್ಲ ಇಲ್ಲಿ ನಡೆಯುವುದಿಲ್ಲ" ಎಂದು ಹೇಳಿದ. ನನಗೆ ಅರ್ಧ ದಿಗಿಲು ಆಯಿತು. ಎಷ್ಟಾದರೂ ಅನುಭವಸ್ಥ. ನಾನು ಇನ್ನೂ ಜರ್ಮನಿಯ ಚಳಿ ನೋಡಿಲ್ಲ. "ಮುಂದಿನ ಸಾರಿ ಬನ್ನಿ. ಟೀಯಲ್ಲಿ ರಮ್ ಸೇರಿಸಿ ಕೊಡುತ್ತೇನೆ. ಹೇಗೆ ಇರುತ್ತೆ ನೋಡುವಿರಂತೆ" ಎಂದು ಬೇರೆ ಹೇಳಿದ. ಆ ದಿನ ಆತನನ್ನು ನೋಡಿದ್ದು ಪುನಃ ಜರ್ಮನಿಯಿಂದ ನಾನು ಹಿಂದಕ್ಕೆ ಬರುವವರೆಗೆ ಆತನನ್ನು ನೋಡಲಿಲ್ಲ.

ಜರ್ಮನಿಗೆ ಹೋದ ಒಡನೆಯೇ ಚಳಿ ಪ್ರಾರಂಭವಾಯಿತು. ಏನೇನು ಆಹಾರ ಸಿಗುತ್ತದೆ ಎಂಬುದು ಸರಿಯಾಗಿ ತಿಳಿಯದು. ಬ್ರೆಡ್, ಹಾಲು, ಹಣ್ಣು ಸ್ವಲ್ಪವೇ ತೆಗೆದುಕೊಳ್ಳುತ್ತಿದ್ದುದರಿಂದಲೂ ಸುತ್ತಲ ವಾತಾವರಣ ಒಗ್ಗದೆ ಇದ್ದುದರಿಂದಲೂ ಎಲ್ಲಾ ಕಡೆಯಲ್ಲೂ ನನ್ನ ಮನಸ್ಸಿಗೆ ವಿರೋಧ

ವಾದ ಮಾತುಗಳೇ ಕೇಳುತ್ತಿದ್ದುದರಿಂದಲೂ ಸಣ್ಣಗಾಗಲು ಪ್ರಾರಂಭಿಸಿದೆ. ಇದನ್ನು ನೋಡಿ ನಾನು ಇದ್ದ ಕುಟುಂಬದವರು "ನೀನು ಹೀಗೆ ಆಹಾರ ತೆಗೆದುಕೊಳ್ಳುತ್ತಿದ್ದರೆ ಈ ಚಳಿ ತಡೆಯಲಾಗದೆ ಸಣ್ಣಗಾಗಿಬಿಡುತ್ತೀ. ನಿನ್ನ ಕೈಯಲ್ಲಿ ಚಳಿ ತಡೆಯಲು ಕಷ್ಟ. ನೀನು ತೆಗೆದುಕೊಳ್ಳುವ ಆಹಾರ ಸಾಲದು. ಬೆಳಗ್ಗೆ ಮೊಟ್ಟೆ ತೆಗೆದುಕೊಳ್ಳಬೇಕು. ಸ್ವಲ್ಪ ವೈನ್ ತೆಗೆದುಕೊ. ಮಧ್ಯಾಹ್ನ ಸ್ವಲ್ಪ ಮಾಂಸಾಹಾರ ಪ್ರಾರಂಭಿಸು. ಇಲ್ಲದಿದ್ದರೆ ನೀನು ಮುಂದೆ ಬರುವ ಚಳಿ ತಡೆಯಲಾರೆ. ಕಾಯಿಲೆ ಬಂದುಬಿಡುತ್ತದೆ" ಎಂದು ಹೆದರಿಸಲು ಪ್ರಾರಂಭಿಸಿದರು. ಎಲ್ಲಿ ಯಾರನ್ನು ಕೇಳಿದರೂ ಇದೇ ಮಾತು ಹೇಳುವವರೇ. ಮನಸ್ಸಿಗೆ ಬೇಸರ ಆಯಿತು. ನಾನು ಹಿಡಿದ ದಾರಿ ಬಿಡಬಾರದೆಂದು ಮನಸ್ಸು. ಅವರಿಗೆ ಹೇಳಿದೆ : "ನಾನು ಸತ್ತರೂ ಚಿಂತೆ ಇಲ್ಲ, ಮಾಂಸಾಹಾರ ಮುಟ್ಟುವುದಿಲ್ಲ." ಗಾಂಧೀಜಿಯ ಆತ್ಮಕಥೆ ನನಗೆ ನೆರವು ನೀಡುತ್ತಿತ್ತು. ಪುನಃ ಆತ್ಮಕಥೆಯನ್ನು ಓದಿದೆ. ಓದಿದಷ್ಟು ಬಲ ಕೊಡುತ್ತಿತ್ತು.

ಬೊಂಬಾಯಿಯ ಶ್ರೀ ಪ್ರವೀಣ ಚಂದ್ರ ಷಾ ಹ್ಯಾಂಬುರ್ಗ್‌ನಿಂದ ಬ್ರೌನ್ಸ್‌ವೈಗಿಗೆ ಬಂದಿದ್ದರು. ಅವರು ಆಗಲೇ ೯ ತಿಂಗಳಿಂದ ಜರ್ಮನಿಯಲ್ಲಿ ಇದ್ದರು. ನನ್ನ ಆಹಾರ ಮತ್ತು ಇತರ ತೊಂದರೆಗಳನ್ನು ನಾನು ಅವರಿಗೆ ತಿಳಿಸಿದೆ. ಅವರು ಹೇಳಿದರು: "ನಾನು ಜೈನ್, ಗುಜರಾತಿ. ನಾನೂ ಸಸ್ಯಾಹಾರಿ. ಮೊಟ್ಟೆ ತೆಗೆದುಕೊಳ್ಳುವುದಿಲ್ಲ. ೯ ತಿಂಗಳಿಂದ ಹ್ಯಾಂಬುರ್ಗ್ ನಲ್ಲಿ ಇದ್ದೇನೆ. ಇದುವರೆಗೂ ಯಾವ ಮಾದಕ ಪದಾರ್ಥಗಳನ್ನೂ ಮುಟ್ಟಿಲ್ಲ. ಸಿಗರೇಟು ಸೇದುವುದಿಲ್ಲ. ಇದರಿಂದ ಯಾವ ಕಾಯಿಲೆಯೂ ಬಂದಿಲ್ಲ. ತಿನ್ನುವ ಆಹಾರವನ್ನೇ ಚೆನ್ನಾಗಿ ತಿನ್ನಿ. ಬೆಣ್ಣೆ, ಹಾಲು, ಹಣ್ಣು ಹೆಚ್ಚು ತೆಗೆದುಕೊಳ್ಳಿ. ಚಳಿ ತಡೆಯಬೇಕಾದರೆ ಹೊಟ್ಟೆ ತುಂಬಾ ತಿನ್ನಬೇಕು. ಹೊಟ್ಟೆ ಭರ್ತಿಯಾಗಿದ್ದರೆ ಎಲ್ಲಾ ಚಳಿ ತಡೆಯಬಹುದು. ಸಸ್ಯಾಹಾರಿಗಳಿಗೆ ಬೇಕಾದ ಆಹಾರವಸ್ತುಗಳು ಬೇಕಾದಷ್ಟಿವೆ ಉತ್ಸಾಹದಿಂದ ಇರಿ" ಎಂದು ಹೇಳಿ ಧೈರ್ಯಕೊಟ್ಟರು. ಮತ್ತೆ ಯಾವ ಯಾವ ಆಹಾರ ಸಿಗುತ್ತದೆ ಎಂದು ಬರೆದುಕೊಟ್ಟರು. ಅವರ ಈ ಮಾತು ನಿಜವಾಗಿಯೂ ನನಗೆ ಧೈರ್ಯ ಕೊಟ್ಟಿತು.

ಸಸ್ಯಾಹಾರಿಗಳ ಸಂಘ ಒಂದನ್ನು ನಾವು ಜರ್ಮನಿಯಲ್ಲಿ ಕಾಣಬಹುದು. ಹಿಟ್ಲರ್ ಸಸ್ಯಾಹಾರಿ. ಅದರಿಂದ ಆತ ಸಸ್ಯಾಹಾರದ ಪ್ರಚಾರ ಮಾಡುತ್ತಿದ್ದ. ಇದರಿಂದ ಈ ಸಸ್ಯಾಹಾರಿಗಳ ಸಂಘದ ಅಂಗಡಿಗಳು ಎಲ್ಲಾ ಕಡೆಯಲ್ಲೂ ಇದ್ದವು. ಈ ಸಸ್ಯಾಹಾರಿ ಸಂಘಕ್ಕೆ ಸುಮಾರು ೨ ಸಾವಿರ ಜನ

ಸದಸ್ಯರಿದ್ದಾರೆ. ನಾನೂ ಸದಸ್ಯನಾದೆ. ವಾರಪತ್ರಿಕೆಯೊಂದನ್ನು ಸಸ್ಯಾಹಾರ ಪ್ರಚಾರಕ್ಕಾಗಿ ಹೊರಡಿಸುತ್ತಾರೆ. ಜೊತೆಗೆ ಸಸ್ಯಾಹಾರವನ್ನು ಹೇಗೆ ಉಪಯೋಗಿಸಬೇಕೆಂಬ ವಿಚಾರವನ್ನು ಕುರಿತು ಅನೇಕ ಪುಸ್ತಕಗಳನ್ನು ಹೊರಡಿಸಿ ಸುಲಭ ಬೆಲೆಗೆ ಮಾರುತ್ತಾರೆ. ವರ್ಷಕ್ಕೊಮ್ಮೆ ಸಮ್ಮೇಳನ ಸೇರುತ್ತಾರೆ. ನಾನು ಕಾಗದ ಬರೆದಾಗ ಬಹಳ ಸಂತೋಷಪಟ್ಟು ನನ್ನ ಧ್ಯೇಯಕ್ಕೆ ತಮ್ಮ ಅಭಿಪ್ರಾಯವನ್ನು ಸೂಚಿಸಿ ನನ್ನನ್ನು ಸದಸ್ಯನನ್ನಾಗಿ ತೆಗೆದುಕೊಂಡರು. ಅನೇಕ ಪುಸ್ತಕಗಳನ್ನು ಕೊಟ್ಟಿದ್ದಲ್ಲದೆ ಅದೇ ಊರಿನಲ್ಲಿದ್ದ ಸಸ್ಯಾಹಾರಿಗಳ ವಿಳಾಸವನ್ನೂ ಕೊಟ್ಟು ಪರಿಚಯ ಮಾಡಿಕೊಟ್ಟರು ಒಬ್ಬ ಸದಸ್ಯರನ್ನು ನೋಡಿದಾಗ ಅವರು ನನಗೆ ಆಹಾರದ ವಿಚಾರದಲ್ಲಿ ಅನೇಕ ಸಲಹೆಗಳನ್ನು ಕೊಟ್ಟರು. ತಾವು ೨೦ ವರ್ಷದಿಂದ ಸಸ್ಯಾಹಾರಿ; ತಮಗೆ ಯಾವ ರೋಗ ರುಜಿನಗಳೂ ಬಂದಿಲ್ಲವೆಂದು ತಿಳಿಸಿದರು. ಬಹಳ ಸಂತೋಷವಾಯಿತು.

ಸಸ್ಯಾಹಾರಿ ಸಂಘದ ಜೊತೆಗೆ ಪ್ರತಿ ಊರಿನಲ್ಲೂ ಸಸ್ಯಾಹಾರದ ಹೋಟೆಲುಗಳು ಇವೆ. ಇಲ್ಲಿ ಶುದ್ಧ ಸಸ್ಯಾಹಾರ ಸಿಗುತ್ತದೆ.

ಮೊದಲು ಸಸ್ಯಾಹಾರ ಯಾವುದೂ ಸಿಗುವುದಿಲ್ಲ ಎಂಬ ಭಾವನೆ ಇತ್ತು ನನಗೆ. ಭಾಷೆ ಬಂದಮೇಲೆ ನೋಡಿದರೆ ಹೆಚ್ಚುಕಡಮೆ ಎಲ್ಲಾ ಸಿಗುತ್ತದೆ. ಸ್ವಲ್ಪ ಹುಡುಕಬೇಕು, ಅಷ್ಟೆ. ಒಂದು ಪಟ್ಟಿ ಹಾಕಬಹುದು: ಅಕ್ಕಿ, ತೊಗರಿ ಬೇಳೆಯ ತರದ ಬೇಳೆ, ಹೆಸರುಕಾಳು, ಅವರೇಕಾಳು, ಗೋದಿ ರವೆ, ದ್ರಾಕ್ಷಿ, ಬಾದಾಮಿ, ಹುರುಳಿಕಾಯಿ, ೩-೪ ತರದ ಕೋಸು, ಮೂಲಂಗಿ, ಬೀಟ್‌ರೂಟ್, ಆಲೂಗೆಡ್ಡೆ, ಬಾಳೆಹಣ್ಣು, ಸೇಬು, ಬಿಳಿಯ ಮತ್ತು ಕರಿಯ ದ್ರಾಕ್ಷಿ, ಕಿತ್ತಳೆಹಣ್ಣು, ಟಿನ್‌ನಲ್ಲಿ ಶೇಖರಿಸಿದ ಅನಾನಸ್, ಈರುಳ್ಳಿ, ತೆಂಗಿನಕಾಯಿ, ಬ್ರೆಡ್, ಬಿಸ್ಕತ್, ಟೊಮಾಟೊ, ಹಾಲು, ಮೊಸರು ಇತ್ಯಾದಿ. ಆದರೆ ಎಲ್ಲದಕ್ಕೂ ಬೆಲೆ ಹೆಚ್ಚು. ಬೆಲೆ ಹೆಚ್ಚಾದರೂ ಆಹಾರಕ್ಕೆ ತೊಂದರೆಪಡಬೇಕಾಗಿಲ್ಲ.

ಭಾನುವಾರ ರಜಾ. ಆವತ್ತು ಮನೆಯಲ್ಲಿ ಕುಟುಂಬದವರ ಜೊತೆಯಲ್ಲಿ ಇರುತ್ತಿದ್ದೆ. ಅವರು ಮಾಂಸಾಹಾರಿಗಳು. ಅವರ ಜೊತೆಯಲ್ಲಿ ಊಟಕ್ಕೆ ಸೇರಲು ಆಗುತ್ತಿರಲಿಲ್ಲ. ನಾನು ಇದ್ದ ಕುಟುಂಬದವರು ಅವರ ಅಡಿಗೆಯ ಮನೆಯಲ್ಲಿ ನನಗೆ ಮಾಡಿಕೊಳ್ಳಲು ಅವಕಾಶ ಕೊಟ್ಟಿದ್ದರು. ಕೆಲವು ಪಾತ್ರೆಗಳನ್ನು ಸಹ ಕೊಟ್ಟಿದ್ದರು. ನಾನು ಅಡಿಗೆ ಮಾಡುವುದೆಂದರೆ ಅವರೆಲ್ಲರಿಗೂ ಕುತೂಹಲ. ಹಿಂದೂದೇಶದ ಈ ಸಸ್ಯಾಹಾರಿ ಏನು ಅಡಿಗೆ ಮಾಡುತ್ತಾನೆ ನೋಡಬೇಕೆಂದು ಅಕ್ಕಪಕ್ಕದ ಮನೆಯ ಹೆಂಗಸರು ಬಂದು ನೋಡಿ ಹೋಗು

ತ್ತಿದ್ದರು. ನನ್ನ ತಾಯಿ ಕಳುಹಿಸಿಕೊಟ್ಟ ಸಾರಿನ ಪುಡಿ ಬಹಳ ಸಹಾಯಕ ವಾಗಿತ್ತು. ಅನ್ನ ಸಾರು ಮಾಡಿ ಆ ಕುಟುಂಬದವರಿಗೂ ಕೊಡುತ್ತಿದ್ದೆ. ೨–೩ ತಿಂಗಳವರೆಗೆ ಸಪ್ಪೆ ತಿಂದೂ ತಿಂದೂ ನಾನು ತಂದಿದ್ದ ಸಾರಿನ ಪುಡಿ ಕಾರ. ಚಪಾತಿ, ಬಾದಾಮಿ ಹಾಲು, ಉಪ್ಪಿಟ್ಟು ಹೀಗೆ ಅನೇಕ ತಿಂಡಿ ಮಾಡಿ ತಿನ್ನುವುದರ ಜೊತೆಗೆ ಕುಟುಂಬದವರಿಗೂ ಕೊಟ್ಟು ರುಚಿ ತೋರಿಸು ತ್ತಿದ್ದೆ. ಮೊದಲು ಕಾರ ಎಂದು ಹೇಳಿದರೂ ಆಮೇಲೆ ಅವರಿಗೂ ಕಾರ ತಿನ್ನುವ ಶಕ್ತಿ ಬಂತು. ಅದರ ರುಚಿ ಹಿಡಿದರು. ಒಂದು ಭಾನುವಾರ ಬೇಳೆ ತರಕಾರಿ ಎಲ್ಲಾ ಹಾಕಿ, ಹುಳಿ ಮಾಡಿದೆ. ಇಲ್ಲಿಯ ಜನ ತೆಂಗಿನಕಾಯಿ ತಿನ್ನುವುದೇ ಕಡಮೆ. ಕಾರಣ, ಅದರ ಬೆಲೆ ೧೪ ರೂಪಾಯಿ. ಇದನ್ನು ಒಡೆಯುವುದು ಹೇಗೆ ಎಂಬುದೇ ಕೆಲವರಿಗೆ ತಿಳಿಯದು. ಕೆಲವರಿಗೆ ಅದು ಹೇಗೆ ಬೆಳೆಯುತ್ತದೆ ಎಂಬುದೂ ತಿಳಿಯದು. ಸಕ್ಕರೆ, ತೆಂಗಿನಕಾಯಿ, ಹಾಲು ಎಲ್ಲ ಹಾಕಿ ಸಕ್ಕರೆಪೊಂಗಲು ಮಾಡಿದೆ. ಅಡಿಗೆ ಮಾಡುವುದು ಎಲ್ಲರಿಗೂ ಬರಬೇಕು ಅನಿಸಿತು. ಜರ್ಮನರೆಲ್ಲರಿಗೂ ಅಡಿಗೆ ಮಾಡಲು ಬರುತ್ತದೆ. ಹಣ್ಣುಗಳನ್ನೆಲ್ಲ ಬೆರೆಸಿ ರಸಾಯನ ಮಾಡಿದೆ. ಬಾದಾಮಿ ತಂದು ಯಂತ್ರ ದಿಂದ ಪುಡಿ ಮಾಡಿ, ಹಾಲು ತಂದು ಬಾದಾಮಿಹಾಲು ತಯಾರುಮಾಡಿ, ಜೊತೆಗೆ ತೆಗೆದುಕೊಂಡು ಹೋಗಿದ್ದ ಕೇಸರಿ, ಏಲಕ್ಕಿ ಎಲ್ಲವನ್ನು ಹಾಕಿ ವಾಸನೆ ಕೊಟ್ಟೆ. ೧೨ ಗಂಟೆಗೆ ಎಲ್ಲರೂ ಊಟಕ್ಕೆ ಕುಳಿತೆವು. ಅವರೇ ಎಲ್ಲ ವನ್ನು ಸಿದ್ಧಗೊಳಿಸಿದರು. ನಾಲಗೆಗೆ ರುಚಿ ಹತ್ತಿತು. ಬಹಳ ಸಂತೋಷ ದಿಂದ ಊಟಮಾಡಿ ಮುಗಿಸಿದರು. ಬಾದಾಮಿಹಾಲನ್ನು ಮೂರು ದಿನ ರೆಫ್ರಿಜಿರೇಟರ್‌ನಲ್ಲಿ ಇಟ್ಟುಕೊಂಡು ಕುಡಿದರು. ಮನೆಯ ಯಜಮಾನಿ, "ಪರವಾಗಿಲ್ಲ, ಭಾರತೀಯರು ಇಷ್ಟುರಮಟ್ಟಿಗೆ ಅಡಿಗೆ ಮಾಡಬಲ್ಲರು! ಎಷ್ಟು ರುಚಿಯಾಗಿದೆ! ಸಸ್ಯಾಹಾರ ಎಷ್ಟು ಚೆನ್ನಾಗಿದೆ!" ಎಂದು ಬೆನ್ನುತಟ್ಟಿದಳು. ಸಂಜೆಗೆ ನಾನು ಬರುವುದು ೮ ಗಂಟೆಯಾಯಿತು. ಅಷ್ಟು ಹೊತ್ತಿಗೆ ಅವರೆಲ್ಲರೂ ಊಟಮಾಡಿ ಮುಗಿಸಿದ್ದರು. ನಾನು ಬಂದ ಒಡನೆಯೇ ಮನೆಯ ಯಜಮಾನಿ, "ಒಳ್ಳೆಯ ಕೆಲಸಮಾಡಿದೆ. ನಿನ್ನ ಸಿಹಿ ಅನ್ನ ತಿಂದು, ಬಾದಾಮಿಹಾಲು ಕುಡಿದಮೇಲೆ ನನ್ನ ಬ್ರೆಡ್ ಮತ್ತು ಮಾಂಸದಲ್ಲಿ ರುಚಿಯೆ ಇಲ್ಲ; ತಿನ್ನುವುದಕ್ಕೆ ಆಗುವುದಿಲ್ಲ. ಹೀಗೆ ಒಂದು ಎರಡು ವರ್ಷ ನೀನು ಇಲ್ಲೇ ಇದ್ದರೆ ನಮ್ಮನ್ನೆಲ್ಲಾ ಸಸ್ಯಾಹಾರಿಯಾಗಿ ಮಾಡಿಬಿಡುತ್ತಿ" ಎಂದು ಹೇಳಿದರು. "ಸರಿಯಾಗಿ ಮಾಡಿದರೆ ಸಸ್ಯಾಹಾರದ ರುಚಿ ಮಾಂಸಾಹಾರಕ್ಕೆಲ್ಲಿ ಬಂತು?" ಎಂದು ಹೇಳಿ ನಕ್ಕು ಸುಮ್ಮನಾದೆ.

ಸಸ್ಯಾಹಾರ, ಮಾಂಸಾಹಾರದ ವಿಚಾರದಲ್ಲಿ ಬಹಳ ವಾಗ್ವಾದಗಳು ನಡೆಯುತ್ತಿದ್ದವು. ಅನೇಕ ಸಾರಿ ಅವರಿಗೆ ಸಮಾಧಾನದ ಉತ್ತರ ಸಹ ಕೊಡುತ್ತಿದ್ದೆ. ನನ್ನ ಉತ್ತರಗಳನ್ನು ಅನೇಕರು ಸರಿ ಎಂದು ಒಪ್ಪಿಕೊಂಡರು. ನಾನು ಗಾಂಧೀ ಸಾಹಿತ್ಯ ಸಂಘದಲ್ಲಿ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರ ಜೊತೆಗೆ ಪ್ರಶ್ನೋತ್ತರಗಳನ್ನು ನಡೆಸುವಾಗ ಆಗ ಸಿಕ್ಕಿದ್ದ ಈ ಉತ್ತರಗಳು ನನಗೆ ಬಹಳ ಸಹಾಯಮಾಡುತ್ತಿದ್ದವು. ಆಹಾರದಲ್ಲಿ ಒಂದು ದೊಡ್ಡ ಕ್ರಾಂತಿಯಾಗಿದೆ. ವಿಮಾನ ಬಂದಮೇಲೆ ವಿಮಾನದಲ್ಲಿ ಹೋಗಿ ರೂಢಿಯಾದ ವನು ಎತ್ತಿನ ಗಾಡಿಯಲ್ಲಿ ಹೋಗಲು ಇಷ್ಟಪಡುತ್ತಾನೆಯೇ? ಎಂದಿಗೂ ಇಲ್ಲ. ಹಾಗೇ ಸಸ್ಯಾಹಾರಿಯಾದವನಿಗೆ ಮಾಂಸಾಹಾರ ಹಿಡಿಸುವುದಿಲ್ಲ. ಮಾನವನಲ್ಲಿ ಆಹಾರದ ಕ್ರಾಂತಿಯಾಗಿದೆ. ಹಿಂದೆ ಆಹಾರವನ್ನೇ ಬೆಳೆಯದೆ ಕಾಡಿನಲ್ಲಿ ಜೀವಿಸುವಾಗ ಮನುಷ್ಯ ಎಲ್ಲಾ ಪ್ರಾಣಿಗಳನ್ನೂ ತಿನ್ನುತ್ತಿದ್ದ. ಯಾವುದೂ ಸಿಗದಿದ್ದರೆ ಮನುಷ್ಯನನ್ನೇ ಕೊಂದು ತಿನ್ನುತ್ತಿದ್ದ. ಅನಂತರ ಮನುಷ್ಯನನ್ನು ತಿನ್ನುವ ಅಭ್ಯಾಸ ಹೋಗಿ ಪ್ರಾಣಿಗಳನ್ನು ಮಾತ್ರ ತಿನ್ನುವ ರೂಢಿಯಾಯಿತು. ಸಸ್ಯಾಹಾರಿ ಪ್ರಾಣಿಗಳನ್ನು ತಿನ್ನುವ ರೂಢಿಯಾಯಿತು. ಮನುಷ್ಯ ತಿನ್ನುವ ಪ್ರಾಣಿಗಳು ಎಲ್ಲವೂ ಸಸ್ಯಾಹಾರಿಗಳೇ: ಕುರಿ, ಮೇಕೆ, ಹಸು, ಕೋಳಿ, ಕುದುರೆ, ಮೀನು, ಜಿಂಕೆ, ಮೊಲ ಎಲ್ಲ ಸಸ್ಯಾಹಾರಿಗಳೇ. ಯಾರೂ ಹುಲಿ, ಸಿಂಹ ತಿನ್ನುವುದಿಲ್ಲ. ಅನಂತರ ಮಾನವನ ಬುದ್ಧಿ ಬೆಳೆದು ಸುಲಭವಾಗಿ ಸಿಗುವ ಹಣ್ಣು, ಬೆಳೆಯಬಹುದಾದ ಗೋದಿ, ಬತ್ತ, ಇತರ ಧಾನ್ಯಗಳನ್ನು ಉಪಯೋಗಿಸಲು ಪ್ರಾರಂಭಿಸಿದ. ಹೀಗೆ ಆಹಾರದಲ್ಲಿ ಕ್ರಾಂತಿ ಯಾಗಿ ಸಸ್ಯಾಹಾರವನ್ನು ತಿನ್ನುವ ರೂಢಿ ಬಂತು. ಇದು ಎಲ್ಲಿಗೆ ಮುಟ್ಟು ತ್ತದೆಯೋ! ಆಹಾರದ ವಿಚಾರದಲ್ಲಿ ಬೇರೆಬೇರೆ ಜನಾಂಗದವರು ಬೇರೆಬೇರೆ ಶ್ರೇಣಿಯಲ್ಲಿ ನಿಂತಿದ್ದಾರೆ. ಸಸ್ಯಾಹಾರಿಗಳು ಕೊನೆಯ ಮೆಟ್ಟಲನ್ನು ಮುಟ್ಟಿ ದ್ದಾರೆ. ಮಾಂಸಾಹಾರಿಗಳಿಗೆ ಆಹಾರದ ಬದಲಾವಣೆ ಬಹಳ ಕಡಮೆ. ಸಸ್ಯಾಹಾರಿಗಳಿಗೆ ಪ್ರತಿ ಊಟಕ್ಕೂ ಬದಲಾವಣೆ ಇದೆ.

೭. ಮಂಜಿನ ಮುಸುಕಿನಲ್ಲಿ

ದೃಢನಿಶ್ಚಯವುಳ್ಳವನನ್ನು ಕಂಡು ಕೆಲಸವೇ ಹೆದರುತ್ತದೆ.

—ಚೀನೀ ಗಾದೆ

ಯೂರೋಪು ದೇಶದಲ್ಲಿ ಚಳಿ ಹೆಚ್ಚು. ನಮ್ಮ ದೇಶದಲ್ಲಿ ಇದ್ದವರಿಗೆ ಬಿಸಿಲಿನ ಮತ್ತು ಚಳಿಗಾಲದ ವ್ಯತ್ಯಾಸ ತಿಳಿಯುವುದು ಕಷ್ಟ. ಜರ್ಮನಿಯಲ್ಲಿ ಹಿಂದೆ ಇದ್ದು ಬಂದವರು ಒಬ್ಬರು ಹೇಳಿದರು: ಜರ್ಮನಿಯಲ್ಲಿ ಬಹಳ ಚಳಿ. ೧೮° ಎಫ್.ವರೆಗೆ ಹೋಗುತ್ತದೆ. ತಡೆಯುವುದು ಕಷ್ಟ. ಬೆಚ್ಚಗೆ ಬಟ್ಟೆ ಹಾಕಿರಬೇಕೆಂದು. ಬೆಂಗಳೂರಿನಲ್ಲಿ ಬಹಳ ಚಳಿ ಎಂದರೆ ೫೮° ಎಫ್.ಗೆ ಬರುತ್ತದೆ. ಇಲ್ಲಿ ೧೮° ಎಫ್. ಎಂದು ಹೇಳಿದ್ದನ್ನು ಕೇಳಿ ಸ್ವಲ್ಪ ಹೆದರಿಕೆ ಆಯಿತು. ಚಳಿಗಾಗಿ ಹೊಲಿಸಿದ್ದ ಬಟ್ಟೆಯೇ ಒಂದು ಪೆಟ್ಟಿಗೆ ತುಂಬಿತು. ನಾನು ಹೊರಟದ್ದು ಡಿಸೆಂಬರ್ ಮೊದಲಲ್ಲಿ. ಆಗ ಯೂರೋಪಿನಲ್ಲಿ ಚಳಿಗಾಲ ಪ್ರಾರಂಭ. ಹಡಗಿನಲ್ಲಿ ಹೋಗುವಾಗ ಸೂಯೆಜ್‌ನಿಂದ ಪೋರ್ಟ್ ಸೈಯದ್ ವರೆಗೆ ಸ್ವಲ್ಪ ಚಳಿಯಾಗುವುದೆಂದು ಹೇಳಿದರು. ಜಿನೋವಾದಲ್ಲಿ ವಿಪರೀತ ಚಳಿ ಎಂದು ತಿಳಿಸಿದರು. ಜಿನೋವಾದಲ್ಲಿ ಇಳಿದು ರೈಲು ಹತ್ತಬೇಕಾದರೆ ಉಣ್ಣೆಯ ನಿಲುವುಕೋಟನ್ನು ಧರಿಸಬೇಕಾಯಿತು. ಕೈಗೆ ಚರ್ಮದ ಕೈಚೀಲ ಹಾಕಿದೆ. ರೈಲು ಸ್ವಿಟ್ಜರ್ಲೆಂಡನ್ನು ದಾಟುವಾಗ ಬೆಟ್ಟದ ಮೇಲಿನ ಮಂಜು ನೋಡಿ ಹೆದರಿಕೆಯಾದರೂ ಆ ದೃಶ್ಯ ನೋಡಲು ಆನಂದವಾಗಿತ್ತು. ಜರ್ಮನಿಯ ಗಡಿ ದಾಟಿದಮೇಲೆ ಮಂಜು ಹೂವಿನಂತೆ ಸುರಿಯುವುದನ್ನು ಮೊದಲನೆ ಸಾರಿ ನೋಡಿದೆ. ಆದರೆ ರೈಲು ಇಳಿಯುವ ಪ್ರಯತ್ನಮಾಡಲಿಲ್ಲ.

ಬ್ರೌನ್ಸ್‌ವೈಗ್ ಸೇರಿದಮೇಲೆ ಸ್ವಲ್ಪ ಚಳಿ ಇದ್ದರೂ ಮಂಜು ಬಿದ್ದಿರಲಿಲ್ಲ. ಕ್ರಿಸ್ಮಸ್ ಹಬ್ಬಕ್ಕೆ ಮಂಜು ಬರಬೇಕೆಂದು ಎಲ್ಲರೂ ಹೇಳುತ್ತಿದ್ದರು. ಆದರೆ ಮಂಜು ಬರಲಿಲ್ಲ; ಚಳಿ ಮಾತ್ರ ಇತ್ತು. ಜನವರಿ ಮೊದಲಿಗೆ ಮಂಜು ಸುರಿಯಲು ಪ್ರಾರಂಭಿಸಿತು. ಹೂವಿನ ಮಳೆ ಸುರಿದಂತೆ ಸುರಿಯುತ್ತದೆ. ೨–೩ ಅಡಿಯವರೆಗೆ ಮಂಜು ಬೀಳುತ್ತದೆ. ಬೀಳುತ್ತಿದ್ದಂತೆಯೇ ಸರ್ಕಾರ ದವರು ರಸ್ತೆಗಳಲ್ಲಿ ಬೀಳುವ ಮಂಜನ್ನು ತೆಗೆದು ಕಾರುಗಳು, ಸೈಕಲುಗಳು, ಜನರು ಜಾರಿ ಬೀಳದಂತೆ ಮರಳು ಎರಚುವ ಏರ್ಪಾಡು ಮಾಡುತ್ತಾರೆ. ನಾನು ವಾಸಮಾಡುತ್ತಿದ್ದ ಮನೆಯ ಮೇಲೆ ಸುಮಾರು ೧೦ ಅಡಿ ಎತ್ತರ

ಮಂಜು ಬೀಳುತ್ತಿತ್ತು. ಆದರೆ ಹೆಂಚಿನ ಮನೆಯ ಮೇಲೆ ಇಳಿಜಾರು ಇರುವುದರಿಂದ ಎಲ್ಲಾ ಕೆಳಗೆ ಬೀಳುತ್ತದೆ. ಇಲ್ಲಿಯ ಜನರಿಗೆ ಮಂಜು ಬೀಳುವುದೆಂದರೆ ನಮ್ಮ ರೈತನಿಗೆ ಮಳೆ ಬಂದಷ್ಟು ಸಂತೋಷ. ಜನ ರಜಾ ತೆಗೆದುಕೊಂಡು ಗುಡ್ಡಗಳಿಗೆ ಹೋಗಿ ಮಂಜಿನ ಮೇಲೆ ಜಾರುವ ಆಟ ಆಡುತ್ತಾರೆ. ಈ ಆಟಕ್ಕಾಗಿ ಬೇಕಾದ ಸಲಕರಣೆಗಳನ್ನು ಹೊಂದಿಸಿಕೊಂಡು ಸಡಗರದಿಂದ ಓಡಾಡುವವರನ್ನು ನೋಡಬೇಕು. ಬೆಳಗಾದರೆ ನಮ್ಮ ಮನೆ ಬಾಗಿಲು ಗುಡಿಸಿ ಸಾರಿಸಿ ರಂಗೋಲೆ ಹಾಕುವ ಹಾಗೆ, ಅಲ್ಲಿ ರಾತ್ರಿಯಲ್ಲಿ ಮನೆಯ ಮುಂದೆ ಬಿದ್ದಿರುವ ಮಂಜು ತೆಗೆಯುವುದೇ ಕೆಲಸ. ಮೋಟಾರು ಚಕ್ರಗಳಿಗೆ, ಮಂಜಿನಲ್ಲಿ ಜಾರದಂತೆ, ಸರಪಳಿಗಳನ್ನು ಕಟ್ಟುತ್ತಾರೆ. ಹುಡುಗರು ಮಂಜಿನ ಗುಡ್ಡೆ ಮಾಡಿ, ನಮ್ಮಲ್ಲಿ ಹುಡುಗರು ಮರಳಿನಲ್ಲಿ ಆಟವಾಡುವಂತೆ ಆಡುತ್ತಾರೆ. ಮಂಜಿನ ಚೆಂಡನ್ನು ಮಾಡಿ ಹೊಡೆಯುತ್ತಾರೆ. ಚಳಿಗಾಲ ಪ್ರಾರಂಭವಾದೊಡನೆಯೇ ಗಿಡಮರಗಳ ಎಲೆಗಳೆಲ್ಲಾ ಉದುರಿ ಹೋಗುತ್ತವೆ. ಎಲ್ಲಾ ಬೋಳು ಬೋಳು. ಈ ಮಂಜು ಈ ಒಣಗಿದ ಮರ ಗಿಡಗಳ ಮೇಲೆ ಬಿದ್ದು ಹಾಗೇ ನಿಂತಿರುತ್ತದೆ. ಊರೆಲ್ಲಾ ಮಂಜಿನಿಂದ ತುಂಬಿರುತ್ತದೆ. ಪೂರ್ಣಿಮೆಯ ದಿನ ಹಾಲು ಚೆಲ್ಲಿದಂತೆ ಬಿದ್ದಿರುವ ಈ ಮಂಜನ್ನು ನೋಡುವುದೇ ಒಂದು ಆನಂದ!

ಹೀಗೆ ಪ್ರಾರಂಭವಾದ ಚಳಿ ೫೦ಯಿಂದ ದಿನದಿನಕ್ಕೆ ಏರುತ್ತದೆ. ೨೫೦ಎಫ್ ವರೆಗೆ ಹೋಗುತ್ತದೆ. ಬೆಳಗ್ಗೆ ೯ ಗಂಟೆಗೆ ಬೆಳಗಾಗುತ್ತದೆ. ಇಲ್ಲಿ ಸೂರ್ಯ ಕಾಣುವುದಿಲ್ಲ. ನಮ್ಮಲ್ಲಿ ಬಹಳವಾಗಿ ಮೋಡ ಕವಿದರೆ ಹೇಗೆ ಕಾಣುತ್ತದೆಯೋ ಹಾಗೆ ಕಾಣುತ್ತದೆ, ಮಧ್ಯಾಹ್ನ ೧೨ ಗಂಟೆಯಲ್ಲಿ. ಪುನಃ ೩-೩೦ ಅಥವಾ ೪ ಗಂಟೆಗೆ ಕತ್ತಲಾಗುತ್ತದೆ. ಜನವರಿಯಲ್ಲಿ ರಾತ್ರಿ ಜಾಸ್ತಿ. ಒಂದು ದಿನ ಕೇವಲ ೫-೬ ಗಂಟೆ ಮಾತ್ರ ಹಗಲು ಇರುತ್ತದೆ. ಜೂನ್ ತಿಂಗಳಲ್ಲಿ ಒಂದು ದಿನ ೫೪ ಗಂಟೆಗಳ ಕಾಲ ರಾತ್ರಿ. ಚಳಿ ಹೆಚ್ಚಾದ ಹಾಗೆಲ್ಲಾ ಮಂಜು ಬೀಳುವುದು ಕಡಮೆ. ಚಳಿಗಾಲದಲ್ಲಿ ರಾತ್ರಿ ಹೆಚ್ಚು. ಎಲ್ಲರ ಮನೆಯಲ್ಲೂ ವಿದ್ಯುತ್ ದೀಪ ಯಾವಾಗಲೂ ಉರಿಯುವುದನ್ನು ಕಾಣಬಹುದು. ಚಳಿ ತಡೆಯಲು ಮನೆಯನ್ನು ಬೆಚ್ಚಗೆ ಇಡಬೇಕು. ಯಾವಾಗಲೂ ಕಿಟಕಿ ಬಾಗಿಲನ್ನು ಹಾಕಿಯೇ ಇರಬೇಕು. ಗಾಳಿ ಹೊರಗಡೆಯಿಂದ ಬರುವ ಹಾಗಿಲ್ಲ. ಕೆಲವು ಮನೆಗಳಲ್ಲಿ ಕಿಟಕಿಗೆ ಎರಡು ಬಾಗಿಲು; ಬೆಳಕು ಬರಲು ಗಾಜಿನ ಬಾಗಿಲು. ಅಡ್ಡ ಕಂಬಿ ಯಾರೂ ಹಾಕುವುದಿಲ್ಲ. ಹೊರಗಡೆಯಿಂದ ಕಾಣದ ಹಾಗೆ ಕಿಟಕಿಗಳಿಗೆ ಪರದೆಗಳು. ಹೊಸ ಮನೆಗಳಲ್ಲಿ

ಒಂದು ಕಡೆ ನೀರನ್ನು ಕಾಯಿಸಿ ಎಲ್ಲಾ ಕೊಠಡಿಗಳಿಗೂ ಬಿಸಿನೀರಿನ ಕೊಳಾಯಿಗಳನ್ನು ಹಾಕಿರುತ್ತಾರೆ. ವಿದ್ಯುತ್‌ಶಕ್ತಿಯಿಂದ ಬೆಚ್ಚಗಿಡುವುದೂ ಉಂಟು. ಮನೆಗೆ ಬಂದೊಡನೆಯೇ ಕುಳಿತುಕೊಳ್ಳುವ ಕೊಠಡಿಯನ್ನು ಬೆಚ್ಚಗೆ ಇಡಲು, ಇದಕ್ಕಾಗಿ ಇರುವ ಒಲೆಗೆ ಬೆಂಕಿ ಹಾಕಿ, ಅದರ ಮುಂದೆ ಕುಳಿತು ಕೊಳ್ಳುತ್ತಾರೆ. ಮಲಗುವ ಮನೆಯನ್ನು ಮಾತ್ರ ಬೆಚ್ಚಗೆ ಮಾಡುವುದಿಲ್ಲ. ತಣ್ಣಗಿರುವ ಕೊಠಡಿಯಲ್ಲಿ ಮಲಗಿದರೆ ಆರೋಗ್ಯವೆಂದು ಅವರ ಕಟ್ಟಳೆ. ನನಗೆ ಆ ಚಳಿ ಹೊಸದು. ನಾನು ಮಲಗುವ ಕೊಠಡಿಯನ್ನು ಬೆಚ್ಚಗೆ ಮಾಡುತ್ತಿರಲಿಲ್ಲ. ಇದರಿಂದ ಮಲಗುವ ಹಾಸಿಗೆಯನ್ನು ಮುಟ್ಟಲು ಸಾಧ್ಯ ವಾಗುತ್ತಿರಲಿಲ್ಲ. ಮುಟ್ಟಿದರೆ ಮಂಜಿನ ಗಡ್ಡೆಯಲ್ಲಿ ಕೈಯಿಟ್ಟಂತೆ ಆಗುತ್ತಿತ್ತು. ಬಹಳ ದುಡ್ಡು ಖರ್ಚುಮಾಡಿ ಕಲ್ಲಿದ್ದಲು ತಂದು ಉರಿಸಬೇಕು. ಒಂದು ವರ್ಷಕ್ಕೆ ಒಂದು ಕುಟುಂಬಕ್ಕೆ ೩೦೦–೪೦೦ ರೂಪಾಯಿ ವೆಚ್ಚ ಈ ಕಲ್ಲಿದ್ದಲಿಗೆ. ಚಳಿಗಾಲ ಬರುವುದಕ್ಕೆ ಮುಂಚೆಯೆ ಕಲ್ಲಿದ್ದಲನ್ನು ಕೊಂಡು ಇಟ್ಟುಕೊಳ್ಳುತ್ತಾರೆ. ಜೊತೆಗೆ ತರಕಾರಿ, ಆಲೂಗೆಡ್ಡೆ, ಹಣ್ಣುಗಳನ್ನು ಸಹ ತಮ್ಮ ನೆಲಮಾಳಿಗೆಗಳಲ್ಲಿ ಶೇಖರಿಸಿ ಇಡುತ್ತಾರೆ. ಹಣ್ಣುಗಳನ್ನು, ತರಕಾರಿ ಗಳನ್ನು ನೀರಲ್ಲಿ ಕುದಿಸಿದ ಸೀಸೆಗಳಲ್ಲಿ ತುಂಬಿ ಗಾಳಿ ಹೋಗದ ಹಾಗೆ ಮೊಹರು ಮಾಡುತ್ತಾರೆ. ಒಬ್ಬ ಇಂಜಿನಿಯರ್ ಮನೆಗೆ ಹೋದಾಗ ಅವರು ಚಳಿಗಾಲಕ್ಕೆ ಏನೇನು ಏರ್ಪಾಡು ಮಾಡಿಕೊಳ್ಳುತ್ತಾರೆ ಎಂಬುದನ್ನು ಹೇಳುತ್ತಾ "ಭಾರ ತೀಯರು ಅದೃಷ್ಟಶಾಲಿಗಳು. ಇರುವೆಗಳು ಸೇರಿಸುವಂತೆ ಚಳಿಗಾಲಕ್ಕೆ ಏನೂ ಶೇಖರಿಸಬೇಕಾಗಿಲ್ಲ. ಮನೆಯನ್ನು ಬೆಚ್ಚಗಿಡಲು ಕಲ್ಲಿದ್ದಲು ಉರಿಸಬೇಕಾಗಿಲ್ಲ. ಯಾವಾಗಲೂ ಸೂರ್ಯ ಇರುತ್ತಾನೆ ಎನ್ನುತ್ತೀರಿ. ಬಟ್ಟೆ ಹೆಚ್ಚಾಗಿ ಬೇಕಾಗಿಲ್ಲ. ಇನ್ನೇನು ಬೇಕು? ನಿಮ್ಮ ದೇಶಕ್ಕೆ ದೇವರು ಎಲ್ಲಾ ವಿಧದಲ್ಲೂ ಸಹಾಯ ಮಾಡಿದ್ದಾನೆ" ಎಂದರು. ಇದು ಸತ್ಯ ಎನಿಸಿತು. ಬೆಳಗ್ಗೆ ೫ ಗಂಟೆಗೆ ಎದ್ದು ಕಾರ್ಖಾನೆಗೆ ಹೊರಡಲು ಸಿದ್ಧವಾಗಬೇಕು. ಕೊಳಾಯಿಯಲ್ಲಿ ಸಂಜೆಯೇ ನೀರು ನಿಲ್ಲಿಸಿಬಿಡುತ್ತಿದ್ದರು. ಇಲ್ಲದಿದ್ದರೆ ಕೊಳಾಯಿಯ ನೀರು ಗಡ್ಡೆಕಟ್ಟಿ ನೀರೇ ಹರಿಯಲು ಅವಕಾಶವಿರುತ್ತಿರಲಿಲ್ಲ. ಆದುದರಿಂದ ಸಂಜೆಯಲ್ಲಿ ನೀರನ್ನು ತುಂಬಿ ಇಟ್ಟುಕೊಳ್ಳಬೇಕಾಯಿತು. ಬಿಸಿನೀರು ಕಾಯಿಸಿ ಮುಖ ತೊಳೆದು ಕೊಳ್ಳಬೇಕು. ಕೆಲವರು ತಣ್ಣೀರಿನಲ್ಲಿ ಮುಖ ತೊಳೆದರೆ ಹರ್ಷವಾಗಿರುತ್ತದೆ ಎಂದು ಹೇಳಿದರು. ಪ್ರಯತ್ನಿಸಲು ಸಾಧ್ಯವಾಗಲಿಲ್ಲ. ಕಡೆಕಡೆಗೆ ಬೇಸಿಗೆ ಯಲ್ಲಿ ಅಭ್ಯಾಸಮಾಡಿ, ಚಳಿಗಾಲದಲ್ಲಿ ತಣ್ಣೀರಿನಲ್ಲಿ ಮುಖ ತೊಳೆಯಲು ಮೊದಲುಮಾಡಿದೆ. ನನ್ನ ಭಾರಕ್ಕಿಂತ ಬಟ್ಟೆಗಳ ಭಾರವೇ ಹೆಚ್ಚಾಗುತ್ತಿತ್ತು.

ಟ್ರಾಂ ಹತ್ತಿ ಕುಳಿತಾಗ ಕೈಚೀಲ ತೆಗೆದು ಜೇಬಿಗೆ ಕೈಹಾಕಿ ಟಿಕೆಟಿಗೆ ದುಡ್ಡು ಕೊಡುವುದು ಕಷ್ಟವಾಗುತ್ತಿತ್ತು. ಚಳಿಗೆ ಕೈ ಹೊರಗಡೆ ಬರುತ್ತಿರಲಿಲ್ಲ. ಬಸ್ ಟ್ರಾಮ್‌ಗಳನ್ನು ವಿದ್ಯುತ್‌ಶಕ್ತಿಯಿಂದ ಬೆಚ್ಚಗೆ ಇಡುತ್ತಿದ್ದರು. ನನ್ನ ಅವಸ್ಥೆಯನ್ನು ನೋಡಿ ಎಲ್ಲರೂ ನಗುವವರೇ. ನಾನು ಚಳಿಗೆ ಹೊಸಬ. ಬಸ್ಸು ಇಳಿದು ಕಾರ್ಖಾನೆಗೆ ಹೋಗಬೇಕಾದರೆ ೧೦–೧೫ ನಿಮಿಷ ಹಿಡಿಯುತ್ತಿತ್ತು. ಚಳಿ ತಡೆದರೂ ತಡೆಯಬಹುದು. ಆದರೆ ಆ ಚಳಿಯ ಜೊತೆಗೆ ಬರುವ ಗಾಳಿಯ ಬಡಿತವನ್ನು ತಡೆಯುವುದು ಕಷ್ಟ. ರಷ್ಯಾ ಕಡೆಯಿಂದ ಗಾಳಿ ಬಲವಾಗಿ ಬೀಸುತ್ತಿತ್ತು. ಬೆಂಕಿಯಲ್ಲಿ ಸುಟ್ಟುಕೊಂಡಷ್ಟೇ ಉರಿ ಈ ಚಳಿಯಿಂದ ಆಗುತ್ತದೆ.

ಈ ಚಳಿಯ ದೆಸೆಯಿಂದ ಜನ ಸ್ನಾನಮಾಡುವುದು ೮–೧೦ ದಿನಕ್ಕೆ ಒಂದು ಸಲ. ಇಲ್ಲಿ ಬೆವರುವುದೇ ಇಲ್ಲ. ಸ್ನಾನದ ಯೋಚನೆ ಇಲ್ಲ. ಅನುಕೂಲವಾದ ಸಾರ್ವಜನಿಕ ಸ್ನಾನದ ಮನೆಗಳಿವೆ. ಅಲ್ಲಿ ಹೋಗಿ ಒಂದು ರೂಪಾಯಿಯಿಂದ ೧೦ ರೂಪಾಯಿಗಳವರೆಗೂ ಕೊಟ್ಟು ಸ್ನಾನ ಮಾಡಬಹುದು. ಜೊತೆಗೆ ಈಜುವವರಿಗೆ ಅನುಕೂಲವಾದ ಬಿಸಿನೀರಿನ ಈಜುಕೊಳಗಳಿರುತ್ತವೆ. ಪ್ರತಿನಿತ್ಯ ಕಾಲಿನಿಂದ ಕಾಲುಚೀಲ ತೆಗೆದು ಚೆನ್ನಾಗಿ ಸಾಬೂನು ಹಾಕಿ ತೊಳೆಯಬೇಕು. ಇಲ್ಲದಿದ್ದರೆ ಕೆಸರುಕಾಲು ಎಂದು ಹೇಳುತ್ತಾರಲ್ಲ ಹಾಗೆ—ಬೆರಳಿಗೆ ಬೆರಳು ಅಂಟಿಕೊಂಡುಬಿಟ್ಟಿರುತ್ತದೆ.

ಜನರು ಚಳಿಗಾಲ ಬಂತೆಂದರೆ ಚಳಿ ತಡೆದುಕೊಂಡು ಮೈಯನ್ನು ಬೆಚ್ಚಗೆ ಇಡಬೇಕೆಂದು ಮದ್ಯಪಾನಗಳನ್ನು ಹೆಚ್ಚು ಕುಡಿಯಲು ಪ್ರಾರಂಭಿಸುತ್ತಾರೆ. ಮೊದಲು ಎರಡು ದಿನ ರೂಢಿಯಾದಮೇಲೆ ನನಗೆ ಚಳಿ ತಡೆಯುವ ಶಕ್ತಿ ಬಂತು. ಅನೇಕ ಜರ್ಮನರಿಗೆ ಆಶ್ಚರ್ಯವಾಯಿತು. ಮದ್ಯ ಕುಡಿದರೆ ಮಾತ್ರ ಚಳಿ ತಡೆಯಬಹುದು ಎಂಬುದು ಬರಿ ನೆಪ ಅಷ್ಟೆ. ಹೊಟ್ಟೆತುಂಬಾ ತಿನ್ನಬೇಕು. ಹಣ್ಣು, ಹಾಲು ಜೊತೆಗೆ ಬೆಣ್ಣೆ ಹೆಚ್ಚಾಗಿ ಸೇವಿಸಬೇಕು. ಸ್ವಲ್ಪ ಪಿಷ್ಟ ದೇಹಕ್ಕೆ ಸೇರಬೇಕು. ಚಳಿಯಿಂದ ನೀರು ಕುಡಿಯಲು ಸಾಧ್ಯವಾಗುವುದಿಲ್ಲ; ಬೇಕಾಗುವುದೂ ಇಲ್ಲ. ಹಾಲು, ಕಾಫಿ, ಟೀ ಕುಡಿದರೆ ಸಾಕು. ಈ ದೇಶಗಳಲ್ಲಿ ಮದ್ಯಪಾನ ರೂಢಿ. ಇದರಿಂದ ಚಳಿ ಕಡಿಮೆಯಾಗುತ್ತದೆ ಎಂದು ತಿಳಿದಿದ್ದಾರೆ. ಆದರೆ ಹೆಚ್ಚು ಮದ್ಯಪಾನ ಮಾಡಿದವರೂ ಚಳಿಯನ್ನು ತಡೆಯಲಾರದೆ ನಡುಗುವುದನ್ನು ನೋಡಿದ್ದೇನೆ.

ಚಳಿ ಕಡಮೆ ಆಗುವುದು ಎಂದರೆ ಏಪ್ರಿಲ್ ಕೊನೆಯಲ್ಲಿ. ಮೇ ತಿಂಗಳಲ್ಲಿ ಸ್ವಲ್ಪ ಸ್ವಲ್ಪ ಕಡಮೆ ಆಗುತ್ತಾ ಬರುತ್ತದೆ. ೫° ಎಫ್.ನಿಂದ ೧೦° ಎಫ್.ಗೆ

ಬಂದರೆ ಬಿಸಿಲು ಬಂದಷ್ಟೇ ಸಂತೋಷ. ಸ್ವಲ್ಪ ಶಾಖವಾದ ಹವಾ ಬಂದೊಡನೆಯೇ ಮಂಜು ಕರಗಿ ನೀರಾಗಿ ಹರಿಯುತ್ತದೆ. ಮನೆಯ ಕಿಟಕಿಗಳ ಮೇಲೆ ಇರುವ ಮಂಜು ಕರಗಿದೊಡನೆ ಮನೆಯ ಹೆಂಗಸರಿಗೆ ಆಗುವ ಸಂತೋಷ ಎಷ್ಟು ಹೇಳಿದರೂ ತೀರದು. ಚಳಿಗಾಲದಲ್ಲಿ ಬಟ್ಟೆ ಒಣಗುವುದೇ ಕಷ್ಟ. ಸ್ವಲ್ಪ ಬೆಳಕು ಬಂದೊಡನೆಯೇ ಒಣಗುವ ಬಟ್ಟೆಗಳೆಲ್ಲಾ ಹಿತ್ತಲು ಕಂಬಿಯ ಮೇಲೆ ಬರುತ್ತವೆ. ಯಾರೂ ಮನೆಯ ಮುಂದೆ ಒಣಗಹಾಕುವುದಿಲ್ಲ. ಇದು ತಿಳಿಯದೆ ನಾನು ನನ್ನ ರೂಮಿನ ಮುಂದೆ ಇರುವ ವರಾಂಡದಲ್ಲಿ ದಾರ ಕಟ್ಟಿ ಬಟ್ಟೆ ಒಣಗಹಾಕಿ ಕೆಲಸಕ್ಕೆ ಹೊರಟುಹೋದೆ. ವರಾಂಡದ ಗಾಜಿನಿಂದ ಬೀದಿಯಲ್ಲಿ ಹೋಗುವವರಿಗೆಲ್ಲಾ ಬಟ್ಟೆ ಕಾಣುತ್ತಿತ್ತು. ಮನೆಯ ಯಜಮಾನಿಗೆ ಕೋಪ ಬಂತು. ಬಂದು ಆ ಬಟ್ಟೆಗಳನ್ನು ತೆಗೆಯುವಂತೆ ಹೇಳಿದರು. ನಾನು ಇದ್ದ ಕುಟುಂಬದವರು ಬಟ್ಟೆಗಳನ್ನೆಲ್ಲಾ ತೆಗೆಸಿಟ್ಟಿದ್ದರು. ನಾನು ಕಾರ್ಖಾನೆಯಿಂದ ಬಂದೊಡನೆಯೇ ನಾನಿದ್ದ ಕುಟುಂಬದವರೂ ಮತ್ತು ಮನೆಯ ಯಜಮಾನಿಯೂ ಇಬ್ಬರೂ ಬಂದು "ಹೀಗೆ ಬಟ್ಟೆ ಒಣಗಹಾಕಬಾರದು. ಇಟಲಿ ದೇಶದಲ್ಲಿ ಹೀಗೆ ಮನೆಯ ಮುಂದೆ ಒಣಗಹಾಕುತ್ತಾರೆ. ನಮ್ಮ ದೇಶದಲ್ಲಿ ಹಾಕುವುದಿಲ್ಲ. ಇದು ಅವಲಕ್ಷಣ. ಮನೆಯ ಹಿಂದಿನ ಹಿತ್ತಲಲ್ಲಿ ಅಥವಾ ಮೇಲೆ ಇರುವ ಹಳೆಯ ಸಾಮಾನು ಹಾಕುವ ಕಡೆ ಹಾಕಬೇಕು. ಮುಂದೆ ಹಾಗೆ ಮಾಡಬಾರದು" ಎಂದು ಹೇಳಿದರು.

ಚಳಿ ಕಡಮೆಯಾದ ಹಾಗೆಲ್ಲಾ, ಸೂರ್ಯನನ್ನು ಸ್ವಲ್ಪ ಕಂಡ ಹಾಗೆಲ್ಲಾ ಎಲ್ಲರ ಮುಖಗಳೂ ಅರಳುತ್ತವೆ. ಹರ್ಷ ಕಾಣುತ್ತದೆ. ಮನೆಗಳನ್ನು ಚೊಕ್ಕಟಮಾಡಿ ಸುಣ್ಣ ಹೊಡೆಯುತ್ತಾರೆ. ಕಾಗದ ಅಂಟಿಸುತ್ತಾರೆ. ಯಾವಾಗ ಬಿಸಿಲು ಬರುತ್ತದೆ ಎಂದು ಹಾತೊರೆಯುತ್ತಿರುತ್ತಾರೆ. ಸಾಮಾನ್ಯವಾಗಿ ದಕ್ಷಿಣ ಜರ್ಮನಿಯಲ್ಲಿ ಚಳಿ ಬೇಗ ಕಡಮೆಯಾಗಿ ಬಿಸಿಲು ಬರುತ್ತದೆ. ಬಹಳ ಬಿಸಿಲು ಎಂದರೆ ೩೫° ಎಫ್. ಅದನ್ನೂ ಅಲ್ಲಿಯ ಜನ ತಡೆಯುಲಾರರು. ರೈತರು ಹೊಲ ಉಳಲು ಪ್ರಾರಂಭಿಸುತ್ತಾರೆ. ತೋಟದ ಕೆಲಸಕ್ಕೆ ಎಲ್ಲರೂ ಕೈಹಾಕುತ್ತಾರೆ. ಬಟ್ಟೆಯ ಬದಲಾವಣೆಯನ್ನು ಚೆನ್ನಾಗಿ ಕಾಣಬಹುದು. ಬಿಸಿಲುಕಾಲ ಬಂದೊಡನೆಯೇ ನಿಲುವಂಗಿ ಮೊದಲು ಹೋಗುತ್ತದೆ. ಕಡೆಗೆ ಗಂಡಸರು ಸಣ್ಣ ಚಡ್ಡಿ, ಷರಟು ಹಾಕಿಕೊಂಡು ಬರುತ್ತಾರೆ. ಹೆಂಗಸರು ಸಾಧ್ಯವಾದಷ್ಟೂ ತೆಳ್ಳಗಿರುವ ಬಟ್ಟೆ ಹಾಕಲು ಕಾದಿರುತ್ತಾರೆ. ನಮ್ಮ ದೇಶದಲ್ಲಿ ಬೇಸಿಗೆ ಇದ್ದರೂ ಉಣ್ಣೆಯ ಅಂಗಿ, ಜೊತೆಗೆ ಟೈ. ಪಾಶ್ಚಿಮಾತ್ಯರಲ್ಲಿ ಇದು ರೂಢಿಗೆ ಬಂದದ್ದು ಚಳಿಯ ದೆಸೆಯಿಂದ. ನಮಗೆ ಏಕೆ

VIJAYA EVENING COLLEGE LIBRARY
5285

ಬೇಕೋ ತಿಳಿಯದು. ಅವರನ್ನು ಅನುಸರಿಸುವ ಆತುರದಲ್ಲಿ ಬೇಸಿಗೆಯಲ್ಲೂ ಅವರ ಚಳಿಗಾಲದ ಉಡುಪನ್ನು ಧರಿಸುತ್ತೇವೆ. ನೋಡಿ ಕಲಿಯುವುದೆಂದರೆ ಹೀಗೆಯೇ? ಅವರಲ್ಲಿ ಪ್ಯಾಂಟು ಬಂದದ್ದು ಚಳಿಗಾಳಿ ಸರಾಗವಾಗಿ ದೇಹಕ್ಕೆ ತಾಗದಿರಲಿ ಎಂದು. ನಮ್ಮಲ್ಲಿ ಸರಾಗವಾಗಿ ಗಾಳಿ ಆಡಲೆಂದು ಪಂಚೆ ಉಡುತ್ತೇವೆ. ಈಗ ಪಂಚೆ ಬಿಟ್ಟು ಪ್ಯಾಂಟು ಹಾಕಿ ಇಲ್ಲದ ಗದ್ದಲ ಮಾಡಿ ಕೊಳ್ಳುತ್ತಿದ್ದೇವೆ.

ಬಿಸಿಲುಕಾಲದಲ್ಲೂ ನಮ್ಮಲ್ಲಿ ಚಳಿಗಾಲವಿದ್ದಹಾಗೆ. ನೆತ್ತಿಯ ಮೇಲೆ ಸೂರ್ಯ ಬರುವುದೇ ಇಲ್ಲ. ಪಕ್ಕದಲ್ಲೇ ಹುಟ್ಟಿ ಹಾಗೇ ಮುಳುಗುತ್ತಾನೆ. ಬಿಸಿಲುಕಾಲದಲ್ಲಿ ಮಳೆಗಾಲವೂ ಸೇರಿದೆ. ಯಾವಾಗಲೂ ಮಳೆ. ಸಣ್ಣಗೆ ತುಂತುರು. ನಿಲುವಂಗಿ ಬೇಕೇ ಬೇಕು ಚಳಿಗೆ. ಬಿಸಿಲುಕಾಲದಲ್ಲೂ ಮಳೆಯ ಅಂಗಿ ಇರಬೇಕು. ಮಳೆ ಬಿಡುವುದೇ ಇಲ್ಲ. ಎಲ್ಲರಿಗೂ ಬಿಸಿಲು ಕಾಯಿಸಿ ಕೊಳ್ಳಲು ಚಪಲ. ಮಧ್ಯಾಹ್ನ ಅರ್ಧ ಗಂಟೆ ಊಟಕ್ಕೆ ವೇಳೆಯಿದ್ದರೆ ರೊಟ್ಟಿ ಹಿಡಿದುಕೊಂಡು ಬಂದು ಬಿಸಿಲಿನಲ್ಲಿ ಕುಳಿತು ತಿನ್ನುತ್ತಾರೆ. ಶನಿವಾರ ಭಾನುವಾರ ಬಂದರೆ ನೀರಿದ್ದ ಕಡೆ ಹೋಗಿ ಈಜಿ, ಬಿಸಿಲಿನಲ್ಲಿ ಹಾಯಾಗಿ ಬರಿಯ ಮೈಯಲ್ಲಿ ಬಿದ್ದುಕೊಂಡು ಮೈ ಸುಟ್ಟುಕೊಳ್ಳುತ್ತಾರೆ. ಚಳಿಗಾಲದಲ್ಲಿ ಸ್ವಲ್ಪವೂ ರಜಾ ತೆಗೆದುಕೊಳ್ಳದೆ, ಬೇಸಿಗೆಯಲ್ಲಿ ರಜಾ ತೆಗೆದುಕೊಂಡು ಸಮುದ್ರ ಇಲ್ಲವೆ ಬೆಟ್ಟಗಳಿರುವ ಪ್ರದೇಶಕ್ಕೆ ಹೋಗುತ್ತಾರೆ. ಬಿಸಿಲಿಗೆ ತಮ್ಮ ದೇಹ ಒಡ್ಡುತ್ತಾರೆ.

೮. ಜರ್ಮನಿಯ ಜನ

ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯ ಲೋಕ. ಆಚಾರವೇ ಸ್ವರ್ಗ, ಅನಾಚಾರವೇ ನರಕ.

—ಬಸವೇಶ್ವರ

ಹೋಟೆಲುಗಳಲ್ಲಿ ಇದ್ದು ಬಂದರೆ ಜನರ ಜೀವನ ತಿಳಿಯುವುದಿಲ್ಲ. ಐರೋಪ್ಯ ದೇಶಗಳಲ್ಲಿ ಕುಟುಂಬದೊಡನೆ ವಾಸಿಸಲು ಅವಕಾಶವಿರುವುದರಿಂದ ಅವರ ಜೊತೆಯಲ್ಲಿದ್ದು, ಆ ದೇಶದ ಜನರನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಈ ಅನುಕೂಲ ನನಗೆ ಇಷ್ಟ.

ನಾನು ಮೊದಲು ಇಳಿದುಕೊಂಡಿದ್ದ ಮನೆ ಡಾ|| ಶ್ರೀಮತಿ ಯಾನ್ ಸೇನ್ ಅವರದು. ಆಕೆ ವಿಧವೆ. 'ಲಾ'ನಲ್ಲಿ ಡಾಕ್ಟರ್ ಪರೀಕ್ಷೆ ಮಾಡಿದ್ದಾಳೆ. ಮಹಾಯುದ್ಧದಲ್ಲಿ ಪತಿಯನ್ನು ಕಳೆದುಕೊಂಡಿದ್ದಳು. ಆಕೆಗೆ ಸ್ಟುಡ್‌ಗಾರ್ಟ್ ನಗರದಲ್ಲಿ ಲಾಯರ್ ಕೆಲಸ. ಬೆಳಗ್ಗೆ ೫ ಗಂಟೆಗೆ ಎದ್ದು ದಿನವೂ ರೈಲು ಹತ್ತಿ ಸುಮಾರು ೭೦ ಮೈಲಿ ದೂರ ಹೋಗಿ ಸಂಜೆಗೆ ಹಿಂದಕ್ಕೆ ಬರುತ್ತಿದ್ದಳು. ಆಕೆಯ ತಂದೆತಾಯಿ ವಯಸ್ಸಾದವರು. ಮನೆಯಲ್ಲೇ ಇದ್ದರು. ಆಕೆಯ ತಮ್ಮ ಬೇರೆ ಇದ್ದ. ಅಲ್ಲಿಗೆ ಆಗಾಗ ಹೋಗಿಬರುತ್ತಿದ್ದ. ಡಾ|| ಯಾನ್ ಸೇನ್‌ಗೆ ಸ್ವಲ್ಪ ಇಂಗ್ಲಿಷ್ ಬರುತ್ತಿತ್ತು. ಆಕೆಯ ತಾಯಿ ಹಳೇ ಕಾಲದ ಮನುಷ್ಯಳು. ಆಕೆಗೆ ಇಂಗ್ಲಿಷ್ ಬಾರದು. ಮನೆ ಬಹಳ ಹಳೆಯ ಕಾಲದ್ದು. ಯುದ್ಧದಲ್ಲಿ ಬಿದ್ದಿದ್ದನ್ನು ರಿಪೇರಿಮಾಡಿದ್ದರು. ನನಗೆ ಅವರ ಮನೆಯಲ್ಲಿ ಒಂದು ಕೊಠಡಿ ಕೊಟ್ಟು, ಅಡಿಗೆಮನೆಯನ್ನು ಉಪಯೋಗಿಸಿಕೊಳ್ಳಬಹುದೆಂದು ಹೇಳಿದರು. ಮೊದಲು ನನ್ನನ್ನು ಕರೆಸಿ ನೋಡಿದನಂತರ ಕೊಠಡಿ ಕೊಡುತ್ತೇವೆ ಎಂದರು. ಏಷ್ಯಾ ಖಂಡದಿಂದ ಬಂದವನಾದುದರಿಂದ ಹೇಗೋ ಏನೋ —ನೋಡಬೇಕೆಂದು ಕರೆಸಿದ್ದರು. ಮನೆ ಬಹಳ ವಿಶಾಲವಾಗಿತ್ತು. ಹೇಗೆ ಉಪಯೋಗಿಸಿಕೊಳ್ಳಬೇಕೆಂದು ಗೊತ್ತಿಲ್ಲ. ಹಾಸಿಗೆ, ಮೇಜು, ಕುರ್ಚಿ, ಬಟ್ಟೆ ಇಡಲು ಕಪಾಟು, ಎಲ್ಲಾ ಅನುಕೂಲಗಳೂ ಇದ್ದುವು. ಕೊಠಡಿ ಮನೆಯೊಳಗೇ ಇದ್ದುದರಿಂದ ನನ್ನ ಸಾಮಾನು ಹೊರಗಡೆ ಇಡಲು ಸ್ವಲ್ಪ ಅಧೈರ್ಯ. ಅದನ್ನು ಹೇಳುವುದು ಹೇಗೆ ? ಸದಾ ಬೀಗ ಹಾಕಿಕೊಂಡೇ ಓಡಾಡುತ್ತಿದ್ದೆ. ಮಾರನೇ

ದಿನ ಕಾರ್ಖಾನೆಗೆ ಹೋಗುವಾಗ ಕೊಠಡಿಯ ಬೀಗದಕೈ ತೆಗೆದುಕೊಂಡೇ ಹೋದೆ. ಸಂಜೆಗೆ ಬಂದಾಗ ಮನೆಯ ಮುದುಕಿ ಕೊಠಡಿಯ ಬೀಗದಕೈ ಕೇಳಿದಳು ; ಕೊಟ್ಟೆ. ಹಾಗೆ ತೆಗೆದುಕೊಂಡು ಹೋಗಬಾರದೆಂದೂ ಕೊಠಡಿಯನ್ನು ಚೊಕ್ಕಟಮಾಡಿ ಹಾಸಿಗೆ ಸರಿಮಾಡಲು ಕೊಠಡಿಯ ಬಾಗಿಲು ತೆಗೆದಿರಬೇಕೆಂದೂ ಹೇಳಿದಳು. ಅನಂತರ ನನ್ನ ಬಟ್ಟೆಗಳೆಲ್ಲಾ ಪೆಟ್ಟಿಗೆಯಲ್ಲೇ ಇರುವುದನ್ನು ನೋಡಿ ಎಲ್ಲವನ್ನೂ ಬೀರುವಿನಲ್ಲಿ ಇಡಬೇಕೆಂದು ಹೇಳಿದಳು. ನನ್ನ ಪೆಟ್ಟಿಗೆ ಬೀಗದಕೈ ತೆಗೆದುಕೊಂಡು, ಎಲ್ಲಾ ಬಟ್ಟೆಗಳನ್ನು ತೆಗೆದು, ಪೆಟ್ಟಿಗೆ ಬರಿದುಮಾಡಿ ಎಲ್ಲಾ ಬೀರುಗಳನ್ನು ಭರ್ತಿಮಾಡಿದಳು. ನನಗೆ ಸ್ವಲ್ಪ ಹೆದರಿಕೆ; ಕೋಪ ಬಂತು. ಆದರೆ ಭಾಷೆ ಚೆನ್ನಾಗಿ ಬಾರದು. ಸುಮ್ಮನೆ ಇದ್ದೆ. ಆದರೆ ಸಾಮಾನು ಹೊರಗಡೆ ಇರುವುದಲ್ಲ ಎಂಬ ಹೆದರಿಕೆ. ಮಾರನೇ ದಿನ ಕಾರ್ಖಾನೆಯಲ್ಲಿ ಇಂಗ್ಲಿಷ್ ಬರುವ ಶ್ರೀ ನಾಯಮನ್‌ಗೆ ಈ ವಿಷಯ ತಿಳಿಸಿದೆ. ಅವರು ನಕ್ಕು, "ಜರ್ಮನಿಯಲ್ಲಿ ಹಾಗೇ ಇರಬೇಕು. ಕೊಠಡಿಯಲ್ಲಿ ಏನೂ ಹಾಕಿದರೂ ಯಾರೂ ಮುಟ್ಟುವುದಿಲ್ಲ. ಬೀಗದಕೈಯನ್ನು ಅಲ್ಲೇ ಇಡಬೇಕು. ಬೀಗಹಾಕಬೇಕಾದ ಆವಶ್ಯಕತೆ ಇಲ್ಲ. ಅವರು ಮಧ್ಯಾಹ್ನ ಕೊಠಡಿ ಚೊಕ್ಕಟ ಮಾಡುತ್ತಾರೆ. ಹೆದರಬೇಕಾದ ಆವಶ್ಯಕತೆ ಇಲ್ಲ. ಅವರ ಕುಟುಂಬದಲ್ಲಿ ಒಬ್ಬರಂತೆ ಇರಿ" ಎಂದು ಹೇಳಿದರು. ಸಂಜೆಗೆ ನನ್ನ ಜೊತೆಯಲ್ಲಿ ಬಂದು, ಮನೆಯ ಯಜಮಾನಿಗೂ ನನ್ನ ಪರಿಚಯವನ್ನು ತಿಳಿಸಿ, ಸಮಸ್ಯೆಯನ್ನು ಪರಿಹಾರ ಮಾಡಿದರು. ಸಸ್ಯಾಹಾರ ಏನೇನು ಸಿಗುತ್ತದೆ ಎಂದು ಒಂದು ಪಟ್ಟಿ ಕೊಟ್ಟರು. ಮೊದಲು ೪ ದಿನ ಅವರೇ ಕೊಂಡು ತಂದು ಕೊಟ್ಟರು. ಅಡಿಗೆಮನೆಯನ್ನು ಹೇಗೆ ಉಪಯೋಗಿಸಬೇಕೆಂದು ಹೇಳಿಕೊಟ್ಟರು. ಎಲ್ಲಾ ರೀತಿಯಲ್ಲಿ ಯಜಮಾನಿ ನನಗೆ ಸಹಾಯ ಮಾಡತೊಡಗಿದರು. ಬಟ್ಟೆ ಇಸ್ತ್ರಿ ಮಾಡಿಕೊಡುತ್ತಿದ್ದರು. ಒಂದೊಂದು ವೇಳೆ ಬೂಟ್ಸಿಗೆ ಪಾಲಿಷ್ ಹಾಕದಿದ್ದರೆ ಪಾಲಿಷ್ ಸಹ ಹಾಕಲು ಅವರು ಸಂಕೋಚಪಡುತ್ತಿರಲಿಲ್ಲ. ಸ್ವಲ್ಪ ದಿನದನಂತರ ನಾನು ಅವರನ್ನು 'ತಾಯಿ' ಎಂದು ಕೂಗುತ್ತಿದ್ದೆ. ಅವರು ನನ್ನನ್ನು ಮಗನೆಂದು ಕೂಗುತ್ತಿದ್ದರು.

ನಾನು ಬಣ್ಣದಲ್ಲಿ ಕಪ್ಪು ಎಂದು ಹೇಳಿದರೂ ಆ ಮುದುಕಿ "ಮನುಷ್ಯರೆಲ್ಲ ಒಂದೇ; ನೀವು ಬಿಸಿಲು ದೇಶದಲ್ಲಿ ಇರುವುದರಿಂದ ಕಪ್ಪಗಿದ್ದೀರಿ; ನಾವು ಚಳಿದೇಶದಲ್ಲಿ ಇರುವುದರಿಂದ ಬೆಳ್ಳಗಿದ್ದೇವೆ. ನೀವು ಇಲ್ಲೇ ಇದ್ದರೆ ನಿಮ್ಮ ಮಕ್ಕಳೂ ಬೆಳ್ಳಗಾಗುತ್ತಾರೆ, ಅಷ್ಟೇ" ಎಂದು ಹೇಳುತ್ತಿದ್ದರು. ತಾವು ಬಿಳಿಯ ಜನ, ನಾನು ಕಪ್ಪು ಎಂಬ ಭೇದಭಾವನೆ ಅವರಲ್ಲಿ ಕಾಣಬರಲಿಲ್ಲ. ಒಂದೊಂದು

ಸಾರಿ ಅಡಿಗೆಮನೆಯಲ್ಲಿ ಕೆಲಸಮಾಡಲು ಸೋಮಾರಿತನ ಪಟ್ಟರೆ, "ಭಾರತ ದಲ್ಲಿ ಗಂಡಸರು ಎಲ್ಲಾ ಕೆಲಸ ಕಲಿಯುವುದಿಲ್ಲವೇ ? ಜರ್ಮನಿಯಲ್ಲಿ ಗಂಡಸರು ಎಲ್ಲಾ ಕೆಲಸ ಮಾಡುತ್ತಾರೆ. ಅಡಿಗೆ ಕೆಲಸ ಮಾಡಬೇಕು: ರಾಜ್ಯ ಆಳಬೇಕು" ಎಂದು ಹೇಳುತ್ತಿದ್ದರು. ನನ್ನ ಬಟ್ಟೆ ಇಸ್ತ್ರಿಮಾಡುತ್ತಾ "ನಿನ್ನ ಬಟ್ಟೆ ಬಹಳ ವಿಚಿತ್ರ. ಬಹಳ ದಪ್ಪ. ಆದರೆ ಒಗೆಯಲು, ಇಸ್ತ್ರಿ ಮಾಡಲು ಬಹಳ ಸುಲಭ. ಇದು ಯಾವ ತರದ ಬಟ್ಟೆ?" ಎಂದು ಕೇಳಿ ದಳು. ನಾನು ಖಾದಿಯ ವಿವರ ಹೇಳಿದೆ: "ಬಡಜನರಿಗೆ ಬಹಳ ಸಹಾಯ ವಾಗುತ್ತದೆ ಇದರಿಂದ. ದೇಶಪ್ರೇಮಕ್ಕಾಗಿ ಈ ಬಟ್ಟೆ ಬೆಲೆ ಹೆಚ್ಚಿದ್ದರೂ ಹಾಕುತ್ತೇವೆ" ಎಂದು ಹೇಳಿದಮೇಲೆ ಆಕೆಗೆ ಬಹಳ ಸಂತೋಷವಾಯಿತು. ನನ್ನ ನಡತೆ, ಶುಭ್ರತೆ ಎಲ್ಲವನ್ನೂ ನೋಡಿ ಸಂತೋಷಪಟ್ಟರು. ಹುಟ್ಟಿದ ಹಬ್ಬ ಜರ್ಮನಿಯಲ್ಲಿ ಒಂದು ವಿಶೇಷ. ನನಗೆ ತಿಳಿಯದು. ನಾನು ಹುಟ್ಟಿದ ತಾರೀಖು ಆದ ೩-೪ ದಿನಗಳಮೇಲೆ ಬಂದು ಮನೆಯ ಯಜಮಾನಿ "ನಿನ್ನ ಹುಟ್ಟಿದ ಹಬ್ಬ ಯಾವಾಗ ?" ಎಂದು ಕೇಳಿದಳು. ನಾನು ತಿಳಿಸಿದ ಕೂಡಲೇ "ಮೊದಲೇ ತಿಳಿಸಬೇಡವೆ ? ಮನೆಯಲ್ಲಿ ಹುಟ್ಟಿದ ಹಬ್ಬ ಮಾಡಬೇಕಾಗಿತ್ತು. ನೀವು ಭಾರತದಲ್ಲಿದ್ದಿದ್ದರೆ ಆಚರಿಸುತ್ತಿರಲಿಲ್ಲವೆ ?" ಎಂದು ಅದರ ಮುಂದಿನ ಭಾನುವಾರ ಒಂದು ದೊಡ್ಡ ಕೇಕ್ ಮಾಡಿದಳು. ನನ್ನ ೨೯ ವರ್ಷವನ್ನು ಸೂಚಿಸುವಂತೆ ೨೯ ಮೇಣದಬತ್ತಿಗಳನ್ನು ಹತ್ತಿಸಿ ಮೇಜಿನ ಮೇಲೆ ಇಟ್ಟಳು. ಮಧ್ಯೆ ದೊಡ್ಡ ಮೇಣದಬತ್ತಿ ಇಟ್ಟು ಎಲ್ಲವನ್ನೂ ಹಚ್ಚಿದರು. ನಾನು ಕೇಕನ್ನು ಕತ್ತರಿಸಿ ಎಲ್ಲರಿಗೂ ಹಂಚಿದೆ. ಕುಡಿಯಲು ಕಾಫಿ ಕೊಟ್ಟರು. ಜೊತೆಗೆ ಒಂದು ಪುಸ್ತಕ ಬಹುಮಾನವಾಗಿ ಬಂತು. ಮಧ್ಯೆ ಇರುವ ಮೇಣದ ಬತ್ತಿ ಪೂರ್ತಿ ಉರಿದರೆ ಆ ವರ್ಷ ಬಹಳ ಅದೃಷ್ಟವಂತೆ. ಇಲ್ಲೂ ಮೂಢ ನಂಬಿಕೆ.

ನಾನು ಅವರ ಮನೆಯಲ್ಲಿ ಹೊಸಬ. ಬೇರೆ ದೇಶದವನು. ಆದರೂ ಮನೆಯ ಮಗನಂತೆ ನೋಡಿಕೊಳ್ಳುತ್ತಿದ್ದರು. ಸ್ವಲ್ಪ ಗಾಳಿ ಬೀಸಿದರೆ "ಹೊರ ಗಡೆ ಹೋಗಬೇಡ, ಚಳಿ ಹೆಚ್ಚು. ನಿನಗೆ ರೂಢಿ ಇಲ್ಲ" ಎನ್ನುತ್ತಿದ್ದರು. ಬಟ್ಟೆ ಹರಿದರೆ ಹೊಲಿದುಕೊಡುತ್ತಿದ್ದರು. ಮನೆಯಲ್ಲಿ ಯಾವ ಸಾಮಾನನ್ನು ಬೇಕಾದರೂ ಉಪಯೋಗಿಸಬಹುದು. ಸ್ನಾನಕ್ಕೆ ನೀರು ಕಾಯಿಸಿಕೊಡು ತ್ತಿದ್ದರು. ಅಡಿಗೆಮನೆಯ ಕೆಲಸ ಭಾರತದಷ್ಟು ಕಷ್ಟವಿಲ್ಲ. ಗ್ಯಾಸನ್ನು ಉಪಯೋಗಿಸುತ್ತಿದ್ದರು. ವಿಜ್ಞಾನವನ್ನು ಎಲ್ಲದರಲ್ಲೂ ಉಪಯೋಗಿಸಿಕೊಂಡು ಕಷ್ಟ ಕಡಮೆ ಮಾಡಿಕೊಂಡಿದ್ದಾರೆ.

ಒಂದು ದಿನ ನೃತ್ಯ ಕಲಿಯಲು ಹೇಳಿದರು. ಜರ್ಮನಿಯಲ್ಲಿ ಎಲ್ಲರೂ ಕಲಿಯಬೇಕು. "ಯುವಕರು ಈಗ ಸುಖಪಡಬೇಕು. ವಯಸ್ಸಾದಮೇಲೆ ಇದು ಸಾಧ್ಯವಿಲ್ಲ" ಎಂದು ಹೇಳಿದಾಗ ನನಗೆ ಸ್ವಲ್ಪ ಬೇಸರ. "ನಾನು ಹೆಂಗಸರನ್ನು ತಬ್ಬಿ ಕುಣಿಯುವ ಕುಣಿತ ಕಲಿಯುವುದಿಲ್ಲ" ಎಂದೆ. ಅವರಿಗೆ ಇದು ರೂಢಿ. ಆದರೆ ನನಗೆ ಸರಿಬೀಳಲಿಲ್ಲ. ಒಂದು ದಿನ ಮದ್ಯಪಾನ ಮಾಡಬೇಕೆಂದೂ, ಇಲ್ಲದಿದ್ದರೆ ಚಳಿ ತಡೆಯಲು ಅಸಾಧ್ಯವೆಂದೂ, ಕಡೆಯ ಪಕ್ಷ ವೈನ್ ಆದರೂ ತೆಗೆದುಕೊಳ್ಳಬೇಕೆಂದೂ, ದಿನಕ್ಕೆ ೨-೩ ಬಾಟ್ಲಿಯನ್ನು ತೆಗೆದುಕೊಳ್ಳ ಬೇಕೆಂದೂ ಹೇಳಿದರು. ಬಲವಂತ ಸಹ ಮಾಡಿದರು. ಭಾರತೀಯ ಸ್ನೇಹಿತರು ಮನೆಗೆ ಬರಬಾರದೆಂದು ಹೇಳತೊಡಗಿದರು. ನನ್ನ ಸ್ನೇಹಿತ ಶ್ರೀ ಷಾರವರಿಗೆ ಈ ವಿಚಾರ ತಿಳಿಸಿದೆ. ಅವರಿಗೆ ಜರ್ಮನ್ ಭಾಷೆ ಚೆನ್ನಾಗಿ ಬರುತ್ತಿದ್ದುದ ರಿಂದ ಅವರು ಬಂದು ಇವರಿಗೆ ಹೇಳಿದರು. ಅವರ ಮೇಲೂ ಕೋಪ ಬಂತು. ಹೀಗೆ ಬೆಳೆದು ನಾಲ್ಕು ತಿಂಗಳನಂತರ ಒಂದು ಘಟನೆ ನಡೆದು ಮನೆಯನ್ನು ಬಿಡಬೇಕಾಗಿ ಬಂತು. ವಿಶ್ವಾಸವಾಗಿ ಕಂಡವರನ್ನು ಬಿಟ್ಟುಹೋಗಬೇಕಲ್ಲಾ ಎಂದು ಮನಸ್ಸಿಗೆ ವ್ಯಥೆಯಾದರೂ ಅವರು ಕಡೆಕಡೆಯಲ್ಲಿ ನಡೆದುಕೊಂಡ ರೀತಿ ಸರಿಹೋಗಲಿಲ್ಲ. ಶ್ರೀಮತಿ ಕ್ಲರ್ರೈಕಾರ್ಡಿ ಎಂಬುವರ ಮನೆಗೆ ಹೋಗಿ ಅವರ ಕುಟುಂಬದಲ್ಲಿ ಸೇರಿದೆ.

ಶ್ರೀಮತಿ ಕ್ಲರ್ರೈಕಾರ್ಡಿಯವರ ಮನೆ ನಾನು ಕಾರ್ಖಾನೆಗೆ ಹೋಗುವ ಬಸ್ಸು ಹೊರಡುವ ಸ್ಥಳದ ಹತ್ತಿರ ಇತ್ತು. ಬಾಡಿಗೆ ಹೆಚ್ಚಾದರೂ ಅವರ ಕೊಠಡಿಯಲ್ಲಿ ಇರಲು ಒಪ್ಪಿದೆ. ಮೊದಲೇ ಕೆಲವು ಷರತ್ತು ಹಾಕಿಕೊಂಡು ಆ ಮನೆಗೆ ಬಂದೆ. ಕೊಠಡಿ ಬಹಳ ದೊಡ್ಡದು. ಇಲ್ಲೂ ಎಲ್ಲಾ ಅನುಕೂಲ ಗಳೂ ಇದ್ದವು. ನನ್ನ ಕೊಠಡಿಯ ಎದುರಿಗೇ ಅಡಿಗೆಮನೆ. ಅಡಿಗೆ ಮಾಡಿ ಕೊಳ್ಳಲು ನನಗೆ ಕೆಲವು ಪಾತ್ರೆ ಕೊಟ್ಟರು. ಶ್ರೀಮತಿ ಕಾರ್ಡಿ ಸ್ವಿಡ್ಜರ್ಲೆಂಡಿ ನವರು. ಸುಪ್ರಸಿದ್ಧ ಸಂಗೀತವಿದುಷಿ. ಆಕೆಗೆ ಒಬ್ಬ ಗಂಡುಮಗ, ಒಬ್ಬ ಹೆಣ್ಣುಮಗಳು. ಮಗಳು ಇನ್ನೂ ೧೦-೧೧ ವರ್ಷದವಳು. ಜೊತೆಯಲ್ಲಿಯೇ ಇದ್ದು ಮಾಧ್ಯಮಿಕ ೨ನೇ ತರಗತಿಯಲ್ಲಿ ಓದುತ್ತಿದ್ದಳು. ಮಗ ಫ್ರಾಂಕ್ ಫರ್ಟಿನಲ್ಲಿ ಹಾಸ್ಟಲಿನಲ್ಲಿ ಇದ್ದುಕೊಂಡು ಓದುತ್ತಿದ್ದ. ಹುಡುಗಿ ಸಣ್ಣವಳಾ ದರೂ ಎಲ್ಲಾ ಕೆಲಸ ಮಾಡುತ್ತಿದ್ದಳು. ನನಗೆ ಸಹಾಯಕಳಾಗಿದ್ದಳು.

ಶ್ರೀಮತಿ ಕಾರ್ಡಿಯವರ ಮನೆಯ ಯಜಮಾನ ಅದೇ ಕಟ್ಟಡದ ಮೊದಲನೇ ಮನೆಯಲ್ಲಿದ್ದರು. ನಾನು ಇದ್ದ ಕೊಠಡಿಯ ಪಕ್ಕದಲ್ಲಿ ಶ್ರೀಮತಿ ಕ್ಲೈನ್ ಕುಟುಂಬದವರು ಇದ್ದರು. ಗಂಡ-ಹೆಂಡಿರು ಇಬ್ಬರೇ. ಪೂರ್ವ

ಜರ್ಮನಿಯ ನಿರಾಶ್ರಿತರು. ಮನೆ ಕಳೆದುಕೊಂಡು ಬಂದು ಇಲ್ಲಿ ಸೇರಿದ್ದಾರೆ. ಮಕ್ಕಳು ಬೇರೆಬೇರೆ ಕಡೆ ಕೆಲಸಮಾಡುತ್ತಾರೆ. ವಯಸ್ಸಾಗಿದ್ದರೂ ಇವರು ದುಡಿಯುವುದನ್ನು ಬಿಟ್ಟಿಲ್ಲ. ಶ್ರೀಮತಿ ಕ್ಲೈನ್ ಬಹಳ ಒಳ್ಳೆಯವರು. ನನಗೆ ಮನೆಯ ಕೆಲಸದಲ್ಲಿ ಬಹಳ ಸಹಾಯಮಾಡುತ್ತಿದ್ದರು. ಕೊಠಡಿ ಚೊಕ್ಕಟ ವಾಗಿಡುವುದರಲ್ಲಿ ಆಕೆಯದೇ ಸಹಾಯ. ಒಂದು ದಿನ ನಾನು ಗಡಿಯಾರಕ್ಕೆ ಅಲಾರಂ ಕೊಟ್ಟಿದ್ದರೂ ನಿಲ್ಲಿಸಿ ಮಲಗಿಬಿಟ್ಟಿದ್ದೆ. ಶ್ರೀಮತಿ ಕ್ಲೈನ್, ಆಕೆಯ ಗಂಡ ಕೆಲಸಕ್ಕೆ ಹೊರಡುವ ಮುಂದೆ ಕಾಫಿ ಮಾಡಲು ಬಂದಾಗ, ನಾನು ಇನ್ನೂ ಎದ್ದು ಕಾಫಿ ಮಾಡದೆ ಇರುವುದನ್ನು ನೋಡಿ ತತ್‌ಕ್ಷಣ ಬಂದು ಎಬ್ಬಿಸಿ, ಕಾರ್ಖಾನೆಗೆ ಹೊತ್ತಾಯಿತೆಂದು ಹೇಳಿ ಬಟ್ಟೆ ಹಾಕಿಕೊಳ್ಳುವುದ ರೊಳಗಾಗಿ ಕಾಫಿ ಮಾಡಿಕೊಟ್ಟರು. ಒಂದು ದಿನ ರಾತ್ರಿ ನನ್ನ ಸ್ನೇಹಿತನ ಮನೆಗೆ ಸಂಜೆ ಊಟಕ್ಕೆ ಹೋಗಿಬರುವ ಹೊತ್ತಿಗೆ ರಾತ್ರಿ ೧೨ ಗಂಟೆ ಆಯಿತು. ದಾರಿಯಲ್ಲಿ ಬರುವಾಗ ಜೇಬಿಗೆ ಕೈಹಾಕಿ ನೋಡಿಕೊಂಡರೆ ಬೀಗದಕೈ ಮರೆತು ಬಂದುಬಿಟ್ಟಿದ್ದೆ. ಕಟ್ಟಡದ ಮುಂದಿನ ಬಾಗಿಲಿನ ಬೀಗದಕೈ, ಮನೆಯ ಬೀಗದಕೈ ಎರಡೂ ಇಲ್ಲ. ಏನು ಮಾಡಬೇಕೆಂದು ತಿಳಿಯದು. ಕಡೆಗೆ ಧೈರ್ಯ ಮಾಡಿ ಶ್ರೀ ಕ್ಲೈನ್ ಅವರ ಕರೆಗಂಟೆಯ ಸ್ವಿಚ್ ಅಮುಕಿದೆ. ಅವರ ಕೊಠಡಿ ಯಲ್ಲಿ ಗಂಟೆ ಬಾರಿಸಿತು. ಶ್ರೀಮತಿ ಕ್ಲೈನ್ ಎದ್ದು ಇಷ್ಟು ಹೊತ್ತಿನಲ್ಲಿ ಯಾರಿದು ಎಂದುಕೊಂಡು ದೀಪ ಹಾಕಿ ಕಿಟಕಿಯಲ್ಲಿ ಬಗ್ಗಿ ನೋಡಿದರು. ನಾನು ಆಗ, "ಕ್ಷಮಿಸಿ, ಬೀಗದಕೈ ಮರೆತಿದ್ದೇನೆ" ಎಂದೆ. ಪಾಪ, ಕೊಠಡಿಗೆ ಬಂದು ಬಾಗಿಲು ತೆಗೆದು, "ನನ್ನ ಮಗ ಹೊತ್ತಾಗಿ ಬಂದಿದ್ದರೆ ಏನು ಮಾಡು ತ್ತಿದ್ದೆ ? ಎಂತಹವರಿಗೂ ಮರೆವು ಬರುತ್ತದೆ" ಎಂದು ಹೇಳಿ ಸಮಾಧಾನ ಮಾಡಿದರು.

ಇಲ್ಲಿ ಯಾವ ಕುಟುಂಬದಲ್ಲೂ ಇಬ್ಬರಿಗಿಂತ ಹೆಚ್ಚು ಮಕ್ಕಳಿರುತ್ತಿರಲಿಲ್ಲ. ಇಬ್ಬರು ಮಕ್ಕಳಾದರೆ ಸಾಕು ಎನ್ನುತ್ತಾರೆ. ಅವಕ್ಕೆ ಒಳ್ಳೆಯ ಬಟ್ಟೆ ಹಾಕಿ ವಿದ್ಯಾಭ್ಯಾಸ ಮಾಡಿಸಿಬಿಡುತ್ತಾರೆ. ಅವರ ಜೊತೆಯಲ್ಲಿ ಸುಖವಾಗಿರಲು ತಾವು ಪ್ರಯತ್ನಿಸುತ್ತಾರೆ. ಹುಡುಗರು ದೊಡ್ಡವರಾದಮೇಲೆ ಬೇರೆ ಇರು ತ್ತಾರೆ. ಮದುವೆಯಾದಮೇಲೆ ಬೇರೆ ಮನೆ ಮಾಡಿ ಸಂಸಾರ ಮಾಡುತ್ತಾರೆ. ಒಬ್ಬರ ಭಾರವನ್ನು ಇನ್ನೊಬ್ಬರ ಮೇಲೆ ಹಾಕುವುದಿಲ್ಲ. ಗಂಡನ ಸಂಪಾದನೆ ಸಾಲದಿದ್ದರೆ ಹೆಂಡತಿ ಕೆಲಸಕ್ಕೆ ಹೊರಡುತ್ತಾಳೆ.

ಶ್ರೀಮತಿ ಕಾರ್ಡಿಯ ಮಗಳು ಕುಮಾರಿ ಕಾರ್ಡಿ ನನ್ನನ್ನು ಕಂಡು ಮೊದಲು ನಾಲ್ಕು ದಿನ ಹೆದರಿದರೂ ಅನಂತರ 'ಅಣ್ಣಾ' ಎಂದು ಕರೆಯಲು

ತೊಡಗಿದಳು. ಸಂಜೆ ಬರುವ ಹೊತ್ತಿಗೆ ಟೀಗೆ ನೀರು ಕಾಯಿಸಿ ಇಡುತ್ತಿದ್ದಳು. ಒಂದು ದಿನ ನನ್ನ ಮೇಜಿನ ಮೇಲೆ ಪುಸ್ತಕ ಹರಡಿದ್ದವು. ಮಧ್ಯಾಹ್ನ ಎಲ್ಲವನ್ನೂ ಜೋಡಿಸಿಟ್ಟು ಇನ್ನುಮೇಲೆ ಹೀಗೆ ಓರಣವಾಗಿ ಇಟ್ಟಿರಬೇಕೆಂದು ಹೇಳಿದಳು. ಮನೆಗೆ ಯಾರಾದರೂ ಸ್ನೇಹಿತರನ್ನು ತಿಂಡಿಗೆ ಕರೆದರೆ ಕಾಫಿ ಮಾಡಿ ಉಪಚರಿಸುವುದರಲ್ಲಿ ಸಹಾಯ ಮಾಡುತ್ತಿದ್ದಳು. ಕುಮಾರಿ ಫ್ರಾನ್ಸಿಸ್ಕ ಕಾರ್ಡಿ ಇಂಗ್ಲಿಷ್ ಪಾಠ ಕಲಿಯುತ್ತಿದ್ದುದರಿಂದ ಆ ಹುಡುಗಿಗೆ ಇಂಗ್ಲಿಷ್ ಹೇಳಿಕೊಡುತ್ತಿದ್ದೆ. ಆ ಮಗು ನನಗೆ ಜರ್ಮನ್ ಹೇಳಿಕೊಡು ತ್ತಿದ್ದಳು. ಒಂದು ಸಾರಿ ಆ ಹುಡುಗಿಯ ತಾಯಿ ಬೇರೆ ಊರಿಗೆ ಹೋಗಿ ದ್ದಾಗ ಕಾಗದ ಬರೆಯಬೇಕಾಯಿತು. ಜರ್ಮನ್ ಭಾಷೆಯಲ್ಲಿ ಬರೆದು ಅದನ್ನು ತಿದ್ದುವಂತೆ ಹೇಳಿ ಕೊಠಡಿಯಲ್ಲಿ ಕೂಡಿಸಿ ಸಿನಿಮಾಗೆ ಹೊರಟು ಹೋದೆ. ನಾನು ಬರುವುದು ರಾತ್ರಿ ೧೧ ಗಂಟೆ ಆದುದರಿಂದ ಕೊಠಡಿಯ ಬಾಗಿಲು ಹಾಕಿತ್ತು. ಬಾಗಿಲು ತೆಗೆದು ದೀಪ ಹಾಕಿದೊಡನೆ ಶ್ರೀ ಸಿದ್ದವನ ಹಳ್ಳಿ ಕೃಷ್ಣಶರ್ಮರವರ ಸಹಿಯುಳ್ಳ ಒಂದು ಪತ್ರ ಮೇಜಿನ ಮೇಲಿತ್ತು. ನೋಡಿದ ಒಡನೆ ಆಶ್ಚರ್ಯ, ಸಂತೋಷ. ನನಗೆ ತಿಳಿಸದೆ ಇಲ್ಲಿಗೆ ಯಾವಾಗ ಬಂದರು ಎಂದುಕೊಂಡು ಕಾಗದ ಪೂರ್ತಿ ಓದಲೆಂದು ಪತ್ರ ಬಿಚ್ಚುತ್ತೇನೆ, ಮೇಲೆ ಜರ್ಮನ್ ಭಾಷೆಯಲ್ಲಿ ಬರೆದಿದೆ, ಕೆಳಗಡೆ ಅವರೇ ಬರೆದ ಕಾಗದದ ನಾಲ್ಕು ಪಂಕ್ತಿಗಳೂ ಅವರ ಸಹಿ ಸಹ ಇದೆ. 'ಇತಿ ಆಶೀರ್ವಾದಗಳು' ಎಂಬುದು ತಲೆಕೆಳಗಾಗಿದೆ. ಅದರ ಕೆಳಗೆ ಸರಿಯೇ ಎಂದು ಜರ್ಮನ್ ಭಾಷೆಯಲ್ಲಿ ಬರೆದಿದೆ. ಆಗ ನನಗೆ ತಿಳಿಯಿತು. ಇದು ಈ ಕುಮಾರಿ ಫ್ರಾನ್ಸಿಸ್ಕ ಕಾರ್ಡಿ ಮಾಡಿರುವ ಕೆಲಸ ಎಂದು. ಆದರೆ ಕನ್ನಡ ಅಕ್ಷರವನ್ನು ಚಿತ್ರ ಬರೆದಂತೆ ಬರೆದಿದ್ದರೂ ಶರ್ಮಾಜಿಯವರು ಬರೆದ ಪತ್ರದ ಅಕ್ಷರ ಮತ್ತು ಸಹಿಗೂ ಈ ಹುಡುಗಿ ಕಾಪಿ ಮಾಡಿರುವ ಅಕ್ಷರಕ್ಕೂ ಸ್ವಲ್ಪವೂ ವ್ಯತ್ಯಾಸ ಕಾಣುತ್ತಿರಲಿಲ್ಲ. ಆ ಹುಡುಗಿಯ ಚತುರತೆಯನ್ನು ನೋಡಿ ಸಂತೋಷವಾಯಿತು.

ಜರ್ಮನಿಯಲ್ಲಿ ಇದ್ದಷ್ಟು ದಿನವೂ (ಮೊದಲ ಎರಡು-ಮೂರು ದಿನ ಬಿಟ್ಟರೆ) ಕೊಠಡಿಗಾಗಲಿ, ಪೆಟ್ಟಿಗೆಗಾಗಲಿ ಬೀಗ ಹಾಕಲಿಲ್ಲ. ಎಲ್ಲವನ್ನೂ ಹೊರಗಡೆಯೇ ಇಡುತ್ತಿದ್ದೆ. ಒಂದೊಂದು ದಿನ ದುಡ್ಡಿನ ಚೀಲವನ್ನು ಮರೆತು ಮೇಜಿನ ಮೇಲೆ ಇಡುತ್ತಿದ್ದೆ. ಆದರೆ ೨ ಆಣೆಯಷ್ಟು ಸಹ ನಾನು ಕಳೆದುಕೊಳ್ಳಲಿಲ್ಲ.

ನನ್ನ ಕೊಠಡಿಯ ಮುಂದೆ ಸ್ವಲ್ಪ ಸ್ಥಳ ಇತ್ತು. ಹುಡುಗರು ಆಡಲು

ಅವಕಾಶವಿತ್ತು. ಸುಮಾರು ೨೦ ಮಂದಿ ಹುಡುಗ–ಹುಡುಗಿಯರು ಬಂದು ಆಡುತ್ತಿದ್ದರು. ಎಲ್ಲರೂ ನನ್ನನ್ನು "ಚಿಕ್ಕಪ್ಪ" ಎಂದು ಕೂಗುವ ಅಭ್ಯಾಸ. ಸಂಜೆ ಕಾರ್ಖಾನೆಯಿಂದ ಬಂದ ಕೂಡಲೇ ಎಲ್ಲರೂ ಹತ್ತಿರ ಬಂದು ಕೈ ಕುಲುಕಿ "ನಮಸ್ಕಾರ" ಎಂದು ಹೇಳುತ್ತಿದ್ದರು. ಸಣ್ಣ ಮಕ್ಕಳು ಬಂದು (Uncle, Guten Abend) "ಚಿಕ್ಕಪ್ಪ, ನಮಸ್ಕಾರ" ಎಂದು ಹೇಳಿ ದೇಹ ವನ್ನೇ ಬಗ್ಗಿಸಿ ನಮಸ್ಕಾರ ಮಾಡುತ್ತಿದ್ದರು. ಸಣ್ಣ ಹುಡುಗರಿಗೆ ಏನಾದರೂ ಕೊಟ್ಟರೆ ವಂದನೆಯನ್ನು ಅರ್ಪಿಸದೆ ಇರುತ್ತಿರಲಿಲ್ಲ. ಇದು ಅವರ ತಂದೆ ತಾಯಿ ಕಲಿಸಿದ ಪಾಠ. ದೊಡ್ಡವರು ಮನೆಗೆ ಬಂದರೆ ಮಕ್ಕಳು ಮುಂದೆ ಬಂದು ಕೈಕುಲುಕಿ ನಮಸ್ಕಾರ ಮಾಡುತ್ತಾರೆ. ಬಸ್ಸಿನಲ್ಲಿಯಾಗಲೀ ರೈಲಿನಲ್ಲಿ ಯಾಗಲೀ ಹುಡುಗರು ಪ್ರಯಾಣ ಮಾಡುತ್ತಿರುವಾಗ ದೊಡ್ಡವರೂ ಮುದುಕರೂ ಬಂದರೆ ಹುಡುಗರು ಎದ್ದು ದೊಡ್ಡವರಿಗೆ ಸ್ಥಳ ಕೊಡುತ್ತಾರೆ. ತಾವು ನಿಂತೇ ಪ್ರಯಾಣ ಮಾಡುತ್ತಾರೆ.

"ನಮಸ್ಕಾರ, ನಿದ್ದೆ ಆಯಿತೆ? ಕ್ಷೇಮವೇ?" ಎಂದು ಸ್ನೇಹಿತರನ್ನು ಕಂಡಾಗ ಕೇಳುವುದು ನಮ್ಮಲ್ಲಿ ರೂಢಿ. ಜರ್ಮನಿಯಲ್ಲಿ ಒಂದೇ ಮನೆಯಲ್ಲಿ ವಾಸಮಾಡುವ ತಾಯಿ, ಮಕ್ಕಳು, ಗಂಡಹೆಂಡಿರೂ ಬೆಳಗಾದರೆ ಈ ಕುಶಲ ಪ್ರಶ್ನೆ ಮಾಡುತ್ತಾರೆ. ಬೆಳಗ್ಗೆ ಯಾರು ಸ್ನೇಹಿತರು ಸಿಕ್ಕಿದರೂ ಸರಿಯೆ, ತಲೆ ಮೇಲಿರುವ ಹ್ಯಾಟನ್ನು ತೆಗೆದು ಕೈಕುಲುಕಿಸಿ "ನಮಸ್ಕಾರ, ಕ್ಷೇಮವೆ? ಒಳ್ಳೆಯ ನಿದ್ದೆ ಆಯಿತೆ? ಮನೆಯಲ್ಲಿ ಹೇಗಿದ್ದಾರೆ?" ಎಂಬ ಕುಶಲಪ್ರಶ್ನೆ ಆಗಿ ಮುಂದಿನ ಮಾತು ನಡೆಯುತ್ತದೆ. ಸ್ನೇಹಿತರು ಅಗಲುವುದಕ್ಕೆ ಮುಂಚೆ "ಪುನಃ ನೋಡೋಣ" (ಆಫ್ ವೀಡರ್ ಸೇಹನ್) ಎಂದು ಕೈಕುಲುಕಿಸಿ ಬೀಳ್ಕೊಡುತ್ತಾರೆ. ಮಲಗುವುದಕ್ಕೆ ಮುಂಚೆ "ಒಳ್ಳೆಯ ನಿದ್ದೆ ಮಾಡಿ" ಎಂದು ಹೇಳುತ್ತಾರೆ. ಬೆಳಗಿನಿಂದ ರಾತ್ರಿಯವರೆಗೆ ಈ ಕುಶಲ ಪ್ರಶ್ನೆಗಳಿಗೆ ಕೊನೆಮೊದಲಿಲ್ಲ. ಜರ್ಮನ್‌ನಲ್ಲಿ ಮಾತನಾಡಿದ್ದಕ್ಕೆ "ಡಾಂಕೆ". ಹೆಂಡತಿ ಗಂಡನಿಗೆ ಕಾಫಿ ತಂದರೂ "ಡಾಂಕೆ". ಎಲ್ಲಿ ಹೋದರೂ ಈ ಗೌರವ, ವಿಶ್ವಾಸವನ್ನು ಕಾಣಬಹುದು. ಅಂಗಡಿಗೆ ಹೋದರೆ ಯಾರೇ ಆಗಲಿ, ಒಡನೆಯೇ "ನಮಸ್ಕಾರ" ಎನ್ನುತ್ತಾರೆ. ಬರುವಾಗ "ಬಹಳ ವಂದನೆಗಳು, ಪುನಃ ಬನ್ನಿ" ಎಂದು ಹೇಳುತ್ತಾರೆ.

ನಮ್ಮ ದೇಶದಲ್ಲಿ ನೆಂಟರಿಷ್ಟರ ಮನೆಗೆ ಹೋದರೆ ಕಾಫಿ ಮಾಡಿಕೊಡುತ್ತಾರೆ. ಬರುವಾಗ ಹೆಂಗಸರಿಗೆ ತೆಂಗಿನಕಾಯಿ, ಕುಂಕುಮ, ಹೂವು, ಎಲೆ–ಅಡಿಕೆ ಕೊಡುತ್ತಾರೆ. ಜರ್ಮನಿಯಲ್ಲಿ ನಾವು ಒಬ್ಬರ ಮನೆಗೆ ಹೋದಾಗ ಒಂದಷ್ಟು

ಹೂ ತೆಗೆದುಕೊಂಡು ಹೋಗಬೇಕು. ಹೂವಿನ ಬೆಲೆ ಬಹಳ ಹೆಚ್ಚು. ಆದರೂ ತೆಗೆದುಕೊಂಡು ಹೋಗುವುದು ರೂಢಿ. ಹೂವನ್ನು ತೆಗೆದುಕೊಂಡು ಹೋಗಿ ಮನೆಯ ಹೆಣ್ಣು ಮಗಳಿಗಾಗಲೀ, ಯಜಮಾನಿಗಾಗಲೀ ಕೊಡಬೇಕು. ಅವರ ಆನಂದ ಹೇಳಲು ತೀರದು. ಅದನ್ನು ಒಂದು ಹೂವಿನ ಕುಂಡದಲ್ಲಿ ಇಟ್ಟು ತಂದವರನ್ನು ಹೊಗಳಿದ್ದೂ ಹೊಗಳಿದ್ದೇ. ಅನೇಕರು ಹೂವಿನ ಕುಂಡಗಳನ್ನು ಖಾಯಿಲೆ ಆದವರಿಗೆ ತಮ್ಮ ಹೆಸರಿನ ಚೀಟಿಯೊಡನೆ ಕಳಿಸಿಕೊಡುತ್ತಾರೆ. ಊಟಕ್ಕಾಗಲಿ, ಮಾತಿಗಾಗಲಿ ಕುಳಿತಾಗ ಎಲ್ಲರೂ ಒಟ್ಟಿಗೆ ಕೂಡುತ್ತಾರೆ. ಮೊದಲು ಹೆಂಗಸರಿಗೆ ಸ್ಥಳ ಕೊಟ್ಟು ಅವರು ಕುಳಿತಮೇಲೆ ಗಂಡಸರು ಕುಳಿತುಕೊಳ್ಳುತ್ತಾರೆ. ಎಲ್ಲದಕ್ಕೂ ಮೊದಲ ಸ್ಥಾನ ಸ್ತ್ರೀಯರಿಗೆ. ಕೊಠಡಿಯಿಂದ ಹೊರಗಡೆ ಹೋಗಬೇಕಾದರೆ ಗಂಡಸು ಹೆಂಗಸಿಗೆ ಬಾಗಿಲು ತೆಗೆದು, ಹೆಂಗಸರು ಹೋದಮೇಲೆ ಗಂಡಸರು ಹೋಗುತ್ತಾರೆ. ಅವರ ಹಿಂದೆ ಮಕ್ಕಳು. ಹೊರಗಡೆಯಿಂದ ಬಂದಾಗಾಗಲಿ ಹೋಗುವಾಗಾಗಲಿ ಹೆಂಗಸರು ಹಾಕಿಕೊಂಡಿರುವ ನಿಲುವಂಗಿ ಬಿಚ್ಚಲು ಗಂಡಸರು ಸಹಾಯಮಾಡಿ ಅದನ್ನು ತೆಗೆದು ಗೂಟಕ್ಕೆ ನೇತುಹಾಕಿ ಅನಂತರ ಅವರು ತಮ್ಮ ಅಂಗಿ ತೆಗೆಯುತ್ತಾರೆ. ಹಾಗೆ ತೆಗೆಯದಿದ್ದರೆ ಹೆಂಗಸರನ್ನು ಅಗೌರವದಿಂದ ಕಂಡಂತೆ. ರೈಲುಗಾಡಿಯಲ್ಲಿ ಆಗಲಿ, ಬಸ್ಸಿನಲ್ಲಿಯಾಗಲಿ ಹೆಂಗಸರಿಗೆ ಸ್ಥಳವಿಲ್ಲದಿದ್ದರೆ ಗಂಡಸರು ನಿಂತು ಮೊದಲು ಹೆಂಗಸರಿಗೆ ಸ್ಥಳ ಕೊಡುತ್ತಾರೆ. ಗೌರವ ಕೊಡುವ ಶ್ರೇಣಿಯಲ್ಲಿ ಮೊದಲನೆಯ ಸ್ಥಾನ ಸ್ತ್ರೀಯರಿಗೆ; ಎರಡನೆಯದು ಮುದುಕರಿಗೆ.

ಬ್ರೌನ್ಸ್‌ವೈಗ್‌ಗೆ ಭಾರತೀಯರು ಹೋಗಿರುವುದು ಬಹಳ ಕಡಮೆ. ಎಲ್ಲರಿಗೂ ನನ್ನ ಜೊತೆಯಲ್ಲಿ ಮಾತನಾಡಿ ಮನೆಗೆ ಊಟಕ್ಕೆ ಕರೆಯಬೇಕು ಎಂಬ ಕುತೂಹಲ. ಪ್ರತಿ ಶನಿವಾರ ಒಂದು ಆಹ್ವಾನ ಇದ್ದೇ ಇರುತ್ತಿತ್ತು. ಶನಿವಾರ ಊಟಕ್ಕೆ ಆಹ್ವಾನಿಸಿ ಭಾರತದ ವಿಚಾರ ಕೇಳುತ್ತಿದ್ದರು. ಭಾಷಾ ವಿಚಾರ ಕೇಳುತ್ತಿದ್ದರು.

ಮ್ಯೂನಿಚ್ ನಗರದಲ್ಲಿ ವಿಶ್ವವಿದ್ಯಾನಿಲಯವನ್ನು ಹುಡುಕಿಕೊಂಡು ಹೋದಾಗ ದಾರಿ ತಪ್ಪಿತು. ಊರಿನ ಭೂಪಟ ಹಿಡಿದು ರಸ್ತೆ ಹುಡುಕುತ್ತಿದ್ದಾಗ ಒಬ್ಬ ಹೆಣ್ಣುಮಗಳು "ನನಗೆ ಸ್ವಲ್ಪ ಇಂಗ್ಲಿಷ್ ಬರುತ್ತದೆ, ತಮಗೆ ಏನು ಸಹಾಯ ಮಾಡಲಿ?" ಎಂದು ಕೇಳಿದಳು. "ನಾನು ವಿಶ್ವವಿದ್ಯಾನಿಲಯಕ್ಕೆ ದಾರಿ ಹುಡುಕುತ್ತಿದ್ದೇನೆ" ಎಂದು ಹೇಳಿದಮೇಲೆ ನನ್ನ ಜೊತೆಗೆ ಆ ಕಟ್ಟಡದ ಹತ್ತಿರದವರೆಗೂ ಬಂದು ತೋರಿಸಿ ಹೋದಳು. ಈ ರೀತಿ ಆದದ್ದು ಇದು ಒಂದೇ ಸಲ ಅಲ್ಲ; ಅನೇಕ ಸಾರಿ ಜನ ತಾವಾಗಿಯೇ

ಮುಂದೆ ಬಂದು ಸಹಾಯಮಾಡಿದ್ದಾರೆ. ಇದೇ ನಗರದ ಪ್ರಾಣಿಗಳ ಸಂಗ್ರಹಾಲಯಕ್ಕೆ ಹೋಗಬೇಕೆಂದು ಬಸ್ಸು ಹತ್ತಿದೆ. ಆದರೆ ೨-೩ ಬಸ್ಸು ಬದಲಾಯಿಸಿ ಅಲ್ಲಿಗೆ ಹೋಗಬೇಕಾಗಿತ್ತು. ನಾನು ಕಂಡಕ್ಟರ್‌ಗೆ ಸಂಗ್ರಹಾಲಯಕ್ಕೆ ಹೋಗುವ ದಾರಿ ಹೇಳಿ, "ಯಾವ ಬಸ್ಸು ಹತ್ತಬೇಕು ?" ಎಂದು ಕೇಳಿದೆ. ಇದನ್ನು ಕೇಳಿ ಒಬ್ಬ ಮುದುಕಿ "ನಾನು ಅಲ್ಲಿಗೆ ಹೋಗುತ್ತಿದ್ದೇನೆ. ನನ್ನ ಜೊತೆಗೆ ಬನ್ನಿ, ಕರೆದುಕೊಂಡು ಹೋಗುತ್ತೇನೆ" ಎಂದು ೨-೩ ಬಸ್ಸು ಬದಲಾಯಿಸಿ, ಸಂಗ್ರಹಾಲಯದ ಹತ್ತಿರ ಕರೆದುಕೊಂಡುಹೋಗಿ ಬಿಟ್ಟಳು.

ಜರ್ಮನಿಯ ಜನ ಹೀಗೆ ವಿಶ್ವಾಸಪರರು.

೯. ಸಾಮಾಜಿಕ ಆಚಾರಗಳು

ನಡೆವುದೊಂದೆ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ
ನಡುವೆ ಎತ್ತಣದು ಸರ್ವಜ್ಞ ?

—ಸರ್ವಜ್ಞ ಕವಿ

ನೈರ್ಮಲ್ಯ, ಚೊಕ್ಕಟತನದಲ್ಲಿ ಜರ್ಮನಿ, ಸ್ವಿಡ್ಜರ್ಲೆಂಡ್, ಸ್ವೀಡನ್ ದೇಶಗಳು ಯೂರೋಪಿನಲ್ಲಿ ಮೊದಲನೆಯವು. ಮನೆಯಲ್ಲಿ, ಹೊರಗೆ ರಸ್ತೆಯಲ್ಲಿ, ಎಲ್ಲಾ ಕಡೆಯಲ್ಲೂ ಸರ್ಕಾರದ ಪ್ರಯತ್ನದ ಜೊತೆಗೆ ಜನರೂ ತಾವು ತಮ್ಮ ಊರನ್ನು ಚೊಕ್ಕಟವಾಗಿ ಇಡಬೇಕೆಂದು ತಿಳಿದುಕೊಂಡಿದ್ದಾರೆ. ಅವರಲ್ಲೂ ಬೆಳಗ್ಗೆ ಕಸ ಗುಡಿಸುತ್ತಾರೆ. ಅನೇಕರು ಯಂತ್ರಗಳ ಸಹಾಯದಿಂದ ಈ ಕೆಲಸ ಮಾಡುತ್ತಾರೆ. ಮನೆಯನ್ನು ಚೊಕ್ಕಟವಾಗಿಡುವುದರ ಜೊತೆಗೆ ಅಂದವಾಗಿ ಇಟ್ಟಿರುತ್ತಾರೆ. ಎಲ್ಲಾ ಕೆಲಸವನ್ನೂ ತಾವೇ ಮಾಡಿಕೊಳ್ಳುತ್ತಾರೆ. ಗುಡಿಸಿದ ಕಸವನ್ನು ಒಂದು ಡಬ್ಬದಲ್ಲಿ ಹಾಕಿ ಇಟ್ಟಿದ್ದು, ತುಂಬಿದ ಮೇಲೆ ಅದನ್ನು ಮನೆಯ ಹೊರಗಡೆ ಇರುವ ದೊಡ್ಡ ಡಬ್ಬಕ್ಕೆ ಹಾಕುತ್ತಾರೆ. ವಾರಕ್ಕೆ ಒಮ್ಮೆ ಮನೆಯನ್ನೆಲ್ಲಾ ಚೊಕ್ಕಟಮಾಡುತ್ತಾರೆ. ಸೆಕೆ ಕಡಮೆ ಆದುದರಿಂದ ಮೈ ಬೆವರುವುದಿಲ್ಲ. ಇದರಿಂದ ಬಟ್ಟೆ ಕೊಳೆ ಆಗುವುದೂ ಕಡಮೆ. ಕೆಲಸ ಮಾಡುವಾಗ ಏಪ್ರನ್ ಬಟ್ಟೆ ಕಟ್ಟಿಕೊಂಡು, ಕೆಲಸವಾದ ಕೂಡಲೇ ಬಿಚ್ಚಿ ಇಡುತ್ತಾರೆ. ಅಂಗಡಿಯಲ್ಲಿ ಅಥವಾ ಕಾರ್ಖಾನೆಯಲ್ಲಿ ಕೆಲಸ ಮಾಡುವಾಗಲೂ ಅಷ್ಟೆ. ಉಡುಪಿನಲ್ಲಿ ಯಾವಾಗಲೂ ಶುಭ್ರತೆ. ತಾವೇ ಒಗೆದುಕೊಳ್ಳುವುದಲ್ಲದೆ ಅಗಸನಿಗೂ ಹಾಕಬಹುದು. ಆದರೆ ಒಗೆಯಲು ಹೆಚ್ಚು ದುಡ್ಡು ಕೊಡಬೇಕು.

ಬೆಳಗಿನ ಜಾವವೇ ಮುನಿಸಿಪಾಲಿಟಿಯವರು ಬಂದು ಬೀದಿಯನ್ನು, ಮೋರಿಗಳನ್ನು ಚೊಕ್ಕಟಮಾಡುತ್ತಾರೆ. ಕಸ ಎತ್ತುವ ಮಿಷನ್ ಉಳ್ಳ ಲಾರಿ ಆಗಾಗ ಬಂದು ಬೀದಿಯಲ್ಲಿ ಓಡಾಡುತ್ತಿರುತ್ತದೆ. ರಸ್ತೆ ಯಾವಾಗಲೂ ನಿರ್ಮಲ. ಇದಕ್ಕೆ ಕಾರಣ ಮುನಿಸಿಪಾಲಿಟಿಯವರಲ್ಲದೆ, ಜನರೂ ಯಾರೂ ಬೀದಿಯಲ್ಲಿ ಕಸ ಹಾಕುವುದಿಲ್ಲ. ಒಂದು ತುಂಡು ಕಾಗದ ಬೀದಿಯಲ್ಲಿ ಬಿಸಾಡಿದ್ದನ್ನು ನೋಡುವುದು ಕಷ್ಟ. ಅಲ್ಲಲ್ಲಿ ಕಸ ಹಾಕಲು ಬುಟ್ಟಿಗಳನ್ನು ಇಟ್ಟಿರುತ್ತಾರೆ. ಯಾರೇ ಆಗಲಿ, ಬಾಳೆಹಣ್ಣು, ಕಡಲೇಕಾಯಿ, ಕಿತ್ತಳೇ

ಹಣ್ಣು ತಿಂದುಕೊಂಡು ಹೋದರೂ, ಅವುಗಳ ಸಿಪ್ಪೆಯನ್ನು ತಮ್ಮ ಜೇಬಿನಲ್ಲಿ ತುಂಬಿಕೊಳ್ಳುತ್ತಾರೆ. ಕಸದ ಬುಟ್ಟಿಯನ್ನು ಕಂಡಾಗ ಜೇಬನ್ನು ಖಾಲಿ ಮಾಡುತ್ತಾರೆ. ಈ ಅಭ್ಯಾಸ ಅವರಲ್ಲಿ ಬಂದುಬಿಟ್ಟಿದೆ. ತಮ್ಮ ಜೇಬನ್ನೂ, ಕೈಚೀಲವನ್ನೂ ಕಸದ ಬುಟ್ಟಿಯಂತೆ ಉಪಯೋಗಿಸಿಕೊಳ್ಳುತ್ತಾರೆ. ಇದರಿಂದ ಮರದ ಎಲೆ ಉದುರುವುದು ಬಿಟ್ಟರೆ ಇನ್ನೇನು ಗುಡಿಸಬೇಕು ಮುನಿಸಿಪಾಲಿಟಿಯವರು ? ರಸ್ತೆ ರಿಪೇರಿಯಂತಹ ಕೆಲಸಗಳನ್ನೂ ಅಷ್ಟೆ, ರಾತ್ರಿಯಲ್ಲಿ ಜನಸಂಚಾರ ಕಡಮೆ ಇದ್ದಾಗಲೇ ಮುಗಿಸಿಬಿಡುತ್ತಾರೆ. ರಸ್ತೆಯ ಮೋರಿಗಳನ್ನಾಗಲೀ, ಗೋಡೆಗಳನ್ನಾಗಲೀ ಯಾರೂ ಕಕ್ಕಸುಗಳಂತೆ ಉಪಯೋಗಿಸುವುದಿಲ್ಲ. ಸಾರ್ವಜನಿಕ ಕಕ್ಕಸು ಕಟ್ಟಿರುತ್ತಾರೆ. ಅದನ್ನು ಉಪಯೋಗಿಸಲು ೧೫–೨೦ ಪೈಸೆ ಕೊಡಬೇಕು. ಅಲ್ಲಿ ಕೈ ತೊಳೆದುಕೊಳ್ಳಲು ಸೋಪ್, ಟವೆಲ್ ಸಹ ಕೊಡುತ್ತಾರೆ.

ಒಂದು ಸಾರಿ ಸ್ಟುಡ್‌ಗಾರ್ಟ್‌ನಲ್ಲಿ ೧೦ ಚಿತ್ರ ಕೊಂಡು ದುಡ್ಡು ಕೊಟ್ಟೆ. ಚಿಲ್ಲರೆಯನ್ನು ಜೇಬಿನಲ್ಲಿ ಹಾಕಿಕೊಳ್ಳುವ ಅವಸರದಲ್ಲಿ ಚಿತ್ರಗಳನ್ನು ಅಂಗಡಿಯಲ್ಲಿ ಬಿಟ್ಟು ಹೊರಟು ಬಂದೆ. ಸುಮಾರು ಅರ್ಧ ಮೈಲಿ ಬಂದಿರಬಹುದು. ಅಂಗಡಿಯವನು ನನ್ನನ್ನು ಅಟ್ಟಿಸಿಕೊಂಡು ಬಂದು ನನ್ನ ಬೆನ್ನಿನ ಮೇಲೆ ಕೈ ಹಾಕಿದ. ಚಿತ್ರಗಳನ್ನು ಕೊಂಡದ್ದಕ್ಕೆ ದುಡ್ಡು ಕೊಟ್ಟೆನೋ ಇಲ್ಲವೋ ಎಂಬ ಭಯ ನನಗೆ. ಅಂಗಡಿಗೆ ಹಿಂದಿರುಗುತ್ತೇನೆ, ಆತ ತನ್ನ ಕೈಯಲ್ಲಿದ್ದ ಚಿತ್ರಗಳನ್ನು ಕೊಟ್ಟು ಮರೆತುಬಂದಿದ್ದನ್ನು ಜ್ಞಾಪಿಸಿದ. ನಮ್ಮ ದೇಶದಲ್ಲಿ ಸತ್ಯವಂತರಾಗಿರಬೇಕೆಂದು ಮಾತನಾಡುತ್ತೇವೆ. ಅವರು ಕಾರ್ಯತಃ ನಡೆಯುತ್ತಾರೆ. ಬೆಳಗಿನ ಜಾವ ಹಾಲಿನ ಸೀಸೆ, ಬ್ರೀಡ್, ಪತ್ರಿಕೆಗಳನ್ನು ಮನೆಯ ಬಾಗಿಲಿನಲ್ಲಿ ಇಟ್ಟು ಹೋಗಿರುತ್ತಾರೆ. ಎದ್ದನಂತರ ಬಾಗಿಲು ತೆಗೆದು ಎಲ್ಲವನ್ನೂ ತೆಗೆದುಕೊಳ್ಳುತ್ತಾರೆ ಮನೆಯವರು. ಅಲ್ಲಿ ಮೋಸಮಾಡಬೇಕೆಂಬ ಬುದ್ಧಿ ಬಹಳ ಕಡಮೆ. ಬಸ್ಸು ಹತ್ತುವಾಗ ಎಲ್ಲರೂ ತಾವಾಗಿಯೇ ಟಿಕೆಟ್ ತೆಗೆದುಕೊಳ್ಳುತ್ತಾರೆ. ಒಂದು ವೃತ್ತಾಂತ ಪತ್ರಿಕೆಯ ಅಂಗಡಿಯ ಡಬ್ಬಿಯಲ್ಲಿ ೧೦ ಪೆನ್ನಿಂಗ್ ಹಾಕಿ ಒಂದು ಪತ್ರಿಕೆ ತೆಗೆದುಕೊಂಡು ಹೋಗುತ್ತಿದ್ದರು. ಇದನ್ನು ನೋಡಿ ನನಗೆ ಆಶ್ಚರ್ಯ. ಲಕ್ಷಾಂತರ ಜನ ಓಡಾಡುವ ಕಡೆ ಯಾರೂ ಕಾವಲಿಲ್ಲ. ಯಾವು ಬೇಕಾದರೂ ಎಷ್ಟು ಪತ್ರಿಕೆಗಳನ್ನಾದರೂ ತೆಗೆದುಕೊಂಡು ಹೋಗಬಹುದು. ಇದು ಒಂದು ತರದ ಶಿಕ್ಷಣ. ಒಬ್ಬರಿಗೆ ಒಬ್ಬರು ಮೋಸ ಮಾಡದೆ ಸತ್ಯದಿಂದ ನಡೆಯುತ್ತಿರುವುದೇ ಇವರ ಪ್ರಗತಿಗೆ ಕಾರಣ.

ಭಾರತ ಮತ್ತು ಜರ್ಮನಿಯ ವಿಚಾರ ಮಾತನಾಡುತ್ತ ಶ್ರೀ ಕಾಲ್ಬಸ್ ಎಂಬವರು ಹೇಳಿದರು: "ಜರ್ಮನಿಯ ದುಡಿತವನ್ನು ಭಾರತ ಕಲಿಯ ಬೇಕು. ಈ ದುಡಿತದ ಯಂತ್ರಕ್ಕೆ ಸಿಕ್ಕಿ ದಿನವೆಲ್ಲಾ ದುಡಿಯುತ್ತಾರೆ. ಯಾರಿಗೋ, ಯಾವುದಕ್ಕೋ, ತಿಳಿಯದು. ಇಷ್ಟು ದುಡಿದರೂ ಮನಸ್ಸಿಗೆ ಶಾಂತಿಯಿಲ್ಲ. ಹೇಗೆ ಜೀವಿಸಬೇಕೋ ಗೊತ್ತೇ ಇಲ್ಲ. ನಿಜವಾದ ಹರ್ಷವೇ ಇಲ್ಲ. ಈ ಪಾಠವನ್ನು ಭಾರತದಿಂದ ಕಲಿಯಬೇಕು. ಭಾರತೀಯರು ಬಡವ ರಾದರೂ ಸುಖಸಂತೋಷಗಳಿಂದ ಇದ್ದಾರೆ. ಸರಿಯಾದ ಮಾರ್ಗದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಈ ಪಾಠ ನಾವು ಕಲಿಯಬೇಕು."

ಪ್ರತಿಯೊಬ್ಬನಿಗೂ ಓದುಬರಹ ಬರುವುದರಿಂದ ಎಲ್ಲರೂ ಪತ್ರಿಕೆ ಓದು ತ್ತಾರೆ. ಎಂಥ ಸಣ್ಣ ಪತ್ರಿಕೆಯಾದರೂ ೧೦–೧೫ ಸಾವಿರ ಪ್ರತಿ ಹಂಚು ತ್ತಾರೆ. ಪತ್ರಿಕೆ ಹೊರಡಿಸದ ಊರೇ ಇಲ್ಲ. ಸಾಮಾನ್ಯವಾಗಿ ಪತ್ರಿಕೆಯಲ್ಲಿ ಬಂದುದೆಲ್ಲ ನಿಜವೇ ಎಂಬ ನಂಬಿಕೆ ಜನರಲ್ಲಿದೆ. ಭಾರತೀಯ ಸ್ನೇಹಿತ ರೊಬ್ಬರು ೨ ವರ್ಷದಿಂದ ಬೌನ್ಸ್ವೈಗ್‌ನಲ್ಲಿ ಇದ್ದರು. ಅವರಿಗೆ ಜರ್ಮನ್ ಭಾಷೆ ಬರುತ್ತಿತ್ತು. ಅವರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ. ಇವರನ್ನು ಒಬ್ಬ ಇಂಜಿನಿಯರಿಂಗ್ ಓದುತ್ತಿರುವ ವಿದ್ಯಾರ್ಥಿಯ ಪರಿಚಯ ಮಾಡಿ ಕೊಡಿ ಎಂದು ಕೇಳಿದೆ. ಅವರು ಹೇಳಿದರು: "ಇದು ಭಾರತವಲ್ಲ. ಪ್ರತಿ ಹುಡುಗನಿಗೂ ಒಬ್ಬ ಗೆಳತಿ, ಹುಡುಗಿ ಇರುತ್ತಾಳೆ. ಅದು ಇಲ್ಲಿಯ ರೂಢಿ. ಶಾಲೆ ಬಿಟ್ಟು ಮಿಕ್ಕ ವೇಳೆಯನ್ನು ತಮ್ಮ ಸ್ನೇಹಿತರೊಂದಿಗೆ ಕಳೆಯುತ್ತಾರೆ. ಜರ್ಮನಿಯಲ್ಲಿ ಒಬ್ಬ ಸ್ನೇಹಿತೆ ಸಿಗುತ್ತಾಳೆಯೇ ವಿನಾ ಸ್ನೇಹಿತ ನಿಮಗೆ ಸಿಗುವುದು ಕಷ್ಟ" ಎಂದು ಹೇಳಿದರು. ಯಾವಾಗ ಸಿಕ್ಕಿದರೂ ನಿನಗೆ ಇನ್ನೂ ಯಾರೂ ಗೆಳತಿ ಸಿಕ್ಕಿಲ್ಲವೇ ಎಂದು ಕೇಳುತ್ತಿದ್ದರು. ಹೊರದೇಶದಿಂದ ಬಂದ ಮೇಲೆ ಗೆಳತಿ ಒಬ್ಬಳು ಇದ್ದೇ ಇರಬೇಕೆಂದು ಅವರ ಅಭಿಪ್ರಾಯ. ಐರೋಪ್ಯ ದೇಶದಲ್ಲಿ ಮೊದಲಿನಿಂದಲೂ ರೂಢಿಗೆ ಬಂದುಬಿಟ್ಟಿದೆ ಇದು. ಚಿಕ್ಕ ವಯಸ್ಸಿ ನಿಂದಲೇ ಒಬ್ಬ ಹುಡುಗಿ–ಹುಡುಗ ಸ್ನೇಹಿತರಾಗುತ್ತಾರೆ. ಸ್ನೇಹ ಎಲ್ಲಾ ತರದಲ್ಲೂ ಬೆಳೆಯುತ್ತದೆ. ಸಿನಿಮಾಕ್ಕೆ ಹೋಗುತ್ತಾರೆ, ಕುಣಿಯಲು ಹೋಗುತ್ತಾರೆ, ಊರು ಊರು ಅಲೆಯಲು ಹೋಗುತ್ತಾರೆ. ಎಷ್ಟೋ ಸಾರಿ ಅವರು ಗಂಡಹೆಂಡಿರೋ ಅಥವಾ ಸ್ನೇಹಿತರೋ ತಿಳಿಯುವುದು ಕಷ್ಟ. ಹಾಗೇ ಬೆಳೆಯುತ್ತಾರೆ. ಈ ಸ್ನೇಹ ಸರಿಹೋದರೆ ಮದುವೆ ಆಗುತ್ತದೆ. ಇಲ್ಲದಿದ್ದರೆ ಬೇರೆ ಗೆಳತಿಯನ್ನು ಹುಡುಕುತ್ತಾರೆ. ಸ್ನೇಹ ಬೆಳೆಯುವುದೆಲ್ಲಾ ರಾತ್ರಿಕಾಲ ದಲ್ಲಿ ನಡೆಯುವ ನೃತ್ಯಗಳ ಸಮಯದಲ್ಲಿ. ಐರೋಪ್ಯ ದೇಶದ ನೃತ್ಯದಲ್ಲಿ

ಯಾರು ಯಾವ ಹುಡುಗಿಯನ್ನಾದರೂ ಕಟ್ಟಿಕೊಂಡು ಕುಣಿಯಬಹುದು. ಈ ನೃತ್ಯಸಂಬಂಧ ಬೆಳೆದು ಸ್ನೇಹವಾಗಿ ಅನೇಕ ಅನಾಹುತಗಳೂ ಆಗುತ್ತವೆ.

ಒಂದು ಶನಿವಾರ ಸ್ನಾನಮಾಡಲೆಂದು ಹೋದೆ. ನಾನೇ ಕಡೆಯವನು. ಸಂಜೆ ೫ ಗಂಟೆ ಆಗಿತ್ತು. ಇನ್ನೇನು, ಬಾಗಿಲು ಹಾಕಬೇಕು; ಆದರೂ ೫೦ ಪೈಸೆ ಕೊಟ್ಟು ಸ್ನಾನ ಮಾಡಿದೆ. ಅಲ್ಲಿಂದ ಹೊರಡುವಾಗ ಅಲ್ಲಿಯ ಯಜಮಾನ "ನೀವು ಯಾವ ದೇಶದವರು? ಜರ್ಮನ್ ಭಾಷೆ ಮಾತನಾಡುತ್ತೀರಿ" ಎಂದು ಕೇಳಿದ. "ನಾನು ಭಾರತೀಯ. ವಿಶೇಷ ಶಿಕ್ಷಣಕ್ಕಾಗಿ ಬಂದೆ" ಎಂದು ಹೇಳಿದಮೇಲೆ, "ಏನು, ಸಂಜೆ ಸಂಚಾರಕ್ಕೆ ಸ್ನೇಹಿತೆಯರನ್ನು ಕರೆದು ಕೊಂಡು ಹೊರಡುತ್ತೀರೋ? ಸಂತೋಷವಾಗಿ ಕಾಲ ಕಳೆಯಿರಿ" ಎಂದು ಹೇಳಿದ. "ನನಗೆ ಮದುವೆ ಆಗಿದೆ. ಹೆಂಡತಿ ಇಂಡಿಯಾದಲ್ಲಿ ಇದ್ದಾಳೆ. ಇಲ್ಲಿ ಯಾವ ಹುಡುಗಿಯ ಜೊತೆಯಲ್ಲೂ ಹೋಗುವುದಿಲ್ಲ" ಎಂದೆ. "ನಿಮ್ಮ ಹೆಂಡತಿ ಅಲ್ಲಿ ಇನ್ನೊಬ್ಬರ ಜೊತೆಯಲ್ಲಿ ಓಡಾಡುತ್ತಾಳೆ. ನೀವು ಇಲ್ಲಿ ಇನ್ನೊಬ್ಬಳ ಜೊತೆಯಲ್ಲಿ ಓಡಾಡಿ. ಆದದ್ದೇನು?" ಎಂದು ತಮಾಷೆ ಮಾಡಿದ. ನನಗೆ ಸಿಟ್ಟು ಬಂದರೂ ಸಮಾಧಾನವಾಗಿ ಉತ್ತರ ಕೊಡ ಬೇಕಾಯಿತು. "ನಮ್ಮ ದೇಶದಲ್ಲಿ ಹಾಗಲ್ಲ. ನಮ್ಮಲ್ಲಿ ಹೆಂಗಸರು ಮದುವೆ ಯಾಗುವುದಕ್ಕಿಂತ ಮುಂಚೆ ಯಾವ ಗಂಡಸರ ಜೊತೆಯಲ್ಲೂ ಓಡಾಡು ವುದಿಲ್ಲ. ಮದುವೆ ಆದಮೇಲೆ ಗಂಡನ ಜೊತೆ ಬಿಟ್ಟರೆ ಬೇರೆ ಗಂಡಸರ ಜೊತೆ ಯಲ್ಲಿ ಹೆಚ್ಚು ಮಾತನಾಡುವುದಿಲ್ಲ. ನಾನು ಇಲ್ಲಿಗೆ ಬಂದು ೬ ತಿಂಗಳಾ ಯಿತು. ಇಲ್ಲಿ ೬ ವರ್ಷ ಇದ್ದರೂ ನನ್ನ ಹೆಂಡತಿ ನಿಷ್ಠೆಯಿಂದ ಇರುತ್ತಾಳೆ. ನನ್ನನ್ನೇ ನಂಬಿರುತ್ತಾಳೆ. ಹಾಗೆ ಆಕೆ ನನ್ನನ್ನೇ ನಂಬಿರಬೇಕಾದರೆ ಇಲ್ಲಿ ಆಕೆ ನೋಡುವುದಿಲ್ಲವೆಂದು ಮತ್ತೊಬ್ಬ ಹೆಂಗಸಿನ ಜೊತೆಯಲ್ಲಿ ಹೋಗು ವುದು ಧರ್ಮವೆ? ಇದು ಭಾರತದಲ್ಲಿ ಸಾಧ್ಯವಿಲ್ಲ. ಜರ್ಮನಿಯಲ್ಲಾದರೆ ಗಂಡ ಬೇರೆ ಊರಿಗೆ ಹೋದರೆ ಅಲ್ಲಿ ಆತ ಇನ್ನೊಬ್ಬ ಸ್ತ್ರೀಯ ಸಹವಾಸ ಮಾಡುತ್ತಾನೆ; ಹೆಂಡತಿ ಇನ್ನೊಬ್ಬ ಗಂಡಸಿನೊಂದಿಗೆ ನೃತ್ಯಕ್ಕೆ ಹೊರಡು ತ್ತಾಳೆ" ಎಂದೆ. ಇದನ್ನು ಕೇಳಿ ಆತನಿಗೆ ಆಶ್ಚರ್ಯವಾಯಿತು. "ಏನೂ ತಪ್ಪು ತಿಳಿದುಕೊಳ್ಳಬೇಡಿ. ಇಲ್ಲಿ ಅನೇಕರು ಹೊರದೇಶದವರನ್ನು ನೋಡಿ ದ್ದೇನೆ. ಎಲ್ಲರೂ ಒಬ್ಬೊಬ್ಬ ಹುಡುಗಿಯರನ್ನು ಕರೆದುಕೊಂಡು ಬರುತ್ತಾರೆ. ಅವರು ಕೈಕಟ್ಟಿಕೊಂಡು ತಿರುಗಾಡುವುದನ್ನು ನೋಡಿದ್ದೇವೆ. ಆದಕ್ಕಾಗಿ ಹಾಗೆ ಹೇಳಿದೆ. ಯುದ್ಧವಾಗುವುದಕ್ಕೆ ಮುಂಚೆ ನಮ್ಮ ದೇಶದಲ್ಲೂ ಜನರ ನೀತಿಯ ಮಟ್ಟ ಹೆಚ್ಚಾಗಿತ್ತು. ಯುದ್ಧದ ದೆಸೆಯಿಂದ ಸ್ವಲ್ಪ ಕೆಟ್ಟಿದೆ.

ನಿಮ್ಮ ದೇಶದಂತೆ ಎಲ್ಲಾ ದೇಶದಲ್ಲಿಯೂ ಇದ್ದರೆ ಬಹಳ ಒಳ್ಳೆಯದು" ಎಂದು ಸಮಾಧಾನ ಮಾಡಿದ.

ಹುಡುಗ ಮದುವೆ ಆಗುವವರೆಗೆ ತಂದೆತಾಯಿಯ ಜೊತೆಯಲ್ಲಿ ಇರಬಹುದು. ಕೆಲವು ವೇಳೆ ಸಂಪಾದನೆ ಮೊದಲಾದ ಕೂಡಲೇ ಬೇರೆ ಇರುತ್ತಾರೆ. ಒಂದೇ ಊರಿನಲ್ಲಿ ತಂದೆ ಮತ್ತು ಮಗ ಕೆಲಸಕ್ಕಿದ್ದರೂ ಬೇರೆ ಬೇರೆ ಸಂಸಾರ ಮಾಡುತ್ತಾರೆ. ನೆಂಟರಿಷ್ಟರಂತೆ ಬಂದು ಹೋಗುತ್ತಾರೆ. ಒಬ್ಬರ ಭಾರ ಇನ್ನೊಬ್ಬರಿಗೆ ಇರುವುದಿಲ್ಲ. ೨-೩ ಮಕ್ಕಳ ಮೇಲಿರುವವರು ಕಡಮೆ. ಮದುವೆ ಎಂದರೆ ೨೫ ಜನ ಸೇರಿದರೆ ಹೆಚ್ಚು. ನೆಂಟರನ್ನು ನೋಡಲು ವರ್ಷಕ್ಕೆ ಒಂದು ಸಾರಿ ಹೋಗುತ್ತಾರೆ. ನೆಂಟರು ಬೇರೆ ಊರಿನಿಂದ ಬಂದು ಒಂದೇ ಮನೆಯಲ್ಲಿ ಇಳಿಯುವುದು ಕಡಮೆ. ಹೋಟೆಲುಗಳಲ್ಲಿ ಇಳಿದು ಕೊಳ್ಳುತ್ತಾರೆ.

೧೦. ಎಚ್ಚೆತ್ತ ಜರ್ಮನಿ

> ಬುದ್ಧಿವಂತರು ಯೋಚನೆ ಮಾಡುವ ಸಮಯವನ್ನೂ ಕೂಡ ಕಾರ್ಯ ಮಾಡುವುದರಲ್ಲಿಯೇ ಹಾಕುತ್ತಾರೆ. ಮೂರ್ಖರು ಕಾರ್ಯಾಚರಣೆಯ ಸಮಯದಲ್ಲೂ ಕೂಡ ಯೋಚನೆಯಲ್ಲಿಯೇ ಕಳೆಯುತ್ತಾರೆ.
>
> —ಸುಭಾಷಿತ

ಜರ್ಮನಿಯ ಹೆಸರನ್ನು ಕೇಳದವರು ಯಾರು? ಇದಕ್ಕೆ ಅನೇಕ ಕಾರಣಗಳುಂಟು. ಎಲ್ಲಕ್ಕಿಂತಲೂ ಹೆಚ್ಚಾಗಿ ಯಾಂತ್ರಿಕಯುಗ ಪ್ರಾರಂಭವಾದ ಮೇಲೆ ಜರ್ಮನಿ ಬಹಳ ಮುಂದುವರಿದು ಪ್ರಪಂಚದಲ್ಲಿ ಮೊದಲನೇ ಸ್ಥಾನ ಹೊಂದಿತ್ತು. ಒಂದನೇ ಮಹಾಯುದ್ಧದ ಬಡಿತದಿಂದ ಚೇತರಿಸಿಕೊಂಡು ಎರಡನೇ ಮಹಾಯುದ್ಧ ಪ್ರಾರಂಭಮಾಡಲು ಸಿದ್ಧವಾಗುವ ಹೊತ್ತಿಗೆ ಜರ್ಮನಿ ಎಲ್ಲಾ ಮಾರ್ಗಗಳಲ್ಲೂ ಪುನಃ ಮೊದಲನೆ ಸ್ಥಾನ ದೊರಕಿಸಿಕೊಂಡಿತು. ಆಗ ಜರ್ಮನಿ ಮತ್ತು ಹಿಟ್ಲರನ ವಿಚಾರ ಮನೆಮಾತಾಗಿತ್ತು. ಯುದ್ಧದಲ್ಲಿ ಜರ್ಮನರು ಸೋತರು. ಭಾರತದಲ್ಲಿ ದೇವರ ದಯೆಯಿಂದ ಇದುವರೆಗೂ ನೂತನ ವಿಜ್ಞಾನಯುದ್ಧ ಆಗಿಲ್ಲ. ಯುದ್ಧದಲ್ಲಿ ಆಗುವ ಅನಾಹುತ, ಪ್ರಾಣನಾಶ, ಕಷ್ಟಗಳನ್ನು ನೋಡಬೇಕಾಗಿದ್ದರೆ ೧೯೪೫–೪೬ರಲ್ಲಿ ಜರ್ಮನಿಯಲ್ಲಿ ನೋಡಬಹುದಾಗಿತ್ತು. ಯುದ್ಧದಲ್ಲಿ ಜರ್ಮನಿ ೧೦೦ಕ್ಕೆ ೯೯ ಭಾಗ ನೆಲಸಮವಾಯಿತು. ಊರುಗಳು ಸ್ಮಶಾನಗಳಾಗಿದ್ದವು. ಜರ್ಮನಿ ಪುನಃ ದೇಶವಾಗಿ ನಿಲ್ಲಬಲ್ಲುದೆ ಎಂಬ ಯೋಚನೆ ಎಷ್ಟೋ ಸಾರಿ ಬರುತ್ತಿತ್ತು.

ಒಂದು ದಿನ ಊಟವಾದಮೇಲೆ ಕುಳಿತು ಮಾತನಾಡುತ್ತಿದ್ದೆ. ಕುಟುಂಬದ ಯಜಮಾನಿ ಯದ್ಧಕಾಲದಲ್ಲಿ ಅದೇ ಊರಿನಲ್ಲಿ ಇದ್ದವಳು. ಆ ದಿನ ಬಹಳ ಚಳಿ. ಒಲೆಗೆ ಕಲ್ಲಿದ್ದಲು ಹಾಕುತ್ತಾ ಚಳಿ ವಿಪರೀತವಾಗುತ್ತಿದೆ ಎಂದು ಹೇಳಿದೆ. ಆಕೆಗೆ ಹಿಂದಿನದು ಜ್ಞಾಪಕಕ್ಕೆ ಬಂತು. "ನೀನು ಯುದ್ಧವಾದನಂತರ ಬಂದಿದ್ದರೆ ತಿಳಿಯುತ್ತಿತ್ತು. ಯುದ್ಧದಲ್ಲಿಯಾದರೂ ಸರಕಾರ ಸ್ವಲ್ಪ ಕಲ್ಲಿದ್ದಲು ಕೊಡುತ್ತಿತ್ತು. ಯುದ್ಧ ಮುಗಿಯುತ್ತಾ ಬಂತು. ಬಾಂಬಿನ ಸುರಿಮಳೆ. ವಿಮಾನದ ಶಬ್ದ ಕೇಳಿದೊಡನೆಯೇ ಎಲ್ಲರೂ ನೆಲಮಾಳಿಗೆ ಸೇರುತ್ತಿದ್ದೆವು. ಎಲ್ಲರೂ ಬದುಕಿಯಾದರೂ ಹೊರಗೆ ಬರಬೇಕು. ಬಾಂಬು ಬಿದ್ದರೆ, ಎಲ್ಲರಿಗೂ ಅದೇ ಸ್ಮಶಾನ. ಯುದ್ಧ ಮುಗಿದ ಕೂಡಲೇ

ಆಹಾರ, ಕಲ್ಲಿದ್ದಲು ಎಲ್ಲಾ ಮಾಯ. ಹೊರದೇಶದ ಸೈನಿಕರಿಗೇ ಸಾಲದು. ಹೊಟ್ಟೆಗೆ ಆಹಾರವಿಲ್ಲ. ಹೊಟ್ಟೆಗಿಲ್ಲದಿದ್ದರೂ ಚಿಂತೆ ಇಲ್ಲ. ಚಳಿ ತಡೆಯಲು ಕಷ್ಟ. ಮನೆಯನ್ನು ಬೆಚ್ಚಗಿಡಲು, ಅಡಿಗೆ ಮಾಡಲು ಕಲ್ಲಿದ್ದಲು ಇಲ್ಲ. ಏನು ಮಾಡಬೇಕು? ಗ್ಲಾಸಿಯರಲ್ಲಿ ಚಳಿ ತಡೆಯಲಾರದೆ, ಹೊಟ್ಟೆಗೆ ಹಿಟ್ಟಿಲ್ಲದೆ ಸತ್ತರು ಜನ. ಹೊಲ ಉತ್ತು ಬೆಳೆ ಬೆಳೆಯಲೂ ಈ ಚಳಿ ಅಡ್ಡಿ. ಆ ೨-೩ ವರ್ಷ ಪಟ್ಟ ಕಷ್ಟ ಯಾವಾಗಲೂ ಪಡಲಿಲ್ಲ. ನಮ್ಮ ಎದುರಿಗೇ ಕಲ್ಲಿದ್ದಲು, ಆಹಾರ ಸೈನಿಕರಿಗಾಗಿ ಸಾಗಿ ಹೋಗುತ್ತಿದ್ದವು. ಎಷ್ಟೋ ಸಾರಿ, ಕಾವಲು ಗಾರರಿದ್ದರೂ ಸಹ, ಚಳಿ ತಡೆಯಲು ಸಾಧ್ಯವಿಲ್ಲದೆ, ಸತ್ತರೂ ಚಿಂತೆ ಇಲ್ಲ ಎಂದು ರೈಲುಗಾಡಿಗಳಿಂದ, ಸೈನಿಕರ ಲಾರಿಗಳಿಂದ ಕಲ್ಲಿದ್ದಲನ್ನು ಕದ್ದಿದ್ದೇವೆ. ಕಳ್ಳತನ ಒಂದು ದೊಡ್ಡ ತಪ್ಪು ಎನಿಸಲಿಲ್ಲ ಆಗ. ಜೀವ ಉಳಿಸಿಕೊಳ್ಳಲು ಕಳ್ಳತನ ಆವಶ್ಯಕವಾಗಿ ಕಂಡಿತು. ಹೊರಗಡೆಯ ಸೈನಿಕರು ಮನೆ ನುಗ್ಗಿದರು. ಇದ್ದದ್ದನ್ನು ಕಿತ್ತುಕೊಂಡರು. ದೇಶದಲ್ಲಿ ಉಳಿದಿದ್ದ ಆಹಾರ ಹೊರ ದೇಶದ ಸೈನಿಕರಿಗೇ ಸಾಲದು. ಆಹಾರಕ್ಕೆ ಉಪಯೋಗಕರವಾದ ಪ್ರಾಣಿಗಳು ಮುಗಿದುಹೋದವು. ನಾಯಿ, ಬೆಕ್ಕುಗಳನ್ನೂ ಸಹ ಹಸಿವು ತಡೆಯಲಾರದೆ ತಿಂದಿದ್ದಾರೆ. ವಾಸಕ್ಕೆ ಮನೆಗಳಿರಲಿಲ್ಲ. ಉಡಲು ಬಟ್ಟೆಯಿಲ್ಲ. ಈ ಸ್ಥಿತಿಗೆ ಬಂದಿದ್ದೆವು. ಆ ವರ್ಷ ಕಳೆದಮೇಲೆ ಆಕ್ರಮಿಸಿದ ಸೈನಿಕರೂ, ರಾಜ್ಯದವರೂ ಸಹಾಯ ನೀಡತೊಡಗಿದರು. ಅನ್ಯದೇಶಗಳಿಂದ, ಕಮ್ಯೂನಿಸ್ಟ್ ರಾಜ್ಯಗಳಿಂದ ಜನ ನಮ್ಮ ದೇಶಕ್ಕೆ ಓಡಿಬಂದರು. ದಿನದಿನಕ್ಕೆ ಜನಸಂಖ್ಯೆ ಹೆಚ್ಚಿತು. ವ್ಯವಸಾಯಗಾರರು ಭೂಮಿಯ ಕೆಲಸ ಮಾಡಲು ಆಗಿನ ಸರ್ಕಾರ ಅಪ್ಪಣೆ ಕೊಟ್ಟಿತು. ಲಕ್ಷಾಂತರ ಮಕ್ಕಳು ಮನೆಮಠಗಳಿಲ್ಲದೆ, ತಂದೆ ತಾಯಿಗಳನ್ನು ಕಾಣದೆ ಅಲೆಯುತ್ತಿದ್ದರು. ಅನೇಕ ರಾಷ್ಟ್ರಗಳು ರೆಡ್ ಕ್ರಾಸ್ ಮೂಲಕ ನಮ್ಮ ದೇಶದ ಮಕ್ಕಳಿಗೆ ಸಹಾಯ ನೀಡಿದವು. ಕೆಲಸ ಮಾಡಲು ಕೈಗಾರಿಕೆಗಳಿಲ್ಲ. ವಿದ್ಯಾಭ್ಯಾಸಕ್ಕೆ ಶಾಲೆಗಳಿಲ್ಲ. ಅನ್ಯದೇಶದ ಸಹಾಯ ಬಂದಿತು. ಜೊತೆಗೆ ಜನಗಳಿಗೆ ಕೆಲಸ ಮಾಡಲು ಅವಕಾಶವನ್ನು ಕೊಟ್ಟರು. ಹೊಸ ರಾಜ್ಯವನ್ನೇ ಕಟ್ಟಬೇಕಾಯಿತು. ಒಟ್ಟು ಯುದ್ಧದ ದೆಸೆಯಿಂದ ೬,೬೦೦,೦೦೦ ಜನಗಳನ್ನು ಕಳೆದುಕೊಂಡೆವು. ದೇಶ ನಾಲ್ಕು ಭಾಗವಾಯಿತು. ಬ್ರಿಟಿಷ್, ಫ್ರೆಂಚ್, ಅಮೇರಿಕ, ರಷ್ಯ ಎಂಬ ನಾಲ್ಕು ಭಾಗಗಳಾದವು. ರಷ್ಯಾಕ್ಕೆ ಹೆಚ್ಚು ಪ್ರದೇಶ ಹೋಗಿದ್ದಲ್ಲದೆ ಕೈಗಾರಿಕೆ ಮತ್ತು ವ್ಯವಸಾಯ ಪ್ರದೇಶಗಳೂ ಸೇರಿದವು. ಅದರಿಂದಾಗಿ ನಮ್ಮ ದೇಶದಲ್ಲಿ ಆಹಾರ ಬೆಳೆಯುತ್ತಿದ್ದ ಪ್ರದೇಶಗಳನ್ನು ಕಳೆದುಕೊಂಡಂತೆ ಆಯಿತು.

ಅಲ್ಲದೆ ಆ ಭಾಗಗಳಿಂದ ನಿರಾಶ್ರಿತರು ಬರಲು ಪ್ರಾರಂಭಿಸಿದರು. ಪ್ರಪಂಚದ ನಾನಾ ಭಾಗಗಳಲ್ಲಿ ಖೈದಿಗಳಾಗಿದ್ದ ಎಲ್ಲಾ ಜರ್ಮನ್ ಪ್ರಜೆಗಳೂ ಜರ್ಮನಿಗೆ ಬಂದರು. ಇದರಿಂದ ಜನಸಂಖ್ಯೆ ಹೆಚ್ಚಿತು. ಯುದ್ಧಕ್ಕೆ ಮುಂಚೆ ೩೯,೩೫೦,೦೦೦ ಇದ್ದವರು ಯುದ್ಧವಾದಮೇಲೆ ೪೮,೬೦೦,೦೦೦ ಜನ ಆಗಿದ್ದೇವೆ. ಇಷ್ಟು ಜನಕ್ಕೆ ಆಹಾರ ಒದಗಿಸಬೇಕು, ಮನೆ ಕಟ್ಟಬೇಕು. ಕೆಲಸ ಹೊಂದಿಸಬೇಕು. ದೇಶ ಸಣ್ಣದಾಗುತ್ತಿದೆ. ಹೊರದೇಶದಿಂದ ಸುಮಾರು ೪,೫೦೦,೦೦೦ ಜನ ನಿರಾಶ್ರಿತರಾಗಿ ಬಂದರು. ಎಲ್ಲದರ ಬೆಲೆಯೂ ಹೆಚ್ಚಿತು, ಕಳ್ಳಸಂತೆಗಳಂತೂ ಲೆಕ್ಕವಿಲ್ಲದಷ್ಟು. ದುಡ್ಡಿಗೆ ಬೆಲೆಯೇ ಇಲ್ಲದಂತೆ ಆಯಿತು. ಚಲಾವಣೆಯಲ್ಲಿ ಇದ್ದ ನಾಣ್ಯ ಮತ್ತು ನೋಟುಗಳಿಗೆ ಬೆಲೆ ಇಲ್ಲ ಎಂದು ಒಂದು ದಿನ ಸರಕಾರದವರು ಹೇಳಿದರು. ಮಾರನೇ ದಿನ ಎಲ್ಲರಿಗೂ ಹೊಸ ಜರ್ಮನ್ ಮಾರ್ಕನ್ನು ಕೊಟ್ಟು (೫೦ ರೂಪಾಯಿ) ಜೀವನ ಪ್ರಾರಂಭಿಸಿದರು. ಎಲ್ಲ ಬೆಲೆ, ದರ ಇಳಿದವು. ಆಗ ಹೊಸ ಚೈತನ್ಯ ಹುಟ್ಟಿತು. ಈಗ ನಾವು ಇರುವ ಸ್ಥಿತಿಗೂ ಆ ಕಷ್ಟಕ್ಕೂ ಹೋಲಿಸಿದರೆ ನಿಜವಾಗಿಯೂ ಈ ಉತ್ತಮ ಸ್ಥಿತಿಗೆ ನಾವು ಹೇಗೆ ಬಂದೆವು ಅನಿಸುತ್ತದೆ. ಇದೆಲ್ಲಾ ಈ ರಾಜಕೀಯ ನಾಯಕರು ಮಾಡುವ ದುರಾಲೋಚನೆ. ಯಾರಿಗೆ ಬೇಕಾಗಿದೆ ಯುದ್ಧ? ಕಷ್ಟಪಟ್ಟು ಕೆಲಸಮಾಡಿ, ಸುಖವಾಗಿ ಉಂಡು, ಉಟ್ಟು ಓಡಾಡಲು, ಪ್ರಪಂಚದಲ್ಲಿ ಇರುವವರೆಲ್ಲಾ ಅಣ್ಣತಮ್ಮಂದಿರಂತೆ ಇರಲು ಯುದ್ಧ ಬೇಕೆ? ಯಾರು ರಾಜ್ಯವಾಳಿದರೆ ಏನು? ಅಧಿಕಾರದ ಆಸೆ ಇದು. ರಾಜ್ಯವಾಳ ಬೇಕೆಂದರೆ ರಾಜಕೀಯ ನಾಯಕರು ದೊಡ್ಡ ಮೈದಾನದಲ್ಲಿ ಸೇರಿ ಕತ್ತಿಯಿಂದ ಹೊಡೆದಾಡಿ ಬಲಾಬಲಗಳನ್ನು ಪರೀಕ್ಷಿಸಿಕೊಂಡು ಗೆದ್ದವರು ರಾಜ್ಯವಾಳಲಿ. ಅವರು ರಾಜ್ಯವಾಳಲು ಸಾಮಾನ್ಯ ಜನ ಅವರಿಗಾಗಿ ಪ್ರಾಣ ಕೊಡಬೇಕೆ? ಸದ್ಯಕ್ಕೆ ಇನ್ನುಮುಂದಾದರೂ ಯುದ್ಧ ಬರದಿದ್ದರೆ ಸಾಕು. ನೀವೇ ಅದೃಷ್ಟವಂತರು. ಯುದ್ಧವನ್ನು ನೋಡಲಿಲ್ಲ" ಎಂದು ಗಂಟೆಗಟ್ಟಲೆ ಹೇಳಿ ತಾನು ಪಟ್ಟ ಕಷ್ಟವನ್ನು ನೆನೆದುಕೊಂಡು ಕಣ್ಣೀರು ಹಾಕತೊಡಗಿದಳು. ಹೊತ್ತು ಆಯಿತು. ನನ್ನ ಮನಸ್ಸು ಆ ಕಷ್ಟಗಳನ್ನು ಕೇಳಿ ಅಲ್ಲೋಲ ಕಲ್ಲೋಲವಾಗಿ ರಾತ್ರಿ ಎಲ್ಲಾ ಅದೇ ಕನಸಾಯಿತು.

೧೦೦ಕ್ಕೆ ೯೯ರಷ್ಟು ಭಾಗ ಹಾಳಾಗಿದ್ದ ಜರ್ಮನಿ ಪುನಃ ಮೊದಲಿನ ಸ್ಥಾನಕ್ಕೆ ಬರಲು, ಕೇವಲ ೭-೮ ವರ್ಷಗಳಲ್ಲಿ ಪುನರ್ ನಿರ್ಮಾಣವಾಗಲು, ದೇಶಕ್ಕೆ ಒಂದು ವಿಶೇಷ ಶಕ್ತಿ ಇರಬೇಕು. ಅದು ಏನು? ಜರ್ಮನರ ದೇಶ ಪ್ರೇಮ, ಅವರ ದುಡಿಮೆಗೆ ಕೊಟ್ಟ ಬೆಲೆ. ಅವರು ದೇಶಪ್ರೇಮ ಇಷ್ಟೆಂದು

ಹೇಳಲು ಸಾಧ್ಯವಿಲ್ಲ. ಅದು ಪ್ರತಿ ಒಬ್ಬನಲ್ಲೂ ತುಂಬಿ ತುಳುಕುತ್ತಿದೆ. ಕಸ ಗುಡಿಸುವವನಿಂದ ಹಿಡಿದು ರಾಜ್ಯವಾಳುವವನವರೆಗೂ ಎಲ್ಲರೂ ತಮ್ಮ ದೇಶಕ್ಕಾಗಿ ಪ್ರಾಣ ತ್ಯಜಿಸಲು ಸಿದ್ಧ. ದೇಶಕ್ಕಾಗಿ ದುಡಿಯುತ್ತಾರೆ. ಮೊದಲು ನಾನು ಜರ್ಮನಿಗೆ ಹೋದಾಗ, ಜರ್ಮನಿಯ ವಿಚಾರದಲ್ಲಿ ಭಾರತೀಯರ ಅಭಿಪ್ರಾಯವೇನು ? ಯುದ್ಧವಾದುದರಿಂದ ಕೆಟ್ಟ ಅಭಿಪ್ರಾಯವೇನಾದರೂ ಬಂದಿದೆಯೆ ? ಎಂದು ಕೇಳುತ್ತಿದ್ದರು. ಕಾರ್ಖಾನೆಯಲ್ಲಿ ಮಧ್ಯಾಹ್ನ ಕೆಲಸ ಮಾಡಿ ಊಟಕ್ಕೆ ಮುಂಚೆ ಕೈ ತೊಳೆಯಲು ಹೋದಾಗ ಅಲ್ಲಿ ಕಸ ಗುಡಿಸುವವ ಸೋಪು ಕೊಡುತ್ತಿದ್ದ. ಆ ದಿನ ಸ್ವಲ್ಪ ವೇಳೆ ಇದ್ದುದರಿಂದ ಮಾತನಾಡುತ್ತಾ ನಿಂತು ಆ ದಿನದ ಪತ್ರಿಕೆಯಲ್ಲಿ ಓದಿದ ಕೆಲವು ವಿಚಾರಗಳನ್ನು ತಿಳಿಸಿದ. ಭಾರಿ ಆಳು; ಹಣೆಯ ಮೇಲೆ ದೊಡ್ಡ ಗುಳಿ ಬಿದ್ದಿತ್ತು. ಯುದ್ಧದ ಗುರುತು. "ಯುದ್ಧದಲ್ಲಿ ಪ್ರಪಂಚವೆಲ್ಲಾ ಒಟ್ಟುಗೂಡಿ ಜರ್ಮನಿಯ ಮೇಲೆ ಬಿದ್ದುದರಿಂದ ಅದು ಸೋತಿತು. ಆಹಾರದ ಅಭಾವವೂ ಸೋಲಿಗೆ ಕಾರಣ" ಎಂದು ಹೇಳಿದ. ಆತ ಕಸ ಗುಡಿಸುವವನಾದರೂ, ತನ್ನ ದೇಶದಲ್ಲಿ ಏನೇನು ಬೆಳೆಯುತ್ತದೆ, ಏನು ಆಮದು ಮಾಡಬೇಕು, ಯಾವುದು ರಫ್ತು ಮಾಡಿದರೆ ತನ್ನ ದೇಶಕ್ಕೆ ಆಹಾರ ಸಿಗುತ್ತದೆ, ಎಂದು ದೇಶದ ಆರ್ಥಿಕ ಸ್ಥಿತಿಯನ್ನೆಲ್ಲಾ ವಿವರಿಸಿ, ತಾನು ಕಷ್ಟಪಟ್ಟು ದುಡಿಯದಿದ್ದರೆ ದೇಶಕ್ಕೆ ಕಷ್ಟವಾಗುವುದಲ್ಲದೆ, ಹೊಟ್ಟೆಗಿಲ್ಲದೆ ಸಾಯಬೇಕಾಗುತ್ತದೆ ಎಂದು ಹೇಳಿದ. ಇಷ್ಟುಮಟ್ಟಿನ ದೇಶಪ್ರೇಮ ನಮ್ಮ ಅನೇಕ ನಾಯಕರಲ್ಲಿ ಕಾಣುವುದೂ ಕಷ್ಟ!

ಯಾರ ಹತ್ತಿರ ಮಾತನಾಡಲಿ, ಮೊದಲು ತಮ್ಮ ದೇಶದ ವಿಚಾರ ಹೇಳುತ್ತಾರೆ. ತಮ್ಮ ದೇಶದ ವಸ್ತುಗಳಲ್ಲದೆ ಬೇರೆ ದೇಶದ ವಸ್ತುಗಳನ್ನು ಕೊಳ್ಳುವುದೇ ಇಲ್ಲ. ಒಬ್ಬರ ಮನೆಗೆ ಹೋಗಿದ್ದಾಗ ಅವರ ಮನೆಯಲ್ಲಿ ಮೆಣಸು ಇರಲಿಲ್ಲ. "ಏಕೆ ತರುವುದಿಲ್ಲ, ಸೇರುವುದಿಲ್ಲವೇ ?" ಎಂದು ನಾನು ಕೇಳಿದೆ. "ಇಲ್ಲ ಇಲ್ಲ, ಸೇರುತ್ತದೆ. ಆದರೆ ಅದು ಪರದೇಶದ್ದು. ಆದುದರಿಂದ ತರುವುದಿಲ್ಲ" ಎಂದರು. ಕಾರ್ಖಾನೆಯಲ್ಲಿ ಯಾರನ್ನು ಕೇಳಲಿ, "ನಾನು ಕೆಲಸ ಮಾಡಬೇಕು. ಇಲ್ಲದಿದ್ದರೆ ದೇಶ ಮುಂದೆ ಬರುವುದಿಲ್ಲ" ಎನ್ನುತ್ತಾರೆ. ಅಂಗಡಿಯಲ್ಲಿ ಜರ್ಮನಿಯ ವಸ್ತುಗಳನ್ನು ಬಿಟ್ಟು ಬೇರೆ ಮಾರುವುದೇ ಕಡಮೆ. ನಮ್ಮ ದೇಶದ್ದೇ ಶ್ರೇಷ್ಠ ಎನ್ನುತ್ತಾರೆ. ಹೊರದೇಶದ ಅನೇಕ ವಸ್ತುಗಳ ಬೆಲೆ ಕಡಮೆಯಿದ್ದರೂ ಕೊಳ್ಳುವವರು ಕಡಮೆ. ಕೆಲವು ಕಾರ್ಖಾನೆಗಳಿಗೆ ಹೊರದೇಶದ ಬಂಡವಾಳ ಹಾಕಿರುತ್ತಾರೆ. ಅಂತಹ ಕಾರ್ಖಾನೆಯ ಸಾಮಾನುಗಳನ್ನು ಕೊಳ್ಳಲು ಹಿಂದೆಗೆಯುತ್ತಾರೆ. ನಮ್ಮ ದೇಶದ ಕಲೆ,

ನಮ್ಮ ದೇಶದ ಸಂಸ್ಕೃತಿ ಎಂದು ಹೆಮ್ಮೆಪಡುತ್ತಾರೆ. ಒಂದು ಸಣ್ಣ ಕೆಲಸ ಮಾಡಿದರೂ ದೊಡ್ಡ ಗೌರವ ಕೊಡುತ್ತಾರೆ. ಯಾರೂ ಹೀಯಾಳಿಸುವುದಿಲ್ಲ. ತಾವು ಯುದ್ಧದಲ್ಲಿ ಸೋತಿದ್ದರೂ, ಅಷ್ಟು ಕಷ್ಟಪಟ್ಟಿದ್ದರೂ ತಮ್ಮ ದೇಶವನ್ನು ಯಾರೂ ತಿರಸ್ಕರಿಸುವುದಿಲ್ಲ. ತಮ್ಮದು ಸಣ್ಣ ಊರಾದರೂ ಅದನ್ನೇ ಹೊಗಳಿಕೊಳ್ಳುತ್ತಾರೆ. ಅದನ್ನೇ ಅಲಂಕರಿಸುತ್ತಾರೆ. ೨೦೦ ವರ್ಷಗಳ ಹಿಂದಿನ ಕಟ್ಟಡಗಳನ್ನು ಪುರಾತನಕಾಲದ್ದು ಎಂದು ಹೇಳುತ್ತಾರೆ. ಕವಿಗಳ, ನಾಯಕರ ಮನೆಗಳನ್ನು ಈಗಲೂ ಹಿಂದೆ ಇದ್ದಂತೆಯೇ ಇಟ್ಟಿದ್ದಾರೆ. ಅದೇ ಒಂದು ಹೆಮ್ಮೆ ಅವರಿಗೆ. ತಮ್ಮ ಹಿಂದಿನ ನಡೆನುಡಿ, ಉಡುಪುಗಳನ್ನು ಬಿಡದೆ ಅದನ್ನೇ ಅನುಸರಿಸುತ್ತಾರೆ.

ಜರ್ಮನಿ ದೇಶದಲ್ಲಿ ಜರ್ಮನ್ ಭಾಷೆ ಕಲಿಯದಿದ್ದರೆ ಸಂತೋಷವಾಗಿ ಕಾಲ ಕಳೆಯಲಾಗದು. ಭಾಷೆ ಬಾರದೆ ಯಾರ ಹತ್ತಿರ ಮಾತನಾಡಬೇಕು? ಎಲ್ಲರಿಗೂ ಇಂಗ್ಲಿಷ್ ಬಾರದು. ಜರ್ಮನರು ಜರ್ಮನ್ ಭಾಷೆ ಬಿಟ್ಟರೆ ಬೇರೆ ಭಾಷೆ ಮಾತನಾಡುವುದೇ ಇಲ್ಲ. ಕೆಲವರು ಬೇರೆ ಭಾಷೆಗಳನ್ನು ಶಾಲೆಯಲ್ಲಿ ಕಲಿತಿದ್ದರೂ ಅಭ್ಯಾಸವಿಲ್ಲದೆ ಮರೆಯುತ್ತಾರೆ. ಎಲ್ಲರಿಗೂ ಬೇರೆ ಭಾಷೆಯ ಆವಶ್ಯಕತೆಯೂ ಇಲ್ಲ. ಚಿಕ್ಕಂದಿನಿಂದ ಮಾತೃಭಾಷೆಯಲ್ಲೇ ವಿದ್ಯಾಭ್ಯಾಸ ಮಾಡುತ್ತಾರೆ. ಜೀವಮಾನದ ಕೊನೆಯವರೆಗೂ ಅದೇ ಭಾಷೆ ಉಪಯೋಗಿಸುತ್ತಾರೆ. ಮಾತೃಭಾಷೆಯಲ್ಲೇ ಎಲ್ಲಾ ಇರುವುದರಿಂದ ಅಲ್ಪಕಾಲದಲ್ಲೇ ಗ್ರಹಿಸುವ ಶಕ್ತಿಯೂ ಹೆಚ್ಚುತ್ತದೆ. ಜರ್ಮನ್ ಭಾಷೆ ಗಂಡುಭಾಷೆ ಎಂದು ಅವರಿಗೆ ಹೆಮ್ಮೆ. ಭಾಷೆಯೂ ಸ್ವಲ್ಪ ಕಷ್ಟ. ಎಲ್ಲರೊಡನೆ ಮಿಳಿತವಾಗುವುದು ಕಷ್ಟ. ಯಾರೂ ಮನೆಯಲ್ಲಿ ಕೂಡುವುದಿಲ್ಲ. ಹೆಚ್ಚು ಸಂಪಾದನೆ ಮಾಡಿ ಜೀವನದ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕೆಂದು ಪ್ರಯತ್ನಪಡುತ್ತಾರೆ. ಗಂಡ ತರುವ ಸಂಪಾದನೆ ಸಾಲದಿದ್ದರೆ ಹೆಂಡತಿ ಕೆಲಸಕ್ಕೆ ಹೋಗಿ ತಮ್ಮ ಸಂಸಾರದ ಜೀವನದ ಮಟ್ಟವನ್ನು ಹೆಚ್ಚಿಸುತ್ತಾಳೆ. ಜರ್ಮನರು ಕೆಲಸಮಾಡುವುದಕ್ಕೇ ಬದುಕಿರುವುದು. ಕೆಲಸವಿಲ್ಲದೆ ನಾವು ಬದುಕಲಾರೆವು ಎಂಬ ಮಾತು ಎಲ್ಲರ ಬಾಯಲ್ಲೂ ಇದೆ. ಆ ದೇಶದ ಮಂತ್ರಿ ಒಂದು ಸಾರಿ ಹೇಳಿದರು: "ಜನ ಮತ್ತು ಹಣ ಎರಡನ್ನೂ ಸ್ವೇಚ್ಛೆಯಾಗಿ ಬಿಟ್ಟರೆ ಸಾಕು, ದೇಶ ಬಲಗೊಳ್ಳುತ್ತದೆ."

ನಮ್ಮಲ್ಲಿನ ಹಾಗೆ ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೇ ಎಂದು ಹೇಳಿ, ಕೆಲಸಮಾಡದೆ ಮತ್ತೊಬ್ಬರಿಗೆ ಭಾರ ಆಗರು. ಇವರು ನಿಜವಾದ ಕರ್ಮಯೋಗಿಗಳು ಎನಿಸುತ್ತದೆ. ನಿಷ್ಠೆಯಿಂದ ಕೆಲಸಮಾಡುತ್ತಾರೆ.

ನನ್ನ ಸ್ನೇಹಿತ ನಾಯಿಮನ್ ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ. ಜರ್ಮನಿಯಲ್ಲಿ ೮ ಗಂಟೆ ನಿದ್ರೆ, ೮ ಗಂಟೆ ಕೆಲಸ, ೮ ಗಂಟೆ ಊಟಮಾಡಿ ದಿನ ವನ್ನು ಕಳೆಯುತ್ತಾರೆಂದು ಆತ ಹೇಳುತ್ತಿದ್ದ. ಇದು ನಿಜ ಎನಿಸುತ್ತದೆ. ತಮ್ಮ ಕೆಲಸವನ್ನು ಉತ್ತಮ ರೀತಿಯಲ್ಲಿ ಮಾಡಬೇಕೆಂದು ಕೈಚಳಕದೊಡನೆ ಬುದ್ಧಿಯನ್ನೂ ಉಪಯೋಗಿಸುತ್ತಾರೆ. ಅನೇಕರು ವಿದ್ಯಾಭ್ಯಾಸ ಪೂರ್ತಿ ಮಾಡಲಾಗದೆ, ಕೆಲಸಕ್ಕೆ ಸೇರಿ, ಕೆಲಸಮಾಡುತ್ತಾ ಓದಿ ಮುಂದುವರಿದಿದ್ದಾರೆ.

ನಾನೂ ಇದ್ದ ಒಂದು ವರ್ಷದಲ್ಲಿ ಅನೇಕ ಸ್ನೇಹಿತರ ಮನೆಗಳಿಗೆ ಹೋಗಿದ್ದೆ. ಆದರೆ ಒಬ್ಬರ ಮನೆಯಲ್ಲೂ ಒಬ್ಬ ಆಳನ್ನೂ ಕಾಣಲಿಲ್ಲ. ಅವರವರ ಕೆಲಸ ಗಳನ್ನು ಅವರವರೇ ಮಾಡಿಕೊಳ್ಳುತ್ತಾರೆ. ಆಳು ಇಟ್ಟುಕೊಂಡರೆ ಅವನ ಸಂಪಾದನೆಯನ್ನೆಲ್ಲಾ ಆಳಿಗೇ ಕೊಡಬೇಕಾಗುತ್ತದೆ. ಅವನಿಗೆ ಕೊಡುವ ದುಡ್ಡನ್ನು ಉಳಿಸಿಕೊಂಡು ತಮ್ಮ ಜೀವನಮಟ್ಟ ಹೆಚ್ಚಿಸಿಕೊಳ್ಳುತ್ತಾರೆ. ಮನೆಯ ಯಾವ ಕೆಲಸವೂ ಅವರಿಗೆ ಹೀನ ಎನಿಸುವುದಿಲ್ಲ. ಹಿಂದೂಸ್ಥಾನದಲ್ಲಿ ಕೆಲಸಗಾರರು ಆಳುಗಳು ಇದ್ದಾರೆ ಎಂದರೆ ಆಶ್ಚರ್ಯಪಡುತ್ತಾರೆ. ಬಹಳ ಹಣ ವಂತರಿರಬೇಕೆಂದು ಭಾವಿಸುತ್ತಾರೆ. ಬೇಸಿಗೆ ಬಂತು ಎಂದರೆ ಕತ್ತಲಾಗುವ ವರೆಗೂ ತೋಟದ ಕೆಲಸಮಾಡುತ್ತಾರೆ. ೨-೩ ತಿಂಗಳಲ್ಲಿ ಹಣ್ಣು, ತರಕಾರಿ ಬೆಳೆದು, ಚಳಿಗಾಲಕ್ಕೆ ಕೂಡಿಡಲು ಪ್ರಯತ್ನಪಡುತ್ತಾರೆ. ಮನೆಗೆ ಬಂದವರಿಗೆ ತಾವು ಬೆಳೆದದ್ದು ಎಂದು ಹೇಳಿಕೊಳ್ಳುವುದರಲ್ಲೇ ಒಂದು ಹೆಮ್ಮೆ. ಬೆಳೆದ ಹಣ್ಣು ತರಕಾರಿಗಳನ್ನು ಸೀಸೆಗಳಲ್ಲಿ ನೀರಿನ ಆವಿಯ ಸಹಾಯದಿಂದ ಕುದಿಸಿ, ಮೊಹರು ಮಾಡಿ, ಚಳಿಗಾಲದಲ್ಲಿ ಅವುಗಳ ಬೆಲೆ ಹೆಚ್ಚಾದಾಗ ಉಪಯೋಗಿಸಿ ಕೊಳ್ಳುತ್ತಾರೆ. ರೈತರಂತೂ ಬೆಳಗ್ಗೆ ೬ ಗಂಟೆಗೆ ಹೊರಟರೆ ಸಂಜೆ ೮ ಗಂಟೆಗೇ ಮನೆಗೆ ಹಿಂದಿರುಗುತ್ತಾರೆ.

ಹನೋವರ್‌ನಲ್ಲಿ ಸ್ನೇಹಿತನೊಬ್ಬ ಇದ್ದ. ಇಂಜಿನಿಯರಿಂಗ್ ಕಾಲೇಜಿನ ಕೊನೆ ವರ್ಷದಲ್ಲಿ ಓದುತ್ತಿದ್ದ. ಆತ, ಅವನ ತಾಯಿ, ಇಬ್ಬರೇ ಯುದ್ಧದಲ್ಲಿ ಬಿದ್ದುಹೋದ ಮನೆಯನ್ನು ಪುನಃ ಕಟ್ಟಿದ್ದಾರೆ. ಸಂಜೆ ಬಿಡುವಾಗಿದ್ದಾಗ ಹೋಟೆಲಿನಲ್ಲಿ ಬಡಿಸುವ ಕೆಲಸ ಮಾಡಿ ಬಂದ ಹಣದಲ್ಲಿ ವರ್ಷಕ್ಕೊಮ್ಮೆ ದೇಶ ತಿರುಗಲು ಹೋಗುತ್ತಾರೆ. ಕ್ಲಿಂಗ್‌ಹಾಮರ್ ಕಾರ್ಖಾನೆಯ ಇಂಜಿನಿಯರ್ ಆದ ಆಲಿಸ್ ತಾವೇ ಮನೆಗೆ ಸುಣ್ಣ ಹೊಡೆದದ್ದನ್ನು, ಗೋಡೆಗೆ ಕಾಗದ ಅಂಟಿಸಿದ್ದನ್ನು ತೋರಿಸಿದರು.

ದುಡಿತದ ದೃಷ್ಟಿ ಯಾವಾಗಲೂ ಇರುವುದರಿಂದ ಇವರಿಗೆ ರಾಜಕೀಯದ

ಯೋಚನೆ ಅಷ್ಟಿಲ್ಲ. ರಾಜಕೀಯವನ್ನು ನಾಯಕರಿಗೆ ಬಿಟ್ಟಿದ್ದಾರೆ. ದಾರಿಯಲ್ಲಾಗಲಿ, ಬಸ್ಸು ರೈಲುಗಳಲ್ಲಾಗಲಿ, ಮನೆಯಲ್ಲಾಗಲಿ ಮಂತ್ರಿಗಳನ್ನು ಟೀಕಿಸುವ, ರಾಜಕೀಯ ಪಕ್ಷಗಳನ್ನು ಟೀಕಿಸುವ ಯಾವ ತಂಟೆಗೂ ಹೋಗುವುದಿಲ್ಲ. ತಮ್ಮ ಕೆಲಸವಾಯಿತು, ತಮ್ಮ ಸಂಸಾರವಾಯಿತು. ರಾಜಕೀಯಕ್ಕೆ ಹೋಗುವುದು ಎಂದರೆ ಓಟಿನ ಕಾಲ ಬಂದಾಗ ಮಾತ್ರ. ಹೀಗೆಂದಮಾತ್ರಕ್ಕೆ ಅವರಿಗೆ ವಿಷಯ ತಿಳಿದಿಲ್ಲವೆಂದಲ್ಲ. ಎಲ್ಲರೂ ನಿತ್ಯವೂ ಪತ್ರಿಕೆ ಓದುತ್ತಾರೆ. ಎಲ್ಲಾ ವಿಚಾರ ಗೊತ್ತಿರುತ್ತದೆ. ಈ ರೀತಿಯಾಗಿ ನಾವೂ ರಾಜಕೀಯ ಮಾತನಾಡುವುದನ್ನು ಬಿಟ್ಟರೆ ನಮ್ಮ ದೇಶವೂ ಬಹಳ ಮುಂದುವರಿದೀತು ಎನಿಸುತ್ತದೆ. ಅವರು ರಾಜಕೀಯದ ವಿಚಾರವಾಗಿ ಗೊಡ್ಡು ಹರಟೆ ಹೊಡೆಯುವ ಬದಲು ವಿಶ್ರಾಂತಿಪಡೆಯುತ್ತಾರೆ. ದೇಶ ತಿರುಗಾಡಿ ಜ್ಞಾನ ಪಡೆಯುತ್ತಾರೆ. "ನನ್ನ ಮಗನನ್ನು ಮುಂದಿನ ಯುದ್ಧಕ್ಕೆ ಕಳುಹಿಸುವ ಬದಲು ನೇಣು ಹಾಕುವುದು ಮೇಲು" ಎಂದು ಹೇಳಿದ ನನ್ನ ಸ್ನೇಹಿತ. ರಾಜಕೀಯದಲ್ಲಿ, ಯುದ್ಧದಲ್ಲಿ ಅಲ್ಲಿಯ ಜನರಿಗೆ ಇರುವ ತಿರಸ್ಕಾರವನ್ನು ತೋರಿಸುತ್ತದೆ ಇದು.

ದೇಶಾಟನೆ ಮಾಡಿದರೆ ಜ್ಞಾನ ಬರುತ್ತದೆ ಎಂದು ನಮ್ಮ ದೇಶದಲ್ಲಿ ಮೊದಲಿನಿಂದಲೂ ಹೇಳುತ್ತಾರೆ. ಜರ್ಮನಿಯ ಜನ ದೇಶ ತಿರುಗುವುದರಲ್ಲಿ ಮೊದಲನೆಯವರು ಎನ್ನಬಹುದು. ರಜಾ ಬಂದರೆ ಮನೆಯಲ್ಲಿ ಸುಮ್ಮನೆ ಕೂಡುವವರು ಬಹಳ ಕಡಮೆ. ಕೆಲವರು ಬೆಟ್ಟಗುಡ್ಡಗಳಿಗೆ ಹೋಗುತ್ತಾರೆ. ಕೆಲವರು ಬೇರೆ ದೊಡ್ಡ ಊರುಗಳಿಗೆ ಹೋಗುತ್ತಾರೆ. ಅವರವರ ಅಭಿರುಚಿಗೆ ತಕ್ಕಂತೆ ಬೇರೆ ಬೇರೆ ಸ್ಥಳಗಳಿಗೆ ಹೋಗುವುದಕ್ಕೆ ಮುಂಚೆ ಎಲ್ಲಾ ಏರ್ಪಾಡುಗಳನ್ನೂ ಮಾಡಿಕೊಳ್ಳುತ್ತಾರೆ. ಚಳಿಗಾಲದಲ್ಲಿ ಮನೆ ಬಿಡುವುದು ಕಷ್ಟ. ಆದರೂ ಮಂಜಿನ ಬೆಟ್ಟಗಳಿಗೆ ಹೋಗಿ, ಮಂಜಿನ ಮೇಲೆ ಜಾರುವ ಆಟ ಆಡುತ್ತಾರೆ. ಇದಕ್ಕಾಗಿ ಶನಿವಾರ, ಭಾನುವಾರ ಬಸ್ಸುಗಳು ಬೆಟ್ಟಗುಡ್ಡಗಳಿಗೆ ಹೋಗುತ್ತವೆ. ಈ ಬಸ್ಸು, ರೈಲು ಏರ್ಪಾಡು ಮಾಡಲು, ಪ್ರಯಾಣಿಕರ ಸೌಕರ್ಯಕ್ಕಾಗಿ ಪ್ರತಿ ಊರಿನಲ್ಲೂ ಒಂದು ಅಥವಾ ಎರಡು ಟ್ರಾವೆಲ್ಸ್ ಬ್ಯೂರೋ ಇರುತ್ತವೆ. ಇವು ಸರ್ಕಾರದ್ದಲ್ಲದಿದ್ದರೂ, ಇಲ್ಲಿ ಎಲ್ಲಾ ಸೌಕರ್ಯಗಳನ್ನೂ ಏರ್ಪಡಿಸಿಕೊಡುತ್ತಾರೆ. ನಾವು ಎಲ್ಲಿಗೆ ಹೋಗಬೇಕೋ ಆ ಊರಿನ ವಿಚಾರ ವಿವರವಾಗಿ ತಿಳಿಸುತ್ತಾರೆ. ಅದಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಕೊಡುತ್ತಾರೆ. ಈ ರೀತಿ ಎಲ್ಲಾ ಏರ್ಪಾಡು ಮಾಡಿಕೊಡುತ್ತಾರೆ. ಪ್ರತಿವಾರದ ಕೊನೆಯಲ್ಲಿ ಬೇರೆ ಊರುಗಳಿಗೆ ಹೋಗಲು ಬಸ್ಸುಗಳನ್ನು, ವಿಶೇಷ ರೈಲುಗಳನ್ನು ಏರ್ಪಡಿಸುತ್ತಾರೆ. ಏರ್ಪಾಡುಮಾಡಿದ್ದಕ್ಕೆ ಕೆಲವರು ಸ್ವಲ್ಪ ಹಣ

ಪಡೆಯುತ್ತಾರೆ; ಕೆಲವರು ಇಲ್ಲ. ಇವುಗಳ ಜೊತೆಗೆ ಸರ್ಕಾರದವರೇ ಜನಗಳ ಅನುಕೂಲಕ್ಕಾಗಿ ವಿಶೇಷ ರೀತಿಯ ರಿಯಾಯಿತಿ ದರದಲ್ಲಿ ರೈಲುಗಳನ್ನು ಬೇರೆ ಬೇರೆ ಊರುಗಳಿಗೆ ಏರ್ಪಡಿಸುತ್ತಾರೆ.

ಒಂದು ಸಾರಿ ನಾನು ಇಂತಹ ಒಂದು-ದಿನದ ಪ್ರಯಾಣದಲ್ಲಿ ಭಾಗ ವಹಿಸಿದ್ದೆ. ಬೆಳಗ್ಗೆ ೭ ಗಂಟೆಗೆ ಊರು ಬಿಟ್ಟು ಕೆಲವು ಕಾಡುಪ್ರದೇಶ, ಸ್ಮಾರಕ ಪ್ರದೇಶಗಳನ್ನು ನೋಡಿಕೊಂಡು ಸಂಜೆ ಹಿಂದಿರುಗಿದೆ. ದಿನವೆಲ್ಲಾ ಬಸ್ಸಿನಲ್ಲಿ ಪ್ರಯಾಣಮಾಡಿದರೂ ಜನರ ಮಾತುಕತೆ, ತಮಾಷೆಗಳಿಂದ ಬಹಳ ಬೇಗ ಕಾಲ ಕಳೆಯಿತು. ಆ ಸ್ಮಾರಕಗಳನ್ನು ಬೆಟ್ಟಗಳ ಮೇಲೆ ಎತ್ತರ ದಲ್ಲಿ ಕಟ್ಟಿದ್ದಾರೆ. ಇಲ್ಲಿಯ ಜನರಿಗೆ ಹಳ್ಳಿಗಳನ್ನು ನೋಡುವುದು ಒಂದು ಸಂತೋಷ. ದಾರಿಯಲ್ಲಿ ಬರುವಾಗ ಒಂದು ದೊಡ್ಡ ಜಾತ್ರೆ ನಡೆಯುತ್ತಿತ್ತು. ನಾಲ್ಕು ಐದು ಹಳ್ಳಿಯವರು ಕೂಡಿ ಈ ಜಾತ್ರೆ ಏರ್ಪಡಿಸಿದ್ದರು. ಊರಿನ ಹುಡುಗರು–ಹುಡುಗಿಯರು, ಹೆಂಗಸರು–ಗಂಡಸರು ಗುಂಪುಗೂಡಿ ಸಾಲು ಸಾಲಾಗಿ ಹೊರಟಿದ್ದಾರೆ ಮೆರವಣಿಗೆಯಲ್ಲಿ. ವಯಸ್ಸಾದ ಮುದುಕರನ್ನು ಕೋಚ್ ಗಾಡಿಯಲ್ಲಿ ಕೂಡಿಸಿದ್ದಾರೆ. ಇದರಿಂದ ಪ್ರಪಂಚದ ಸಂಸ್ಕೃತಿ ಎಲ್ಲಾ ಒಂದೇ ಎಂದು ತಿಳಿಯುತ್ತದೆ.

ದೇಶ ತಿರುಗುವವರಿಗೆ ಅನುಕೂಲವಾದ ಸಾಹಿತ್ಯವನ್ನು ಯಥೇಚ್ಛವಾಗಿ ರೈಲ್ವೆ ನಿಲ್ದಾಣಗಳ ವಾರ್ತಾ ಕಛೇರಿಗಳಲ್ಲಿ ಪಡೆಯಬಹುದು. ತಮ್ಮ ಸಾಮಾನಿನ ಚೀಲ ಕಟ್ಟಿ, ಬಾವುಟ ಹಿಡಿದು ಹುಡುಗರು ಹಾಡುತ್ತಾ ನಡೆದು ಹೋಗುತ್ತಿದ್ದರೆ, ಅವರನ್ನು ನೋಡುವುದೇ ಒಂದು ಸಂತೋಷ ಸೈಕಲ್ ಮೇಲೆ ಪ್ರಯಾಣ ಮಾಡುವವರಿಗಂತೂ ಲೆಕ್ಕವೇ ಇಲ್ಲ. ೧೦೦–೧೫೦ ಕಿಲೋ ಮೀಟರ್ ಸೈಕಲ್ ಮೇಲೆ ಹೋಗಿ, ಒಂದೆರಡು ದಿನಗಳಲ್ಲಿ ಹಿಂದಿರುಗುತ್ತಾರೆ. ಹೀಗೆ ಪ್ರಯಾಣ ಮಾಡುವವರಿಗೆ ಅನುಕೂಲವಾಗುವಂತೆ ಯುವಕ ಸಂಘ ಗಳಿವೆ. ಅಲ್ಲಿ ಇಳಿದುಕೊಳ್ಳಬಹುದು. ಸೈಕಲ್ ಸವಾರರಿಗಾಗಿಯೇ ಕೆಲವು ರಸ್ತೆಗಳಿವೆ. ಕೆಲವರು ಕಾರುಗಳಲ್ಲಿ ಪ್ರಯಾಣ ಮಾಡುವುದೂ ಉಂಟು.

ವೇಳೆಗೆ ಸರಿಯಾಗಿ ರೈಲು ಹೊರಡಿಸಿ ಸರಿಯಾದ ಕಾಲಕ್ಕೆ ತಲಪಿಸುತ್ತಾರೆ. ಬಸ್ಸುಗಳೂ ಅಷ್ಟೆ. ಪೇಟೆಗಳಲ್ಲಿ ಓಡಾಡುವ ಬಸ್ಸು ಟ್ರಾಮ್‌ಗಳು ನಿಯಮಿತ ವೇಳೆಗೆ ಒಂದು ನಿಮಿಷ ಕೂಡ ಹೆಚ್ಚುಕಡಮೆ ಹೋಗುವುದಿಲ್ಲ. ವೇಳಾಪಟ್ಟಿ ಪ್ರತಿ ನಿಲ್ದಾಣದಲ್ಲೂ ಸಿಗುತ್ತದೆ. "ಏಳನೇ ನಂಬರ್ ಬಸ್ಸು ರೈಲ್ವೆ ನಿಲ್ದಾಣದ ಕಡೆಗೆ ಹೋಗದು; ೬ ಗಂಟೆ ೧೩ ನಿಮಿಷಕ್ಕೆ ಮೊದಲನೇ ಬಸ್ಸು ಬರುತ್ತದೆ. ನಂತರ ಪ್ರತಿ ೧೦ ನಿಮಿಷಕ್ಕೆ ಒಂದು ಬಸ್ಸು ಬರುತ್ತದೆ"

ಎಂದೆಲ್ಲ ವೇಳಾಪಟ್ಟಿ ಹಾಕಿರುತ್ತಾರೆ. ಎಷ್ಟೋ ಸಾರಿ ಒಂದು ನಿಮಿಷ ಹೊತ್ತು ಮಾಡಿಕೊಂಡು ಹೋಗಿ ಟ್ರಾಂ ತಪ್ಪಿಹೋಗಿದೆ.

ಎಲ್ಲಾ ಊರುಗಳಲ್ಲೂ ಕಾಲುನಡಿಗೆಯಲ್ಲಿ ಓಡಾಡುವವರಿಗೆ, ಸೈಕಲ್ ಸವಾರರಿಗೆ, ವಾಹನದಲ್ಲಿ ಓಡಾಡುವವರಿಗೆ, ಬೇರೆ ಬೇರೆ ರಸ್ತೆಗಳಿವೆ. ಕಾಲು ನಡಿಗೆಯಲ್ಲಿ ಹೋಗುವವರು ಯಾರೂ ಬೇರೆ ರಸ್ತೆಯನ್ನು ಉಪಯೋಗಿಸುವುದಿಲ್ಲ. ಮುದುಕರು, ಹುಡುಗರು ಬಂದರೆ ಪೋಲೀಸಿನವರು ತಾವೇ ಬಂದು ಅವರನ್ನು ಜೊತೆಯಲ್ಲಿ ಕರೆದುಕೊಂಡು ರಸ್ತೆ ದಾಟಿಸುತ್ತಾರೆ. ಶಾಲೆಯ ಹುಡುಗರು ಬಂದರೆ ಒಟ್ಟಿಗೆ ಸೇರಿಸಿ ದಾಟಿಸುತ್ತಾರೆ. ಮನಸ್ಸಿಗೆ ಬಂದಂತೆ ದಾಟಿದರೆ, ನಿಯಮ ಮೀರಿದರೆ ಪೋಲೀಸಿನವನೇ ದಂಡ ಹಾಕಿ ರಸೀತಿ ಬರೆದು ಕೊಡುತ್ತಾನೆ. ಈ ಅಧಿಕಾರ ಪೋಲೀಸಿನವರಿಗೆ ಇದೆ.

ಪೋಲೀಸ್‌ನವರಿಗೆ ವಿಶೇಷ ತರಪೇತು ಕೊಟ್ಟಿರುತ್ತಾರೆ. ಅವರಿಗೆ ಊರಿನ ಪ್ರತಿ ರಸ್ತೆ, ಪ್ರತಿ ಮುಖ್ಯ ಸ್ಥಳ ಎಲ್ಲಾ ಗೊತ್ತಿರುತ್ತದೆ. ಜರ್ಮನ್ ಭಾಷೆ ಅಲ್ಲದೆ ಮತ್ತೊಂದು ಪರದೇಶದ ಭಾಷೆ ಕಲಿತಿರುತ್ತಾರೆ ಅವರು. ನಾನು ಒಂದು ಸಾರಿ ನನ್ನ ಸ್ನೇಹಿತನ ಮನೆಗೆ ದಾರಿ ತಿಳಿಯದೆ ನನ್ನ ಹತ್ತಿರ ಇದ್ದ ಭೂಪಟದಲ್ಲಿ ರಸ್ತೆ ಹುಡುಕುತ್ತಿದ್ದೆ. ಅದರಲ್ಲಿ ಇರಲಿಲ್ಲ. ಪೋಲೀಸ್‌ನವನನ್ನೇ ಕೇಳಿದೆ. ಆತ ತನ್ನ ಹತ್ತಿರ ಇದ್ದ ದೊಡ್ಡ ಪುಸ್ತಕ ತೆಗೆದು, ಅದರಲ್ಲಿ ಇದ್ದ ಭೂಪಟ ಮತ್ತು ವಿಳಾಸದ ಪಟ್ಟಿ ತೆಗೆದು, ಅದರಲ್ಲಿ ಆ ರಸ್ತೆ ಮತ್ತು ನನ್ನ ಸ್ನೇಹಿತನ ಮನೆಯ ನಂಬರ್ ಇರುವ ಸ್ಥಳ ತೋರಿಸಿದ. ಅಷ್ಟು ವಿವರ ನನ್ನ ಭೂಪಟದಲ್ಲಿ ಇರಲಿಲ್ಲ. ಅದನ್ನು ನನ್ನ ಪಟದಲ್ಲಿ ಗುರುತು ಹಚ್ಚಿಕೊಟ್ಟ. ಪೋಲೀಸಿನವರಿಗೆ ಸಾಮಾನ್ಯವಾಗಿ ಎಲ್ಲಾ ವಿಳಾಸ ಗೊತ್ತಿರುತ್ತದೆ. ಜರ್ಮನಿಯಲ್ಲಿ ಎಲ್ಲರೂ ಪೋಲೀಸ್ ಹತ್ತಿರ ತಮ್ಮ ಹೆಸರು, ವಿಳಾಸ ಎಲ್ಲವನ್ನೂ ದಾಖಲು (ರಿಜಿಸ್ಟರ್) ಮಾಡಿಸಿಕೊಳ್ಳಬೇಕು. ಆಗ ಆತನ ಫೋಟೋವುಳ್ಳ ಒಂದು ಪಾಸ್ (ರಹದಾರಿ) ಕೊಡುತ್ತಾನೆ. ಬೇರೆ ಊರಿಗೆ ಹೋಗುವುದಾದರೆ ತಾನು ಮೊದಲಿದ್ದ ಊರಿನ ಪೋಲೀಸ್‌ನವರಿಗೆ ಊರು ಬಿಡುತ್ತೇನೆಂದು ತಿಳಿಸಬೇಕು. ಬೇರೆ ಊರಿಗೆ ಹೋದ ಕೂಡಲೇ ಅಲ್ಲಿ ದಾಖಲು ಮಾಡಿಸಿಕೊಳ್ಳಬೇಕು. ಅದೇ ಊರಿನಲ್ಲೇ ಬೇರೆ ಮನೆಗೆ ಹೋದರೂ ಕೂಡ ಪೋಲೀಸ್‌ನವರಿಗೆ ತಿಳಿಸಿ ವಿಳಾಸವನ್ನು ಬದಲಾಯಿಸಿಕೊಳ್ಳಬೇಕು. ಇದರಿಂದ ಪೋಲೀಸ್‌ನವರಿಗೆ ಜರ್ಮನಿಯಲ್ಲಿ ಎಲ್ಲರ ವಿಳಾಸ ತಿಳಿದಿರುವುದಲ್ಲದೆ ಯಾರು ಎಲ್ಲಿ ಹೋದರೂ ಕಂಡುಹಿಡಿಯಬಹುದು. ನನ್ನ ಸ್ನೇಹಿತರು ಒಬ್ಬರು ಹೇಳಿದರು : "ನೀವು ನಿಮ್ಮ ಸ್ನೇಹಿತನಿಗೆ ೨೦ ವರ್ಷವಾದ

ಮೇಲೆ ಹಳೆಯ ವಿಳಾಸಕ್ಕೆ ಪತ್ರ ಬರೆದರೂ, ಆತ ಎಷ್ಟೇ ಊರು ಬದಲಾವಣೆ ಮಾಡಿದ್ದರೂ, ಆ ಪತ್ರ ಆತನಿಗೆ ಪೋಲೀಸ್‌ನವರ ಮೂಲಕ ತಲಪುತ್ತದೆ.” ಪೋಲೀಸ್‌ನವರು ಕೊಟ್ಟ ಪಾಸ್ ಯಾವಾಗಲೂ ಎಲ್ಲರಲ್ಲೂ ಇರುತ್ತದೆ. ಒಂದು ಊರಿಗೆ ಹೋದಾಗ ಸ್ನೇಹಿತರ ವಿಳಾಸ ಮರೆತರೆ, ಪೋಲೀಸ್‌ನವರಿಗೆ ಫೋನ್ ಮಾಡಿದರೆ ಅವರು ವಿಳಾಸ ತಿಳಿಸುತ್ತಾರೆ. ಪರದೇಶದಿಂದ ಹೋದವರು ಪೋಲೀಸ್‌ನವರಲ್ಲಿ ತಮ್ಮ ವಿಳಾಸ ದಾಖಲು ಮಾಡಿಸಿಕೊಳ್ಳಬೇಕು. ಅಲ್ಲಿ ಪ್ರತಿಯೊಬ್ಬರನ್ನೂ ಗೌರವದಿಂದ ಕಾಣುತ್ತಾರೆ. ನಾನು ಒಂದು ಸಂಜೆ ರಸ್ತೆಯಲ್ಲಿ ಹೋಗುತ್ತಿದ್ದಾಗ, ಒಂದು ಕಾರಿಗೂ ಸೈಕಲ್ಲಿಗೂ ಢಿಕ್ಕಿ ಆಯಿತು. ಎರಡೇ ನಿಮಿಷಗಳಲ್ಲಿ ಪೋಲೀಸ್‌ನವರು ಅಲ್ಲಿ ಇದ್ದರು. ಅವರ ಕಾರು, ಜೊತೆಗೆ ಒಂದು ಆಂಬ್ಯುಲೆನ್ಸ್ ಕಾರು ಬಂದಿತು. ಅಷ್ಟು ಬೇಗ ಹೇಗೆ ಬಂದಿತು ಎಂಬುದೇ ಆಶ್ಚರ್ಯ! ವಿಚಾರಿಸಿದಲ್ಲಿ, ಅಪಘಾತವನ್ನು ನೋಡಿದ ಕೂಡಲೇ ರಸ್ತೆಯ ಪಕ್ಕದಲ್ಲಿದ್ದ ಪಬ್ಲಿಕ್ ಟೆಲಿಫೋನ್‌ನಿಂದ ಯಾರೋ ಟೆಲಿಫೋನ್ ಮಾಡಿದ್ದರು. ಅದಕ್ಕೆ ಹಣ ಇಲ್ಲ. ಅದು ಮುಖ್ಯ ಪೋಲೀಸ್ ಕಛೇರಿಯ ನಂಬರು. ಅಲ್ಲಿಂದ ಊರಿನಲ್ಲಿ ಓಡಾಡುತ್ತಿರುವ ಪೋಲೀಸ್ ಕಾರುಗಳಿಗೆ ರೇಡಿಯೋ ಟೆಲಿಫೋನ್ ಮಾಡುತ್ತಾರೆ. ಪೋಲೀಸ್‌ನವರ ಕಾರಿನಲ್ಲಿ ರೇಡಿಯೋ ಟೆಲಿಫೋನ್ ಇದೆ. ಇಂತಹ ಕಡೆ ಅಪಘಾತವಾಗಿದೆ, ಇಂತಹ ನಂಬರಿನ ಕಾರುಗಳು ಅಲ್ಲಿಗೆ ಹೋಗಲಿ ಎಂದು ತಿಳಿಸುತ್ತಾರೆ. ಆ ಕಾರುಗಳು ಅಲ್ಲಿಗೆ ಹತ್ತಿರದಲ್ಲೇ ಓಡಾಡುತ್ತಿರುವುದರಿಂದ ಕೂಡಲೇ ಬರುತ್ತವೆ. ವಿಜ್ಞಾನವನ್ನು ಅವರು ಸಾಧ್ಯವಾದಷ್ಟೂ ಉಪಯೋಗಿಸಿಕೊಂಡಿದ್ದಾರೆ. ಇವುಗಳ ಜೊತೆಗೆ ತರಬೇತು ಹೊಂದಿದ ನಾಯಿಗಳು ಬೇರೆ. ಅವುಗಳಿಂದ ಕಳ್ಳರನ್ನು ಹಿಡಿಯಲು ಬಹಳ ಸಹಾಯವಾಗುತ್ತದೆ. ಜರ್ಮನಿಯ ಪೋಲೀಸ್-ನಾಯಿಗಳು ಪ್ರಪಂಚದಲ್ಲೇ ಪ್ರಸಿದ್ಧ.

ದೇಶಕ್ಕೆ ನೆರವಾಗಿ ನಿಂತಿವೆ ಪತ್ರಿಕೆಗಳು. ಪ್ರತಿ ಊರಿಗೂ ಸಾಮಾನ್ಯವಾಗಿ ಒಂದು ಪತ್ರಿಕೆ ಇದ್ದೇ ಇರುತ್ತದೆ. ದೊಡ್ಡ ಪಟ್ಟಣಗಳಲ್ಲಿ ೪-೫ ಪತ್ರಿಕೆಗಳಿರುತ್ತವೆ. ಎಲ್ಲರೂ ಪತ್ರಿಕೆ ಕೊಳ್ಳುತ್ತಾರೆ, ಓದುತ್ತಾರೆ. ಮನಸ್ಸಿಗೆ ಬಂದಂತೆ ರಾಜಕೀಯ ಮಾತನಾಡದಿದ್ದರೂ, ಪ್ರಪಂಚದ ವಿಚಾರವನ್ನು ಚೆನ್ನಾಗಿ ತಿಳಿದುಕೊಂಡಿರುತ್ತಾರೆ. ಸಾಮಾನ್ಯವಾಗಿ ಪತ್ರಿಕೆ ಬೆಲೆ ೨೫ ಪೈಸೆ.

ಯುದ್ಧದಲ್ಲಿ ಎಲ್ಲವನ್ನೂ ಕಳೆದುಕೊಂಡ ಈ ದೇಶ ಈಗ ಎಷ್ಟು ಮುಂದುವರಿದಿದೆ ಎಂದು ತಿಳಿಯಬೇಕಾದರೆ ಇಲ್ಲಿಯ ಅಲಂಕೃತವಾದ ಅಂಗಡಿಗಳನ್ನು ನೋಡಿದರೆ ಸಾಕು. ಹೊರಗಡೆಯಿಂದ ನೋಡಿದರೆ ದೊಡ್ಡ ವಸ್ತುಪ್ರದರ್ಶನ

ವಿದ್ದಂತೆ ಇರುತ್ತದೆ. ದೊಡ್ಡ ಗಾಜಿನ ಬಾಗಿಲು (Show-windows) ಹಾಕಿ ಪ್ರದರ್ಶನ ಸಾಧನಗಳನ್ನು ಏರ್ಪಡಿಸಿರುತ್ತಾರೆ. ನಾಲ್ಕು ದಿನಕ್ಕೆ ಒಂದು ಸಾರಿ ಪ್ರದರ್ಶನ ವಸ್ತುಗಳನ್ನು ಬದಲಾಯಿಸುತ್ತಾರೆ. ಅದನ್ನು ನೋಡುವುದೇ ಒಂದು ಆನಂದ. ಹೊಸದಾಗಿ ಏನು ಬಂದರೂ ಮೊದಲು ಇಲ್ಲಿ ಪ್ರದರ್ಶನ ವಾಗುತ್ತದೆ. ಜನಗಳ ಮನಸ್ಸಿಗೆ ಒಪ್ಪುವಂತೆ ಅನನ್ನು ಅಂದವಾಗಿ ಪ್ರದರ್ಶಿಸುತ್ತಾರೆ. ರಾತ್ರಿಯಲ್ಲೂ ಕೆಲಸಮಾಡಿ ಬೆಳಗಾಗುವ ಹೊತ್ತಿಗೆ ಎಲ್ಲಾ ಏರ್ಪಾಡು ಮಾಡಿರುತ್ತಾರೆ. ಎಲ್ಲರನ್ನೂ ಆಕರ್ಷಿಸುವಂತೆ ದೊಡ್ಡ ಬೊಂಬೆಗಳನ್ನು ಅಲಂಕರಿಸಿ, ತಮ್ಮ ವಸ್ತುಗಳನ್ನು ಹೇಗೆ ಉಪಯೋಗಿಸಬೇಕೆಂದು ಪ್ರದರ್ಶಿಸುವುದರ ಜೊತೆಗೆ, ಅವುಗಳ ಬೆಲೆಯನ್ನೂ ಸಹ ಹಾಕಿರುತ್ತಾರೆ. ಹಬ್ಬಗಳಿಗೆ ತಕ್ಕಂತೆ ಅಲಂಕಾರ. ಆಟದ ಸಾಮಾನುಗಳ ಅಂಗಡಿಗಳನ್ನು ನೋಡಲು ಮಕ್ಕಳಿಗೆ ಮಾತ್ರವಲ್ಲದೆ ದೊಡ್ಡವರಿಗೂ ಆಸೆ ಆಗುತ್ತದೆ. ಕೆಲವು ಅಂಗಡಿಗಳಂತೂ ಗಾಜಿನ ಮನೆಗಳೇ! ಇನ್ನು ಕೆಲವು ಅಂಗಡಿಗಳಿಗೆ ದೊಡ್ಡ ಕಟ್ಟಡಗಳೇ ಮೀಸಲು. ತರಕಾರಿ, ಪೊರಕೆಯಿಂದ ಹಿಡಿದು ರೇಡಿಯೋಗಳ ವರೆಗೆ ಎಲ್ಲಾ ಸಾಮಾನುಗಳೂ ಅಲ್ಲಿ ಸಿಗುವುದರ ಜೊತೆಗೆ ಹೊಟೇಲ್ ಸಹ ಇರುತ್ತದೆ. ಎಲ್ಲಾ ಅಂಗಡಿಗಳಲ್ಲೂ ಬೆಲೆ ನಿಖರ. ವಸ್ತುಗಳ ಮೇಲೆ ಬೆಲೆ ಹಾಕಿರುತ್ತಾರೆ. ಅಂಗಡಿಯ ಒಳಗೆ ಹೋಗುತ್ತಲೇ "ನಮಸ್ಕಾರ" ಎನ್ನಬೇಕು. ದೊಡ್ಡ ಅಂಗಡಿಗಳಲ್ಲಿ ಮಾತ್ರ ಮಾರಾಟ ಒಂದು ಕಲೆ. ಒಂದು ಸಾರಿ ಒಂದು ಅಂಗಡಿಗೆ ಹೋದೆ. ನನಗೆ ಬೇಕಾದ ಸಾಮಾನು ಅವರಲ್ಲಿ ಇರಲಿಲ್ಲ. ನನಗೆ ಭಾಷೆ ಬಾರದಿದ್ದನ್ನು ನೋಡಿ, ಅಂಗಡಿಯವ ತಾನೇ ಬೇರೆ ಅಂಗಡಿಗೆ ಹೋಗಿ ಆ ವಸ್ತುವನ್ನು ತಂದುಕೊಟ್ಟ. ನಾನು ಮೊದಲು ಹೋಗಿದ್ದು ಆಮೇಲೆ ೩-೪ ಜನ ಅಂಗಡಿಗೆ ಬಂದರೆ, ಅಂಗಡಿಯವನು ನನ್ನನ್ನು ಬಿಟ್ಟು ಅವರನ್ನು ಏನು ಬೇಕೆಂದು ಕೇಳಿದರೆ, ಅವರು "ಆತ ಮೊದಲು ಬಂದವನು, ಆತನನ್ನು ಮೊದಲು ಕೇಳಿ" ಎಂದು ಹೇಳುತ್ತಾರೆ. ಸಣ್ಣ ಅಂಗಡಿಗಳಾದರೆ, ಯಜಮಾನನ ಜೊತೆಗೆ ಅವನ ಹೆಂಡತಿ ಮಕ್ಕಳೂ ಕೆಲಸ ಮಾಡುತ್ತಾರೆ. ಯಜಮಾನ ಎಂದೂ ಒಂದು ಕಡೆ ಕೂಡುವುದಿಲ್ಲ. ಎಲ್ಲರ ಜೊತೆಗೂ ಕೆಲಸ ಮಾಡುತ್ತಾನೆ. ಕಾರು ತೆಗೆದುಕೊಂಡು ಹೋಗಿ ಸಾಮಾನು ತರುತ್ತಾನೆ. ತಾನೇ ಆ ಸಾಮಾನನ್ನು ಹೊತ್ತು ಕಾರಿನಿಂದ ಅಂಗಡಿಗೆ ತರುತ್ತಾನೆ. ಅದೇ ರೀತಿ, ರೈತ ಬೆಳಗ್ಗೆ ಕಾರಿನ ಹಿಂದೆ ಒಂದು ಗಾಡಿ ಕಟ್ಟಿ ಸಾಮಾನು ತರುತ್ತಾನೆ. ಕುದುರೆಗಾಡಿ, ಲಾರಿಗಳಲ್ಲೂ ತರಕಾರಿ, ಹೂವು ಮೊದಲಾದುವುಗಳನ್ನು ಮಾರಲು ಪೇಟೆಗೆ

ತರುತ್ತಾನೆ. ತಾನೇ ಮಾರ್ಕೆಟ್ಟಿನಲ್ಲಿ ಮಾರಿ ಸಂಜೆಯ ಹೊತ್ತಿಗೆ ಊರಿಗೆ ಕಾರಿನಲ್ಲಿ ಅಥವಾ ಗಾಡಿಯಲ್ಲಿ ಹಿಂದಿರುಗುತ್ತಾನೆ. ಅಂಗಡಿಗಳೆಲ್ಲಾ ಬಲು ಶುಚಿ. ಬೆಳಗ್ಗೆ ೯ ಗಂಟೆಯಿಂದ ಸಂಜೆ ೬ ಗಂಟೆಯವರೆಗೂ ಅಂಗಡಿ ತೆಗೆದಿರುತ್ತದೆ. ಭಾನುವಾರ ರಜ. ಆಹಾರದ ಅಂಗಡಿಗಳು ಮಾತ್ರ ಸಂಜೆ ೭ ಗಂಟೆಯವರೆಗೂ ತೆಗೆದಿರುತ್ತವೆ. ಊರಿನ ಜನರಿಗೆ ಸಂಜೆಯ ಊಟದ ನಂತರ ಪೇಟೆಯ ಅಂಗಡಿಗಳಲ್ಲಿ ಜೋಡಿಸಿರುವ ಈ ವಸ್ತುಪ್ರದರ್ಶನವನ್ನು ನೋಡುವುದೇ ಕೆಲಸ.

ಇವುಗಳ ಜೊತೆಗೆ ಸ್ವಯಂಚಾಲಿತ (ಆಟೊಮ್ಯಾಟಿಕ್) ಯಂತ್ರಗಳನ್ನು ಕೆಲವು ಅಂಗಡಿಗಳ ಹೊರಗಡೆ ಕಾಣಬಹುದು. ಸಿಗರೇಟಿನಿಂದ ಹಿಡಿದು ಆಹಾರ, ಹಣ್ಣುಹಂಪಲುಗಳವರೆಗೆ ಎಲ್ಲಾ ಸಾಮಾನುಗಳನ್ನು ಕೊಳ್ಳಲು ಅನುಕೂಲವಾಗುವಂತೆ ಬೇರೆ ಬೇರೆ ಯಂತ್ರಗಳನ್ನು ಬೀದಿಯಲ್ಲಿ ಕಾಣಬಹುದು. ಅಲ್ಲಿ ಬರೆದಿರುವಷ್ಟು ದುಡ್ಡು ಹಾಕಿ ಅಲ್ಲಿರುವ ಗುಂಡಿ ಒತ್ತಿದರೆ ನಮಗೆ ಬೇಕಾದ ಸಾಮಾನು ಬರುತ್ತದೆ. ಫೋಟೋ ಅಂಗಡಿ ಮುಂದೆ ಫಿಲ್ಮ್‌ರೀಲು ಇರುವ ಯಂತ್ರ, ಪೋಸ್ಟ್ ಆಫೀಸಿನ ಹತ್ತಿರ ಸ್ಟಾಂಪ್–ಕವರು ಇರುವ ಯಂತ್ರ ಇರುತ್ತವೆ. ಬ್ರೆಡ್, ಮಾಂಸಾಹಾರ, ಹಣ್ಣು ಸಿಗುವ ಯಂತ್ರಗಳೂ ಇರುತ್ತವೆ. ಕೆಲವು ಕಡೆ ದುಡ್ಡು ಹಾಕಿದಮೇಲೆ ಬಿಸಿಬಿಸಿಯಾಗಿ ಬರುತ್ತದೆ ಬ್ರೆಡ್, ಮತ್ತಿತರ ಆಹಾರ; ದುಡ್ಡು ಹಾಕಿದರೆ ಸಂಗೀತ ಕೇಳಿಸುತ್ತದೆ.

ಆಗಾಗ ಬಟ್ಟೆಗಳ ಪ್ರದರ್ಶನ, ಕೈಗಾರಿಕಾ ಪ್ರದರ್ಶನ, ಬ್ರೆಡ್ ಮತ್ತು ಬಿಸ್ಕತ್ ಪ್ರದರ್ಶನ, ಹೂವಿನ ಪ್ರದರ್ಶನ, ಕ್ಯಾಮರಾ ಪ್ರದರ್ಶನ, ಗಡಿಯಾರ–ಒಡವೆಗಳ ಪ್ರದರ್ಶನ—ಹೀಗೆ ಎಲ್ಲಾ ತರದ ಪ್ರದರ್ಶನಗಳೂ ನಡೆಯುತ್ತವೆ. ಈ ಪ್ರದರ್ಶನಗಳಿಗಾಗಿ ಅನೇಕ ಊರುಗಳಲ್ಲಿ ಶಾಶ್ವತ ಕಟ್ಟಡ ಕಟ್ಟಿಸಿದ್ದಾರೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇವು ನಡೆಯುತ್ತವೆ. ಹೊಸದಾಗಿ ಕಂಡುಹಿಡಿದ ವಸ್ತುಗಳೆಲ್ಲಾ ಇಲ್ಲಿಗೆ ಬರುತ್ತವೆ. ಜನ ಹೊಸದಾಗಿ ಬಂದ ಸಾಮಾನುಗಳನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ತೋರಿಸುತ್ತಾರೆ. ಕೈಗಾರಿಕಾ ಪ್ರದರ್ಶನವೇ ಬಹಳ ದೊಡ್ಡದು. ಜರ್ಮನರಿಗೆ ಪ್ರದರ್ಶನದ ಹುಚ್ಚು ಎನ್ನುತ್ತಾರೆ. ಆದರೆ ಜ್ಞಾನಸಂಪಾದನೆಗೆ ಇದು ಒಂದು ಮಾರ್ಗ ಎನಿಸುತ್ತದೆ. ಆಟದ ಸಾಮಾನುಗಳ ಪ್ರದರ್ಶನವಂತೂ ಎಲ್ಲಾ ದೇಶಗಳನ್ನೂ ಆಕರ್ಷಿಸುತ್ತದೆ.

ಬ್ರೌನ್ಸ್‌ವೈಗ್‌ನಲ್ಲಿ ಒಂದು ಷೂ ಮತ್ತು ಚಪ್ಪಲಿ ಪ್ರದರ್ಶನವನ್ನು

ನೋಡಿದೆ. ಷೂ, ಚಪ್ಪಲಿಗಳನ್ನು ಹಾಕಿಕೊಂಡು ಕೆಲವು ಹುಡುಗಿಯರು ಪ್ರದರ್ಶಿಸಿದರು. ಅದಕ್ಕೆ ತಕ್ಕಂತೆ ಬಟ್ಟೆ ಹಾಕಿಕೊಂಡರೆ ಹೇಗೆ ಕಾಣುತ್ತದೆ ಎಂದು ತೋರಿಸಿದ್ದಲ್ಲದೆ, ಅವುಗಳ ಮೇಲೆ ಹಾಡುಗಳನ್ನು ಬೇರೆ ಹಾಡಿದರು. ಇಂಥ ಪ್ರದರ್ಶನವನ್ನು ನಾನು ನೋಡಿದ್ದು ಇದೇ ಮೊದಲನೆಯ ಸಾರಿ. ಬಹಳ ಆಕರ್ಷಣೀಯವಾಗಿತ್ತು. ಹೊಲಿದ ಬೇರೆ ಬೇರೆ ಬಟ್ಟೆಗಳು, ಕೋಟು, ಲಂಗಗಳನ್ನು ಹಾಕಿಕೊಂಡು ಹುಡುಗಿಯರು ಬಟ್ಟೆ ಪ್ರದರ್ಶನ ಮಾಡುತ್ತಾರೆ. ಸಾಮಾನ್ಯವಾಗಿ ಇಂತಹ ಪ್ರದರ್ಶನಗಳು ನಡೆಯುವುದು ದೊಡ್ಡ ಹೋಟೆಲುಗಳಲ್ಲಿ. ಪ್ರವೇಶ ಧನ ೨ ರೂಪಾಯಿ. ಬ್ರೌನ್ಸ್ವೈಗ್‌ನಲ್ಲಿಯೇ ಮನೆ ಮತ್ತು ತೋಟದ ಪ್ರದರ್ಶನವೊಂದು ನಡೆಯಿತು. ಕೋಳಿ ಸಾಕಲು ಬೇಕಾದ ಉಪಕರಣಗಳಿಂದ ಹಿಡಿದು, ಮನೆ ಕಟ್ಟುವ ಉಪಕರಣಗಳವರೆಗೆ ಎಲ್ಲಾ ಸಲಕರಣೆಗಳೂ ಅಲ್ಲಿದ್ದವು. ಮನೆಯಲ್ಲಿ ಉಪಯೋಗಿಸಬಹುದಾದ ವಸ್ತುಗಳು, ಬೇರೆ ಬೇರೆ ತರದ ಮನೆಗಳು, ಅವನ್ನು ಕಟ್ಟಲು ಬೇಕಾದ ಸಾಮಾನುಗಳು, ತರಕಾರಿ ಬೆಳೆಯುವ ವಿಧಾನ, ಹೂ-ಹಣ್ಣುಗಳ ಪ್ರದರ್ಶನ —ಎಲ್ಲವೂ ಇದ್ದವು. ಪ್ರದರ್ಶನಗಳಿಗೆ ಸರ್ಕಾರ ಎಲ್ಲಾ ತರದ ಸಹಾಯ ಮಾಡುತ್ತದೆ. ಬೇರೆ ಕಡೆಯಿಂದ ಬರುವವರಿಗೆ ರಿಯಾಯಿತಿ ದರದ ಟಿಕೆಟ್ ಕೊಡುತ್ತಾರೆ.

ಯಾವುದನ್ನೇ ಪ್ರದರ್ಶಿಸಿದರೂ ಇಲ್ಲಿಯ ಜನ ತಮ್ಮದೇ ಆದ ಒಂದು ಕಲೆಯನ್ನು ತೋರಿಸುತ್ತಾರೆ. ಯಾವುದಾದರೂ ಒಂದು ಪ್ರಾಣಿಸಂಗ್ರಹಾಲಯಕ್ಕೆ ಹೋಗಿ, ಅಲ್ಲಿಯೂ ಏನಾದರೊಂದು ವಿಶೇಷ ಇರುತ್ತದೆ. ಚಳಿಗಾಲದಲ್ಲಿ ಕೆಲವು ಪ್ರಾಣಿಗಳನ್ನು ಬೆಚ್ಚನೆ ಇಟ್ಟಿರಬೇಕು. ಅದಕ್ಕಾಗಿ ಬೇರೆ ಸ್ಥಳ ಏರ್ಪಡಿಸಿ, ಆ ಸ್ಥಳದಲ್ಲಿ ಉಷ್ಣದೇಶದ ಪ್ರಾಣಿಗಳನ್ನು ಇಡುತ್ತಾರೆ. ಎಲ್ಲಾ ಪ್ರಾಣಿಸಂಗ್ರಹಾಲಯದಲ್ಲೂ ಭಾರತದ ಆನೆಗಳನ್ನು ಕಾಣಬಹುದು. ಪ್ರವೇಶ ಧನ ೧ ರೂಪಾಯಿಯಿಂದ ೨ ರೂಪಾಯಿಯವರೆಗೆ.

ಪ್ರತಿ ಊರಿನಲ್ಲೂ ಒಂದು ಮ್ಯೂಸಿಯಂ ಮತ್ತು ಕಲಾಸಂಗ್ರಹಾಲಯ ಇದ್ದೇ ಇರುತ್ತದೆ. ಆ ಊರಿನ ವಿಶೇಷವೆಲ್ಲವನ್ನೂ ಅಲ್ಲಿ ಕಾಣಬಹುದು. ಪುರಾತನ ವಸ್ತುಗಳನ್ನೆಲ್ಲಾ ಸಂಗ್ರಹಿಸಿರುತ್ತಾರೆ. ಅವರು ಕಲೆಗೆ ಎಷ್ಟು ಗೌರವ ಕೊಡುತ್ತಾರೆ ಎಂಬುದಕ್ಕೆ ಈ ಸಂಗ್ರಹಾಲಯಗಳನ್ನು ನೋಡಿದರೆ ಸಾಕು. ಕೆಲವು ವೇಳೆ ಒಂದು ಕೊಠಡಿಯಲ್ಲಿ ಒಂದೇ ಚಿತ್ರವನ್ನು ಇಟ್ಟಿರುತ್ತಾರೆ. ಬಣ್ಣದ ಚಿತ್ರಗಳನ್ನು ಕುಳಿತು ನೋಡಿ ಆನಂದಪಡಲು ಅನುಕೂಲವಿರುತ್ತದೆ. ಎಲ್ಲರಿಗೂ ಒಂದು ಜ್ಞಾನಭಂಡಾರ. ಈ ಸಂಗ್ರಹಾಲಯ

ಗಳಿಗೆ ಹೋಗಿ ನೋಡಿ ಬಂದರೆ ಆ ಊರಿನ ವಿಶೇಷವೆಲ್ಲಾ ತಿಳಿಯುತ್ತದೆ. ಇಂತಹ ಸಂಗ್ರಹಾಲಯಗಳು ನಮ್ಮಲ್ಲಿ ಬೆಳೆಯಬೇಕು. ಯುದ್ಧದಲ್ಲಿ ಹಾಳಾಗಿದ್ದ ಈ ಸಂಗ್ರಹಾಲಯಗಳನ್ನು ಪುನಃ ನಿರ್ಮಾಣಮಾಡಿದ್ದಾರೆ.

ಐರೋಪ್ಯ ದೇಶಗಳಲ್ಲಿ ಸರ್ಕಸ್ ಸಹ ಒಂದು ಊರೂರು ಅಲೆಯುವ ಪ್ರಾಣಿಸಂಗ್ರಹಾಲಯ ಎಂದು ಹೇಳಬಹುದು. ಒಂದು ಊರಿಗೆ ಸರ್ಕಸ್ ಬಂದರೆ, ಹೊರಗಡೆ ಗುಡಾರಗಳಲ್ಲಿ ಇರುವ ಪ್ರಾಣಿಗಳನ್ನು ನೋಡಲು ರೂಪಾಯಿಗಟ್ಟಲೆ ಕೊಟ್ಟು ಹೋಗುತ್ತಾರೆ ಜನ. ಅವರಿಗೆ ಹುಲಿ, ಸಿಂಹ, ಆನೆ ಇತ್ಯಾದಿ ಪ್ರಾಣಿಗಳು ಒಂದು ವಿಶೇಷ. ಸರ್ಕಸ್‌ನವರೂ ಸಹ ಪ್ರಾಣಿಗಳನ್ನು ಬಹಳ ಚೆನ್ನಾಗಿ ಸಾಕಿರುತ್ತಾರೆ. ನಾನು ೨-೩ ಸರ್ಕಸ್ ನೋಡಿದೆ. ಎಂಟು ದಿನಗಳಮೇಲೆ ಯಾರೂ ಒಂದು ಊರಿನಲ್ಲಿ ಬಿಡಾರ ಮಾಡುವುದಿಲ್ಲ. ಕಡಮೆ ದರ್ಜೆಯ ಟಿಕೆಟ್ ಎಂದರೆ ೨ ರೂಪಾಯಿ. ಅದು ಸಿಗುವುದೂ ಕಷ್ಟ.

ಸಿನಿಮಾ ಮಂದಿರಗಳು ಎಷ್ಟಿವೆ ಎಂದು ಕೇಳಬೇಕಿಲ್ಲ. ಯುದ್ಧದಲ್ಲಿ ಬಿದ್ದವನ್ನು ಮತ್ತೆ ಕಟ್ಟಿದ್ದಾರೆ. ಆದರೆ ಚಲನಚಿತ್ರಗಳು ಹೆಚ್ಚಿಗೆ ತಯಾರಾಗುತ್ತಿಲ್ಲ. ಈಗ ಹೊರದೇಶದ ಚಿತ್ರಗಳು ಬಹಳ ಬರುತ್ತವೆ. ಯುದ್ಧಕ್ಕೆ ಮೊದಲು ಬರಲು ಅವಕಾಶ ಇರಲಿಲ್ಲ. ಈಗಲೂ ಹಿಂದಿನ ಅನೇಕ ಚಿತ್ರಗಳು ಹೊಸದಾಗಿ ಬರುತ್ತಿವೆ. ಯಾವ ಪ್ರದರ್ಶನಕ್ಕಾದರೂ ಯಾವ ದಿನವಾದರೂ ಟಿಕೆಟ್ ಕೊಳ್ಳಬಹುದು. ಟಿಕೆಟ್‌ನಲ್ಲಿ ತಾರೀಕು, ವೇಳೆ, ಕುಳಿತುಕೊಳ್ಳುವ ಸ್ಥಳದ ಸಂಖ್ಯೆ ಎಲ್ಲಾ ಇರುತ್ತದೆ. ಪ್ರವೇಶದ ಕೊನೆಯ ದರ ಎರಡು ರೂಪಾಯಿ. ಕುಳಿತುಕೊಳ್ಳುವ ಕುರ್ಚಿಯ ಮೆತ್ತೆಯಲ್ಲೂ ಸಹ ಯಾವ ವ್ಯತ್ಯಾಸವೂ ಇಲ್ಲ. ಮಕ್ಕಳಿಗಾಗಿ ಶನಿವಾರ, ಭಾನುವಾರ ಬೆಳಗ್ಗೆ ಕೆಲವು ಚಿತ್ರಗಳನ್ನು ತೋರಿಸುತ್ತಾರೆ. ಬಹಳ ರಿಯಾಯಿತಿ ದರ. ಒಂದೊಂದು ಭಾನುವಾರ, ಸಂಸ್ಕೃತಿಯ ಚಿತ್ರಗಳೆಂದು ಒಂದೊಂದು ದೇಶದ ವಿಚಾರವಾಗಿ ಕೆಲವು ಚಿತ್ರಗಳನ್ನು ಪ್ರದರ್ಶಿಸುತ್ತಾರೆ.

'ಡಾ|| ಸೌಬರ್ ಮತ್ತು ಅವರ ಜೀವನ' ಎಂಬ ಪುಸ್ತಕದ ಆಧಾರದ ಒಂದು ಚಿತ್ರ ಬಂದಿತ್ತು. ಅದು ಆತನ ಸೇವಾಜೀವನವನ್ನು ತೋರಿಸಿ ಎಲ್ಲರ ಮನಸ್ಸನ್ನೂ ಆಕರ್ಷಿಸಿತು. ಚಿಕ್ಕವರನ್ನು ಕೆಲವು ಚಿತ್ರಗಳಿಗೆ ಬಿಡುವುದಿಲ್ಲ. ನೀವು ಜರ್ಮನಿಯ ದೊಡ್ಡ ಪಟ್ಟಣಗಳಾದ ಹನೋವರ್, ಹ್ಯಾಂಬುರ್ಗ್, ಮ್ಯೂನಿಚ್ ಪಟ್ಟಣಗಳಿಗೆ ಹೋದರೆ, ರೈಲುನಿಲ್ದಾಣದಲ್ಲಿ ಗಂಟೆಗಟ್ಟಲೆ ಕಾಯುವ ಬದಲು ಸಿನಿಮಾ ನೋಡಿ ಪ್ರಪಂಚದ ವಿಚಾರ ತಿಳಿಯಬಹುದು; ಬೇಜಾರು ಕಳೆಯಬಹುದು. ಈ ನಿಲ್ದಾಣಗಳಲ್ಲಿ 'ಆಕಿ'

ಎಂಬ ಚಲನಚಿತ್ರಮಂದಿರಗಳಿವೆ. ಸುಮಾರು ಒಂದು ಗಂಟೆಯ ಕಾಲ ಪ್ರಪಂಚದ ನಾನಾಭಾಗಗಳಿಂದ ಬಂದ ಸುದ್ದಿ ಚಿತ್ರಗಳನ್ನು ತೋರಿಸುತ್ತಾರೆ. ಪ್ರವೇಶ ಧನ ೫೦ ಪೈಸೆ. ಈ ಸಿನಿಮಾ ಹಗಲೂ ರಾತ್ರಿ ನಡೆಯುತ್ತಲೇ ಇರುತ್ತದೆ. ಯಾವಾಗ ಬೇಕಾದರೂ ಹೋಗಬಹುದು; ಯಾವಾಗ ಬೇಕಾದರೂ ಬರಬಹುದು; ರೈಲಿಗೆ ವೇಳೆ ಆದಾಗ ಎದ್ದು ಬರಬಹುದು. ಈ ಸಮಾಚಾರ ಚಿತ್ರಗಳನ್ನು ನೋಡಲೆಂದೇ ಹಳ್ಳಿಗಳಿಂದ, ಸಣ್ಣ ಊರುಗಳಿಂದ ಅನೇಕರು ಬರುತ್ತಾರೆ. ಇಂಥ ಸಿನಿಮಾಗಳನ್ನು ಬೇರೆ ಯಾವ ದೇಶದಲ್ಲೂ ನಾನು ನೋಡಲಿಲ್ಲ.

ಇಷ್ಟು ಚಲನಚಿತ್ರ ಮಂದಿರಗಳಿದ್ದರೂ, ಪ್ರತಿ ದೊಡ್ಡ ಊರಿನಲ್ಲೂ ನಾಟಕಶಾಲೆಗಳನ್ನೂ ಕಾಣುತ್ತೇವೆ. ಯುದ್ಧದಲ್ಲಿ ನಾಶವಾಗಿದ್ದವನ್ನು ಈಗ ಹೊಸದಾಗಿ ಕಟ್ಟಿದ್ದಾರೆ. ನಾಟಕ ಅವರಿಗೆ ಒಂದು ದೊಡ್ಡ ಕಲೆ. ಬೇಸಿಗೆಯಲ್ಲಿ ೨–೩ ತಿಂಗಳ ವಿಶ್ರಾಂತಿ ಬಿಟ್ಟರೆ, ಉಳಿದ ೧೦ ತಿಂಗಳೂ ನಾಟಕ ಮಂದಿರಗಳಲ್ಲಿ ನಿತ್ಯವೂ ಕಾರ್ಯಕ್ರಮ ಇದ್ದೇ ಇರುತ್ತದೆ. ನಾಟಕ, ನೃತ್ಯ, ಸಂಗೀತ ಎಲ್ಲವನ್ನೂ ಕಲಾಮಂದಿರಗಳಲ್ಲಿ ಏರ್ಪಡಿಸುತ್ತಾರೆ. ಹಿಂದಿನ ಕಾಲದ ಯಾವ ಸಂಸ್ಕೃತಿಯನ್ನೂ ಬಿಡುವುದಿಲ್ಲ. ತಿಂಗಳಿನ ಕಾರ್ಯಕ್ರಮ ಮೊದಲೇ ಗೊತ್ತಾಗುತ್ತದೆ. ಈ ಸಂಸ್ಥೆಗಳ ಸದಸ್ಯರಿಗೆ ಪ್ರವೇಶ ಧನದಲ್ಲಿ ರಿಯಾಯಿತಿ. ಇಷ್ಟು ಚಲನಚಿತ್ರಗಳಿದ್ದರೂ ಈ ನಾಟಕಮಂದಿರಗಳು ಯಾವಾಗಲೂ ತುಂಬಿರುತ್ತವೆ. ನಾಟಕಗಳೆಂದರೆ ಜನರಿಗೆ ಬಹಳ ಇಷ್ಟ. ಹಬ್ಬಗಳು ಬಂದರೆ, ಅದರಲ್ಲೂ ಕ್ರಿಸ್ಮಸ್ ಹಬ್ಬದ ದಿನ, ವಿಶೇಷ ಕಾರ್ಯಕ್ರಮ. ಕೊನೆಯ ಪ್ರವೇಶ ಧನ ೧೦ ರೂಪಾಯಿ. ಜರ್ಮನಿಯ ಸಂಸ್ಕೃತಿ, ಕಲೆ ಈ ಮಂದಿರಗಳಲ್ಲಿ ಕಾಣುತ್ತದೆ. ಮಕ್ಕಳನ್ನು ಯಾರೂ ಈ ನಾಟಕ ಸಿನಿಮಾಗಳಿಗೆ ಕರೆತರುವುದಿಲ್ಲ. ನಾಟಕದ ಪರದೆ ಬಹಳ ಸರಳ. ಪ್ರಾರಂಭದಲ್ಲಾಗಲಿ, ನಾಟಕ ಮುಗಿದ ಮೇಲಾಗಲಿ, ಯಾರೂ ಮಾತನಾಡುವುದಿಲ್ಲ. ದೀಪಗಳ ಯೋಜನೆ ನಾಟಕಕ್ಕೆ ಒಪ್ಪುವಂತೆ. ಧ್ವನಿವರ್ಧಕ ಯಂತ್ರಗಳೇ ಇಲ್ಲ. ಪಾತ್ರವರ್ಗದ ಹೆಂಗಸರು, ಗಂಡಸರು ಎಲ್ಲರೂ ಗಟ್ಟಿಯಾಗಿ ಮಾತನಾಡುತ್ತಾರೆ. ಇದಕ್ಕೆ ಸಹಾಯಕವಾಗಿ ಸಭೆ ನಿಶ್ಶಬ್ದ. ನಕ್ಕರೂ ಒಂದೇ ನಿಮಿಷ, ಪುನಃ ನಿಶ್ಶಬ್ದ. ಮಾತುಗಳ ಮೇಲೆ ಗಮನ. ಕೊನೆಯಲ್ಲಿ ನಾಟಕದ ಪಾತ್ರಧಾರಿಗಳು ಹೊರಗಡೆ ಬಂದು ಎಲ್ಲರ ಅಭಿನಂದನೆಯನ್ನು ಚಪ್ಪಾಳೆಗಳ ಮೂಲಕ ಸ್ವೀಕರಿಸುತ್ತಾರೆ.

೧೯೫೪ರಲ್ಲಿ ಕಾಲ್ಚೆಂಡಿನಾಟದಲ್ಲಿ (Football) ಪ್ರಪಂಚದ ಮೊದಲ

ನೆಯ ಸ್ಥಾನವನ್ನು ಪಡೆದವರು ಜರ್ಮನರು. ನಾವು ಆಡಿದ ಹಾಗೆ ಅಲ್ಲಿ ಹೊರಗಡೆ ಆಡಲು ಕಷ್ಟವೇ ಸರಿ. ಚಳಿ ಹೆಚ್ಚು. ಆದರೂ ಕಾಲ್ಚೆಂಡಾಟವನ್ನು ಎಲ್ಲಾ ಕಡೆ ಕಾಣಬಹುದು. ಜೊತೆಗೆ ಬೇರೆ ಆಟಗಳೂ ಇವೆ. ಕ್ರಿಕೆಟ್ ಆಟವನ್ನು ಮಾತ್ರ ನೋಡಲಿಲ್ಲ. ಆ ದೇಶಕ್ಕೆ ಅದು ಸರಿಹೋಗುವುದೂ ಇಲ್ಲ. ಕಾಲ್ಚೆಂಡಾಟವಾದರೆ ಒಂದು ಗಂಟೆ ಹೊತ್ತು ಆಡಿ ಮುಗಿಸಬಹುದು. ಕ್ರಿಕೆಟ್ಟಿಗೆ ಗಂಟೆಗಳು ಸಾಲದು, ೩–೪ ದಿನಗಳೇ ಬೇಕು. ಕಷ್ಟಪಟ್ಟು ದುಡಿಯು ವವರಿಗೆ ಈ ಆಟ ಸರಿಬೀಳದು. ಭಾನುವಾರ ಸಂಜೆ ಎಲ್ಲಿಯಾದರೂ ಒಂದು ದೊಡ್ಡ ಪಂದ್ಯವಿದ್ದೇ ಇರುತ್ತದೆ.

ಯುದ್ಧದಲ್ಲಿ ಮಡಿದವರಿಗಿಂತ ಹೆಚ್ಚು ಜರ್ಮನರು ಹೊರಗಡೆಯಿಂದ ಪಶ್ಚಿಮ ಜರ್ಮನಿಗೆ ಬಂದರು. ಎಲ್ಲರೂ ಇದ್ದ ಆಸ್ತಿ, ಮನೆ, ಮಠ, ಕೆಲಸ ಎಲ್ಲಾ ಕಳೆದುಕೊಂಡು ನಿರಾಶ್ರಿತರಾಗಿ ಜರ್ಮನಿ ಸೇರಿದರು. ಈಗಲೂ ಕಮ್ಯೂನಿಸ್ಟ್ ರಾಷ್ಟ್ರಕ್ಕೆ ಸೇರಿದ ಪೂರ್ವ ಜರ್ಮನಿಯಿಂದ ನಿರಾಶ್ರಿತರು ಬರುತ್ತಲೇ ಇದ್ದಾರೆ. ಯುದ್ಧದಲ್ಲಿ ಮನೆಗಳೆಲ್ಲಾ ನಾಶವಾಗಿವೆ. ಇರುವವರಿಗೆ ಹೊಸದಾಗಿ ಮನೆ ಕಟ್ಟಬೇಕು; ನಿರಾಶ್ರಿತರಾಗಿ ಬರುವವರಿಗೂ ಮನೆ ಒದಗಿಸಬೇಕು. ಚಳಿಗಾಲದಲ್ಲಿ ಮನೆ ಇಲ್ಲದೆ ಹೊರಗಡೆ ಇರಲು ಸಾಧ್ಯವೇ ಇಲ್ಲ. ಈ ನಿರಾಶ್ರಿತರ ಸಮಸ್ಯೆಯನ್ನು ಬಹಳ ಚೆನ್ನಾಗಿ ನಿವಾರಣೆ ಮಾಡಿ ದ್ದಾರೆ. ಮನೆ ದೊಡ್ಡದಾಗಿದ್ದರೆ, ಅದರಲ್ಲಿ ನಿರಾಶ್ರಿತರಿಗೆ ಒಂದು ಕೊಠಡಿ ಕೊಡಬೇಕು ಎಂದು ನಿಯಮವಿದೆ. ಹೊಸದಾಗಿ ಮನೆ ಕಟ್ಟುವವರು ಒಂದೆರಡು ಕೊಠಡಿಗಳನ್ನು ಹೆಚ್ಚಾಗಿ ಕಟ್ಟಿ ನಿರಾಶ್ರಿತರಿಗೆ ಬಾಡಿಗೆಗೆ ಕೊಡು ವುದಾದರೆ, ಸರ್ಕಾರದಿಂದ ಹೆಚ್ಚು ಸಾಲ ಸಿಗುತ್ತದೆ. ಕಾರ್ಖಾನೆಗಳಲ್ಲಿ, ಸರ್ಕಾರದಲ್ಲಿ ನಿರಾಶ್ರಿತರಿಗೆ ಮೊದಲು ಕೆಲಸ. ಚರ್ಚುಗಳು ಇವರಿಗಾಗಿ ಹಣ ಸೇರಿಸಿಕೊಡುತ್ತವೆ. ನಿರಾಶ್ರಿತರಿಗಾಗಿ ಎಲ್ಲರ ಸಂಬಳದಲ್ಲೂ ನಿಯಮಿತವಾಗಿ ಹಣ ಹಿಡಿಯುತ್ತಾರೆ. ಪೂರ್ವ ಜರ್ಮನಿಯಲ್ಲಿ ಅಂಚೆಗೆ ಹಾಕುವ ಎಲ್ಲಾ ಪತ್ರಗಳ ಮೇಲೂ ನಿರಾಶ್ರಿತರ ನಿಧಿಗಾಗಿ ೨ ಪೆನ್ನಿಂಗ್ (೪ ಪೈಸೆ) ಸ್ಟಾಂಪು ಹೆಚ್ಚಾಗಿ ಅಂಟಿಸಬೇಕು. ಈ ಬಗ್ಗೆ ನಿರ್ಬಂಧವೇನೂ ಇಲ್ಲ. ಆದರೂ ಎಲ್ಲರೂ ಅಂಟಿಸುತ್ತಾರೆ. ಇದರಿಂದ ಲಕ್ಷಾಂತರ ರೂಪಾಯಿ ಕೂಡುತ್ತದೆ. ಹನಿಗೂಡಿ ದರೆ ಹಳ್ಳ. ಪ್ರತಿನಿತ್ಯವೂ ಪೂರ್ವ ಬರ್ಲಿನ್‌ನಿಂದ ಪಶ್ಚಿಮ ಬರ್ಲಿನ್‌ಗೆ ಬರುವ ನಿರಾಶ್ರಿತರನ್ನು ವಿಮಾನದಲ್ಲಿ ಪಶ್ಚಿಮ ಜರ್ಮನಿಗೆ ಸಾಗಿಸುತ್ತಾರೆ. ನಿರಾಶ್ರಿತರ ಸಮಸ್ಯೆಯನ್ನು ಬಿಡಿಸಿರುವ ರೀತಿ ಗಮನಾರ್ಹ.

ಬರ್ಲಿನ್ ಒಂದೇ ಪಟ್ಟಣವಾದರೂ ಈಗ ಎರಡು ಭಾಗ. ಪೂರ್ವ

ಬರ್ಲಿನ್ ಮತ್ತು ಪಶ್ಚಿಮ ಬರ್ಲಿನ್. ಪೂರ್ವ ಬರ್ಲಿನ್ ರಷ್ಯಾಕ್ಕೆ, ಪೂರ್ವ ಜರ್ಮನಿಗೆ ಸೇರಿದೆ. ಪಶ್ಚಿಮ ಬರ್ಲಿನ್ ಪಶ್ಚಿಮ ಜರ್ಮನಿಗೆ ಸೇರಿದೆ. ಇವೆರಡರ ಗಡಿಯಲ್ಲಿ ಆಗಾಗ ಘರ್ಷಣೆ ಆಗುತ್ತಿರುತ್ತದೆ. ಜುಲೈ 17ನೆಯ ತಾರೀಕು ಸ್ವಾತಂತ್ರ್ಯದಿನವೆಂದು ಸಾರಿ, ಜರ್ಮನಿಯಲ್ಲೆಲ್ಲಾ ಸ್ವಾತಂತ್ರ್ಯದ ಹೋರಾಟಕ್ಕಾಗಿ ಸಭೆ ಸೇರಿಸಿದ್ದರು. ಜರ್ಮನಿ ಒಂದಾಗಬೇಕೆಂಬ ಕೂಗು ಎಲ್ಲಾ ಕಡೆಯಲ್ಲೂ ಕೇಳುತ್ತಿತ್ತು.

ಯೂರೋಪಿನಲ್ಲಿ ಎಲ್ಲಾ ದೇಶಗಳಲ್ಲೂ ಆದಾಯ ತೆರಿಗೆ ಬಹಳ. ಜರ್ಮನಿಯಲ್ಲೂ ಹೆಚ್ಚೇ. ಮದುವೆಯಾದವರಿಗೆ ತೆರಿಗೆ ಕಡಮೆ. ಮಕ್ಕಳು ಆದರೆ ಇನ್ನೂ ಕಡಮೆ. ಅವರವರ ಜೀವನಮಟ್ಟ ಉತ್ತಮಗೊಳ್ಳಲೆಂದು ಹೀಗೆ ಮಾಡಿದ್ದಾರೆ. ಮಕ್ಕಳಾದರೆ ಖರ್ಚು ಹೆಚ್ಚಾಗಿ ಅವರ ಜೀವನಮಟ್ಟ ಇಳಿಯುತ್ತದೆ. ಇದರಿಂದ ಅವರು ಹೆಚ್ಚು ಮಕ್ಕಳನ್ನು ಪಡೆಯಲು ಇಷ್ಟ ಪಡುವುದಿಲ್ಲ. ಒಂದೆರಡು ಮಕ್ಕಳು ಸಾಕು, ತಮ್ಮ ಬದುಕಿನ ಮಟ್ಟ ಉತ್ತಮ ಆಗಿರಲಿ ಎಂದು ಪ್ರಯತ್ನಿಸುತ್ತಾರೆ.

ನಾನು ಇದ್ದ ಕುಟುಂಬದ ಮನೆಯ ಹುಡುಗಿ, ಫ್ರಾನ್ಸಿಸ್ಕಾ ಕಾರ್ಡಿ, ಒಂದು ದಿನ ೩೦ ಪೆನ್ನಿಂಗ್ ತಂದು ನನ್ನ ಹತ್ತಿರ ಕೊಟ್ಟು, "ನಿಮ್ಮ ಹತ್ತಿರ ಇಟ್ಟಿರಿ. ನಾಳೆ ತೆಗೆದುಕೊಳ್ಳುತ್ತೇನೆ" ಎಂದಳು. "ನಿನಗೆಲ್ಲಿಂದ ಬಂತು ಈ ಹಣ ?" ಎಂದು ಕೇಳಿದೆ. ಆಗ ಆಕೆ "ನಾನು ಮಹಡಿಯ ಮೇಲೆ ಇರುವ ಮನೆಯವರ ಮಗುವನ್ನು ಆಡಿಸುತ್ತೇನೆ. ಆಚೆ ಕರೆದುಕೊಂಡು ಹೋಗುತ್ತೇನೆ. ನನಗೆ ಮಕ್ಕಳೆಂದರೆ ಬಹಳ ಆಸೆ. ಆಟ ಆಡಿಸಿದರೆ ಗಂಟೆಗೆ ೧೦ ಪೆನ್ನಿಂಗ್ (೨೦ ಪೈಸೆ) ಕೊಡುತ್ತಾರೆ. ಈ ದಿನ ಭಾನುವಾರ. ಮೂರು ಗಂಟೆ ಆಡಿಸಿದ್ದೇನೆ. ಅದಕ್ಕೆ ೩೦ ಪೆನ್ನಿಂಗ್ ಬಂದಿದೆ. ನಾಳೆ ಅದನ್ನು ಸೇವಿಂಗ್ಸ್ ಬ್ಯಾಂಕಿನಲ್ಲಿ ಹಾಕುತ್ತೇನೆ" ಎಂದು ಹೇಳಿದಳು. ಆ ಹುಡುಗಿ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಳೆ. ಈಗಾಗಲೇ ೩೦೦ ರೂಪಾಯಿಯವರೆಗೆ ಹಣ ಕೂಡಿಸಿದ್ದಾಳೆ. "ಇಷ್ಟು ಹಣವನ್ನು ಏನು ಮಾಡುತ್ತೀ ?" ಎಂದು ಕೇಳಿದಾಗ, ಮುಂದೆ ತಾನು ಕೆಲಸಕಾರ್ಯ ಹುಡುಕುವಾಗ ಸಹಾಯವಾಗುತ್ತದೆ ಎಂದು ಹೇಳಿದಳು. ಅಷ್ಟು ಸಣ್ಣ ಹುಡುಗಿಗೆ ಎಷ್ಟು ಮುಂದಾಲೋಚನೆ !

ಹಣ ಕೂಡಿಡಲು ಬ್ಯಾಂಕ್ ಅಲ್ಲದೆ ಪೋಸ್ಟ್ ಆಫೀಸಿನದೂ ಬಹಳ ಸಹಾಯವಿದೆ. ಅನೇಕ ಅಂಗಡಿಗಳಲ್ಲಿ ಒಂದು ಸೇವಿಂಗ್ಸ್ ಪೆಟ್ಟಿಗೆ ಇಟ್ಟಿರುತ್ತಾರೆ. ಅದರಲ್ಲಿ ದುಡ್ಡು ಇಡಬಹುದು. ಅದಕ್ಕೆ ತಕ್ಕ ಏರ್ಪಾಡು ಮಾಡಿದ್ದಾರೆ. ಆ ದುಡ್ಡನ್ನು ಬ್ಯಾಂಕಿನವರು ತೆಗೆದುಕೊಂಡು ಹೋಗಿ ಅವರ ಲೆಕ್ಕಕ್ಕೆ

ಸೇರಿಸುತ್ತಾರೆ. ಎಲ್ಲಾ ಕಡೆಯಲ್ಲೂ 'ಕನ್‌ಸೂಂ' ಎಂಬ ಸಹಕಾರ ಸಂಘಗಳ ಅಂಗಡಿಗಳನ್ನು ಕಾಣಬಹುದು. ಇಲ್ಲಿ ವಸ್ತುಗಳ ಬೆಲೆ ಬೇರೆ ಅಂಗಡಿಗಳಿಗಿಂತ ಅಗ್ಗ.

ಜರ್ಮನಿಯ ಎಲ್ಲಾ ಊರುಗಳಲ್ಲೂ ೨೪ ಗಂಟೆಯೂ ಅಂಗಡಿಗಳಿಗೆ ಹೋಗಿ ಬೇಕಾದ ಔಷಧಿಯನ್ನು ಕೊಂಡುತರಬಹುದು. ವೈದ್ಯರನ್ನು ಕಾಣಬಹುದು. ಎಲ್ಲಾ ಔಷಧಿ ಅಂಗಡಿಗಳೂ ಸೇರಿ, ಸಂಘ ಮಾಡಿ, ವಾರದಲ್ಲಿ ಒಬ್ಬೊಬ್ಬರು ಒಂದೊಂದು ರಾತ್ರಿ ಪೂರ್ತಿ ಅಂಗಡಿ ತೆಗೆದುಕೊಂಡಿರುತ್ತಾರೆ. ಹೀಗೆ ತೆಗೆದಿರುವುದನ್ನು ಪತ್ರಿಕೆಗಳಲ್ಲಿ ಪ್ರಕಟಿಸುತ್ತಾರೆ. ತೆಗೆದಿರುವ ಅಂಗಡಿಗಳ ಮೇಲೆ ದೀಪವಿರುತ್ತದೆ. ಇದರಿಂದ ರಾತ್ರಿ ಅವೇಳೆಯಲ್ಲಿಯೂ ಔಷಧಿ ಪಡೆಯಲು ಅವಕಾಶವಿದೆ.

೧೧. ಗೆಳೆಯರೊಡನೆ

ಮೂರ್ಖರು ಮಿತ್ರರನ್ನು ಹೊಗಳಿ ತಮ್ಮ ದಡ್ಡತನವನ್ನು ಹೆಚ್ಚಿಸಿಕೊಳ್ಳುತ್ತಾರೆ. ಜಾಣರು ತಮ್ಮ ಶತ್ರುಗಳಿಂದಲೂ ನೀತಿ ಕಲಿಯುತ್ತಾರೆ.

—ಸುಭಾಷಿತ

ಜರ್ಮನಿಗೆ ಮೊದಲು ಹೋದಾಗ ಪರಿಚಯವಾದವರಲ್ಲಿ ಇಂಗ್ಲಿಷ್ ಬರುತ್ತಿದ್ದ ಶ್ರೀ ಸಾಯಿಮನ್ ಒಬ್ಬರು. ನಾನು ಕೆಲಸಮಾಡುತ್ತಿದ್ದ ಕಾರ್ಖಾನೆಯ ಭಾಷಾಂತರ ಕಛೇರಿಯಲ್ಲಿ ಇವರೂ ಕೆಲಸಮಾಡುತ್ತಿದ್ದರು. ಜರ್ಮನ್ ಜೊತೆಗೆ ಇಂಗ್ಲಿಷ್, ಫ್ರೆಂಚ್, ಸ್ವಲ್ಪ ಇಟಾಲಿಯನ್ ಭಾಷೆ ಸಹ ಬರುತ್ತಿತ್ತು. ಕಾರ್ಖಾನೆಗೆ ಬರುವ ಕಾಗದಪತ್ರಗಳನ್ನು ಭಾಷಾಂತರ ಮಾಡುವುದೇ ಇವರ ಕೆಲಸ. ನನಗೆ ಜರ್ಮನ್ ಭಾಷೆ ಬಾರದಿದ್ದುದರಿಂದ ಇವರ ಪರಿಚಯ ಮೊದಲು ಆಯಿತು. ಕಾರ್ಖಾನೆಯಲ್ಲಿ ಪರಿಚಯವಾದ ನಂತರ ಕಾರ್ಖಾನೆಯ ಹೊರಗಡೆ ನನ್ನ ಸ್ವಂತ ಕೆಲಸಗಳಲ್ಲೂ ಸಹಾಯ ಮಾಡತೊಡಗಿದರು. ಎಲ್ಲಿಗೆ ಹೋದರೂ ಮೊದಲು ಪರಿಚಯಮಾಡಿಕೊಡುತ್ತಿದ್ದವರು ಇವರೇ. ಅಂಗಡಿಗೆ ಸಾಮಾನಿಗೆ ಹೋದರೆ, ಪೋಸ್ಟ್ ಆಫೀಸ್‌ಗೆ ಹೋದರೆ, ಎಲ್ಲ ಕಡೆಯಲ್ಲೂ ಜೊತೆಯಲ್ಲಿ ಬರುತ್ತಿದ್ದರು. ಕೆಲವು ದಿನಗಳಾದ ನಂತರ ಮನೆಗೆ ಕರೆದುಕೊಂಡುಹೋಗಿ ಪತ್ನಿಯ ಪರಿಚಯ ಮಾಡಿಕೊಟ್ಟರು. ಭಾರತದ ವಿಚಾರ ಕೇಳುವುದರ ಜೊತೆಗೆ ಜರ್ಮನಿಯ ತಮ್ಮ ಕಷ್ಟಸುಖಗಳನ್ನೂ ಹೇಳಿಕೊಂಡರು. ಅವರು ಇದ್ದ ಮನೆ ಬಹಳ ಸಣ್ಣದು. ಯುದ್ಧಕ್ಕೆ ಮುಂಚೆ ದೊಡ್ಡ ಸ್ವಂತ ಮನೆಯಲ್ಲಿದ್ದರು. ಯುದ್ಧದಲ್ಲಿ ಎಲ್ಲವನ್ನೂ ಕಳೆದುಕೊಂಡು ನಿರಾಶ್ರಿತರಂತೆ ಇಲ್ಲಿಗೆ ಬಂದಿದ್ದಾರೆ. ಈಗ ಗಂಡಹೆಂಡತಿಯರಿಬ್ಬರೂ ಕೆಲಸ ಮಾಡಿ ಜೀವನಮಟ್ಟ ಉತ್ತಮವಾಗುವಂತೆ ಪ್ರಯತ್ನಿಸುತ್ತಿದ್ದಾರೆ. ಯುದ್ಧ ಸಾಕು ಎನಿಸಿದೆ ಇವರಿಗೆ. ಭಾರತದ ಬಗೆಗೆ ಅವರು ಅನೇಕ ಪುಸ್ತಕಗಳನ್ನು ಇಟ್ಟಿದ್ದನ್ನು ತೋರಿಸಿದರು.

ಶ್ರೀ ಸಾಯಿಮನ್‌ರಿಗೆ ನಾನು ತೆಗೆದುಕೊಂಡು ಹೋಗಿದ್ದ ಮಹಾತ್ಮ ಗಾಂಧೀಜಿಯ ಆತ್ಮಚರಿತ್ರೆಯನ್ನು ಓದಲು ಕೊಟ್ಟೆ. ಮೊದಲಿನಿಂದ ಕೊನೆಯವರೆಗೂ ಅದನ್ನು ಓದಿ ಮುಗಿಸಿದ್ದಲ್ಲದೆ ನಿತ್ಯವೂ ಬಸ್ಸಿನಲ್ಲಿ ಕಾರ್ಖಾನೆಗೆ ಬರುತ್ತಾ ಅದರ ವಿಚಾರ ಚರ್ಚೆ ಮಾಡುತ್ತಿದ್ದರು. ಬಸ್ಸಿನಲ್ಲಿ ಬರುವವ

ರೆಲ್ಲರೂ ಈ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು. ಶ್ರೀ ನಾಯಿಮನ್ ಓದುವುದರ ಜೊತೆಗೆ, ತಾವು ಓದಿದ ವಿಚಾರವನ್ನು ತಮ್ಮ ಸ್ನೇಹಿತರಿಗೆಲ್ಲಾ ವಿವರಿಸುತ್ತಿದ್ದರು. ಇವರಿಗೆ ಇಂಗ್ಲಿಷ್ ಬರುತ್ತಿದ್ದುದರಿಂದ ಹೆಚ್ಚುಕಡಮೆ ನನ್ನ ಎಲ್ಲಾ ಕೆಲಸಗಳೂ ಇವರ ಮೂಲಕವೇ ಆಗಬೇಕಾಗಿತ್ತು. ಅವರು ಬೇಸರಪಡುತ್ತಿರಲಿಲ್ಲ. ಅವರ ಅತಿಥಿಗಳ ಪುಸ್ತಕದಲ್ಲಿ ಕನ್ನಡದಲ್ಲಿ ನನ್ನ ಸಹಿ ಹಾಕಿಸಿಕೊಂಡರು.

ಇವರಿಗೆ ಊರು ತಿರುಗುವುದೆಂದರೆ ಬಹಳ ಇಷ್ಟ. ಇಂಡಿಯಾಕ್ಕೆ ಬಂದು ಅಲ್ಲೇ ಇದ್ದುಬಿಡಬೇಕೆಂದು ಎಷ್ಟೋ ಸಾರಿ ಹೇಳುತ್ತಿದ್ದರು. ಇವರಿಗೆ ಶಾಂತ ಜೀವನ ಬೇಕು. ಕಾರ್ಖಾನೆಯ ಗಡಿಬಿಡಿ ಸರಿಹೋಗುವುದಿಲ್ಲ. ಬೇಸಿಗೆಯಲ್ಲಿ ಕಾಡಿನಲ್ಲಿ ಅಲೆಯಲು ಹೋಗುತ್ತಿದ್ದರು. ಜರ್ಮನಿ ಬಿಡುವವರೆಗೂ ಇವರ ಸಹಾಯ ನನಗೆ ಇದ್ದೇ ಇತ್ತು.

ಕಾರ್ಖಾನೆಯಲ್ಲಿ ಇಂಗ್ಲಿಷ್ ಬರುತ್ತಿದ್ದ ಮತ್ತೊಬ್ಬ ವ್ಯಕ್ತಿ ಎಂದರೆ ಶ್ರೀ ಕಾಲ್‌ಬಸ್. ಶ್ರೀ ನಾಯಿಮನ್‌ರೂ ಶ್ರೀ ಕಾಲ್‌ಬಸ್‌ರೂ ಒಂದೇ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಇವರು ಅಲ್ಲಿಯ ಭಾಷಾಪ್ರವೀಣರು. ಜರ್ಮನ್, ಇಂಗ್ಲಿಷ್, ಫ್ರೆಂಚ್, ರಷ್ಯನ್, ಸ್ಪ್ಯಾನಿಷ್, ಇಟಾಲಿಯನ್, ಯುಗೊಸ್ಲಾವಿಯನ್—ಇಷ್ಟು ಭಾಷೆಗಳು ಬಂದರೂ ಇನ್ನೂ ಹೊಸ ಭಾಷೆಯನ್ನು ಕಲಿಯಬೇಕೆಂಬ ಆಸೆ ಇವರಿಗೆ. ಯುದ್ಧಕಾಲದಲ್ಲಿ ಯುಗೊಸ್ಲಾವಿಯಾದಲ್ಲಿದ್ದು ಯುದ್ಧದಲ್ಲಿ ಎಲ್ಲವನ್ನೂ ಕಳೆದುಕೊಂಡು, ಈಗ ಇಲ್ಲಿ ಬಂದು ನೆಲಸಿದ್ದಾರೆ. ಹಿಂದೂಸ್ಥಾನದ ವಿಚಾರ ಚೆನ್ನಾಗಿ ತಿಳಿದವರು; ಗೀತೆ, ಯೋಗ, ಉಪನಿಷತ್ ಪುಸ್ತಕಗಳೊಂದಿಗೆ ಶ್ರೀ ಟಾಗೂರ್‌ರವರ ಪುಸ್ತಕಗಳನ್ನೂ ಓದಿದ್ದಾರೆ. ಯೋಗಾಭ್ಯಾಸ ಸ್ವಲ್ಪ ಮಾಡುತ್ತಾ ಇದ್ದಾರೆ. ಯುದ್ಧದ ಖೈದಿಯಾಗಿದ್ದಾಗ ಇದರ ಉಪಯೋಗವಾಯಿತು, ಎಂದು ಹೇಳುತ್ತಾರೆ. ಅವರಿಗೆ ಕೈತುಂಬಾ ಕೆಲಸ. ಹಗಲೂ ರಾತ್ರಿ ಭಾಷಾಂತರ ಮಾಡುತ್ತಲೇ ಇರುತ್ತಾರೆ. ಹಿಂದೂ ಸಿದ್ಧಾಂತ ಮತ್ತು ತತ್ವಜ್ಞಾನವನ್ನು ತಿಳಿದುಕೊಳ್ಳಬೇಕೆಂಬ ಚಪಲ ಹೆಚ್ಚು. ಆದರೆ ವೇಳೆಯೇ ಇಲ್ಲ. ಕಾರ್ಖಾನೆಗೆ ಯಾರಾದರೂ ಅತಿಥಿಗಳು ಬಂದರೆ ಅವರ ಹಿಂದೆ ಹೊರಡಬೇಕು ಭಾಷಾಂತರಕಾರರಾಗಿ. ಶ್ರೀ ಕಾಲ್‌ಬಸ್‌ರವರ ಪತ್ನಿಯವರಿಗೆ ಜರ್ಮನ್ ಜೊತೆಗೆ ಫ್ರೆಂಚ್ ಮತ್ತು ಇಂಗ್ಲಿಷ್ ಸ್ವಲ್ಪ ಬರುತ್ತದೆ. ಇವರ ಕೆಲಸದಲ್ಲಿ ಅವರು ಬಹಳ ಸಹಾಯಕರಾಗಿ ನಿಂತಿದ್ದರು. ಪುಸ್ತಕ ಓದಿ ಗಂಡನಿಗೆ ಹೇಳುತ್ತಿದ್ದರು. ಪ್ಯಾರಿಸ್‌ನಲ್ಲಿರುವ ರಾಮಕೃಷ್ಣ ಆಶ್ರಮದಿಂದ ಇವರಿಗೆ ಶ್ರೀ ವಿವೇಕಾನಂದರು

ಬರೆದಿರುವ ಯೋಗದ ವಿಚಾರವಾದ ಫ್ರೆಂಚ್ ಭಾಷೆಯ ಪುಸ್ತಕಗಳನ್ನು ತರಿಸಿಕೊಟ್ಟೆ. ಅವರ ಸಂತೋಷಕ್ಕೆ ಮಿತಿಯೇ ಇಲ್ಲ. ಜರ್ಮನ್ ಭಾಷೆಯ ಶ್ರೀ ಟಾಗೂರ್‌ರವರ 'ಸಾಧನಾ' ಪುಸ್ತಕ ಸಹ ಕೊಟ್ಟೆ. ಗಾಂಧೀ ಸಾಹಿತ್ಯ ಸಂಘದ ಗಾಂಧೀ ಜಯಂತಿ ನಡೆಯುತ್ತಿದ್ದಾಗ ಒಂದು ಸಂದೇಶವನ್ನು ಕೂಡ ಅವರು ಕಳುಹಿಸಿಕೊಟ್ಟಿದ್ದರು.

"ಏನೂ ಯೋಚನೆ ಮಾಡಬೇಡಿ. ಎಲ್ಲವನ್ನೂ ಏರ್ಪಡಿಸಿಕೊಡುತ್ತೇವೆ. ಏನು ಬೇಕಾದರೂ ಕೇಳಿ, ನಾನು ನಿಮಗಾಗಿ ಮಾಡಲು ಸಿದ್ಧ" ಎಂದು ಹೇಳಿದ್ದಲ್ಲದೆ, ಹೇಳಿದಂತೆ ನನ್ನನ್ನು ತನ್ನ ಮಗನಂತೆ ನೋಡಿಕೊಂಡ, ಕಾರ್ಖಾನೆಯ ಮನೆ ಏರ್ಪಾಡುಮಾಡುವ ಮ್ಯಾನೇಜರ್ ಶ್ರೀ ಸ್ಲೆಸ್ಟಿಂಗ್ ಅವರನ್ನು ಎಂದೆಂದಿಗೂ ಮರೆಯುವಂತಿಲ್ಲ. ವ್ಯಕ್ತಿ ಎತ್ತರ, ದುಂಡು. ಯಾವಾಗಲೂ ನಗುನಗುತ್ತಾ ಮಾತನಾಡುತ್ತಿದ್ದರು. ಇಂಗ್ಲಿಷ್ ಒಂದಕ್ಷರ ಬಾರದು. ಕೆಲವು ದಿನ ಕಳೆದನಂತರ ಒಬ್ಬರಿಗೊಬ್ಬರು ಅರ್ಥಮಾಡಿಕೊಂಡೆವು. ಕಾರ್ಖಾನೆಯಲ್ಲಿ ಯಾವ ಅನುಕೂಲ ಬೇಕಾದರೂ ಇವರಿಗೆ ಹೇಳಿದರೆ ಸಾಕು, ಕೆಲಸವಾದಂತೆಯೇ. ಎಲ್ಲದಕ್ಕೂ ಸಿದ್ಧ. ಹೊರದೇಶದವರೆಂದು, ಅದರಲ್ಲೂ ಭಾರತದವರೆಂದು, ಇನ್ನೂ ಮಮತೆ ಹೆಚ್ಚು. ಇವರು ಯುದ್ಧದಲ್ಲಿ ತಮ್ಮ ಕುಟುಂಬದ ಜೊತೆಗೆ ಮಕ್ಕಳನ್ನೂ ಕಳೆದುಕೊಂಡಿದ್ದರು. ಹುಡುಗರನ್ನು ಕಂಡರೆ ಬಹಳ ವಿಶ್ವಾಸ. ಕಾರ್ಖಾನೆಯಿಂದ ಮನೆಗೆ ಹೋಗುವಾಗ, ಮನೆಯಿಂದ ಕಾರ್ಖಾನೆಗೆ ಬರುವಾಗ ಜೊತೆಯಲ್ಲೇ ಬಂದು ಹೋಗಬೇಕು. ಪ್ರತಿದಿನ ನನ್ನ ಕ್ಷೇಮಸಮಾಚಾರ ವಿಚಾರಿಸದಿರುತ್ತಿರಲಿಲ್ಲ. ಚಳಿಗಾಲದಲ್ಲಿ ನಾನು ಕಷ್ಟಪಡುವುದನ್ನು ನೋಡಿ ಅವರು ದುಃಖಪಡುತ್ತಿದ್ದರು. ನನಗಾಗಿ ಯಾವ ಅಧಿಕಾರಿಯನ್ನಾದರೂ ಹೋಗಿ ನೋಡುತ್ತಿದ್ದರು. ಇವರು ಮಾಡಿದ ಸಹಾಯವನ್ನು ಮರೆಯುವಂತಿಲ್ಲ.

ದಕ್ಷಿಣ ಆಫ್ರಿಕಾದಲ್ಲಿ ೨೦ ವರ್ಷ ಕಾಲ ಇಂಜಿನಿಯರ್ ಆಗಿ ಕೆಲಸ ಮಾಡಿ, ಇಂಗ್ಲಿಷ್ ಚೆನ್ನಾಗಿ ಕಲಿತು, ಯುದ್ಧವಾದಮೇಲೆ ಆ ದೇಶದಿಂದ ಓಡಿಸಿದುದರಿಂದ ಕೈಯಲ್ಲಿ ಒಂದು ಕಾಸೂ ಇಲ್ಲದೆ ಜರ್ಮನಿಯನ್ನು ಸೇರಿದ ಶ್ರೀ ರಿಸ್ತರ್ ಕುಳ್ಳಾಗಿ ಕಂಡರೂ, ಚುರುಕು ಬುದ್ಧಿಯವರು. ಸ್ವಲ್ಪವೂ ತಪ್ಪಿಲ್ಲದೆ ಇಂಗ್ಲಿಷ್ ಮಾತನಾಡುತ್ತಿದ್ದುದರ ಜೊತೆಗೆ ವಿಜ್ಞಾನದಲ್ಲಿ ಮತ್ತು ಕೈಗಾರಿಕೆಯಲ್ಲಿ ಉಪಯೋಗಿಸುವ ಇಂಗ್ಲಿಷ್ ಪದಗಳು ಅವರಿಗೆ ಚೆನ್ನಾಗಿ ಬರುತ್ತಿದ್ದವು ಚಳಿಗಾಲದಲ್ಲಿ ನನ್ನಷ್ಟೇ ನಡುಗುತ್ತಿದ್ದರು. ೨೦ ವರ್ಷ ಉಷ್ಣ ದೇಶದಲ್ಲಿದ್ದು, ತನ್ನ ದೇಶಕ್ಕೇ ಹಿಂದಿರುಗಿದರೂ ಚಳಿ ತಡೆಯಲಾರರು.

ಉಷ್ಣದೇಶವೆಂದರೆ ಈಗಲೂ ಇಷ್ಟ. ಕಾರ್ಖಾನೆಯಲ್ಲಿ ಇಂಗ್ಲಿಷ್‌ನಲ್ಲಿ ಮಾತನಾಡಿಸುತ್ತಿದ್ದವರು ಇವರೊಬ್ಬರೇ.

ಕ್ಲಿಂಗ್‌ಹಾಮಾ ಕಾರ್ಖಾನೆಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಶ್ರೀ ಆಲೆಸ್ ಎಂಬವರ ಪರಿಚಯವಾಯಿತು. ಪರಿಚಯವಾದೊಡನೆ ಮನೆಗೆ ಊಟಕ್ಕೆ ಕರೆದು ತಮ್ಮ ಪತ್ನಿಯ ಮತ್ತು ಮಗಳ ಪರಿಚಯ ಮಾಡಿಕೊಟ್ಟರು. ಆಗಾಗ ಅವರ ಮನೆಗೆ ಭೇಟಿ ಕೊಡುತ್ತಿದ್ದೆ. ದೊಡ್ಡ ಇಂಜಿನಿಯರ್ ಆದರೂ ಸರಳಜೀವಿ. ಅನೇಕ ಹೊಸ ಯಂತ್ರಗಳನ್ನು ಕಂಡುಹಿಡಿದಿದ್ದಾರೆ. ಅವರ ಮಲಗುವ ಮನೆಯಲ್ಲಿ ಒಂದು ಡ್ರಾಯಿಂಗ್ ಬೋರ್ಡ್ ನೋಡಿ ನನಗೆ ಆಶ್ಚರ್ಯವಾಯಿತು. ಅಲ್ಲಿ ಲೆಕ್ಕ, ಡ್ರಾಯಿಂಗ್ ಮಾಡುತ್ತಾರೆ. ಅಡಿಗೆಮನೆಯಲ್ಲೂ ಎಲ್ಲಾ ಏರ್ಪಾಡೂ ಇವರದೇ. ನೋಡಲು ಸಣ್ಣದಾದರೂ ಕಣ್ಣಿಗೆ ಒಪ್ಪುವಂತೆ ಇದೆ. ತಮಗೆ ಸ್ವಂತ ತೋಟವಿಲ್ಲದಿದ್ದರೂ ಇನ್ನೊಬ್ಬರ ತೋಟದಲ್ಲಿ ಸ್ವಲ್ಪ ಜಾಗ ಎರವು ತೆಗೆದುಕೊಂಡು, ಬೇಸಿಗೆಯಲ್ಲಿ ಹಣ್ಣು, ತರಕಾರಿ ಬೆಳೆಯುತ್ತಾರೆ. ಚಳಿಗಾಲಕ್ಕೆ ಅವನ್ನು ಶೇಖರಿಸುತ್ತಾರೆ. ಮನೆಗೆ ಅತಿಥಿಗಳಾಗಿ ಬಂದವರಿಗೆ ಈ ಹಣ್ಣಿನ ರಸ ಕೊಟ್ಟು, ತಮ್ಮ ತೋಟದಲ್ಲಿ ಬೆಳೆದದ್ದೆಂದು ಹೆಮ್ಮೆಪಡುತ್ತಾರೆ. ಶ್ರೀ ಆಲೆಸ್‌ರ ಅಣ್ಣ ಒಬ್ಬರು ಸ್ವೀಡನ್‌ಗೆ ಹೋಗಿ ಬಂದಮೇಲೆ, ನನಗೂ ಬರುವಂತೆ ಆಹ್ವಾನವಿತ್ತರು. ಶ್ರೀಮತಿ ಆಲೆಸ್ ಮನೆಯ ಕೆಲಸಗಳನ್ನು ಮಾಡಿಕೊಳ್ಳುವುದರ ಜೊತೆಗೆ ಬಟ್ಟೆಯನ್ನೂ ತಾವೇ ಹೊಲಿದುಕೊಳ್ಳುತ್ತಿದ್ದರು. ಇವರ ಮಗಳು ಇನಾ ಬಹು ಜಾಣೆ. ಆಕೆ ತನಗೆ ಬೇಕಾದ ಲಂಗಗಳ ಡಿಸೈನ್ (ಮಾದರಿ) ಬರೆದುಕೊಡುತ್ತಿದ್ದಳು. ಅದನ್ನು ನೋಡಿಕೊಂಡು ತಾಯಿ ಬಟ್ಟೆ ಕತ್ತರಿಸಿ ಹೊಲಿಯುತ್ತಿದ್ದಳು. ಇದರಿಂದ ಅವರಿಗೆ ನೂರಾರು ರೂಪಾಯಿ ಉಳಿತಾಯದ ಜೊತೆಗೆ ತಾವೇ ಹೊಲಿದುಕೊಂಡೆವೆಂಬ ಹೆಮ್ಮೆ ಬೇರೆ. ಇಲ್ಲಿ ಬಟ್ಟೆಗಿಂತ ಹೊಲಿಯುವ ಕೂಲಿ ಬಹಳ. ಮನೆಯಲ್ಲಿ ಒಂದು ಕೈಮಗ್ಗವನ್ನು ಇಟ್ಟುಕೊಂಡು ಬಟ್ಟೆ ನೇಯುತ್ತಾರೆ. ನೇಯ್ದ ಒಂದು ದೊಡ್ಡ ರೋಲ್ ಬಟ್ಟೆ ಇಟ್ಟಿದ್ದಾರೆ. ಅದನ್ನು ತಾವೇ ನೂತದ್ದು ಎಂದು ಅವರಿಗೆ ಬಲು ಹೆಮ್ಮೆ. "ಈ ಕೈಮಗ್ಗದ ಬಟ್ಟೆ ಏಕೆ?" ಎಂದು ಕೇಳಿದೆ. "ನನ್ನ ತಾಯಿ, ಕೈಯಲ್ಲಿ ನೇಯ್ದ ಬಟ್ಟೆಯನ್ನು ನನಗೆ ಮದುವೆಯಲ್ಲಿ ಬಹುಮಾನ ಕೊಟ್ಟಳು. ಅದನ್ನು ಮೇಜಿನ ಮೇಲೆ ಹಾಸಲು, ಕಿಟಕಿ ಬಾಗಿಲುಗಳಿಗೆ ಕಟ್ಟಲು ಉಪಯೋಗಿಸುತ್ತಿದ್ದೇನೆ. ನಾನೂ ಇದೇ ರೀತಿ ನೇಯ್ದು ನನ್ನ ಮಗಳ ಮದುವೆಯಲ್ಲಿ ಈ ಬಟ್ಟೆಯನ್ನು ಬಹುಮಾನವಾಗಿ ಕೊಡುತ್ತೇನೆ. ನಾನು ನೇಯ್ದ ಬಟ್ಟೆ ನೋಡಲು ಸಂತೋಷ

ವಾಗುವುದಿಲ್ಲವೇ ?" ಎಂದು ಸ್ವಲ್ಪ ಜಂಬದಿಂದಲೇ ಕೇಳಿದಳು. ಆಗ ನಾನು ಖಾದಿ ಬಟ್ಟೆಯ ವಿಚಾರ ಹೇಳಿದೆ. ನಾನು ಖಾದಿ ಬಟ್ಟೆಯನ್ನು ಏಕೆ ಉಪಯೋಗಿಸುತ್ತಿದ್ದೇನೆ ಎಂಬ ವಿಚಾರ ತಿಳಿಸಿದೆ. ಅವರ ಕುಟುಂಬದವರಿಗೆ ಭಾರತವೆಂದರೆ ಗೌರವ-ವಿಶ್ವಾಸ. ಭಾರತದ ಚಿತ್ರ ಎಲ್ಲಿ ಇದ್ದರೂ ಹೋಗಿ ನೋಡುತ್ತಿದ್ದರು. ಭಾರತದ ವಿಚಾರವಾಗಿ ಅನೇಕ ಪುಸ್ತಕಗಳನ್ನು ತರಿಸಿ ಕೊಂಡು ಓದುತ್ತಿದ್ದುದರ ಜೊತೆಗೆ ಅನೇಕ ಚರ್ಚೆಗಳೂ ನಡೆಯುತ್ತಿದ್ದವು. "ಭಾರತೀಯರು ಯಾರೇ ಬರಲಿ, ಅವರಿಗೆ ನನ್ನ ವಿಳಾಸ ಕೊಡಿ. ನಾನು ಕೈಲಾದಷ್ಟು ಸಹಾಯಮಾಡುತ್ತೇನೆ" ಎಂದು ಹೇಳುತ್ತಿದ್ದರು. ಯಾವಾಗ ಮನೆಗೆ ಹೋದರೂ, ಅವರು ಮನೆಗೆ ಹೊಸದಾಗಿ ತಂದ ವಸ್ತುಗಳನ್ನು ನನಗೆ ತೋರಿಸುತ್ತಿದ್ದುದಲ್ಲದೆ ಅದುವರೆಗೆ ಮನೆಯಲ್ಲಿ ಏನೇನು ನಡೆಯಿತು ಎಂದೆಲ್ಲಾ ವಿವರಿಸಿ ಹೇಳುತ್ತಿದ್ದರು. ನಾನು ಹಿಂದಿರುಗುವಾಗ "ನಿಮಗೆ ಜರ್ಮನಿಯಲ್ಲಿ ಏನು ತೊಂದರೆಯಾಗಿದ್ದರೂ ಮರೆತು, ಒಳ್ಳೆಯದನ್ನು ಮಾತ್ರ ನಿಮ್ಮ ದೇಶಕ್ಕೆ ತೆಗೆದುಕೊಂಡು ಹೋಗಿ" ಎಂದು ಹೇಳಿ ಬೀಳ್ಕೊಟ್ಟರು.

ಸ್ಟುಡ್‌ಗಾರ್ಟ್‌ಗೆ ಹಿಂದಿರುಗಲು ರೈಲ್ವೆನಿಲ್ದಾಣದಲ್ಲಿ ರೈಲಿಗಾಗಿ ಕಾಯುತ್ತ ಹಾಗೇ ಓಡಾಡುತ್ತಿದ್ದಾಗ ಒಬ್ಬ ಜರ್ಮನ್ ತರುಣ "ನಮಸ್ತೇ, ನೀವು ಇಂಡಿಯಾದಿಂದ ಬರುತ್ತೀರಾ ?" ಎಂದು ಕೇಳಿ, ಕೈಜೋಡಿಸಿ ನಮಸ್ಕರಿಸಿದ. 'ನಮಸ್ತೇ' ಎಂದೊಡನೆಯೇ ಯಾರೆಂದು ನೋಡಿದೆ. ಆ ತರುಣ ನಗುತ್ತಾ ತನ್ನ ಸ್ನೇಹಿತನನ್ನು ಕರೆದ. ಆತನನ್ನು ಪರಿಚಯ ಮಾಡಿಕೊಟ್ಟ. ಆತ ಬೆಂಗಳೂರಿನ ಶ್ರೀ ಸೂರ್ಯನಾರಾಯಣ ಅವರ ಮಗ ಶ್ರೀ ಅಶ್ವತ್ಥ ನಾರಾಯಣ. ಈ ಜರ್ಮನ್ ಹುಡುಗ ಮತ್ತು ಅಶ್ವತ್ಥನಾರಾಯಣ ಸ್ನೇಹಿತರು. ಒಂದೇ ಊರಿನವರನ್ನು, ಅನೇಕ ಸಾರಿ ಬೆಂಗಳೂರಿನಲ್ಲಿ ನೋಡಿದವರನ್ನು, ಕನ್ನಡದವರನ್ನು, ಪರದೇಶದಲ್ಲಿ ಇದ್ದಕ್ಕಿದ್ದಂತೆ ನೋಡಿದರೆ ಸಂತೋಷವಾಗುವುದಿಲ್ಲವೆ ? ಹತ್ತು ನಿಮಿಷ ಕನ್ನಡದಲ್ಲಿ ಮಾತನಾಡಿದೆವು. ರೈಲಿಗೆ ಹೋಗಬೇಕಾದುದರಿಂದ ಶ್ರೀ ಅಶ್ವತ್ಥ್ ಹೊರಟುಹೋದರು. ಜರ್ಮನ್ ಸ್ನೇಹಿತ ಅಲ್ಲೇ ಉಳಿದರು. ಅವರು ಲಾ ಓದುತ್ತಿದ್ದಾರೆ. ಹಿಂದೂಸ್ಥಾನದ ಮೇಲೆ ವಿಶ್ವಾಸ ಹೆಚ್ಚು. ಸ್ಟುಡ್‌ಗಾರ್ಟ್‌ನಲ್ಲಿ ಇರುವ ಭಾರತೀಯರೊಂದಿಗೆ ಮಿಳಿತವಾಗಿ ಹಿಂದೀ ಕಲಿಯುತ್ತಿದ್ದಾರೆ. ಸ್ವಲ್ಪ ಮಾತನಾಡಲೂ ಬರುತ್ತದೆ. ಅರ್ಧಗಂಟೆ ಮಾತನಾಡಿದಮೇಲೆ ಅವರಿಗೆ ಭಾರತ, ಸಂಸ್ಕೃತ, ಹಿಂದಿ, ಭಾರತೀಯ ಸಂಸ್ಕೃತಿಯ ವಿಚಾರದಲ್ಲಿ ಇರುವ ಗೌರವ-ವಿಶ್ವಾಸ ನೋಡಿ, ಅವರಿಗೆ ನನ್ನ ಮಿತ್ರರು ಕೊಟ್ಟ ಗೀತೆಯನ್ನು ಕಳುಹಿಸಿಕೊಡುತ್ತೇನೆ ಎಂದು

ಹೇಳಿದೆ. ಬ್ರೌನ್ಸ್‌ವೈಗ್ ಸೇರಿದಮೇಲೆ ಆ ಗೀತೆಯನ್ನು ಕಳುಹಿಸಿಕೊಟ್ಟೆ. ಅವರ ಸಂತೋಷಕ್ಕೆ ಪಾರವೇ ಇಲ್ಲ. ಅವರು ಹಿಂದಿಯಿಂದ ಜರ್ಮನಿಗೆ ಭಾಷಾಂತರ ಮಾಡಿದ ಕಥೆಗಳು ಅಲ್ಲಿಯ ಪತ್ರಿಕೆಗಳಲ್ಲಿ ಬರುತ್ತವೆ ಎಂದು ತಿಳಿಯಿತು.

ಪತ್ರಿಕೋದ್ಯೋಗಿ ಉಲ್ಫಗಾಂಗ್ ಶೋಲ್ಬರ್ ಎಂಬವರ ಪರಿಚಯ ವಾದದ್ದು ಆಕಸ್ಮಿಕ. ಅವರು ಒಂದು ಟ್ರಾಂನಲ್ಲಿ ಪ್ರಯಾಣಮಾಡುತ್ತಿದ್ದಾಗ ನಾನೂ ಅದೇ ಟ್ರಾಂ ಹತ್ತಿದೆ. ಜರ್ಮನ್ ಭಾಷೆಯಲ್ಲಿ ಟ್ರಾಂ ಕಂಡಕ್ಟರನ್ನು ಮಾತನಾಡಿಸುತ್ತಿದ್ದಾಗ ಕೇಳಿಸಿಕೊಂಡು, ನನ್ನ ವಿಚಾರದಲ್ಲಿ ಕುತೂಹಲ ಹುಟ್ಟಿ "ನೀವು ಯಾವ ದೇಶದವರು ? ಜರ್ಮನ್ ಭಾಷೆ ಚೆನ್ನಾಗಿ ಬರುತ್ತ ದಲ್ಲಾ ? ಎಷ್ಟು ದಿನದಲ್ಲಿ ಕಲಿತಿರಿ ?" ಎಂಬ ಪ್ರಶ್ನೆಗಳ ಮಳೆ ಸುರಿಸಿದರು. ಎಲ್ಲಕ್ಕೂ ಉತ್ತರ ಕೊಟ್ಟನಂತರ ಸಂತೋಷಗೊಂಡರು. ನಾನು ಅವರ ಹೆಸರು, ಕೆಲಸ ವಿಚಾರಿಸಿದೆ. ಆಗ ತಿಳಿಯಿತು, ಅವರು 'ಬ್ರೌನ್ಸ್‌ವೈಗ್ ಪ್ರೆಸೇ' ಎಂಬ ಪತ್ರಿಕೆಯ ಸಂಪಾದಕರು ಎಂದು. ನಾನು 'ತಾಯಿನಾಡು' ಪತ್ರಿಕೆಗೆ ಜರ್ಮನಿಯ ವಿಚಾರವಾಗಿ ಲೇಖನಗಳನ್ನು ಬರೆದಿರುವುದಾಗಿ ತಿಳಿಸಿದೆ. ಪತ್ರಿಕೋದ್ಯಮದಲ್ಲಿ ಸ್ವಲ್ಪ ಉತ್ಸಾಹ ತೋರಿಸಿದೆ. "ನೀವು ಒಂದು ದಿನ ನಿಮ್ಮ ಲೇಖನಗಳನ್ನು ತೆಗೆದುಕೊಂಡು ನಮ್ಮ ಪತ್ರಿಕಾ ಕಛೇರಿಗೆ ಬನ್ನಿ, ಮಾತನಾಡೋಣ. ನೀವು ವಿಚಿತ್ರ ಮನುಷ್ಯರಂತೆ ಕಾಣುತ್ತೀರಿ" ಎಂದು ಅವರ ಕಛೇರಿಗೆ ಆಹ್ವಾನ ಕೊಟ್ಟರು.

ಆಹ್ವಾನದಂತೆ ನನ್ನಲ್ಲಿದ್ದ ಹಿಂದೂಸ್ಥಾನದ ವಿಷಯದ ಪುಸ್ತಕಗಳನ್ನೂ ಚಿತ್ರಗಳನ್ನೂ ನಾನು 'ತಾಯಿನಾಡು' ಪತ್ರಿಕೆಗೆ ಬರೆದ ಲೇಖನಗಳನ್ನೂ ತೆಗೆದುಕೊಂಡು ಶ್ರೀ ಉಲ್ಫಗಾಂಗ್ ಶೋಲ್ಬರ್‌ರವರ ಕಛೇರಿಗೆ ಹೋದೆ. ಅವರು ಸ್ವಾಗತಿಸಿ, ಮೊದಲು ತಮ್ಮ ಪತ್ರಿಕಾ ಕಛೇರಿಯನ್ನು ತೋರಿಸಿ ಅನಂತರ ಸಂಭಾಷಣೆಗೆ ಪ್ರಾರಂಭಿಸಿದರು. ಅವರಿಗೆ ಹಿಂದೂಸ್ಥಾನ ಎಂಬ ದೇಶವಿದೆ ಎಂದು ತಿಳಿದಿತ್ತು. ಆದರೆ ಅಲ್ಲಿಯ ವಿಷಯ ಹೆಚ್ಚು ತಿಳಿದಿರಲಿಲ್ಲ. ಪುಸ್ತಕ ಮತ್ತು ಚಿತ್ರಗಳನ್ನು ನೋಡಿದನಂತರ ಅವರು ಆಶ್ಚರ್ಯಗೊಂಡರು. ಹಿಂದೂಸ್ಥಾನ ಈ ರೀತಿ ಇದೆಯೇ ಎಂದುಕೊಂಡರು. 'ತಾಯಿನಾಡು' ಪತ್ರಿಕೆಯನ್ನೂ ಅದರ ಕನ್ನಡ ಅಕ್ಷರಗಳನ್ನೂ ನೋಡಿ ಅವರು ವಿಸ್ಮಯ ಗೊಂಡರು. ಹೂಗಳನ್ನು ಜೋಡಿಸಿದಂತಿದೆ. ಇದನ್ನು ಹೇಗೆ ಬರೆಯುತ್ತಾರೆ? ಹೇಗೆ ಕಲಿಯುತ್ತಾರೆ? ಎಂದು ಅವರಿಗೆ ಆಶ್ಚರ್ಯ! ಹಿಂದೂಸ್ಥಾನದಲ್ಲಿ ರೋಟರಿ ಪ್ರೆಸ್ ಇದೆ ಎಂದೂ, 'ತಾಯಿನಾಡು' ರೋಟರಿ ಪ್ರೆಸ್‌ನಲ್ಲಿ ತಯಾ

ರಾದುದೆಂದೂ ಹೇಳಿದರೆ ನಂಬಲಾರರು. ನಾನು ೮–೯ ತಿಂಗಳಲ್ಲಿ ಜರ್ಮನ್ ಭಾಷೆಯನ್ನು ಚೆನ್ನಾಗಿ ಕಲಿತಿರುವುದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ನನ್ನ ಇತರ ಹವ್ಯಾಸಗಳ ವಿಚಾರ ಬಂತು. ಎಲ್ಲವನ್ನೂ ಸಾವಧಾನವಾಗಿ ಕೇಳಿದರು. ನಾನು ಹಾಕಿದ್ದ ಬಟ್ಟೆ ಭಾರತದಲ್ಲಿ ತಯಾರಾದುದೇ ಅಥವಾ ಇಂಗ್ಲೆಂಡಿನದೇ ಎಂದು ಕೇಳಿದರು. ಅವು ಕೈಯಲ್ಲಿ ನೂತು ನೇದದ್ದು ಎಂದು ಹೇಳಿದಾಗ ಅವರ ಕಣ್ಣನ್ನು ಅವರೇ ನಂಬಲಾರದೆ ಹೋದರು! ಇಷ್ಟು ಒಳ್ಳೆಯ ಬಟ್ಟೆಗಳನ್ನು ಭಾರತದಲ್ಲಿ ತಯಾರುಮಾಡಬಲ್ಲರೇ? ಎಂದು ಕೇಳಿದರು. ಅನಂತರ ಅವರ ಪತ್ರಿಕೆಯೊಡನೆ 'ತಾಯಿನಾಡು' ಪತ್ರಿಕೆ ಹಿಡಿದು, ಈ ಎರಡೂ ಪತ್ರಿಕೆಗಳೂ ಒಂದೊಂದು ದೇಶದ ಪ್ರತಿನಿಧಿಗಳು ಎಂದು ಚಿತ್ರ ತೆಗೆದರು. ಮುಂದಿನ ವಾರದ ಪತ್ರಿಕೆಯಲ್ಲಿ ಆ ಚಿತ್ರದೊಡನೆ ನನ್ನ ವಿಚಾರದಲ್ಲಿ ಒಂದು ಲೇಖನವನ್ನೇ ಬರೆದು ಪ್ರಕಟಿಸಿದರು.

ಎಂಟು ದಿನಕ್ಕೊಮ್ಮೆ ನಾವು ಅವರ ಮನೆಯಲ್ಲಾಗಲಿ, ಬೇರೆ ಕೊಠಡಿಯಲ್ಲಾಗಲಿ ಸೇರುತ್ತಿದ್ದೆವು. ಭಾರತದ ಸಂಸ್ಕೃತಿ, ಕಲೆ, ತತ್ವಜ್ಞಾನ, ರಾಜಕೀಯ—ಎಲ್ಲಾ ವಿಚಾರ ಚರ್ಚೆಗೆ ಬರುತ್ತಿತ್ತು. ಶ್ರೀ ಶೋಲ್ಬರ್ ಇನ್ನೂ ಯುವಕ; ೨೪ ವರ್ಷ. ಆತನ ಉತ್ಸಾಹ ಹೇಳತೀರದು. ರಾಜಕೀಯದಲ್ಲಿ ಸೋಷಿಯಲಿಸ್ಟ್ ಪಕ್ಷ. ಭಾರತೀಯ ರಾಜಕೀಯ ಮಾರ್ಗದ ವಿಚಾರವನ್ನು ಬಹುವಾಗಿ ಚರ್ಚಿಸಿ ಸರ್ವೋದಯದ ಮಾರ್ಗವೇ ಶ್ರೇಷ್ಠವೆಂಬುದನ್ನು ಒಪ್ಪಿಕೊಂಡರು. ಪಶ್ಚಿಮ–ಪೂರ್ವ ಜರ್ಮನಿಯ ವಿಚಾರವನ್ನು ಎತ್ತಿ ಹೇಳಿದೆ: "ನೀವು ಎಷ್ಟು ದಿನ ಹೀಗೆ ಶತ್ರುತ್ವದಿಂದ ರಾಜ್ಯ ಗೆಲ್ಲಲು ಸಾಧ್ಯ? ನಾಲ್ಕು ದಿನ ಗೆದ್ದರೂ ಐದನೇ ದಿನ ಸೋಲು ಇದ್ದೇ ಇದೆ. ಪೂರ್ವ ಜರ್ಮನಿಯ ಜನರನ್ನು ಪಶ್ಚಿಮ ಜರ್ಮನಿಯ ಜನರು ವೈರಭಾವದಿಂದ ಎಲ್ಲಿಯವರೆಗೆ ನೋಡುತ್ತೀರೋ, ಕೈಯಲ್ಲಿ ಖಡ್ಗ ಹಿಡಿದು ನಿಲ್ಲುತ್ತೀರೋ, ಅಲ್ಲಿಯವರೆಗೂ ಯುದ್ಧದ ಭೀತಿ ಇದ್ದೇ ಇರುತ್ತದೆ. ಕಡೆಗೆ ಪಶ್ಚಿಮ ಜರ್ಮನಿಯ ಜನರು ಪೂರ್ವ ಜರ್ಮನಿಯ ಜನರೊಡನೆ ಯುದ್ಧಮಾಡಿ, ಅಣ್ಣತಮ್ಮಂದಿರನ್ನೇ ಕೊಲ್ಲಬೇಕಾದ ಸ್ಥಿತಿಗೆ ಬರುತ್ತದೆ. ವಿಶ್ವಾಸ ಎಂದಿಗೂ ವಿಫಲವಲ್ಲ. ನಿಧಾನವಾದರೂ ಅದು ಶಾಶ್ವತ. ಭಾರತ ಈ ಮಾರ್ಗವನ್ನು ಅನುಸರಿಸಿಯೇ ಸ್ವಾತಂತ್ರ್ಯವನ್ನು ಸಂಪಾದಿಸಿತು" ಎಂದೆ. ಈ ಮಾತು ಅವರಿಗೆ ಹಿಡಿಸಿತು.

ಶ್ರೀ ಶೋಲ್ಬರ್ ಅವರನ್ನು ನನ್ನ ಕೊಠಡಿಗೆ ಒಂದು ದಿನ ಟೀಗೆ ಕರೆದೆ. ಬಂದವರು ನನ್ನ ಕೊಠಡಿಯಲ್ಲಿ ಆಗತಾನೆ ಹಚ್ಚಿದ್ದ ಗಂಧದ ಕಡ್ಡಿಯ ವಾಸನೆ ನೋಡಿ ಅದು ಏನೆಂದು ಕೇಳಿದರು. ಊದಿನಕಡ್ಡಿಯನ್ನು ತೋರಿಸಿದೆ. ಆ

ಕಡ್ಡಿಯನ್ನು ಮೂಗಿನಲ್ಲಿ ಇಟ್ಟುಕೊಂಡಿದ್ದೂ ಇಟ್ಟುಕೊಂಡಿದ್ದೇ. "ಅದನ್ನು ಹೇಗೆ ಮಾಡುತ್ತಾರೆ?" ಎಂದು ಕೇಳಿದರು. ಊದಿನಕಡ್ಡಿಯನ್ನು ಮಾಡುವ ವಿಧಾನವನ್ನು ವಿವರಿಸಬೇಕಾಯಿತು. ನನ್ನ ಮೇಜಿನ ಮೇಲೆ ಇದ್ದ ಶ್ರೀರಾಮ ದೇವರ ಪಟ್ಟಾಭಿಷೇಕ ಚಿತ್ರದ ಕಡೆ ಹೋಯಿತು, ಅವರ ಕಣ್ಣು. "ಇದು ಏನು ಹೀಗಿದೆ?" ಎಂದು ಕೇಳಿದರು. "ಇದು ನಮ್ಮ ದೇವರ ಚಿತ್ರ; ಶ್ರೀರಾಮ ದೇವರು ನಮಗೆ ಇರುವ ಅನೇಕ ದೇವರಲ್ಲಿ ಇವರನ್ನೂ ದೇವರೆಂದು ಪೂಜಿಸುತ್ತೇವೆ. ಎಲ್ಲ ವಿಚಾರಗಳಲ್ಲೂ ನಮ್ಮ ಭಾರತದಲ್ಲಿ ಈ ನಾಲ್ಕು ಜನರ ಗುಣಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ಅವರು ತೋರಿಸಿರುವ ದಾರಿಯಲ್ಲಿ ನಡೆಯಲು ಪ್ರಯತ್ನಿಸುತ್ತಾರೆ" ಎಂದು ಹೇಳಿದಾಗ ಆತನ ಕುತೂಹಲ ಹೆಚ್ಚಿ, "ಅವರ ಜೀವನದ ಕಥೆ ಹೇಳಿ, ಅವರು ಹೇಗೆ ಗುಣದಲ್ಲಿ ದೊಡ್ಡವರು?" ಎಂದು ಕೇಳಿದಾಗ, ರಾಮಾಯಣದ ಕಥೆಯನ್ನು ಹೇಳಿ, ಪ್ರತಿಯೊಬ್ಬರ ಗುಣವನ್ನೂ ವಿವರಿಸಿದೆ. ಆತ "ಭಾರತದ ಇತಿಹಾಸ ಬಹಳ ದೊಡ್ಡದು. ಭಾರತವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ" ಎಂದರು.

ಭಾರತದ ವಿಚಾರ ಹೆಚ್ಚು ಓದಿ, ಪುಸ್ತಕಗಳನ್ನು ಶೇಖರಿಸಿ ಇಟ್ಟುಕೊಂಡಿದ್ದ ಶ್ರೀ ಗ್ರೀಗರ್ ಅವರು ನನ್ನ ಪಕ್ಕದ ಮನೆಯಲ್ಲಿ ಇದ್ದವರು. ಇವರಿಗೆ ಇಂಗ್ಲಿಷ್ ಬರುತ್ತಿತ್ತು. ಈತ ನನ್ನ ಪಕ್ಕದ ಕೊಠಡಿಯಲ್ಲಿದ್ದ ಶ್ರೀಮತಿ ಕ್ರೈನ್‌ರ ಸೋದರಿಯ ಮಗ. ಯಾವಾಗಲೂ ದೇಶವಿದೇಶ ತಿರುಗಬೇಕೆಂಬ ಚಪಲ. ನಾನು ಭಾರತದವನೆಂದು ತಿಳಿದಮೇಲೆ, ನನ್ನ ಹತ್ತಿರ ಸ್ನೇಹ ಬೆಳೆಸಲು ಆತನ ದೊಡ್ಡಮ್ಮನಿಗೆ ಹೇಳಿ, ಒಂದು ದಿನ ಗೊತ್ತುಮಾಡಿಕೊಂಡು ನನ್ನ ಕೊಠಡಿಗೆ ಬಂದರು. ಈತ ಸುಮಾರಾಗಿ ಇಂಗ್ಲಿಷ್ ಮಾತನಾಡುತ್ತಿದ್ದುದನ್ನು ನೋಡಿ ಆಶ್ಚರ್ಯವಾಯಿತು. ಬ್ರೌನ್ಸ್‌ವೈಗ್‌ನಲ್ಲಿರುವ 'ಬ್ರುಕೆ' ಎಂಬ ಜರ್ಮನ್–ಇಂಗ್ಲಿಷ್ ಕ್ಲಬ್ಬಿನಲ್ಲಿ ಇಂಗ್ಲಿಷ್ ಕಲಿತಿದ್ದಾರೆ. ಆಗಲೇ ಜರ್ಮನಿ, ಇಟಲಿ, ಫ್ರಾನ್ಸ್ ಪೂರ್ತಿ ನೋಡಿದ್ದಾರೆ. ಆತ ಒಂದು ದಿನ ನನ್ನನ್ನು ಮನೆಗೆ ಊಟಕ್ಕೆ ಕರೆದರು. ಆ ದಿನ ತನ್ನ ದೊಡ್ಡಮ್ಮನನ್ನು ಕೇಳಿ ನಾನು ಏನು ತಿನ್ನುತ್ತೇನೆಂಬ ವಿವರಗಳನ್ನು ತಿಳಿದುಕೊಂಡು ಹಣ್ಣು, ಹಾಲು, ಬ್ರೆಡ್, ಬೆಣ್ಣೆ ತಂದಿಟ್ಟಿದ್ದರು. ಮನೆಗೆ ಹೋದನಂತರ ಊಟಕ್ಕೆ ಏಳಲು ಹೇಳಿದಾಗ "ನಾನು ನಿಮಗೆ ಹೇಳುವುದನ್ನು ಮರೆತೆ, ಕ್ಷಮಿಸಿ" ಎಂದೆ. ಆತ ಹುಸಿನಗೆ ನಗುತ್ತಾ "ನನಗೆ ಎಲ್ಲಾ ಗೊತ್ತು. ನಮ್ಮ ದೊಡ್ಡಮ್ಮನವರು ನಿಮ್ಮ ವಿಚಾರ ಎಲ್ಲಾ ಹೇಳಿದ್ದಾರೆ. ಅದನ್ನು ಕೇಳಿಕೊಂಡು ಬಂದು ಸಸ್ಯಾಹಾರ ತಯಾರಿಸಿದ್ದಾರೆ" ಎಂದು ಹೇಳಿ ಊಟಕ್ಕೆ ಎಬ್ಬಿಸಿದರು. ಊಟ ಮಾಡು

ವಾಗ ಭಾರತದ ಅನೇಕ ಪ್ರಶ್ನೆಗಳು ಬಂದವು. ತಾನು ಕೂಡಿಹಾಕಿರುವ ಭಾರತದ ವಿಚಾರದ ಜರ್ಮನ್ ಭಾಷೆಯ ಪುಸ್ತಕಗಳನ್ನು ತೋರಿಸಿದರು. ಭಾರತ ನೋಡಬೇಕೆಂಬ ಆಸೆ ಅವರಲ್ಲಿ ತುಂಬಿತ್ತು. ನನ್ನಲ್ಲಿದ್ದ ಭಾರತದ ಕೆಲವು ಚಿತ್ರಗಳನ್ನು ತೋರಿಸಿದೆ. ಓದಲು ಪುಸ್ತಕಗಳನ್ನು ಕೊಟ್ಟೆ. ಸಂತೋಷ ಗೊಂಡು "ಚಿಕ್ಕವನಿದ್ದಾಗಿನಿಂದ ಭಾರತವನ್ನು ನೋಡಬೇಕೆಂಬ ಆಸೆ ಇತ್ತು. ಈಗ ನಿಮ್ಮನ್ನು ನೋಡಿದಮೇಲೆ ಪೂರ್ತಿಯಾದ ಹಾಗೆ ಆಯಿತು—" ಎಂದು ಹೇಳಿದ.

ನಾನು ಇದ್ದ ಮನೆಯ ಯಜಮಾನಿ ಸ್ವಿಡ್ಜರ್ಲೆಂಡಿನವರು. ಆಕೆಗೆ ಅದೇ ದೇಶದಿಂದ ಬಂದ ಶ್ರೀ ಐಡೆನ್‌ಬೆನ್ಸ್ ಎಂಬವರ ಪರಿಚಯವಿತ್ತು. ಆಕೆ ಅವರ ಮನೆಗೆ ಹೋದಾಗ ನನ್ನ ವಿಚಾರ ಹೇಳುತ್ತಿದ್ದಳು. ಶ್ರೀ ಐಡೆನ್‌ಬೆನ್ಸ್ ಭಾರತದಲ್ಲಿ ಹುಟ್ಟಿದವರೆಂದೂ, ಭಾರತವೆಂದರೆ ಬಹಳ ಮಮತೆ ಎಂದೂ ತಿಳಿಯಿತು. ಒಂದು ಭಾನುವಾರ ಅವರ ಮನೆಗೂ ಕರೆದರು. ಹೋದ ಒಡನೆ ಅವರ ಸಂತೋಷಕ್ಕೆ ಪಾರವೇ ಇಲ್ಲ. ಹೆಂಡತಿಮಕ್ಕಳೆಲ್ಲ ಬಂದು ಆದರದ ಸ್ವಾಗತವಿತ್ತರು. ಶ್ರೀ ಐಡೆನ್‌ಬೆನ್ಸ್ ದೊಡ್ಡ ಚಿತ್ರಗಾರರು. ಆ ಊರಿನ ಕಲಾಶಾಲೆಯಲ್ಲಿ ಉಪಾಧ್ಯಾಯರು. ನಾನು ಹೋದಾಗ ಸ್ವಿಡ್ಜರ್ಲೆಂಡಿನ ದೃಶ್ಯವನ್ನು ಚಿತ್ರಿಸುತ್ತಿದ್ದರು. ಅವರು ರಚಿಸಿದ, ರಚಿಸುತ್ತಿರುವ ಚಿತ್ರಗಳನ್ನೆಲ್ಲ ತೋರಿಸಿದರು. "ನಾನು ಹುಟ್ಟಿದ್ದು ಹಿಂದೂಸ್ಥಾನದ ಕಣ್ಣಾನ್ನೂರಿನಲ್ಲಿ. ನನ್ನ ತಂದೆ ಮದರಾಸು ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದರು. ೧೮ ವರ್ಷ ಕಾಲ ಅಲ್ಲಿದ್ದರು. ನಾನು ೭ ವರ್ಷ ಆ ಊರಿನಲ್ಲಿ ಬೆಳೆದೆ. ಒಬ್ಬಳು ಆಯಾ ಹುಡುಗಿ ನನ್ನನ್ನು ಎತ್ತಿ ಆಡಿಸುತ್ತಿದ್ದಳು. ಈಗಲೂ ನನಗೆ ಸಮುದ್ರದ ದಡ ದಲ್ಲಿ ಆಟವಾಡುತ್ತಿದ್ದುದು ಜ್ಞಾಪಕಕ್ಕೆ ಬರುತ್ತದೆ. ಏಳು ವರ್ಷವಾದಮೇಲೆ ಸ್ವಿಡ್ಜರ್ಲೆಂಡ್‌ಗೆ ವಿದ್ಯಾಭ್ಯಾಸಕ್ಕಾಗಿ ಬಂದುಬಿಟ್ಟೆ. ನಾನು ಬರುವಾಗ ನನ್ನನ್ನು ಆಡಿಸುತ್ತಿದ್ದ ಆಯಾ ನನ್ನನ್ನು ಬಿಡಲಾರದೆ ಅತ್ತಳು. ನಾನು ಇಲ್ಲಿ ಬಂದ ಮೇಲೆ ನನ್ನ ತಂದೆತಾಯಿಯೂ ಹಿಂದೆ ಬಂದುಬಿಟ್ಟರು. ಅವರು ಮನೆಯಲ್ಲಿ ಇಂಡಿಯಾ ದೇಶದ ಆಹಾರ ತಿನ್ನುತ್ತಿದ್ದರು. ಆ ಆಹಾರ ನನಗೂ ಅಭ್ಯಾಸವಾಗಿದೆ. ಈಗಲೂ ನಮ್ಮ ಮನೆಯಲ್ಲಿ ಇಂಡಿಯಾ ದೇಶದ ಅನ್ನ, ಸಾರು ಮಾಡಿಸುತ್ತೇನೆ. ನಾನು ಹುಟ್ಟಿದ ಭಾರತವನ್ನು ನೋಡಬೇಕೆಂಬ ಹಂಬಲ ಬಹಳ ದಿನದಿಂದ ಇದೆ. ಮದರಾಸು ಸರ್ಕಾರಕ್ಕೆ ಬರೆದು ಹಾಕಿ ದ್ದೇನೆ. ನಾನು ಭಾರತದಲ್ಲಿ ಹುಟ್ಟಿ ೭ ವರ್ಷ ಬೆಳೆದದ್ದರಿಂದ ಭಾರತೀಯ ಎಂಬ ಭಾವನೆ ನನಗಿದೆ. ಆಗಿನಿಂದ ಭಾರತೀಯರನ್ನು ನೋಡಿದಾಗಲೆಲ್ಲಾ

ನನಗೆ ಒಂದು ಹೆಮ್ಮೆ. ಈ ದಿನ ನೀವು ನಮ್ಮ ಮನೆಗೆ ಬಂದಿರುವುದು ನನಗೆ ಪರಮಾನಂದ" ಎಂದು ಹೇಳಿದರು. ಆ ದಿನ ಶ್ರೀಮತಿ ಐಡೆನ್‌ಬೆನ್ಸ್‌ರ ಸಡಗರಕ್ಕೆ ಕೊನೆಯೇ ಇಲ್ಲ. ಅನ್ನ ಮಾಡಿ, ತರಕಾರಿ ಬೇಯಿಸಿ ಇಟ್ಟಿದ್ದರು. ಕರಿ-ಪುಡಿ ಎಂದು ಸಾರಿನ ಪುಡಿ ತಂದು ಇಟ್ಟಿದ್ದರು. ಅದನ್ನೇ ಅನ್ನಕ್ಕೆ ಹಾಕಿ ಕೊಳ್ಳುವಂತೆ ಹೇಳಿದರು. ಆಗ ನಾನು ಸಾರುಮಾಡುವುದು ಹೇಗೆ ಎಂದು ಹೇಳಿ ಕೊಟ್ಟೆ. ಅವರ ಮಕ್ಕಳಿಬ್ಬರಿಗೂ ಇಂಡಿಯಾ ದೇಶಕ್ಕೆ ಬರಬೇಕಂತೆ. ಯಾರಾದರೂ "ತೋಟದಲ್ಲಿ ಏನು ಗಿಡ ಹಾಕುತ್ತೀಯಾ?" ಎಂದು ಕೇಳಿದರೆ "ಇಂಡಿಯಾದ ಬಾಳೆಹಣ್ಣು, ತೆಂಗಿನಮರ ಹಾಕುತ್ತೇನೆ" ಎಂದು ಹೇಳುತ್ತಾರೆ. ಬಾಳೆಹಣ್ಣಿನ ಬೆಲೆ ಹೆಚ್ಚಾದರೂ ತಿನ್ನುತ್ತಾರೆ ಈ ಹುಡುಗರು. ಮನೆಗೆ ಮತ್ತೊಮ್ಮೆ ಬರಬೇಕೆಂದು ಆಹ್ವಾನ ಕೊಟ್ಟರು. ನಾನು ತೆಗೆದುಕೊಂಡು ಬಂದಿದ್ದ ಸಾರಿನ ಪುಡಿಯನ್ನು ಇವರಿಗೆ ಕಳಿಸಿಕೊಟ್ಟೆ. ಶ್ರೀಮತಿ ಐಡೆನ್‌ಬೆನ್ಸ್‌ರವರಿಗೆ ಸ್ವಲ್ಪ ಇಂಗ್ಲಿಷ್ ಬರುತ್ತಿತ್ತು. ಅಲ್ಲದೆ ಅವರ ತಂದೆಯವರ ಜೊತೆಗೆ ಇದ್ದಾಗ, ಒಬ್ಬ ಭಾರತೀಯನನ್ನೂ ಸಹ ಗೊತ್ತಿತ್ತಂತೆ.

ಪ್ರೊಫೆಸರ್ ಡಾ|| ಎಕಾರ್ಟ್ ಅವರು ಇಲ್ಲಿಯ ಉಪಾಧ್ಯಾಯರ ಕಾಲೇಜಿನಲ್ಲಿ ಚರಿತ್ರೆಯ ಪ್ರೊಫೆಸರ್. ದೊಡ್ಡ ವಿದ್ವಾಂಸರಾದರೂ ಸರಳಜೀವಿಗಳು. ಎಲ್ಲರನ್ನೂ ನಗುನಗುತ್ತಾ ಮಾತನಾಡಿಸುತ್ತಿದ್ದರು. ಅವರಿಗೆ ಪರಿಚಯವಿಲ್ಲದವರೇ ಇಲ್ಲವೆನ್ನಬಹುದು. ಹಾಗೆಯೇ ನನಗೂ ಅವರ ಪರಿಚಯವಾಯಿತು. ಇವರು ಸೋಷಿಯಲಿಸ್ಟ್ ಪಾರ್ಟಿಯ ಸದಸ್ಯರು. ವಿಚಾರಿಸಿದಲ್ಲಿ ಉಪಾಧ್ಯಾಯರು ರಾಜಕೀಯದಲ್ಲಿ ಭಾಗವಹಿಸಬಹುದು ಎಂದು ತಿಳಿಯಿತು. ಆದರೆ ಅದರಿಂದ ತಮ್ಮ ಕೆಲಸಕ್ಕೆ ಅಡ್ಡಿ ಆಗಬಾರದು, ಅಷ್ಟೆ. "ನಿಮ್ಮ ನೆಹರೂ ಮತ್ತು ಗಾಂಧಿ ಜರ್ಮನಿಯ ಜನರನ್ನು ಆಕರ್ಷಿಸಿದ್ದಾರೆ. ಅಂತಹ ನಾಯಕರು ನಮಗೂ ಬೇಕು. ನಮ್ಮ ದೇಶದಲ್ಲಿ ಅಂತಹ ನಾಯಕರು ಏಕೆ ಹುಟ್ಟುವುದಿಲ್ಲವೋ ತಿಳಿಯದು" ಎಂದು ಅವರು ಹೇಳಿದಾಗ, "ಭಾರತದಂತಹ ವಾತಾವರಣವನ್ನು ಕಲ್ಪಿಸಿದರೆ ಇಲ್ಲಿಯೂ ಅಂತಹ ನಾಯಕರು ಹುಟ್ಟುತ್ತಾರೆ. ಇಲ್ಲಿಯ ಜನರ ಮನಸ್ಸಿನಲ್ಲಿದ್ದಂತೆ ಇಲ್ಲಿ ನಾಯಕರು ಹುಟ್ಟುತ್ತಾರೆ. ನಿಮ್ಮ ಜನ ಯಾವಾಗಲೂ ದುಡಿಯುವುದನ್ನು ಕಂಡಿದ್ದಾರೆಯೇ ಹೊರತು ಇರುವುದರಲ್ಲಿ ತೃಪ್ತಿಪಟ್ಟು ಸುಖವಾಗಿ ಇರುವ ಯೋಚನೆಯೇ ಇಲ್ಲ. ದುಡಿದು ದುಡಿದು ಯುದ್ಧಕ್ಕೆ ಅವಕಾಶ ಕೊಡುತ್ತಿದ್ದೀರಿ. ಮನುಷ್ಯರಾಗಿ ಹೇಗೆ ಬಾಳಬೇಕೆಂಬುದೇ ತಿಳಿಯದು" ಎಂದು ನಾನೆಂದೆ. ಜರ್ಮನಿಯ ಜನರನ್ನು ಟೀಕಿಸಿದೆ. ಆದರೂ ಅವರು ಕೋಪಗೊಳ್ಳದೆ "ಅದು ನಿಜ. ನಮ್ಮ ಜನ

ನೋಡುವುದು ಅಮೆರಿಕಾವನ್ನು. ಆ ದೇಶದ ಜೀವನಮಟ್ಟವನ್ನು ಇಲ್ಲಿ ತರಬೇಕೆಂದು ಇಲ್ಲಿಯ ಜನ ದುಡಿಯುತ್ತಾರೆ. ಎರಡು ಯುದ್ಧಗಳಿಂದಾಗಿ ಎಲ್ಲಾ ಕಳೆದುಕೊಂಡಿದ್ದೇವೆ. ಸುತ್ತಮುತ್ತಲಿನ ದೇಶಗಳು ನಮಗಿಂತ ಉನ್ನತ ಮಟ್ಟದಲ್ಲಿ ಇರುವುದರಿಂದ ಆ ಮಟ್ಟಕ್ಕೆ ನಾವೂ ಬರಬೇಕೆಂದು ಜನ ದುಡಿಯುತ್ತಿದ್ದಾರೆ. ಆದರೆ ಈ ದುಡಿತದ ಆಸೆಯಿಂದ ತಾವು ಮನುಷ್ಯರು ಎಂಬುದನ್ನೇ ಮರೆತಿದ್ದಾರೆ. ಇದನ್ನು ಭಾರತೀಯರಿಂದ ಕಲಿಯಬೇಕು" ಎಂದು ಹೇಳಿದರು.

ಪ್ರೊ. ಡಾ|| ಎಕಾರ್ಟ್‌ರವರು ತಮಗೆ ಬಿಡುವು ಕಡಮೆ ಎಂದು ಅವರ ಪಟ್ಟಶಿಷ್ಯೆಯಾದ ಶ್ರೀಮತಿ ಅಸ್ಮಾನ್‌ರ ಪರಿಚಯ ಮಾಡಿಕೊಟ್ಟರು. ಜರ್ಮನಿಯ ಕುಟುಂಬ ಜೀವನ, ಶಾಲೆಗಳು ಇವುಗಳ ವಿಚಾರವನ್ನು ವಿವರವಾಗಿ ತಿಳಿಸಿಕೊಟ್ಟು ಕೆಲವು ಶಾಲೆಗಳ, ಸತ್ಕುಟುಂಬಗಳ ಪರಿಚಯ ಸಹ ಮಾಡಿಕೊಟ್ಟರು. ಶ್ರೀಮತಿ ಅಸ್ಮಾನ್‌ರಿಗೆ ಇಂಗ್ಲಿಷ್ ಬರುತ್ತದೆ. ಇದಕ್ಕಾಗಿ ಇಂಗ್ಲೆಂಡಿನಲ್ಲಿ ಒಂದು ವರ್ಷಕಾಲ ಅಭ್ಯಾಸಮಾಡಿದ್ದಾರೆ. ಭಾರತದ ವಿಚಾರದಲ್ಲಿ ಬಹಳ ಕುತೂಹಲ. ಚಿಕ್ಕವಯಸ್ಸಿನಿಂದಲೂ ಇಂಡಿಯಾ ದೇಶವೆಂದರೆ ಒಂದು ಕಿನ್ನರ ದೇಶ ಎಂದು ತಿಳಿದಿದ್ದರು. ನಾನು ತೋರಿಸಿದ ಚಿತ್ರಗಳನ್ನು ನೋಡಿ, "ನಮ್ಮ ಕಲೋನಿನ ಚರ್ಚೇ ಪ್ರಪಂಚಕ್ಕೆ ದೊಡ್ಡದೆಂದು ತಿಳಿದಿದ್ದೆ. ನಿಮ್ಮ ದೇಶದ ದೇವಸ್ಥಾನಗಳ ಗೋಪುರಗಳನ್ನು ನೋಡಿದಮೇಲೆ ಈ ಚರ್ಚು ಬಹಳ ಸಣ್ಣದಾಗಿ ಕಾಣುತ್ತದೆ. ಇವು ಬಹಳ ಸ್ವಾರಸ್ಯವಾಗಿವೆ" ಎಂದು ಹೇಳಿ ಮತ್ತೊಂದು ದಿನ ಬರಬೇಕೆಂದು ಆಹ್ವಾನವಿತ್ತರು. ಒಂದು ದಿನ ತನ್ನ ಗೆಳೆಯ-ಗೆಳತಿಯರ ಕೂಟವನ್ನು ಸೇರಿಸಿ, ಎಲ್ಲರಿಗೂ ಟೀ ಏರ್ಪಡಿಸಿ, ಭಾರತದ ಚಿತ್ರಗಳನ್ನು ನೋಡಲು ಅವರಿಗೆ ಅವಕಾಶ ಕಲ್ಪಿಸಿದರು. ಬಂದವರೆಲ್ಲರೂ ಅವರವರ ಮನೆಗೆ ಆಹ್ವಾನ ಕೊಟ್ಟರು. ಎಲ್ಲರ ಮನೆಗೂ ಶ್ರೀಮತಿ ಅಸ್ಮಾನ್ ನನ್ನ ಜೊತೆಗೆ ಬಂದು ತಮಗೆ ಭಾರತದ ಮೇಲಿದ್ದ ವಿಶ್ವಾಸವನ್ನು ತೋರಿಸಿದರು. ತಮ್ಮ ಶಾಲೆಯಲ್ಲೂ ಮಕ್ಕಳಿಗೆಲ್ಲಾ ಭಾರತದ ವಿಚಾರ ಹೇಳಿದ್ದಲ್ಲದೆ, ಚಿತ್ರಗಳನ್ನೆಲ್ಲಾ ತೋರಿಸಿದರು. "ನಾನು ಓದುತ್ತಿದ್ದಾಗ ಹೀಗೆ ಯಾರೂ ಚಿತ್ರ ತಂದು ತೋರಿಸುತ್ತಿರಲಿಲ್ಲ. ನನಗೆ ಭಾರತದ ಬಗ್ಗೆ ಹೆಚ್ಚು ವಿಚಾರ ತಿಳಿಯದು. ಈಗಲಾದರೂ ಹುಡುಗರು ಭಾರತದ ಬಗ್ಗೆ ಹೆಚ್ಚು ತಿಳಿದುಕೊಳ್ಳಲಿ" ಎಂದು ಅವರ ಆಸೆ.

ಶ್ರೀಮತಿ ಅಸ್ಮಾನ್‌ರ ಮೂಲಕ ಪರಿಚಯವಾದ ಕುಟುಂಬಗಳಲ್ಲಿ ಶ್ರೀ ಓಲನ್ ಡೊರೆಫ್‌ರ ಕುಟುಂಬ ಮೊದಲನೆಯದು. ಅವರ ಪಕ್ಕದ ಮನೆ

ಯಲ್ಲಿಯೇ ಇದ್ದಾರೆ. ಶ್ರೀ ಓಲನ್ ಡೋರೆಫ್ ಭಾರತದ ವಿಚಾರ ಚೆನ್ನಾಗಿ ಬಲ್ಲವರು. ಅನೇಕ ಪುಸ್ತಕ ಓದಿದ್ದಾರೆ. ಮನೆಯಲ್ಲಿ ಜರ್ಮನ್ ಭಾಷೆಯ ಗೀತೆ ಇಟ್ಟಿದ್ದಾರೆ. ಇದು ನನ್ನ ಬೈಬಲ್ ಎಂದು ಹೇಳುತ್ತಾರೆ. ಸದಾ ಓದುತ್ತಿರುತ್ತಾರೆ. ಭಾರತಕ್ಕೆ ಸಂಬಂಧಪಟ್ಟ ಅನೇಕ ಪುಸ್ತಕಗಳು ಇವರಲ್ಲಿವೆ. ಭಾರತದ ಸಂಸ್ಕೃತಿಯನ್ನು ಅರಿಯಬೇಕೆಂಬ ಆಸೆ ಹೆಚ್ಚು. ಇವರ ಕುಟುಂಬದವರಿಗೂ ಇದೇ ಹುಚ್ಚು. ಇವರ ಮಗಳು ನರ್ಸರಿಯಲ್ಲಿ ತರಪೇತುಹೊಂದುತ್ತಿದ್ದಾಳೆ. ಇವರಿಗೆ ಭಾರತಕ್ಕೆ ಬರಬೇಕೆಂಬ, ಇಲ್ಲಿ ಕೆಲಸ ಮಾಡಬೇಕೆಂಬ ಆಸೆ.

ಇವರಂತೆಯೇ ಭಾರತವೆಂದರೆ ಒಂದು ಕನಸಿನ ದೇಶ ಎಂಬ ಭಾವನೆ ಇದ್ದವರೆಂದರೆ ಶ್ರೀ ರೋಡನ್‌ಸ್ಟೈನ್ ಕುಟುಂಬ. ಶ್ರೀ ರೋಡನ್‌ಸ್ಟೈನ್ ತಮ್ಮ ಮನೆಗೆ ನೆಂಟರನ್ನು ಊಟಕ್ಕೆ ಕರೆಯುತ್ತಾ ಕರೆಯೋಲೆಯಲ್ಲಿ, ಇಂಡಿಯಾ ದೇಶದ ಮೈಸೂರಿನಿಂದ ಒಬ್ಬ ಭಾರತೀಯ ತಮ್ಮ ಮನೆಗೆ ಬರುವನೆಂದು ಬರೆದಿದ್ದರು. ಮೈಸೂರಿನವನು ಎಂದ ಕೂಡಲೇ ತನ್ನ ಪತ್ನಿಯೊಡನೆ ಬಂದವರು ಶ್ರೀ ವಾರನ್‌ಬೋಲ್ಡ್. ಪರಿಚಯವಾದ ಕೂಡಲೇ "ನಿಮಗೆ ನಂಜನಗೂಡು, ಮೈಸೂರು ಗೊತ್ತೆ?" ಎಂದು ಕೇಳಿದರು. ಇದು ಆಶ್ಚರ್ಯಕರ ಪ್ರಶ್ನೆ! "ನಿಮಗೆ ಹೇಗೆ ಗೊತ್ತು ಈ ಸ್ಥಳ?" ಎಂದು ಕೇಳಿದಾಗ "ನನಗೆ ಯುನೆಸ್ಕೊ ಸ್ಕಾಲರ್‌ಷಿಪ್ ಸಿಕ್ಕಿತ್ತು. ಮೈಸೂರಿಗೆ ವಿಶೇಷ ಶಿಕ್ಷಣಕ್ಕಾಗಿ ಬರಬೇಕಾಗಿತ್ತು. ಆದರೆ ಆ ಸಮಯಕ್ಕೆ ಸರಿಯಾಗಿ ನನ್ನ ಮಕ್ಕಳಿಗೆ ಮೈ ಸರಿಯಾಗಿರಲಿಲ್ಲ. ನನ್ನ ಹೆಂಡತಿ ಸಹ ಅಲ್ಲಿ ಸೆಕೆ, ಬಿಸಿಲು, ಬೇಡ ಎಂದು ಹೇಳಿಬಿಟ್ಟಳು. ಆದಕ್ಕಾಗಿ ಹೋಗಲಿಲ್ಲ. ನೀವು ಮೈಸೂರಿನವರೆಂದು ತಿಳಿದು ಅಲ್ಲಿಯ ವಿಷಯಗಳನ್ನು ತಿಳಿದುಕೊಳ್ಳೋಣವೆಂದು ಬಂದೆ" ಎಂದರು. ಮೈಸೂರಿನ ಹವಾಗುಣ ಒಳ್ಳೆಯದೆಂದೂ, ಅವರು ತಿಳಿದಿರುವಷ್ಟು ಬಿಸಿಲು ಇಲ್ಲವೆಂದೂ ಹೇಳಿದಾಗ ಅವರ ಹೆಂಡತಿ "ನಾನು ಹೇಳಿದ್ದನ್ನು ಕೇಳಿ ಅನ್ಯಾಯವಾಗಿ ಭಾರತಕ್ಕೆ ಬರುವ ಒಳ್ಳೆಯ ಸಮಯವನ್ನು ಕಳೆದುಕೊಂಡೆವು" ಎಂದು ಪರಿತಾಪಪಟ್ಟರು. ಇವರು ಒಬ್ಬ ಉಪಾಧ್ಯಾಯರು. ಚಿತ್ರ ಬರೆಯುವುದನ್ನು ಕಲಿತಿದ್ದಾರೆ.

ಶ್ರೀ ವಾರನ್‌ಬೋಲ್ಡ್ ಅವರ ಮನೆಯ ತುಂಬಾ ಚಿತ್ರಗಳಿವೆ. ಅನೇಕ ಸಂಗೀತದ ಸಾಮಾನುಗಳಿವೆ. ಕೈಯಲ್ಲಿ ಆಡಿಸುವ ಕೈಗೊಂಬೆ ಇಟ್ಟಿದ್ದಾರೆ. "ಇಷ್ಟು ವಿದ್ಯೆ ಕಲಿತು ಏನು ಮಾಡುತ್ತೀರಿ?" ಎಂದು ಕೇಳಿದೆ. "ಎಲ್ಲಾ ವಿದ್ಯೆ ಬರದಿದ್ದರೆ ಉಪಾಧ್ಯಾಯನಾಗಲು ಅರ್ಹತೆ ಇಲ್ಲ. ವಿದ್ಯಾರ್ಥಿಗಳಿಗೆ

ಪಾಠ ಹೇಳಲು ಇವೆಲ್ಲವೂ ಸಾಧಕ" ಎಂದು ಹೇಳಿದರು. ಹೀಗೆ ಇಷ್ಟೊಂದು ಆಸಕ್ತಿ ಇರುವ ಉಪಾಧ್ಯಾಯರ ಸಂಖ್ಯೆ ನಮ್ಮ ದೇಶದಲ್ಲಿ ಎಷ್ಟಿರಬಹುದು!

ಯುದ್ಧ ಕಳೆದ ಮೇಲೆ ಭಾರತೀಯರು ಜರ್ಮನಿಗೆ ಬರುವುದು ಹೆಚ್ಚಾಯಿತು. ಬ್ರೌನ್ಸ್‌ವೈಗ್‌ನಲ್ಲಿ ನಾನೂ ಸೇರಿ ೬ ಜನ ಭಾರತೀಯರಿದ್ದೆವು. ಆರು ಜನರೂ ಒಂದು ಕಡೆ ಸೇರುವುದು ಕಡಮೆ. ಒಬ್ಬೊಬ್ಬರದು ಒಂದೊಂದು ದಾರಿ. ಯುಗೊಸ್ಲಾವಿಯಾದಿಂದ ಬಂದ ಶ್ರೀ ವ್ಲಾಡಿಮಿರ್ ನೋಡುವುದಕ್ಕೆ ಜರ್ಮನರಂತೆ ಕಂಡರೂ, ಭಾಷೆ ಚೆನ್ನಾಗಿ ಬರುತ್ತಿರಲಿಲ್ಲ. ಜರ್ಮನರು ಯುಗೊಸ್ಲಾವಿಯಾವನ್ನು ಆಕ್ರಮಿಸಿದ್ದಾಗ ಜರ್ಮನ್ ಭಾಷೆಯನ್ನು ಎಲ್ಲರೂ ಕಲಿಯಬೇಕಾಗಿತ್ತಂತೆ. ಆದುದರಿಂದ ಅವರಿಗೆ ಸ್ವಲ್ಪ ಜರ್ಮನ್ ಭಾಷೆ ಬರುತ್ತಿತ್ತು. ಆತನ ಮಾತೃಭಾಷೆ ಯುಗೊಸ್ಲಾವಿಯನ್. ಆತ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ. ಬೇಸಗೆಯ ಮೂರು ತಿಂಗಳ ರಜದಲ್ಲಿ ಜರ್ಮನಿಯಲ್ಲಿ ತರಪೇತು ತೆಗೆದುಕೊಳ್ಳಲು ನಾನು ಕೆಲಸಮಾಡುತ್ತಿದ್ದ ಕಾರ್ಖಾನೆಗೆ ಬಂದಿದ್ದ. ಆಗತಾನೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಯುಗೊಸ್ಲಾವಿಯಾದಿಂದ ಹಿಂದಿರುಗಿದ್ದುದರಿಂದ ಇಂಡಿಯಾದ ವಿಚಾರ ಸ್ವಲ್ಪ ಕೇಳಿದ್ದ. ಭಾರತದ ಮಾತು ಬಂದಾಗ ಇಬ್ಬರೂ ಸ್ನೇಹಿತರಾದೆವು. ಭಾರತದ ಚಿತ್ರಗಳನ್ನು ನೋಡಿ ಆತನಿಗೆ ಪರಮಾನಂದವಾಯಿತು. "ನನಗೆ ಚಿಕ್ಕಂದಿನಿಂದಲೂ ಭಾರತ ಒಂದು ಕಾಡುಪ್ರದೇಶವೆಂದೇ ಅಭಿಪ್ರಾಯ. ಮಹಾರಾಜರು ಆನೆಗಳನ್ನು, ಸಿಂಹಗಳನ್ನು ಇಟ್ಟುಕೊಂಡಿದ್ದಾರೆ ಎಂದು ತಿಳಿದಿದ್ದೆ. ಈಗ ನೀವು ತೋರಿಸಿದ ಚಿತ್ರಗಳನ್ನು ನೋಡಿದಮೇಲೆ ಇಂಡಿಯಾ ದೇಶ ಎಷ್ಟು ಮುಂದುವರಿದಿದೆ ಎಂದು ತಿಳಿಯುತ್ತದೆ. ನಿಮ್ಮ ಕೆಲವು ಕಟ್ಟಡಗಳನ್ನು ನೋಡಿದರೆ ದೇವಲೋಕದಂತೆ ಕಾಣುತ್ತವೆ. ನಂಬುವುದಕ್ಕೇ ಆಗುವುದಿಲ್ಲ. ಗಾಂಧೀಜಿಯ ಹೆಸರು ಮಾತ್ರ ಕೇಳಿದ್ದೆ. ಈಗ ಶ್ರೀ ಪಂಡಿತ್ ನೆಹರೂ, ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಹೆಸರು ಕೇಳುತ್ತಿದ್ದೇನೆ" ಎಂದು ಹೇಳಿ, ನಾನು ಕೊಟ್ಟ ಕಾರ್ಡನ್ನು ಆತ ಹೆಂಡತಿಗೆ ಕಳುಹಿಸಿಕೊಟ್ಟ. ನಾಲ್ಕುದಿನಗಳಲ್ಲಿ ಉತ್ತರ ಬಂತು: "ನೀವು ಕಳುಹಿಸಿರುವ ಕಟ್ಟಡದ ಚಿತ್ರ ಈ ಭೂಮಿಯ ಮೇಲಿದೆಯೋ ಅಥವಾ ದೇವಲೋಕದ್ದೋ? ಭಾರತದಲ್ಲಿ ಇಷ್ಟು ಸುಂದರವಾದ ಕಟ್ಟಡವಿದೆ ಎಂದು ಕನಸಿನಲ್ಲೂ ತಿಳಿಯದು. ನಿಮ್ಮ ಭಾರತೀಯ ಮಿತ್ರರಿಗೆ ನನ್ನ ವಂದನೆಗಳನ್ನು ಅರ್ಪಿಸಿ. ಭಾರತ ಇಷ್ಟು ಸುಂದರವಾಗಿದ್ದರೆ ನಾವು ಒಂದು ಸಾರಿ ಅದನ್ನು ನೋಡಲೇಬೇಕು" ಎಂದು ಆತನ ಹೆಂಡತಿ ಉತ್ತರ ಬರೆದಿದ್ದಳು.

೧೨. ಜರ್ಮನಿಯ ಹಬ್ಬಗಳು

ಒಳ್ಳೆಯ ಮಿತ್ರರನ್ನು ಹುಡುಕುವ ಮೊದಲು ನಾವು ಒಳ್ಳೆಯ ಮಿತ್ರರಾಗುವುದು ಅವಶ್ಯಕ.

—ರೂಸೋ

ಜಾತಿಮತಗಳಿಲ್ಲದ ರಾಜ್ಯವೇ ಇಲ್ಲ. ಒಂದಲ್ಲ ಒಂದು ಬಗೆಯಲ್ಲಿ ಇದ್ದೇ ಇರುತ್ತದೆ. ಎಲ್ಲಾ ದೇಶಗಳ ಜನರೂ ಸಾಮಾನ್ಯವಾಗಿ ದೇವರನ್ನು ನಂಬುತ್ತಾರೆ. ಆದರೆ ಅವರವರ ಅನುಕೂಲ ಮತ್ತು ವಾತಾವರಣಕ್ಕೆ ತಕ್ಕಂತೆ ಬೇರೆ ಬೇರೆ ರೀತಿಯಲ್ಲಿ ಈ ಜಾತಿಮತಗಳು ಬೆಳೆಯುತ್ತವೆ. ಯೂರೋಪ್ ದೇಶದಲ್ಲಿ ಕ್ರಿಶ್ಚಿಯನ್ ಮತದವರನ್ನು ಬಿಟ್ಟರೆ ಬೇರೆ ಮತದವರು ತೀರಾ ಕಡಮೆ ; ಇಲ್ಲವೆಂದೇ ಹೇಳಬಹುದು. ಹೊರದೇಶದಿಂದ ಹೋದವರು ಮಾತ್ರ ಬೇರೆ ಮತಕ್ಕೆ ಸೇರಿರಬಹುದು. ನಮ್ಮ ದೇಶದಲ್ಲಿ ಒಂದು ರೀತಿಯ ಆಚಾರ ವಿದ್ದರೆ ಆ ದೇಶಗಳಲ್ಲಿ ಮತ್ತೊಂದು ರೀತಿಯಿರುತ್ತದೆ. ಜರ್ಮನಿಯಲ್ಲಿ ಕ್ಯಾಥೊಲಿಕ್ ಗುಂಪಿಗಿಂತ ಪ್ರಾಟೆಸ್ಟೆಂಟ್ ಗುಂಪೇ ಹೆಚ್ಚು. ಆದರೆ ರೈನ್ ನದಿಯ ಪ್ರದೇಶಗಳಲ್ಲಿ, ದಕ್ಷಿಣ ಜರ್ಮನಿಯಲ್ಲಿ ಕ್ಯಾಥೊಲಿಕ್ ಗುಂಪಿನವರೇ ಹೆಚ್ಚು. ನಮ್ಮ ದೇವಸ್ಥಾನಗಳ ಹಾಗೆ ಎಲ್ಲಿ ನೋಡಿದರೂ ಚರ್ಚುಗಳೇ. ಅನೇಕ ವಿಷಯಗಳಲ್ಲಿ ಭಾರತೀಯರಿಗಿಂತ ಇವರಲ್ಲಿ ಮತಾಂಧರು ಹೆಚ್ಚೆಂದು ಹೇಳಬಹುದು. ಕೆಲವರು ಈ ಮತವನ್ನು ಬಿಟ್ಟರೆ ಪ್ರಪಂಚದಲ್ಲಿ ಬೇರೆ ಮತಗಳಿಲ್ಲವೆಂದೇ ಸಾಧಿಸುತ್ತಾರೆ. ಹೊಸದಾಗಿ ಸಿಕ್ಕಿದರೆ ನೀವು ಕ್ಯಾಥೊಲಿಕ್ಕೋ ಅಥವಾ ಪ್ರಾಟೆಸ್ಟೆಂಟೋ ಎಂದು ಕೇಳುತ್ತಾರೆ. ನಾನು ವಾಸಿಸುತ್ತಿದ್ದ ಮನೆಯ ಸಣ್ಣ ಹುಡುಗಿ ನನ್ನ ಕೊಠಡಿಗೆ ಬಂದಾಗ ಇದೇ ಪ್ರಶ್ನೆ ಕೇಳಿದಳು. ಅನಂತರ ನನ್ನ ಕೊಠಡಿಯಲ್ಲಿದ್ದ ರಾಮದೇವರ ಚಿತ್ರ ನೋಡಿ, "ಇದು ಏನು?" ಎಂದು ಕೇಳಿದಳು. "ದೇವರ ಚಿತ್ರ" ಎಂದು ಹೇಳಿದೆ. "ಕ್ರಿಸ್ತದೇವರನ್ನು ಬಿಟ್ಟರೆ ಪ್ರಪಂಚದಲ್ಲಿ ಬೇರೆ ದೇವರಿಲ್ಲ. ಅದು ಹೇಗೆ ಈ ಚಿತ್ರದಲ್ಲಿ ಇರುವವರು ದೇವರಾಗುತ್ತಾರೆ?" ಎಂದು ವಾದಿಸಲು ಪ್ರಾರಂಭಿಸಿದಳು. ಪ್ರಪಂಚದಲ್ಲಿ ಇರುವವರೆಲ್ಲಾ ಕ್ರಿಶ್ಚಿಯನ್ ಮತಕ್ಕೆ ಸೇರಬೇಕೆಂದು ಕೆಲವರ ವಾದ.

ನಾನು ಕೆಲಸ ಮಾಡುವ ಕಾರ್ಖಾನೆಯಲ್ಲೇ ಕೆಲಸ ಮಾಡುವ ಶ್ರೀ ಕ್ರಾಮೇಯರನ್ನು "ನೀವು ಯಾವ ಗುಂಪಿಗೆ ಸೇರಿದವರು ?" ಎಂದು ಕೇಳಿದಾಗ

ಅವರು ಹೇಳಿದರು : "ನನಗೆ ಜಾತಿಯೇ ಇಲ್ಲ. ದೇವರ ಜಾತಿಗೆ ಸೇರಿದವನು; ಮನುಷ್ಯಜಾತಿಗೆ ಸೇರಿದವನು. ನಾನು ಚರ್ಚಿಗೆ ಹೋಗುವುದಿಲ್ಲ. ದೇವರು ಒಬ್ಬನೇ. ಆತನಲ್ಲಿ ನಂಬಿಕೆ ಇದೆ. ದೇವರಲ್ಲಿ ಹೋಗಬೇಕಾದರೆ ದುಡ್ಡು ಕೊಟ್ಟು ಚರ್ಚುಗಳ ಮೂಲಕ ಹೋಗಬೇಕಾಗಿಲ್ಲ. ನನಗೆ ಯಾವ ಮತವೂ ಇಲ್ಲವೆಂದು ಬರೆದುಕೊಟ್ಟರೆ ತೆರಿಗೆ ಹಾಕುವುದಿಲ್ಲ. ಸತ್ತರೆ ಪಾದರಿ ಮನೆಗೆ ಬರುವುದಿಲ್ಲ. ನಮ್ಮಂತಹವರಿಗೆ ಬೇರೆ ಸ್ಮಶಾನವೂ ಇದೆ. ಅಲ್ಲಿ ಹೂಳುತ್ತಾರೆ. ಇಷ್ಟಾದರೂ ನನ್ನ ಹೆಂಡತಿ ಚರ್ಚಿಗೆ ಸೇರಿದ್ದಾಳೆ. ಆಕೆ ವಾರಕ್ಕೊಮ್ಮೆ ಚರ್ಚಿಗೆ ಹೋಗುತ್ತಾಳೆ. ಅವಳಿಗಾಗಿ ಚರ್ಚಿನ ತೆರಿಗೆ ಕೊಡಬೇಕು" ಎಂದು ಹೇಳಿದರು. ಈ ರೀತಿ ಯಾವ ಜಾತಿಮತಕ್ಕೂ ಸೇರದವರ ಸಂಖ್ಯೆಯೂ ಬಹಳ ಇದೆ. ಅನೇಕ ದೇಶಗಳಲ್ಲಿ ಇಂಥವರು ಇದ್ದಾರೆ.

ಕ್ಷೌರದ ಅಂಗಡಿಯಲ್ಲಿ ಒಂದು ದಿನ ಬಹಳ ಹೊತ್ತು ಕಾಯಬೇಕಾಯಿತು. ಯಜಮಾನನ ಹತ್ತಿರ ಮಾತನಾಡುತ್ತ ಕುಳಿತೆ. ಹೊರಗಡೆ ಬಂದರೆ, "ನಮಸ್ಕಾರ, ನಿಮ್ಮನ್ನು ನೋಡಬೇಕೆಂದು ಕಾದಿದ್ದೆ" ಎಂದು ನನಗೆ ಗೊತ್ತಿಲ್ಲದ ಒಬ್ಬ ವ್ಯಕ್ತಿ ಮಾತನಾಡಿಸಿದ. "ಏನು ಬೇಕಾಗಿತ್ತು ?" ಎಂದೆ. "ನೀವು ಯಾವ ದೇಶದಿಂದ ಬಂದಿದ್ದೀರಿ ? ನಿಮ್ಮ ಜಾತಿ-ಮತ ಯಾವುದು ?" ಎಂದು ಕೇಳಿದ. ಸ್ವಲ್ಪ ಅನುಮಾನ ಬಂದು, "ಇಂಡಿಯಾ ದೇಶದವನು; ಹಿಂದೂ ಮತ. ಇದರಿಂದ ಏನಾಗಬೇಕು ?" ಎಂದು ಕೇಳಿದೆ. "ನಿಮ್ಮ ದೇಶದಲ್ಲಿ ಯಾವ ಮತವೂ ಇಲ್ಲದಿರುವುದರಿಂದ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿ ಒಳ್ಳೆಯವರಾಗಿ" ಎಂದು ಹೇಳತೊಡಗಿದನು. ಆ ದಿನ ಸಂಜೆ ಈ ವಿಚಾರ ಚರ್ಚೆಯಾಗಿ ಕಡೆಗೆ "ನೀವು ದಯವಿಟ್ಟು ಗಾಂಧೀಜಿ, ನೆಹರೂ ಅವರ ಪುಸ್ತಕ ಓದಿ" ಎಂದು ಹೇಳಿ ಕೆಲವು ಪುಸ್ತಕಗಳ ಹೆಸರುಗಳನ್ನು ಕೊಟ್ಟು, ನನ್ನಲ್ಲಿದ್ದ ಶ್ರೀ ಟಾಗೂರ್ ಅವರ 'ಸಾಧನಾ' ಪುಸ್ತಕ ಸಹ ಕೊಟ್ಟೆ. ಆತನ ಹೆಸರು ಹನ್ಸ್‌ಪ್ರಿವ್. ನನ್ನನ್ನು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿಸಬೇಕೆಂದು ಅವನ ಪ್ರಯತ್ನ.

ಮತ್ತೊಮ್ಮೆ ಆತ ಗಾಂಧೀಜಿಯ ಕೆಲವು ಪುಸ್ತಕಗಳನ್ನೂ ಟಾಗೂರ್ ಅವರ ಸಾಧನಾ ಪುಸ್ತಕವನ್ನೂ ಹಿಡಿದುಕೊಂಡು ನನ್ನ ಕೊಠಡಿಗೆ ಬಂದ. "ನೀವು ಕ್ರಿಸ್ತನ ಮಕ್ಕಳಾಗದಿದ್ದರೆ ನಿಮ್ಮ ಪಾಪ ಪರಿಹಾರವಾಗುವುದಿಲ್ಲ. ಕ್ರಿಸ್ತದೇವರು ಹುಟ್ಟಿದಮೇಲೆ ಬೈಬಲ್ ಬಂತು. ಅದೇ ಶ್ರೇಷ್ಠ ಗ್ರಂಥ. ನಿಮಗೆ ದೇವರಲ್ಲಿ ನಂಬಿಕೆ ಇದ್ದರೆ ಕ್ರಿಸ್ತದೇವರನ್ನು ಏಕೆ ನಂಬಬಾರದು ?" ಎಂದು ಉಪದೇಶಿಸತೊಡಗಿದ. "ನಾವು ನಿಮ್ಮ ಕ್ರಿಸ್ತದೇವರನ್ನು ನಂಬುತ್ತೇವೆ. ಎಲ್ಲಾ ದೇವರನ್ನೂ ನಂಬುತ್ತೇವೆ. ಪ್ರಪಂಚದಲ್ಲಿ ಇರುವ ದೇವರು ಒಬ್ಬನೇ.

ಆದರೆ ನಾವು ಕರೆಯುವುದು ಬೇರೆ ಬೇರೆ ಹೆಸರಿನಲ್ಲಿ. ಆಲೂಗೆಡ್ಡೆಗೆ ಕನ್ನಡ ದಲ್ಲಿ ಒಂದು ಹೆಸರು, ಜರ್ಮನಿಯಲ್ಲಿ ಇನ್ನೊಂದು ಹೆಸರು, ಇಂಗ್ಲಿಷಿನಲ್ಲಿ ಮತ್ತೊಂದು ಹೆಸರು. ಎಲ್ಲರೂ ಹೇಳುವುದು ಆಲೂಗೆಡ್ಡೆಯನ್ನೇ. ನೀವು ದೇವರನ್ನು ಜರ್ಮನ್‌ಭಾಷೆಯಲ್ಲಿ ಪ್ರಾರ್ಥಿಸಿದರೆ, ನಾನು ಕನ್ನಡದಲ್ಲಿ ಪ್ರಾರ್ಥಿ ಸುತ್ತೇನೆ. ಒಟ್ಟಿನಲ್ಲಿ ಯಾವ ವ್ಯತ್ಯಾಸವೂ ಇಲ್ಲ. ನೀವು ನನ್ನನ್ನು ಜರ್ಮನ್ ಭಾಷೆಯಲ್ಲೇ ದೇವರನ್ನು ಪ್ರಾರ್ಥಿಸಬೇಕೆಂದು ಹೇಳಿದರೆ, ಅದು ಹೇಗೆ ಸಾಧ್ಯ? ಪ್ರಪಂಚದಲ್ಲೆಲ್ಲಾ ಒಂದೇ ಭಾಷೆ ಏಕೆ ಇರಬಾರದು ? ನೀವು ಇಲ್ಲಿ ಚಳಿಗೆ ಬೆಚ್ಚಗೆ ಕೋಟು ಹಾಕಿದ್ದೀರಿ. ಆದರೆ ಇಂಡಿಯಾದಲ್ಲಿ ಸೆಕೆಗೆ ಬಟ್ಟೆಯೇ ಬೇಕಾಗಿಲ್ಲ. ನಿಮಗೆ ಕಮ್ಯೂನಿಸ್ಟರನ್ನು ಕಂಡರೆ ಆಗುವುದಿಲ್ಲ. ಪ್ರಪಂಚದಲ್ಲಿ ಎಲ್ಲಾ ಕಡೆ ಕಮ್ಯೂನಿಸಂ ಹರಡಬೇಕೆಂದು ಅವರು ಪ್ರಚಾರ ಮಾಡುತ್ತಾರೆ. ಅವರಿಗೂ ನಿಮಗೂ ಏನು ವ್ಯತ್ಯಾಸ? ಅವರವರು ಸುಖವಾಗಿರಲು ನೆರವಾಗ ಬೇಕು. ಎಲ್ಲರೂ ಅವರವರ ಧರ್ಮ ಆಚರಿಸಬೇಕು. ಇದಕ್ಕಾಗಿ ಕ್ರಿಶ್ಚಿಯನ್ ಏತಕ್ಕೆ ಆಗಬೇಕು?" ಎಂದು ಕೇಳಿದೆ. "ನಮ್ಮ ಬೈಬಲ್‌ನಲ್ಲಿ ಹೇಳಿದ್ದಾರೆ: ಪ್ರಪಂಚದ ಜನರೆಲ್ಲರೂ ಅಣ್ಣತಮ್ಮಂದಿರು. ನಿಮ್ಮ ನೆರೆಹೊರೆಯ ತಮ್ಮ ದಾರಿ ತಪ್ಪಿದರೆ ನಿಮ್ಮ ದಾರಿಗೆ ತರಬೇಕು. ಅದಕ್ಕೇ ನಿಮಗೆ ಹೇಳುತ್ತಿದ್ದೇನೆ: ಬೈಬಲ್‌ನಲ್ಲಿ ಹೇಳಿರುವಂತೆ ಎಲ್ಲರೂ ದೇವರ ಮಕ್ಕಳಾಗಬೇಕು. ಇದಕ್ಕೇ ಕ್ರೈಸ್ತನನ್ನು ನಂಬಬೇಕು. ಇದು ಕ್ರೈಸ್ತ ಮತದಲ್ಲಿ ಸೇರಿದರೆ ಮಾತ್ರ ಸಾಧ್ಯ. ನಿಮ್ಮನ್ನು ಕ್ರಿಸ್ತಾನರನ್ನಾಗಿ ಮಾಡಿ ಒಳ್ಳೆಯವರನ್ನಾಗಿ ಮಾಡುವುದು ನನ್ನ ಧರ್ಮ." ಕ್ರೈಸ್ತರಾದವರೆಲ್ಲರೂ ಒಳ್ಳೆಯವರಾಗಿ ದೇವರ ಮಕ್ಕಳಾಗಿದ್ದರೆ ಯೂರೋಪಿನಲ್ಲಿ ಏಕೆ ಯುದ್ಧವಾಗುತ್ತಲೇ ಇದೆ? ಆತ ಬೈಬಲ್ ಅಲ್ಲದೆ ಬೇರೆ ಪುಸ್ತಕ ಓದಿಲ್ಲ. ನಾನು ಹೇಳಿದೆ: "ನಿಮ್ಮ ದೃಷ್ಟಿಯನ್ನು ವಿಶಾಲಗೊಳಿಸಿ, ಎಲ್ಲಾ ಪುಸ್ತಕಗಳನ್ನೂ ಓದಿ, ನಿಮ್ಮ ನೆರೆಹೊರೆಯ ಕ್ರಿಸ್ತ ಅಣ್ಣತಮ್ಮಂದಿ ರನ್ನು ಒಳ್ಳೆಯವರನ್ನಾಗಿ ಮಾಡಿ. ನೀವು ನಿಮ್ಮ ಧರ್ಮವನ್ನು ನಡೆಸುತ್ತಾ ಒಳ್ಳೆಯ ಕ್ರಿಶ್ಚನ್ ಆಗಿ. ನಾನು ನನ್ನ ಧರ್ಮವನ್ನು ನಡೆಸಿ ಒಳ್ಳೆಯ ಹಿಂದೂ ಆಗುತ್ತೇನೆ. ನಿಮ್ಮನ್ನು ನನ್ನ ಧರ್ಮಕ್ಕೆ ಬದಲಾಯಿಸಬೇಕೆಂಬ ಆಸೆ ನನಗೆ ಇಲ್ಲ" ಎಂದು ಹೇಳಿದಮೇಲೆ ನನ್ನ ಕೊಠಡಿ ಬಿಟ್ಟು ಹೊರಟುಹೋದವನು ಪುನಃ ನನ್ನನ್ನು ನೋಡಲಿಲ್ಲ. ಈ ವಿಚಾರವನ್ನು ನನ್ನ ಕೆಲವು ಸ್ನೇಹಿತರಿಗೆ ಹೇಳಿದೆ. "ಇದು ಶುದ್ಧ ತಪ್ಪು. ಅವರವರ ಧರ್ಮವನ್ನು ಅವರವರು ಅನು ಸರಿಸಲು ಯಾರದೇಕೆ ಅಡ್ಡಿ ?" ಎಂದು ಅನೇಕರು ಹೇಳಿದರು. ಅನೇಕ ಬಾರಿ ಚರ್ಚಿನವರು ಪ್ರಕಟಿಸುವ ಪತ್ರಿಕೆಗಳಲ್ಲಿ ಭಾರತದ ಬಡತನ, ಅಶುಚಿಗಳ

ಮೇಲೆ ಭಾರತದಿಂದ ಬಂದ ಪತ್ರಗಳನ್ನು ಪ್ರಕಟಿಸಿರುವುದನ್ನು ನೋಡಿದ್ದೇನೆ.

ಶಾಲೆಯಲ್ಲಿ ಕ್ರಿಸ್ತಧರ್ಮವನ್ನು ಒಂದು ವಿಷಯವಾಗಿ ಪಾಠ ಹೇಳುತ್ತಾರೆ. ಅಲ್ಲದೆ ಈ ಚರ್ಚುಗಳು ವಿದ್ಯಾಭ್ಯಾಸದಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಜರ್ಮನಿಯ ಕಾರ್ನಿವಾಲ್ ಹಬ್ಬ ಪ್ರಪಂಚದಲ್ಲೇ ಪ್ರಸಿದ್ಧ. ಇದು ಕ್ರಿಸ್ಮಸ್ ಆದನಂತರ ಬರುವ ಹಬ್ಬ. ಕ್ರಿಸ್ತದೇವರು ಹುಟ್ಟಿದ ಸಂತೋಷ ಕ್ಕಾಗಿ ಇದನ್ನು ಆಚರಿಸುವುದು ರೂಢಿ ಎಂದು ಕೆಲವರು ಹೇಳುತ್ತಾರೆ. ಆದರೆ ದೇವರಿಗಿಂತ ಮಿಕ್ಕ ವಿಷಯಗಳಿಗೇ ಇಲ್ಲಿ ಹೆಚ್ಚು ಪ್ರಾಮುಖ್ಯತೆ. ಈ ಕಾರ್ನಿವಾಲ್ ಬೂದಿ-ಬುಧವಾರದ ದಿನ ಕೊನೆಯಾಗುತ್ತದೆ. ಸುಮಾರು ಒಂದು ಒಂದೂವರೆ ತಿಂಗಳು ಈ ಹಬ್ಬದ ಸಡಗರ. ಪ್ರತಿದಿನ ರಾತ್ರಿ ನೃತ್ಯ ಮತ್ತು ಕುಡಿತ.

ಬೂದಿ-ಬುಧವಾರದ ಹಿಂದಿನ ಶನಿವಾರ, ಭಾನುವಾರ, ಸೋಮವಾರ ಮತ್ತು ಮಂಗಳವಾರ ಈ ಕುಣಿತ, ಕುಡಿತಗಳು ಕೊನೆಯ ಅಂತಸ್ತನ್ನು ಮುಟ್ಟುತ್ತವೆ. ಆ ಕುಣಿತದ ಕಾಲದಲ್ಲಿ ಯಾರನ್ನಾದರೂ ಚುಂಬಿಸ ಬಹುದು. ಯಾರ ಜೊತೆಯಲ್ಲಾದರೂ ಕುಣಿಯಬಹುದು. ಕಲೋನ್ ಮತ್ತು ಡುಸಲ್‌ಡಾರ್ಫ್‌ಗಳಲ್ಲಿ ೩–೪ ಕಿ.ಮೀ. ಉದ್ದದ, ಬೇರೆ ಬೇರೆ ವೇಷ ಗಳನ್ನು ಹಾಕಿಕೊಂಡು ಕುಣಿಯುತ್ತಾ ಹೋಗುವ, ಮೆರವಣಿಗೆ ನಡೆಯು ತ್ತದೆ. ಅದರಲ್ಲಿ ಕಾರ್ನಿವಾಲ್ ರಾಜರಾಣಿಯರು ಅಲಂಕರಿಸಿದ ಕಾರು, ಗಾಡಿಗಳಲ್ಲಿ ಕುಳಿತು ದಾರಿಯುದ್ದಕ್ಕೂ ಚಾಕಲೇಟು, ಪೆಪ್ಪರಮೆಂಟ್ ಗಳನ್ನು ಎಸೆಯುತ್ತಾ ಹೋಗುತ್ತಾರೆ. ಮನಸ್ಸಿಗೆ ಬಂದಂತೆ ಕುಣಿಯುತ್ತಾರೆ. ಸಾಮಾನ್ಯವಾಗಿ ಇಂಥವರು ಸಾಹುಕಾರರೇ ಆಗಿರುತ್ತಾರೆ. ಇದಕ್ಕಾಗಿ ಸುಮಾರು ೧೦–೧೫ ಸಾವಿರ ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಈ ಮೆರವಣಿಗೆಗಳನ್ನು ನೋಡಲು ಅನೇಕ ದೇಶಗಳಿಂದ ಜನ ಬರುತ್ತಾರೆ. ಬೂದಿ-ಬುಧವಾರ ಬಂದೊಡನೆಯೇ ಎಲ್ಲವೂ ನಿಲ್ಲುತ್ತದೆ. ಕಾರ್ನಿವಾಲ್ ಮುಗಿಯುತ್ತದೆ. ೩–೪ ದಿನ ಅನೇಕರು ಕುಡಿತದಲ್ಲಿ ಮೈಮರೆತು ಮೇಲೆ ಏಳುವುದೇ ಇಲ್ಲ. ಈ ಆನಂದದ ಭರದಲ್ಲಿ ದುಡ್ಡಿನ ಚೀಲ ಖಾಲಿಯಾಗಿರು ವುದು ಆಮೇಲೆ ಅರಿವಾಗುತ್ತದೆ.

ಇದಾದನಂತರದ ಗುರುವಾರ ಹುಡುಗರು ಮನೆಮನೆಗೂ ಹಾಡುತ್ತಾ ಹೋಗುತ್ತಾರೆ. ಆ ದಿನ ಎಲ್ಲರೂ ಹಣ್ಣು, ಮೊಟ್ಟೆ ಮೊದಲಾದುವನ್ನು ಹುಡುಗರಿಗೆ ಕೊಡುತ್ತಾರೆ. ಮಾರನೇ ಭಾನುವಾರ ಹುಡುಗರಿಗಾಗಿ ಒಂದು

ಸಂತೆ ನಡೆಯುತ್ತದೆ. ಅಲ್ಲಿ ಹಣ್ಣು ಹಂಪಲು, ಹುಡುಗರಿಗೆ ಬೇಕಾದ ಸಾಮಾನು ಮಾರುತ್ತಾರೆ. ಅಂದು ಹುಡುಗರ ದಿನ. ದೊಡ್ಡವರು ಕಾರ್ನಿವಾಲ್‌ನಲ್ಲಿ ಆನಂದಪಟ್ಟ ಹಾಗೆ ಹುಡುಗರು ಈ ಸಂತೆಯಲ್ಲಿ ಆನಂದಪಡುತ್ತಾರೆ. ಈಸ್ಟರ್ ರಜಾ ದಿನಗಳಲ್ಲಿ ಎಲ್ಲರ ಮನೆಗಳ ಕಿಟಕಿಗಳಲ್ಲೂ ಮೇಣದ ಬತ್ತಿ ಹಚ್ಚಿ ಇಡುತ್ತಾರೆ. ವಸಂತಋತು ಪ್ರಾರಂಭಕ್ಕೆ, ಹಿಂದಿನ ಪದ್ಧತಿಯಂತೆ ಈಸ್ಟರ್ ಚಕ್ರ ಮಾಡಿ, ಅದಕ್ಕೆ ಎಲೆ ಸುತ್ತಿ, ಬೆಂಕಿ ಹತ್ತಿಸಿ, ಬೆಟ್ಟಗಳಿಂದ ಉರುಳಿಸುತ್ತಾರೆ. ಆ ದಿನ ಮೊಲ ಮೊಟ್ಟೆ ಇಡುತ್ತದೆ ಎಂದು ಮಕ್ಕಳಿಗೆ ಬಣ್ಣಬಣ್ಣದ ಮೊಟ್ಟೆಗಳನ್ನು ಕೊಡುತ್ತಾರೆ. ಮಕ್ಕಳು ಮೊಲ ಮೊಟ್ಟೆ ಇಟ್ಟಿತು ಎಂದು ತಿಳಿದುಕೊಳ್ಳುತ್ತಾರೆ.

ಪ್ರತಿವರ್ಷ ಮೇ ತಿಂಗಳ ಎರಡನೇ ಭಾನುವಾರ ಜರ್ಮನಿಯ ತಾಯಂದಿರಿಗೆ ದೊಡ್ಡ ಗೌರವ ಸಲ್ಲುತ್ತದೆ. ವರ್ಷವೆಲ್ಲಾ ಮನೆಗಾಗಿ, ಕುಟುಂಬಕ್ಕಾಗಿ, ಮಕ್ಕಳಿಗಾಗಿ ದುಡಿದ ತಾಯಿಗೆ ಗೌರವ ಕೊಡಲು ತಾಯಂದಿರ ದಿನಾಚರಣೆ ಮಾಡುತ್ತಾರೆ. ಆ ದಿನ ಮಕ್ಕಳು ತಾಯಂದಿರಿಗೆ ಹೂವು, ಚಾಕಲೇಟು ಮತ್ತು ಇತರ ಅನೇಕ ತರದ ಬಹುಮಾನಗಳನ್ನು ಕೊಡುತ್ತಾರೆ. ಬೇರೆ ಊರಿನಲ್ಲಿದ್ದರೆ ಬಹುಮಾನಗಳನ್ನು ಅಂಚೆ ಮೂಲಕ ಕಳುಹಿಸಿಕೊಡುತ್ತಾರೆ. ನಾನಿದ್ದ ಕುಟುಂಬದ ಯಜಮಾನಿಯನ್ನು ತಾಯಿ ಎನ್ನುತ್ತಿದ್ದೆ. ನಾನೂ ಆಕೆಗೆ ಹೂ, ಚಾಕಲೇಟು ತಂದುಕೊಟ್ಟೆ. ಆಕೆಯ ಸಂತೋಷಕ್ಕೆ ಮಿತಿಯೇ ಇಲ್ಲ. ಹೊರದೇಶದವನೂ ಸಹ ಇಷ್ಟು ಮರ್ಯಾದೆ ಮಾಡುತ್ತಾನಲ್ಲ— ಎಂಬುದೇ ಆಕೆಗೆ ಆನಂದ.

ಕ್ರೈಸ್ತದೇವರು ಸ್ವರ್ಗ ಸೇರಿದ ದಿನವನ್ನು ದೊಡ್ಡ ಹಬ್ಬವನ್ನಾಗಿ ಆಚರಿಸುತ್ತಾರೆ. ಆ ದಿನವನ್ನು ತಂದೆಯ ದಿನ ಅಥವಾ ಸ್ವರ್ಗಕ್ಕೆ ಹೋದ ದಿನ ಎಂದು ಕರೆಯುತ್ತಾರೆ. ಎಲ್ಲಿಗೇ ಹೋಗಲಿ, ಯಾವಾಗಲೂ ದಂಪತಿಗಳು ಒಟ್ಟಿಗೆ ಹೋಗುತ್ತಾರೆ. ಆದರೆ ಈ ದಿನ ಗಂಡಸರು ಮಾತ್ರ ಹೊರಗೆ ಹೋಗಿ, ಚೆನ್ನಾಗಿ ಕುಡಿದು ತಿಂದು ಬರುತ್ತಾರೆ. ಅವರಿಗೆ ಆ ದಿನ ಸ್ವಾತಂತ್ರ್ಯ. ಹೆಂಗಸರು ಕೇಳುವ ಹಾಗಿಲ್ಲ.

ಸೆಪ್ಟೆಂಬರ್ ೨೯ನೇ ತಾರೀಕು ಅಥವಾ ಅದರ ಮುಂದೆ ಬರುವ ಭಾನುವಾರ ನಮ್ಮಲ್ಲಿಯ ಸಂಕ್ರಾಂತಿಯ ಹಾಗೆ ಒಂದು ಹಬ್ಬ ಆಚರಿಸುತ್ತಾರೆ. ವರ್ಷಕ್ಕೆ ಆಗುವಷ್ಟು ದವಸ ಬೆಳೆದು, ಅದನ್ನು ಬೆಳೆಸಿದ ದೇವರಿಗೆ ವಂದನೆಗಳನ್ನು ಕೊಡುವ ಹಬ್ಬ. ಆ ದಿನ ರೈತರು ಒಳ್ಳೆಯ ಬಟ್ಟೆ ಉಟ್ಟು, ಚರ್ಚುಗಳಿಗೆ ಹೋಗಿ ದೇವರನ್ನು ಪ್ರಾರ್ಥಿಸುತ್ತಾರೆ. ಎಲ್ಲಾ ಚರ್ಚುಗಳಲ್ಲೂ ಈ ಹಬ್ಬ

ಆಚರಿಸುತ್ತಾರೆ. ಹಸುಗಳನ್ನು ಅಲಂಕರಿಸಿ ಹಳ್ಳಿಗಳಲ್ಲಿ ಮೆರವಣಿಗೆ ಮಾಡುತ್ತಾರೆ. ಅಕ್ಟೋಬರ್ ೩೧ ಮಾರ್ಟಿನ್ ಲೂಥರ್ ಕ್ಯಾಥೊಲಿಕ್ಕರ ವಿರುದ್ಧ ಪ್ರಾಟೆಸ್ಟೆಂಟ್ ಮತವನ್ನು ಸ್ಥಾಪಿಸಿದ ದಿನ. ಆ ದಿನ ಆ ಪಂಗಡದವರಿಗೆ ಮಾತ್ರ ಆ ಹಬ್ಬ.

ಪ್ರತಿವರ್ಷ ನವೆಂಬರ್ ೨ನೇ ತಾರೀಕು 'ಆಲ್ ಸೋಲ್ಸ್ ಡೇ' ಆಚರಿಸುತ್ತಾರೆ. ಆ ದಿನ ಪ್ರತಿ ಕ್ಯಾಥೊಲಿಕ್ ಕ್ರಿಶ್ಚಿಯನ್ನನೂ ತನ್ನ ಹಿರಿಯರ ಸಮಾಧಿಗೆ ಭೇಟಿ ಕೊಟ್ಟು ಅಲ್ಲಿ ಮೇಣದ ಬತ್ತಿ ಹಚ್ಚಿಟ್ಟು ಬರುತ್ತಾನೆ. ಸತ್ತವರ ಆತ್ಮ ಆ ದಿನ ದೇವಲೋಕದಿಂದ ಇಳಿದುಬರುತ್ತದೆ ಎಂಬ ನಂಬಿಕೆ ಈಗಲೂ ಅವರಲ್ಲಿದೆ. ಇವರಂತೆಯೇ ಪ್ರಾಟೆಸ್ಟೆಂಟ್ ಕ್ರಿಶ್ಚಿಯನ್ನರೂ ಒಂದು ಭಾನುವಾರ ಅವರ ಸಂಬಂಧಿಗಳ ಸಮಾಧಿಗೆ ಹೋಗಿ, ಅಲ್ಲಿ ಹೂವಿನ ಅಲಂಕಾರ ಮಾಡಿ, ಅವರನ್ನು ಜ್ಞಾಪಿಸಿಕೊಳ್ಳುತ್ತಾರೆ. ಚರ್ಚುಗಳಲ್ಲಿ ವಿಶೇಷ ಪೂಜೆ ನಡೆಸುತ್ತಾರೆ. ಆ ದಿನ ಎಲ್ಲರೂ ದುಃಖ ಸೂಚಿಸಲು ಕಪ್ಪು ಬಟ್ಟೆ ಹಾಕಿ ಮೌನ ಆಚರಿಸುತ್ತಾರೆ. ಇದನ್ನು ನಮ್ಮ ಮಹಾಲಯ ಅಮಾವಾಸ್ಯೆಗೆ ಹೋಲಿಸಬಹುದು. ಅದೇ ವೇಳೆಯಲ್ಲಿ ಇದೂ ಬರುತ್ತದೆ. ಆ ಕಾಲದಲ್ಲಿ ನಮ್ಮಲ್ಲಿಯೂ ಸಹ ಹಿರಿಯರಿಗೆ ತರ್ಪಣ ಬಿಡುತ್ತೇವೆ. ಹಳ್ಳಿಗಳಲ್ಲಿ ಹಿರಿಯರಿಗೆ ಎಡೆ ಇಡುವುದು ಎಂದು ಹೇಳುತ್ತಾರೆ.

ನಮ್ಮ ಆಯುಧಪೂಜೆಯಂತಹ ಹಬ್ಬ ಜರ್ಮನಿಯಲ್ಲಿಯೂ ಒಂದಿದೆ. ಅದು ಬಂದೂಕದಿಂದ ಹೊಡೆಯುವ ಸ್ಪರ್ಧೆ. ಅವರದೇ ಒಂದು ಸಂಘವಿದೆ. ಯಾರು ಮೊದಲು ಬರುತ್ತಾರೋ ಅವರು ಆ ಸಂಘದ ರಾಜ. ಆ ರಾಜನಿಗೆ ಊರಿನಲ್ಲೆಲ್ಲಾ ಮೆರವಣಿಗೆ. ಮೂರು ದಿನ ದೊಡ್ಡ ಹಬ್ಬ. ಒಂದು ದೊಡ್ಡ ಮೇಳವನ್ನೇ ನಡೆಸುತ್ತಾರೆ. ಆ ಮೂರು ದಿನ ತಮಾಷೆ. ರಾಜನಾದವನು ತನ್ನ ಸಂಘದ ಸದಸ್ಯರೆಲ್ಲರಿಗೂ ಮಾದಕ ಪಾನ ಕೊಡಲು ಸಾವಿರಾರು ರೂಪಾಯಿ ಸುರಿಯುತ್ತಾನೆ.

ಡಿಸೆಂಬರ್ ೬ನೇ ತಾರೀಕು ಸೈಂಟ್ ನಿಕೊಲೊಸ್ ಬಂದು ಮಕ್ಕಳಿಗೆ ಉಡುಗೊರೆ ಕೊಡುತ್ತಾನೆ ಎಂದು ಹುಡುಗರು ತಮ್ಮ ಷೂ ಬೂಟ್ಸುಗಳನ್ನು ಶುಭ್ರಮಾಡಿ ಬಾಗಿಲ ಹೊರಗಡೆ ಇಟ್ಟಿರುತ್ತಾರೆ. ತಂದೆತಾಯಂದಿರು ಅದರಲ್ಲಿ ಪೆಪ್ಪರ್‌ಮೆಂಟ್–ಚಾಕಲೇಟು ಹಾಕುತ್ತಾರೆ. ಬೆಳಗ್ಗೆ ಹುಡುಗರು ಎದ್ದು ನೋಡಿ ಸಂತೋಷದಿಂದ ತೆಗೆದುಕೊಂಡು ಸೈಂಟ್ ನಿಕೊಲೊಸ್ ಬಂದು ಬಹುಮಾನ ಕೊಟ್ಟ ಎಂದು ತಿಳಿಯುತ್ತಾರೆ. ಕೆಟ್ಟ ಹುಡುಗರಿಗೆ ತಿಂಡಿಯ ಬದಲು ಕೋಲು ಸಿಗುತ್ತದೆ ಎಂಬ ಹೆದರಿಕೆ ಇರುತ್ತದೆ. ಹಬ್ಬಕ್ಕೆ ಆ ದಿನ

ಮುಂಚಿತವಾಗಿಯೇ ಕ್ರಿಸ್ಮಸ್-ಗಿಡಗಳ ಕೊಂಬೆಗಳು ಮಾರಾಟಕ್ಕೆ ಬರುತ್ತವೆ. ಅವುಗಳಿಗೆ ೨ ರೂಪಾಯಿಯಿಂದ ಹಿಡಿದು ೨೦ ರೂಪಾಯಿಗಳವರೆಗೂ ಬೆಲೆ. ನಮ್ಮ ಹಬ್ಬಗಳಲ್ಲಿ ಬಾಳೆಗಿಡ, ಮಾವಿನಸೊಪ್ಪು, ಬೇವಿನಸೊಪ್ಪು ಮಾರುವ ಹಾಗೆಯೇ. ಆ ಕ್ರಿಸ್ಮಸ್-ಗಿಡಗಳನ್ನು ಕೊಂಡು ಅಲಂಕಾರ ಮಾಡುತ್ತಾರೆ; ೨೪ ಮೇಣದ ಬತ್ತಿ ಕಟ್ಟುತ್ತಾರೆ. ಕೊನೆಯ ಎರಡು ದಿನ ಎಲ್ಲರೂ ಉಡುಗೊರೆ ಕಟ್ಟಿ ಮುಚ್ಚಿ ಇಟ್ಟಿರುತ್ತಾರೆ.

ಕ್ರಿಸ್ಮಸ್ ಹಬ್ಬದ ದಿನ ಬೆಳಗ್ಗೆಯಿಂದ ಮನೆಯನ್ನೆಲ್ಲಾ ಅಲಂಕರಿಸುತ್ತಾರೆ. ಸಂಜೆ ಹೆಚ್ಚು ಊಟವಿಲ್ಲದೆ ಕ್ರಿಸ್ಮಸ್ ಮರವನ್ನು ಅಲಂಕರಿಸುತ್ತಾರೆ. ಅದರ ಸುತ್ತಲೂ ಎಲ್ಲಾ ಉಡುಗೊರೆ ಮೇಲೂ ಹೆಸರು ಬರೆದಿರುತ್ತದೆ. ಕ್ರಿಸ್ಮಸ್ ದಿನ ವೇಷ ಧರಿಸಿ ಬಂದು ಒಬ್ಬ ಆ ಉಡುಗೊರೆಗಳನ್ನು ಕೊಡುತ್ತಾನೆ. ಗಿಡಕ್ಕೆ ಕಟ್ಟಿರುವ ಮೇಣದ ಬತ್ತಿ ಹಚ್ಚಿ ಹಾಡುತ್ತಾರೆ. ಆಗ ಎಲೆಕ್ಟ್ರಿಕ್ ದೀಪ ಆರಿಸಿಬಿಡುತ್ತಾರೆ. ಉಡುಗೊರೆ ಪೆಟ್ಟಿಗೆ ತೆಗೆಯುವ ಸಡಗರವನ್ನು ನೋಡಬೇಕು. ಹುಡುಗರಂತೂ ತಮಗೆ ಏನೇನು ಬಂದಿದೆ ಎಂದು ಎಲ್ಲವನ್ನೂ ಕಿತ್ತು ಒದರುತ್ತಾರೆ. ಇದೆಲ್ಲಾ ಮುಗಿಯುವ ಹೊತ್ತಿಗೆ ರಾತ್ರಿ ಹನ್ನೆರಡು ಗಂಟೆ. ಆಗ ಚರ್ಚಿನ ಪ್ರಾರ್ಥನೆ ಸುಮಾರು ೨-೩ ಗಂಟೆ ಕಾಲ ನಡೆಯುತ್ತದೆ.

ನಾನಿದ್ದ ಮನೆಯ ಯಜಮಾನಿ ಶ್ರೀಮತಿ ಕಾರ್ಡಿ ಕ್ರಿಸ್ಮಸ್ ಹಬ್ಬಕ್ಕೆ ೩ ದಿನ ಅವರ ಜೊತೆಯಲ್ಲೇ ಇರಬೇಕೆಂದು ಹೇಳಿದರು. ನನ್ನ ಕೊಠಡಿಯಲ್ಲೇ ಕ್ರಿಸ್ಮಸ್ ಗಿಡ ಇಟ್ಟು ಹಬ್ಬವನ್ನು ಆಚರಿಸಿದರು. ನಾನೂ ಅವರ ಇಬ್ಬರು ಮಕ್ಕಳಿಗೂ, ಆಕೆಗೂ ಉಡುಗೊರೆ ತಂದುಕೊಟ್ಟೆ. ನನಗೂ ಆ ಮೂವರೂ ಉಡುಗೊರೆ ಕೊಟ್ಟರು. ಉದುಬತ್ತಿಯ ವಾಸನೆ ಅವರಿಗೆ ಆಶ್ಚರ್ಯವನ್ನುಂಟು ಮಾಡಿತು. ಅವರ ಹಬ್ಬಕ್ಕೆ ಒಂದು ಸೊಬಗು ಕೊಟ್ಟಿತು. ರಾತ್ರಿ ೧೨ ಗಂಟೆ ಪ್ರಾರ್ಥನೆಗೆ ಅವರ ಜೊತೆಯಲ್ಲಿ ಚರ್ಚಿಗೆ ಹೋಗಿದ್ದೆ. ಕ್ರಿಸ್ತದೇವರು ಹುಟ್ಟಿದ್ದನ್ನು ಚರ್ಚಿನ ಗುರುಗಳು ಹೇಳಿದಮೇಲೆ ಎಲ್ಲರೂ ಹಾಡುತ್ತಾರೆ. ಸುಮಾರು ೨-೩ ಗಂಟೆ ಕಾಲ ಪ್ರಾರ್ಥನಾ ಸಮಾರಂಭ ನಡೆಯುತ್ತದೆ. ದೇವರಿಟ್ಟ ಸ್ಥಳವನ್ನು ಪೂರ್ತಿ ಅಲಂಕರಿಸುತ್ತಾರೆ. ನಮ್ಮಲ್ಲಿ ಅಭಿಷೇಕ, ಕುಂಕುಮಾರ್ಚನೆ ನಡೆಯುವಂತೆ ಅನೇಕ ತರದ ಬೇರೆಬೇರೆ ಪೂಜೆಗಳೇ ನಡೆಯುತ್ತವೆ. ಎಲ್ಲರೂ ಒಟ್ಟಿಗೆ ಸೇರಿ ಹಾಡುತ್ತಾರೆ. ಪುನಃ ಮನೆಗೆ ಬಂದ ಮೇಲೆ ಹುಡುಗರು ಮಲಗುವ ಬದಲು ತಮಗೆ ಉಡುಗೊರೆಯಾಗಿ ಬಂದ ಪುಸ್ತಕ ಓದಲು ಪ್ರಾರಂಭಿಸುತ್ತಾರೆ.

ಡಿಸೆಂಬರ್ ೩೧ನೇ ತಾರೀಕಿನವರೆಗೆ ಈ ಕ್ರಿಸ್ಮಸ್ ಹಬ್ಬ. ಅವತ್ತು ರಾತ್ರಿ

೧೨ ಗಂಟೆಗೆ ಹೊಸ ವರ್ಷ ಹುಟ್ಟುತ್ತದೆ. ಹೋಟೇಲುಗಳಲ್ಲಿ ಜನ ತುಂಬಿರುತ್ತಾರೆ. ಎಲ್ಲೆಲ್ಲೂ ಗಲಾಟೆ. ಕುಡಿತಕ್ಕೆ ಆ ದಿನ ಮಿತಿಯೇ ಇಲ್ಲ. ಹನ್ನೆರಡು ಗಂಟೆಗೆ ವೈನ್ ಸೀಸೆ ತೆಗೆದು ಎಲ್ಲರೂ ಹೊಸ ವರ್ಷ ಹುಟ್ಟಿದ ಸಂತೋಷದಲ್ಲಿ ಕುಡಿಯುತ್ತಾರೆ. ಬೀದಿಯಲ್ಲಿ ದೀಪಾವಳಿಯ ಪಟಾಕಿಗಳ ಸದ್ದು. ಅಲ್ಲಲ್ಲಿ ನೃತ್ಯ ನಡೆಯುತ್ತದೆ. ಹೊಸ ವರ್ಷದ ಆಚರಣೆಯಲ್ಲಿ ಸ್ನೇಹಿತರು ಸೇರುತ್ತಾರೆ.

೧೩. ಭಾರತ–ಜರ್ಮನಿ

ಕೀರ್ತಿಕನ್ಯೆ ಇನ್ನೂ ಕುಮಾರಿಯಾಗಿಯೇ ಇದ್ದಾಳೆ. ಕೈಯಲ್ಲಿ ಹೂಮಾಲೆ ಹಿಡಿದು ಅಲೆಯುವ ಅವಳಿಗೆ ಅನುರೂಪನಾದ ವರ ದೊರೆತಿಲ್ಲ. ವಿದ್ವಾಂಸರು ಅವಳನ್ನು ಕಂಡರೆ ದೂರ ಹೋಗುತ್ತಾರೆ. ಮೂರ್ಖರನ್ನು ಕಂಡರೆ ಅವಳೇ ದೂರ ಹೋಗುತ್ತಾಳೆ.

—ರವೀಂದ್ರನಾಥ ಟಾಗೂರ್

ಭಾರತೀಯರೂ ಜರ್ಮನರೂ ಒಂದೇ ವಂಶಕ್ಕೆ, ಜನಾಂಗಕ್ಕೆ ಸೇರಿದವರೆಂದು ಜರ್ಮನಿಯ ಯಾವ ಪ್ರದೇಶಕ್ಕೆ ಹೋದರೂ ಎಲ್ಲರೂ ಹೇಳುತ್ತಾರೆ. ಜರ್ಮನರಿಗೆ ತಾವು ಆರ್ಯರು, ಭಾರತೀಯರೂ ಆರ್ಯರು ಎಂದು ಹೆಮ್ಮೆ. ಬಣ್ಣ ಒಂದು ಬಿಟ್ಟರೆ ಮುಖದಲ್ಲಿ ಎರಡು ಜನಾಂಗಕ್ಕೂ ವ್ಯತ್ಯಾಸ ಕಡಮೆ. ಆದರೆ ಏಷ್ಯಾ ಖಂಡದಲ್ಲಿ ಚೈನಾ, ಜಪಾನ್ ಜನಾಂಗಗಳು ಬೇರೆ ಎಂದು ಹೇಳುತ್ತಾರೆ. ಐರೋಪ್ಯದೇಶದ ಮೂಲಪುರುಷರು ಜರ್ಮನರು; ಏಷ್ಯಾ ಖಂಡಕ್ಕೆ ಭಾರತೀಯರು. ಆದುದರಿಂದ ಈ ಎರಡು ರಾಷ್ಟ್ರಗಳಿಗೂ ಬಹಳ ಹಿಂದಿನ ಸಂಸ್ಕೃತಿ ಉಂಟು. ಒಂದೇ ಬುಡಕಟ್ಟಿನವರು. ವಾತಾವರಣದ ಬದಲಾವಣೆ ಸಂಸ್ಕೃತಿಯನ್ನು ಬದಲಾಯಿಸಿದೆ ಎಂದು ತಿಳಿದಿದ್ದಾರೆ. ಭಾಷೆಯಲ್ಲೂ, ಸ್ವಲ್ಪ ಬದಲಾವಣೆ ಆದ ಸಂಸ್ಕೃತ ಪದಗಳನ್ನು ಜರ್ಮನ್ ಭಾಷೆಯಲ್ಲಿ ಕಾಣಬಹುದು. ಫಾಟರ್ ಎಂದರೆ ಪಿತೃ, ಮೂಟರ್–ಮಾತೃ, ಬ್ರೂಡರ್–ಭ್ರಾತೃ, ಮಜ್‌ಲ್ಸ್–ಮತ್ಸ್ಯ—ಹೀಗೆ. ಸಂಸ್ಕೃತ ವಿದ್ಯಾವಂತರನ್ನು, ಭಾರತದ ವಿಚಾರ ಸ್ವಲ್ಪ ತಿಳಿದವರನ್ನು ಜರ್ಮನಿಯಲ್ಲಿ ಕಾಣಬಹುದು. ಯುದ್ಧಕ್ಕೆ ಮುಂಚೆ ಕವಿ ಟಾಗೂರರು ಜರ್ಮನಿಗೆ ಹೋಗಿ, ಅಲ್ಲಿ ಭಾರತದ ವಿಚಾರ ಪ್ರಚಾರ ನಡೆಸಿದ್ದರು. ಅವರ ಪುಸ್ತಕಗಳು ಜರ್ಮನ್ ಭಾಷೆಯಲ್ಲಿ ಪ್ರಕಟವಾಗಿವೆ. ಹಿಂದೂ ದೇಶದ್ದು ಬಹಳ ಹಿಂದಿನ ಸಂಸ್ಕೃತಿ, ಅದು ಬಹಳ ವೈಭವದಿಂದ ಬಾಳಿದ ದೇಶ ಎಂದು ಅನೇಕರು ತಿಳಿದಿದ್ದಾರೆ. ಗಾಂಧೀಜಿಯ ಹೆಸರನ್ನು ಕೇಳದವರಿಲ್ಲ. ಇಂಡಿಯಾ ದೇಶದ ಹೆಸರು ಕೇಳದಿದ್ದರೂ ಗಾಂಧೀಜಿಯ ಹೆಸರು ಕೇಳಿದ್ದಾರೆ. ಯುದ್ಧ ಪ್ರಾರಂಭವಾಗುವುದಕ್ಕೆ ಮೊದಲೇ ಭಾರತದ ಸಮಾಚಾರವನ್ನು ಜರ್ಮನಿಯ ಜನ ತಿಳಿದಿದ್ದರು. ಯುದ್ಧದಲ್ಲಿ ಶ್ರೀ ಸುಭಾಸ್ ಚಂದ್ರ ಬೋಸ್ ಅವರು ಜರ್ಮನಿಗೆ ಹೋಗಿದ್ದರಿಂದ ಆಗಿನ ಜನಾಂಗ ಸುಭಾಸರ ಮೂಲಕ ಇಂಡಿಯಾದ ಹೆಸರು ಕೇಳುತ್ತಿತ್ತು. ಆದರೆ ಯುದ್ಧ

ಮುಗಿದಮೇಲೆ ಕೆಲವು ವರ್ಷಗಳವರೆಗೆ ಭಾರತದ ಸಮಾಚಾರವೇ ಅಲ್ಲಿಯ ಜನರಿಗೆ ತಿಳಿಯುತ್ತಿರಲಿಲ್ಲ.

ಈಗ ಪುನಃ ಭಾರತದ ವಿಚಾರ ತಿಳಿದುಕೊಳ್ಳಬೇಕೆಂಬ ಕುತೂಹಲ ಜನರಿಗೆ ಹೆಚ್ಚಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಅನೇಕ ಜರ್ಮನರು ಭಾರತಕ್ಕೆ ಬಂದು ಹೋಗುತ್ತಿದ್ದಾರೆ. ತಮಗೆ ತಿಳಿದಂತೆ ಅಭಿಪ್ರಾಯ ಕೊಡುತ್ತಾರೆ. ನಾನು ಒಂದು ಸಾರಿ ವಿಶ್ವವಿದ್ಯಾನಿಲಯದಲ್ಲಿ ಡಾ|| ಮಾನ್ ರವರ ಭಾರತದ ವಿಚಾರ ಭಾಷಣ ಕೇಳಲು ಹೋಗಿದ್ದೆ. ಅವರು ಆಗತಾನೇ ಭಾರತದಿಂದ ಹಿಂದಿರುಗಿದ್ದರು. ನಾನು ಜರ್ಮನಿಗೆ ಹೋಗಿ ಕೆಲವೇ ದಿನ ಆಗಿತ್ತು. ಭಾರತದ ಬಗ್ಗೆ ಜರ್ಮನರು ಏನು ಹೇಳುತ್ತಾರೆ ಎಂಬುದನ್ನು ಕೇಳುವ ಕುತೂಹಲದಿಂದ ಹೋಗಿದ್ದೆ. ಹೆಚ್ಚಾಗಿ ವಿದ್ಯಾರ್ಥಿಗಳೇ ಆ ಸಭೆಗೆ ಬಂದಿದ್ದರು. "ಭಾರತ ಬಹಳ ದೊಡ್ಡ ದೇಶ. ಅದು ಎರಡು ಭಾಗಗಳಾಗಿ ಒಡೆದು ಪಾಕೀಸ್ಥಾನ-ಹಿಂದೂಸ್ಥಾನ ಎಂದು ಆಗಿದೆ. ಬಹಳ ಬಡದೇಶ" ಎಂದು ಹೇಳುತ್ತಾ ಕೆಲವು ಫೋಟೋಗಳನ್ನು ತೋರಿಸಿದರು. ಕಾಶಿಯಲ್ಲಿ ಜನರು ಗಂಗಾಸ್ನಾನ ಮಾಡುವುದನ್ನು ತೋರಿಸಿ, "ಜನ ಇಲ್ಲಿ ಎಲ್ಲರೂ ಒಟ್ಟಿಗೇ ಸ್ನಾನಮಾಡುತ್ತಾರೆ. ಈ ನೀರು ಹಿಂದೂ ಜನಕ್ಕೆ ಬಹಳ ಪವಿತ್ರ. ಹೆಣಗಳನ್ನು ಸುಟ್ಟು ಈ ನೀರಿಗೆ ಹಾಕುತ್ತಾರೆ. ಹಣೆಗೆ ಜಾತಿಯ ಗುರು ತಾಗಿ ನಾಮ ಬಳಿಯುತ್ತಾರೆ. ಬರಿಮೈ ಸನ್ಯಾಸಿಗಳನ್ನು, ಮೊಳೆಗಳ ಮೇಲೆ ಕುಳಿತಿರುವ ಫಕೀರನನ್ನು ಇಲ್ಲಿ ಕಾಣಬಹುದು. ಈ ಗಂಗಾನದಿಯಲ್ಲಿ ಸ್ನಾನ ಮಾಡಿದರೆ ಸ್ವರ್ಗಕ್ಕೆ ಹೋಗುತ್ತಾರೆಂದು ಹಿಂದೂಗಳು ತಿಳಿದಿದ್ದಾರೆ—" ಎಂದರು. ಬೀದಿಯಲ್ಲಿ ನಿಂತಿರುವ ಹಸುವಿನ ಚಿತ್ರ ತೋರಿಸಿ, "ಹಿಂದೂಗಳು ಈ ಹಸುಗಳನ್ನು ದೇವರೆಂದು ಪೂಜಿಸುತ್ತಾರೆ. ದೇವರಾದುದರಿಂದ ಏನು ಮಾಡಿದರೂ ಅದು ಸುಮ್ಮನಿರುತ್ತದೆ. ದಾರಿಯಲ್ಲಿ ಮೋಟರು ಹೋಗಲೂ ಸ್ಥಳ ಬಿಡುವುದಿಲ್ಲ" ಎಂದು ಹೇಳಿದರು. ಈ ರೀತಿ ಸ್ವಲ್ಪ ಹೀನವಾಗಿ ಮಾತ ನಾಡಿ, "ಪ್ರಶ್ನೆಗಳನ್ನು ಕೇಳಿದರೆ ಉತ್ತರ ಕೊಡುತ್ತೇನೆ" ಎಂದರು. ಶ್ರೀ ಬ್ಯಾನರ್ಜಿ ಎಂಬ ಹುಡುಗ ಭಾರತೀಯ. ಅದೇ ಶಾಲೆಯಲ್ಲಿ ಓದುತ್ತಿದ್ದವನು. ಕಡೆಯಲ್ಲಿ ಎದ್ದು ನಿಂತು, ಎರಡು ಮಾತು ಹೇಳಲು ಅವಕಾಶ ಕೊಡ ಬೇಕೆಂದು ಕೇಳಿ, "ನೀವು ಮಾಡಿದ ಭಾಷಣ ಮತ್ತು ಆರಿಸಿ ತಂದಿರುವ ಚಿತ್ರ—ಎಲ್ಲವೂ ಭಾರತದ ಒಂದು ಮುಖವಾಯಿತು. ಆದರೆ ಇನ್ನೊಂದು ಮುಖವಿದೆ. ಭಾರತ ಸ್ವಾತಂತ್ರ್ಯ ಸಂಪಾದಿಸಿದಮೇಲೆ ಏನು ಮಾಡುತ್ತಿದೆ ಎಂಬ ಬಗ್ಗೆ ನೀವು ಒಂದು ಚಿತ್ರವನ್ನೂ ತೋರಿಸಲಿಲ್ಲ. ಅದರ ಸಂಸ್ಕೃತಿಯ

ವಿಚಾರವೇ ಹೇಳಲಿಲ್ಲ. ನೀವು ನೋಡಿದ್ದು ಇಷ್ಟೇನೇ ಇಂಡಿಯಾ ದೇಶದಲ್ಲಿ! ಈ ರೀತಿ ಒಂದು ಸಂಕುಚಿತ ದೃಷ್ಟಿಯಿಂದ ಭಾರತವನ್ನು ನೋಡಿ ಇಲ್ಲಿಯ ಜನರಿಗೆ ಹೀಗೆ ಹೇಳಬಾರದು" ಎಂದು ಹೇಳಿದನು. ಡಾ|| ಮಾನ್ ಅವರಿಗೆ ಸರಿಯಾದ ಉತ್ತರ ಕೊಡಲು ಸಾಧ್ಯವಾಗಲಿಲ್ಲ. ಸಭೆ ಮುಗಿದು ಹೊರಗಡೆ ಬಂದಮೇಲೆ ಪುನಃ ಮಾನ್‌ರೊಡನೆ ಆ ಸಭೆಗೆ ಬಂದಿದ್ದ ಭಾರತೀಯರೆಲ್ಲ ಮಾತನಾಡಿದೆವು. ನಾನು ಮೈಸೂರಿನವನು ಎಂದು ಹೇಳಿದಾಗ, "ನಾಳೆ ನಮ್ಮ ಮನೆಗೆ ಬನ್ನಿ. ಮೈಸೂರು, ಹಳೇಬೀಡು ಮತ್ತು ಬೇಲೂರು ಚಿತ್ರಗಳನ್ನು ತಂದಿದ್ದೇನೆ. ಬಹಳ ಚೆನ್ನಾಗಿವೆ" ಎಂದು ಆಹ್ವಾನ ಕೊಟ್ಟರು. ಇಂಥ ಒಳ್ಳೆಯ ಚಿತ್ರಗಳನ್ನು ತಂದಿದ್ದರೂ ಆ ರೀತಿಯ ಮನಸ್ಸಿಗೆ ಒಪ್ಪದ ಚಿತ್ರಗಳನ್ನು ಏಕೆ ತೋರಿಸಿದರೋ ಅರ್ಥವಾಗದು.

ಈ ರೀತಿಯಾದ ಅಪಪ್ರಚಾರಗಳು ಹಿಂದೆ ಬಹಳ ನಡೆಯುತ್ತಿದ್ದುವಂತೆ. ಈಗ ಕಡಮೆ ಎಂದು ಹೇಳಬಹುದು. ಜನರು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಬೇಸರವಾಗುತ್ತಿತ್ತು. ಒಂದಲ್ಲ ನೂರಾರು ಪ್ರಶ್ನೆಗಳು. ಇಂತಹ ಪ್ರಶ್ನೆ ಕೇಳುವುದುಂಟೇ ಎನಿಸಿತು! ನೀವು ಯಾವ ದೇಶದವರು? ನಿಮ್ಮ ಹೆಸರೇನು? ನಿಮ್ಮ ಹೆಸರೇಕೆ ಇಷ್ಟು ಉದ್ದ? ಇದರ ಅರ್ಥವೇನು? ನಿಮ್ಮ ವಯಸ್ಸೆಷ್ಟು? ನಿಮಗೆ ಮದುವೆ ಆಗಿದೆಯೆ? ನಿಮ್ಮ ಹೆಂಡತಿಯ ಫೋಟೋ ತೋರಿಸಿ. ನಿಮ್ಮ ಹೆಂಡತಿ ಹಣೆಯ ಮೇಲೆ ಇಟ್ಟಿರುವುದು ಏನು? ಜಾತಿಯ ಚಿಹ್ನೆಯೇ? ಎಲ್ಲರ ಕೂದಲೂ ನಿಮ್ಮ ಹೆಂಡತಿಯ ಕೂದಲಿನಷ್ಟೇ ಕಪ್ಪಗಿರುತ್ತದೆಯೇ? ನಿಮಗೆ ಮಕ್ಕಳೆಷ್ಟು? ಒಬ್ಬೊಬ್ಬರಿಗೆ ಎಷ್ಟು ಹೆಂಡತಿಯರು ಇರುತ್ತಾರೆ? ನಿಮ್ಮ ದೇಶದಲ್ಲಿ ಹಾಕುವ ಬಟ್ಟೆ ಎಂತಹದು? ನಿಮ್ಮ ದೇಶದಲ್ಲಿ ಬಡತನ ಹೆಚ್ಚೇ? ಮಹಾರಾಜರು, ಕಾಡುಗಳು, ಹುಲಿ, ಸಿಂಹ, ಹಾವು, ಆನೆ ಹೆಚ್ಚಾಗಿ ಸಿಗುತ್ತವೆಯೇ? ನೀವೂ ಒಬ್ಬ ರಾಜಕುಮಾರರೇ? ಇಷ್ಟು ದೂರ ಹೇಗೆ ಬಂದಿರಿ? ನಿಮ್ಮ ಆಹಾರ ಏನು? ನೀವು ಸಸ್ಯಾಹಾರಿಗಳಾದರೆ ನಿಮ್ಮ ದೇಶದಲ್ಲಿ ಮಾಂಸಾಹಾರ ಸಿಗುವುದಿಲ್ಲವೇ? ಹಸುವನ್ನು ದೇವರೆಂದು ಏಕೆ ಪೂಜೆ ಮಾಡುತ್ತೀರಿ? ನಿಮ್ಮಲ್ಲಿ ಬಿಸಿಲು ಹೆಚ್ಚೇ? ಚಳಿ ಇಲ್ಲವೇ? ಹಣ್ಣು ಹಂಪಲುಗಳು ಇವೆಯೇ? ದೊಡ್ಡ ಕಾರ್ಖಾನೆಗಳು ಇವೆಯೇ? ಭಾರತದಲ್ಲಿ ಜರ್ಮನರು ಇದ್ದಾರೆಯೇ? ಜರ್ಮನ್ ಭಾಷೆ ಬರುವುದಿಲ್ಲವೇ? ನಿಮ್ಮ ದೇಶದಲ್ಲಿ ಎಷ್ಟು ಭಾಷೆಗಳಿವೆ? ಜಾತಿಭೇದ ತುಂಬಾ ಇದೆಯಂತೆ, ಹೌದೇ? ಸೂರ್ಯ ಯಾವಾಗಲೂ ಇರುತ್ತಾನೆಯೇ?—ಹೀಗೆ ಪ್ರಶ್ನೆಗಳ ಸುರಿಮಳೆಯಾಗುತ್ತದೆ. ಸಾಮಾನ್ಯವಾಗಿ ಎಲ್ಲರೂ ಹೆಚ್ಚುಕಡಮೆ ಇದೇ ಪ್ರಶ್ನೆಗಳನ್ನು ಹಾಕುತ್ತಾರೆ.

ವಿಷಯ ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ ಈ ಪ್ರಶ್ನೆಗಳು ಬರುತ್ತವೆ. ಅವರಿಗೆ ಇಷ್ಟೂ ಗೊತ್ತಿಲ್ಲವೇ ಅನಿಸಿದರೂ, ನಿಜವಾಗಿಯೂ ಈ ವಿಚಾರ ಅವರು ತಿಳಿದಿರುವುದಿಲ್ಲ. ತಿಳಿದುಕೊಳ್ಳಬೇಕೆಂಬ ಕುತೂಹಲವೂ ಹೆಚ್ಚು. ಎಲ್ಲಕ್ಕೂ ಸಮಾಧಾನವಾಗಿ ಉತ್ತರ ಕೊಡಬೇಕು. ಎಷ್ಟೋ ಸಾರಿ ನಿಮ್ಮ ಊರಿನಲ್ಲಿ ಚಲನಚಿತ್ರಗಳಿವೆಯೋ ಎಂದು ಕೇಳಿದ್ದಾರೆ. ಚಲನಚಿತ್ರ ತೆಗೆಯುವುದರಲ್ಲಿ ಇಂಡಿಯಾ ದೇಶಕ್ಕೆ ಪ್ರಪಂಚದಲ್ಲಿ ಎರಡನೆಯ ಸ್ಥಾನ ಎಂಬುದೇ ಗೊತ್ತಿಲ್ಲ ಅನೇಕರಿಗೆ.

"ಸ್ನಾನಮಾಡಲು ಗಂಗಾನದಿಗೇ ಹೋಗಬೇಕೆ? ಮತ್ತೆ ಯಾವುದೂ ಪವಿತ್ರವಲ್ಲವೇ ?" ಎಂದು ಕುಂಭಮೇಳವಾದಾಗ, ಜನರು ನೂಕುನುಗ್ಗಲಿಗೆ ತುತ್ತಾದ ಸಮಾಚಾರ ಓದಿ, ನನ್ನ ಕಾರ್ಖಾನೆಯ ಮಿತ್ರರೊಬ್ಬರು ಕೇಳಿದರು. "ನಾವು ಕಾಶಿಗೆ ಯಾತ್ರಾಸ್ಥಳವೆಂದು ಹೋಗುತ್ತೇವೆ. ಗಂಗಾನದಿ ಪವಿತ್ರ ನದಿಯೂ ಹೌದು. ಇರುವ ನದಿಗಳೆಲ್ಲಾ ಪವಿತ್ರವೇ. ಹಿಂದೂಗಳಿಗೆ ನೀರೇ ಪವಿತ್ರ. ಅದು ದೇಹವನ್ನು ಚೊಕ್ಕಟಮಾಡುತ್ತದೆ. ಎಲ್ಲಾ ನದಿಗಳೂ ನಮ್ಮ ದೇಶಕ್ಕೆ ಆಹಾರ ಒದಗಿಸುವುದಲ್ಲದೆ ಎಲ್ಲರಿಗೂ ನೀರು ಕೊಡುತ್ತವೆ. ಗಂಗಾನದಿಯ ದಡದಲ್ಲಿ ಕಾಶಿ ಇದೆ. ಅನೇಕ ದೊಡ್ಡ ಮಹನೀಯರು ಈ ನದಿಯ ದಡದಲ್ಲಿ ಇದ್ದು ಜೀವನ ನಡೆಸಿದುದರಿಂದ, ಕಾಶಿ ಪೂರ್ವದ ವಿದ್ಯಾಪೀಠವಾದುದರಿಂದ ಅದಕ್ಕೆ ಪವಿತ್ರತೆ ಬಂದಿದೆ. ನೀವು ಏಕೆ ರೈನ್ ನದಿಯ ದಡದ ಕಲೋನ್‌ನಲ್ಲಿರುವ ದೊಡ್ಡ ಚರ್ಚಿಗೆ ಹೋಗುತ್ತೀರಿ? ಕ್ರಿಶ್ಚಿಯನ್ನರ ಪವಿತ್ರ ಸ್ಥಳವಾದ ರೋಂ ನಗರಕ್ಕೆ ಏಕೆ ಅಷ್ಟು ಜನ ಹೋಗುತ್ತಾರೆ? ನೀವು ಬೇಸಗೆಯಲ್ಲಿ ಒಂದು ತಿಂಗಳು ರಜಾ ತೆಗೆದುಕೊಂಡು, ಚಳಿ ಮುಗಿಯಿತಲ್ಲಾ ಎಂದು ಸೂರ್ಯನ ಬೆಳಕು ಕಾಣಲು ನದಿಯ ದಡಕ್ಕೆ, ಸಮುದ್ರದಡಕ್ಕೆ ಹೋಗುತ್ತೀರಿ. ಅಲ್ಲಿ ದಿನಗಟ್ಟಲೆ ಬಿಸಿಲಿನಲ್ಲಿ ಬಿದ್ದುಕೊಂಡು ಪುನಃ ಊರಿಗೆ ವಾಪಸ್ ಬರುತ್ತೀರಿ. ಅದಕ್ಕಾಗಿ ನೂರಾರು ರೂಪಾಯಿ ಖರ್ಚು ಮಾಡುತ್ತೀರಿ. ಅನೇಕ ಊರುಗಳನ್ನು ನೋಡಿಕೊಂಡು ಬರುತ್ತೀರಿ. ಚಳಿಗಾಲದಲ್ಲಿ ಬೆಟ್ಟ ಗುಡ್ಡಗಳಿಗೆ ಹೋಗಿ ಮಂಜಿನ ಮೇಲೆ ಜಾರುವ ಆಟ ಆಡುತ್ತೀರಿ! ಮೊನ್ನೆ ೨೭ ಮಂದಿ ಹುಡುಗ-ಹುಡುಗಿಯರು ಏಕೆ ಮಂಜಿನಲ್ಲಿ ಸಿಕ್ಕಿಬಿದ್ದು ಸತ್ತರು? ಸಾಯುವುದಕ್ಕಾಗಿ ಆ ಬೆಟ್ಟದ ಮೇಲೆ ಹೋಗಿದ್ದರೆ? ವಿನೋದಕ್ಕಾಗಿ ಬೆಟ್ಟದ ಮಂಜಿನ ಮೇಲೆ ಜಾರಲು ಹೋಗಿದ್ದರು. ಅಲ್ಲಿಂದ ಹಿಂದಿರುಗಿ ಬರಲಾರದೆ ಎಲ್ಲರೂ ಸತ್ತರು. ಹೀಗೆ ನಮ್ಮ ದೇಶದಲ್ಲಿ ಎಲ್ಲಾ ಊರುಗಳಲ್ಲೂ ಸೂರ್ಯ ಇದ್ದಾನೆ, ಎಲ್ಲಾ ಅನುಕೂಲಗಳಿವೆ. ಆದ್ದರಿಂದ ದೇವರ ಹೆಸರಿನಲ್ಲಿ

ಬೇರೆ ಊರಿಗೆ ಹೋಗುತ್ತಾರೆ. ಯಾತ್ರೆಗಾಗಿ ಬೇರೆ ಊರಿಗೆ ಹೋಗಿ, ಸುತ್ತ ಮುತ್ತ ತಿರುಗಾಡಿ ದೇಶ ನೋಡುವುದರ ಜೊತೆಗೆ, ಅಲ್ಲಿಯ ಜನಗಳ ನಡೆ ನುಡಿಯನ್ನೂ ಕಂಡು ಬರುತ್ತಾರೆ. ಬೇರೆ ಊರಿಗೆ ಯಾತ್ರೆ ಹೋಗುವುದು, ನೀವು ಬೇಸಗೆಯಲ್ಲಿ ರಜಾ ತೆಗೆದುಕೊಂಡು ಬೇರೆ ಊರಿಗೆ ಹೋಗಿ ಬಂದರೆ ಹೇಗೋ ಹಾಗೆ ಸಂತೋಷ ಕೊಡುತ್ತದೆ. ನಮ್ಮ ದೇಶದಲ್ಲಿ ವೃಥಾ ಯಾರೂ ಬೇರೆ ಊರಿಗೆ ಹೋಗುವುದಿಲ್ಲ. ದೇವರ ಹೆಸರಿನಲ್ಲಿಯಾದರೂ ಬೇರೆ ಊರು, ಬೇರೆ ಜನಗಳ ಪರಿಚಯವಾಗಲಿ, ಅಲ್ಲಿಯ ಸ್ಥಳಮಹಿಮೆ ತಿಳಿಯಲಿ ಎಂದು ಹಿರಿಯರು ಹಾಗೆ ಮಾಡಿದ್ದಾರೆ. ನೀವು ಬೇಸಗೆಯಲ್ಲಿ ಯಾವುದಾದರೂ ಸಮುದ್ರಕ್ಕಾಗಲಿ, ನದಿಗಾಗಲಿ ಹೋಗಿ ಸ್ನಾನಮಾಡಿ ಬಿಸಿಲಿನಲ್ಲಿ ಒದ್ದಾಡುತ್ತೀರಿ. ನಮಗೆ ಅದರ ಆವಶ್ಯಕತೆ ಇಲ್ಲ. ನೀವು ಮಂಜಿನಲ್ಲಿ ಆಟವಾಡಲು ಹೋಗಿ ಅಲ್ಲಿ ಸಿಕ್ಕಿಬಿದ್ದು ಸತ್ತರೆ, ಸಾಯುವುದಕ್ಕಾಗಿ ಮಂಜಿನಲ್ಲಿ ಆಟವಾಡಲು ಹೋಗಿದ್ದರೆನ್ನುವುದರಲ್ಲಿ ಅರ್ಥವಿಲ್ಲ. ಹಾಗೇ ಗಂಗಾನದಿಯಲ್ಲಿ ಸ್ನಾನಕ್ಕೆ ಹೋದರೆ ಸಾಯಲು ಹೋಗಿದ್ದಾರೆಂದು ಅರ್ಥವಲ್ಲ" ಎಂಬುದಾಗಿ ವಿವರಿಸಿದೆ.

ಇಲ್ಲಿ ಹಿಂದೂಸ್ಥಾನವೆಂದರೆ ಮಹಾರಾಜರ ಹೆಸರು ಬಂದೇ ಬರುತ್ತದೆ. ಹಿಂದೂಸ್ಥಾನದಲ್ಲಿ ತುಂಬಾ ಮಹಾರಾಜರುಗಳಿದ್ದಾರೆ ಎಂಬ ಭಾವನೆಯು ಇವರಲ್ಲಿದೆ. ಇವರು ಸಾಹುಕಾರರು, ಯೂರೋಪು ದೇಶಕ್ಕೆ ಬಂದು ಚೆನ್ನಾಗಿ ಹಣ ಖರ್ಚು ಮಾಡುತ್ತಾರೆ, ಇಂತಹವರನ್ನು ಮದುವೆ ಆಗಬೇಕು ಎಂಬ ಆಸೆ ಇಲ್ಲಿಯ ಅನೇಕ ಹುಡುಗಿಯರಿಗಿದೆ! ಭಾರತದಿಂದ ಯೂರೋಪು ದೇಶಕ್ಕೆ ಬರಬೇಕಾದರೆ, ಇಷ್ಟು ದುಡ್ಡು ಖರ್ಚು ಮಾಡಬೇಕಾದರೆ, ಬಡವರಿಗೆ ಹೇಗೆ ಸಾಧ್ಯ? ಇದರಿಂದ ಯೂರೋಪು ದೇಶಕ್ಕೆ ಬರುವವರೆಲ್ಲಾ ರಾಜಕುಮಾರರೇ ಇರಬೇಕೆಂಬ ಭಾವನೆ ಅನೇಕರಿಗಿದೆ.

ಮಹಾರಾಜರನ್ನು ಬಿಟ್ಟರೆ ಹಾವು, ಹುಲಿ, ಕಾಡಾನೆ—ಇವುಗಳಿಂದ ಭಾರತದ ಹೆಸರನ್ನು ಅನೇಕರು ಕೇಳಿದ್ದಾರೆ. ಎಲ್ಲೆಲ್ಲೂ ಹಾವಿಲ್ಲ, ಹುಲಿ ಕಾಡಿನಲ್ಲಿ ಮಾತ್ರ ಇರುತ್ತದೆ, ಎಂದರೆ ಅಲ್ಲಿ ಜನ ಬದುಕಲು ಹೇಗೆ ಸಾಧ್ಯ ಎಂದು ಅನೇಕರು ಕೇಳಿದ್ದಾರೆ. ಭಾರತ ಕಾಡಿನಿಂದ ಕೂಡಿದೆ, ನಾವು ಕಾಡಿನಲ್ಲಿ ವಾಸಿಸುವ ಜನ ಎಂದು ತಿಳಿದಿದ್ದಾರೆ. ಕೈಗಾರಿಕೆ, ಕಾರ್ಖಾನೆಗಳಿವೆ ಎಂಬುದು ಅವರಿಗೆ ತಿಳಿದಿದ್ದರೂ ಅದಕ್ಕೆ ಅಷ್ಟು ಪ್ರಾಧಾನ್ಯತೆ ಕೊಡುವುದಿಲ್ಲ. ಭಾರತ ಎಷ್ಟು ದೊಡ್ಡದು ಎಂಬುದನ್ನು ತಿಳಿಯುವುದು ಸ್ವಲ್ಪ ಕಷ್ಟವೇ. ಜರ್ಮನಿಯಲ್ಲಿ ಒಂದು ದಿನದ ಪ್ರಯಾಣದಲ್ಲಿ ದೇಶದ ಒಂದು ಕೊನೆಯಿಂದ ಮತ್ತೊಂದು ಕೊನೆಗೆ ಹೋಗಿ ಸೇರಬಹುದು. ನಮ್ಮ ದೇಶದ ಒಂದು ಕೊನೆ

ಯಿಂದ ಇನ್ನೊಂದು ಕೊನೆಗೆ ಸುಮಾರು ೧,೫೦೦ ಮೈಲಿ ದೂರ ಇದೆ ಎಂದರೆ ಆಶ್ಚರ್ಯಪಡುತ್ತಾರೆ. ಅವರ ಒಂದು ದೇಶದಷ್ಟು ನಮ್ಮಲ್ಲಿ ಒಂದು ಪ್ರಾಂತ್ಯವಿದೆ.

ಹಿಂದೆ ಹೇಳಿದಂತೆ, ಭಾರತದ ಹೆಸರು ಕೇಳದಿದ್ದರೂ ಗಾಂಧೀಜಿಯ ಹೆಸರು ಕೇಳದವರಿಲ್ಲ. ಪ್ರತಿಯೊಬ್ಬರಿಗೂ ಗಾಂಧೀಜಿಯ ವಿಚಾರ ಗೊತ್ತು. ಜನಕ್ಕಾಗಿ ದುಡಿದ ಮಹಾತ್ಮ, ಒಳ್ಳೆಯ ಮನುಷ್ಯ, ಎಂದು ಸ್ವಿಡ್ಜರ್ಲೆಂಡಿನಲ್ಲಿ ಪ್ರಕಟಿಸಿದ ಮಿಡಲ್ ಸ್ಕೂಲ್ ಮಕ್ಕಳ ಒಂದು ಡೈರಿಯಲ್ಲಿ ಗಾಂಧೀಜಿಯ ಜೀವನಚರಿತ್ರೆ ನೋಡಿದೆ. ನಾನು ತೆಗೆದುಕೊಂಡು ಹೋಗಿದ್ದ ಗಾಂಧೀಜಿಯ ಆತ್ಮಚರಿತ್ರೆ ಇಂಗ್ಲಿಷ್ ಬರುವವರಿಗೆ ಸ್ವಲ್ಪ ಅನುಕೂಲವಾಯಿತು. ಆದರೂ ಓದುವುದು ನಿಧಾನ. ಯಾರ ಮನೆಗೆ ಹೋದರೂ ಗಾಂಧೀಜಿಯ ವಿಚಾರ ಕೇಳುವವರೇ. ಒಂದು ಮನೆಯಲ್ಲಿ ಒಬ್ಬ ಹುಡುಗಿ ಕೇಳಿದಳು: "ನೀವು ಗಾಂಧೀಜಿ ಒಳ್ಳೆಯವರು ಎಂದು ಹೇಳುತ್ತೀರಿ. ನಾನೂ ಕೇಳಿದ್ದೇನೆ. ಆದರೆ ಅಂತಹ ಒಳ್ಳೆಯವರನ್ನು ಏಕೆ ನೀವು ಗುಂಡಿಟ್ಟು ಕೊಂದದ್ದು?" "ನಿಜ, ನಾವೇ ಕೊಂದದ್ದು. ಗಾಂಧೀಜಿ ಮಾಡುತ್ತಿದ್ದ ಒಳ್ಳೆಯ ಕೆಲಸ ಕೆಲವರಿಗೆ ಸರಿಬೀಳಲಿಲ್ಲ. ಆದಕ್ಕಾಗಿ ಕೆಲವು ಮೂರ್ಖರು ಸೇರಿ ಅವರನ್ನು ಕೊಂದರು. ಕ್ರೈಸ್ತದೇವರು ಒಳ್ಳೆಯವರಾದರೂ ಕೆಲವು ಮೂರ್ಖರು ಅವರನ್ನು ಶಿಲುಬೆಗೆ ಏರಿಸಲಿಲ್ಲವೇ?" ಎಂದು ಸಮಾಧಾನ ಹೇಳಿದೆ. ಆದರೆ ಈ ಸಮಾಧಾನ ಹೇಳಿದರೂ ನನಗೆ ತೃಪ್ತಿ ಇಲ್ಲ.

ಯುದ್ಧಕ್ಕೆ ಮುಂಚೆ ಟಾಗೂರರ ಪುಸ್ತಕ, ಅವರ ತತ್ವ ಇಲ್ಲಿ ಪ್ರಚಾರವಾಗಿತ್ತು. ಅದಕ್ಕೆ ಹಿಂದೆ ಬುದ್ಧನ ಹೆಸರು ಎಲ್ಲರೂ ಕೇಳಿದ್ದರು. ಇವರನ್ನು ಬಿಟ್ಟರೆ ಪಂಡಿತ್ ನೆಹರೂ ವಿಚಾರ ಎಲ್ಲರಿಗೂ ತಿಳಿದಿದೆ. ಅವರ ರಾಜಕೀಯ ಬಹಳ ಒಳ್ಳೆಯದೆಂದು ಎಲ್ಲರೂ ಅಭಿಪ್ರಾಯಪಡುತ್ತಾರೆ. ಆದರೆ ಭಾರತ ಕಮ್ಯೂನಿಸ್ಟ್ ದೇಶ ಆಗುವುದು ಎಂಬ ಭಯವೂ ಇದೆ. ನಾನು ಒಂದು ಕಡೆ ಫೋಟೋ ಪ್ರಿಂಟ್ ಮಾಡಲು ಕೊಡುತ್ತಿದ್ದೆ. ಆ ಅಂಗಡಿಯ ಯಜಮಾನಿ ಮೊದಲ ದಿನ, "ನಿಮ್ಮದು ಯಾವ ದೇಶ, ಯಾವ ಊರು?" ಎಂದೆಲ್ಲಾ ಕೇಳಿದಳು. ಇಂಡಿಯಾ ಎಂದ ಕೂಡಲೇ ಆಕೆಗೆ ಸಂತೋಷವಾಯಿತು. "ನಾನು ಭಾರತಕ್ಕೆ ಬಂದುಬಿಡಬೇಕೆಂದಿದ್ದೇನೆ. ಈ ಯೂರೋಪಿನಲ್ಲಿ ಯಾವಾಗಲೂ ಯುದ್ಧವಿದ್ದೇ ಇರುತ್ತದೆ. ಎರಡು ಸಾರಿ ಈ ಮನೆ ಬಿದ್ದು ಪುನಃ ಕಟ್ಟಿದ್ದೇನೆ. ಇನ್ನೂ ಯಾವಾಗ ಬರುತ್ತದೆಯೋ ತಿಳಿಯದು. ನಿಮ್ಮ ದೇಶದಲ್ಲಿ ಯುದ್ಧವೇ ಇಲ್ಲ. ಅಲ್ಲಿ ಸುಖವಾಗಿ ಇರಬಹುದು. ಯುದ್ಧ ಮಾಡುವುದೇಕೆ? ಎಲ್ಲಾ ಕಳೆದುಕೊಂಡು ಪುನಃ ದುಡಿಯುವುದೇಕೆ? ನಿಮ್ಮ ನಾಯಕ

ನೆಹರೂ ಅವರ ಬಗ್ಗೆ ನನಗೆ ಬಹಳ ಗೌರವ" ಎಂದು ಹೇಳಿದಳು. ಇಲ್ಲಿಯ ಚಿತ್ರಗಳನ್ನು ತೋರಿಸಿದಮೇಲಂತೂ ಆಕೆಯ ಸಂತೋಷಕ್ಕೆ ಪಾರವೇ ಇಲ್ಲ. ನೆಹರೂ ಆತ್ಮಚರಿತ್ರೆ ಜರ್ಮನ್ ಭಾಷೆಯಲ್ಲೂ ಇದ್ದುದರಿಂದ ಅದನ್ನು ಕೆಲವರಿಗೆ ತಂದುಕೊಟ್ಟು ಓದಿಸಿದೆ. ಆತ ತನ್ನ ಸಕಲ ಐಶ್ವರ್ಯವನ್ನೂ ಬಿಟ್ಟು ಜೈಲುವಾಸ ಮಾಡಿದ್ದು ಎಲ್ಲರ ಮನಸ್ಸನ್ನು ಕರಗಿಸುತ್ತಿತ್ತು. ಸಾಮಾನ್ಯ ಜನಕ್ಕೆ ನೆಹರೂ ರಾಜಕೀಯ ಮೆಚ್ಚುಗೆಯಾಗಿತ್ತು. ಇಂಥವರು ರಾಜಕೀಯ ನಾಯಕರಾಗಿ, ಪ್ರಪಂಚದಲ್ಲಿ ಯುದ್ಧ ನಿಲ್ಲಿಸಬೇಕೆಂದು ಅವರು ಹೇಳುತ್ತಿದ್ದರು.

ಒಮ್ಮೆ ಬ್ರೌನ್ಸ್‌ವೈಗ್‌ನಿಂದ ೨೦ ಕಿ.ಮೀ. ದೂರದಲ್ಲಿದ್ದ ಲೇಬನ್‌ಸ್ಟಡ್‌ನ ಇಂಗ್ಲಿಷ್ ಬರುವ ಮಿತ್ರಮಂಡಲಿಯಿಂದ ಅಲ್ಲಿ ಭಾರತದ ವಿಚಾರ ಮಾತ ನಾಡಲು ಆಹ್ವಾನ ಬಂದಿತು. ಆ ಸಂಜೆ ಅಧ್ಯಕ್ಷರ ಮನೆಯಲ್ಲಿಯೇ ಊಟ ವನ್ನೂ ಏರ್ಪಡಿಸಿದ್ದರು. ಅಲ್ಲಿಯ ಹೈಸ್ಕೂಲಿನ ಉಪಾಧ್ಯಾಯರೇ ಅಧ್ಯಕ್ಷರು. ಅವರು ಭಾರತೀಯರನ್ನು ನೋಡಿರಲಿಲ್ಲ. ಆದರೆ ಭಾರತದ ವಿಚಾರ, ರಾಜ ಕೀಯ ಅಲ್ಪಸ್ವಲ್ಪ ಗೊತ್ತಿತ್ತು. ಅವರಿಗೆ ಕಾಶ್ಮೀರದ ಬಗ್ಗೆ ಬಹಳ ಕುತೂಹಲ. ಭಾರತ ಮತ್ತು ಪಾಕಿಸ್ಥಾನ ವಿಭಜನೆಯ ವಿಚಾರ ಎಲ್ಲವನ್ನೂ ಕೇಳಿದರು. ಭಾರತ ಭಾಗ್ಯವಿಧಾತ ಗಾಂಧೀಜಿ ಎಂದರೆ ಅವರಿಗೆ ಬಹಳ ಗೌರವ. ಗಾಂಧೀಜಿಯಿಂದ ಯೂರೋಪು ಬಹಳ ಪಾಠ ಕಲಿಯಬೇಕೆಂದೂ ಅವರು ಇದ್ದಿದ್ದರೆ ಹೆಚ್ಚು ಶಾಂತಿ ಇರುತ್ತಿತ್ತೆಂದೂ ಹೇಳಿದರು. "ಏಕೆಂದರೆ ನಮ್ಮ ಕಾಲದಲ್ಲಿ ಕ್ರೈಸ್ತನಿಗೆ ಸಮ ಗಾಂಧೀಜಿ ಒಬ್ಬರೇ. ಭಾರತ ನಮಗೆ ದಾರಿ ತೋರಿಸಬೇಕು." ಈ ರೀತಿಯ ಮಾತು ಕೇಳಿದಮೇಲೆ ಇವರಿಗೆ ಭಾರತದ ಮೇಲೆ ಇರುವ ಗೌರವದ ಅರಿವಾಯಿತು.

"ಭೂಮಿಯ ಸಮಸ್ಯೆ ಹೇಗೆ ಪರಿಹರಿಸಿದ್ದೀರಿ?" ಎಂದು ಕೇಳಿದರು. "ವಿನೋಬಾಜಿಯ ಹೆಸರು ತಾವು ಕೇಳದಿರಬಹುದು. ಅವರು ಹಳ್ಳಿಹಳ್ಳಿಗೆ ಕಾಲುನಡಿಗೆಯಲ್ಲಿ ಹೋಗುತ್ತಿದ್ದಾರೆ. ಅವರೂ ಅವರ ಜೊತೆಗಾರರೂ ಪ್ರತಿ ಮನೆಗೂ, ಪ್ರತಿ ರೈತನ ಹತ್ತಿರವೂ ಹೋಗಿ, ಹೆಚ್ಚು ಹೊಲ ಇದ್ದವರನ್ನು ಬಡವರಿಗೆ ಭೂದಾನ ಮಾಡಲು ಕೇಳುತ್ತಾರೆ. ಅಂತೆಯೇ ಅನೇಕ ಜನ ಭೂಮಿ ಯನ್ನು ದಾನಮಾಡಿದ್ದಾರೆ. ಲಕ್ಷಾಂತರ ಎಕರೆ ಜಮೀನು, ಇದ್ದವರಿಂದ ಇಲ್ಲದವರಿಗೆ ಹೋಗಿದೆ. ಹೀಗೆ ಅಹಿಂಸಾತ್ಮಕ ರೀತಿಯ ಕ್ರಾಂತಿ ನಮ್ಮ ದೇಶ ದಲ್ಲಿ ಈಗಲೂ ನಡೆಯುತ್ತಿದೆ. ಜನರಲ್ಲದೆ ಸರ್ಕಾರವೂ ಸಹ ಇದಕ್ಕೆ ಪೂರ್ಣ ಸಹಕಾರ ನೀಡಿದೆ. ಗಾಂಧೀಜಿಯ ಮಾರ್ಗದಲ್ಲಿ ನಡೆದು ಬರುತ್ತಿರುವ ವಿನೋಬಾಜಿ, ಇನ್ನು ಕೆಲವು ವರ್ಷಗಳಲ್ಲಿ ಜಮೀನು ಇರದ ರೈತನೇ ಇರ

ಕೊಡದೆಂದು ತೀರ್ಮಾನ ಕೈಕೊಂಡಿದ್ದಾರೆ. ಇದೇ ಭಾರತದ ಕ್ರಾಂತಿ, ಅದರ ಮಾರ್ಗ" ಎಂದಾಗ ಅವರಿಗೆ ಕೇಳಿದ ಕೂಡಲೇ ಭೂಮಿ ಕೊಡುವುದು ಭಾರತ ದಲ್ಲಿ ಮಾತ್ರ ಸಾಧ್ಯ ಎಂದು ಆಶ್ಚರ್ಯವಾಯಿತು. ಸಭೆ ಸೇರಿದಾಗ, ಎಲ್ಲರಿಗೂ ಭಾರತದ ಹಿಂದಿನ ಚರಿತ್ರೆಯಿಂದ ಈಗಿನ ಕೈಗಾರಿಕಾ ಯುಗದವರೆಗೆ ಎಲ್ಲ ವನ್ನೂ ವಿವರಿಸಿ ಹೇಳಿದಮೇಲೆ, ಅವರೆಲ್ಲರೂ ಭಾರತ ಇಷ್ಟು ಮುಂದುವರಿದಿದೆ ಯಲ್ಲಾ ಎಂದು ಸಂತೋಷಗೊಂಡರು.

ಭಾರತದ ಬಗ್ಗೆ ಕೆಲವು ಕಡೆಯಿಂದ ಅಪಪ್ರಚಾರ ನಡೆದರೂ ಅಷ್ಟೇ ಸುಪ್ರಚಾರವೂ ನಡೆಯುತ್ತದೆ. ಇದಕ್ಕೆ ಭಾರತ ಪ್ರಪಂಚದಲ್ಲಿ ಮುಂದೆ ಬರುತ್ತಿರುವುದೇ ಕಾರಣ. ಭಾರತ ಕೈಗಾರಿಕೆಯಲ್ಲಿ ಮುಂದುವರಿಯುತ್ತಿರು ವುದನ್ನು ಆಗಾಗ ಬರೆಯುತ್ತಾರೆ. ಶ್ರೀ ಶಿವಾನಂದರ ವಿಚಾರ ಕೆಲವು ಪತ್ರಿಕೆ ಗಳಲ್ಲಿ ಬಂದಿದೆ. ಸುಭಾಸ್‌ಚಂದ್ರ ಬೋಸರು ತಪ್ಪಿಸಿಕೊಂಡು ಹೋದ ಬಗ್ಗೆ ಲೇಖನ ಒಂದನ್ನು ನೋಡಿದೆ. ವಿನೋಬಾರ ವಿಚಾರ ಆಗಾಗ ಬರುವುದರ ಜೊತೆಗೆ ಕೆಲವು ವಾರಪತ್ರಿಕೆಗಳಲ್ಲಿ ಅವರ ಫೋಟೋಗಳೊಡನೆ ದೊಡ್ಡ ಲೇಖನ ಗಳನ್ನೂ ಬರೆದಿದ್ದಾರೆ. ಭಾರತದಿಂದ ವಿದ್ಯಾರ್ಥಿಗಳು ಬಂದು ಪ್ರಚಾರಕಾರ್ಯ ಕೈಗೊಂಡಿದ್ದಾರೆ. ಭಾರತ ರಾಯಭಾರ ಕಛೇರಿಯಿಂದ 'ಭಾರತ ಸಮಾಚಾರ' ಎಂಬ ವಾರಪತ್ರಿಕೆ ಹೊರಡಿಸುತ್ತಾರೆ. ಭಾರತದ ವಿಚಾರವಾಗಿ ಜರ್ಮನ್ ಭಾಷೆಯಲ್ಲಿ ತಿಂಗಳಿಗೆ ಒಂದು ಪುಸ್ತಕ ಹೊರಡಿಸುತ್ತಾರೆ. ಇವುಗಳ ಜೊತೆಗೆ ಲಂಡನ್‌ನಿಂದ 'ಇಂಡಿಯಾ ನ್ಯೂಸ್' ಎಂಬ ವಾರಪತ್ರಿಕೆ ಬರುತ್ತಿತ್ತು. 'ಇದು ಭಾರತ' ಎಂಬ ಭಾರತದ ಸಂಕ್ಷೇಪ ಚರಿತ್ರೆಯನ್ನೊಳಗೊಂಡ ಪುಸ್ತಕ ವೊಂದನ್ನು ಭಾರತದ ರಾಯಭಾರಿಗಳು ಪ್ರಕಟಿಸಿದ್ದರು.

ನನ್ನ ಜೊತೆಗೆ ತೆಗೆದುಕೊಂಡು ಹೋಗಿದ್ದ ಮೈಸೂರು ಗಂಧದ ಸಾಬೂನು ಎಲ್ಲರನ್ನೂ ಆಕರ್ಷಿಸಿತು. ಒಂದು ದಿನ ಸ್ನಾನ ಮಾಡಿ ಕೊಠಡಿಗೆ ಬಂದೆ. ಮನೆಯ ಯಜಮಾನಿ ಸ್ನಾನದ ಕೊಠಡಿ ಚೊಕ್ಕಟ ಮಾಡಲು ಹೋಗಿ ದ್ದವರು ಹೊರಗಡೆ ಬಂದು, "ಸ್ನಾನಕ್ಕೆ ಏನು ಉಪಯೋಗಿಸುತ್ತೀರಿ? ಸ್ನಾನದ ಮನೆಯೆಲ್ಲಾ ಸೆಂಟ್ ವಾಸನೆ ಬರುತ್ತಿದೆ" ಎಂದು ಕೇಳಿದಳು. ಆಗ ಮೈಸೂರು ಗಂಧದ ಸಾಬೂನನ್ನು ತೋರಿಸಿದೆ. ಅದರ ವಾಸನೆ ನನಗೆ ಅಭ್ಯಾಸವಾಗಿತ್ತು. ಆ ವಾಸನೆಯನ್ನು ಕಾಣದ ಆಕೆಗೆ ಅದೊಂದು ವಿಶೇಷ ಸುಗಂಧ. ಒಂದು ಸಾಬೂನು ಉಡುಗೊರೆ ಕೊಟ್ಟೆ. ಅದನ್ನು ಸ್ನಾನಕ್ಕೆ ಉಪಯೋಗಿಸದೆ ಆಕೆ ಮನೆಯಲ್ಲಿಟ್ಟು ನಿತ್ಯವೂ ವಾಸನೆ ನೋಡುತ್ತಿದ್ದಳು. ಜರ್ಮನಿಯಲ್ಲಿ ಸಾಬೂನಿನ ಬೆಲೆ ಹೆಚ್ಚು. ಅದರಲ್ಲಿ ವಾಸನೆಯೂ ಇರುವುದಿಲ್ಲ.

ಭಾರತದಲ್ಲಿ ತೆಗೆದ ಬಣ್ಣದ ಸಿನಿಮಾ ಚಿತ್ರ ಪ್ರದರ್ಶನವಿದೆಯೆಂದು ಪತ್ರಿಕೆಯಲ್ಲಿ ದೊಡ್ಡ ಪ್ರಕಟಣೆ ಮಾಡಿದ್ದು, ಅದನ್ನು ನೋಡಬೇಕೆಂದು ನಾನು ಜರ್ಮನ್ ಸ್ನೇಹಿತರೊಂದಿಗೆ ಹೋದೆ. ಪ್ರವೇಶಧನ ಒಂದು ರೂಪಾಯಿ. ಚಿತ್ರಮಂದಿರ ತುಂಬಿತ್ತು. ಹ್ಯಾಂಬೂರ್ಗಿನಿಂದ ಮೋಟಾರುಸೈಕಲ್ ಮೇಲೆ ಭಾರತಕ್ಕೆ ಬಂದು ಹಿಂದಿರುಗಿದ್ದ ಒಬ್ಬ ಜರ್ಮನ್ ಯುವಕ ತೆಗೆದ ಬಣ್ಣದ ಚಿತ್ರವಿದು. ಆತ ಪ್ರದರ್ಶನಕ್ಕೆ ಮುಂಚೆ ಬಂದು ತಾನು ಹೋದ ದಾರಿಯನ್ನು ವಿವರಿಸಿ, ಕೊನೆಗೆಂದ: "ಅಲ್ಲಿಗೆ ಹೋದರೆ ಬೇರೆ ಬೇರೆ ದೇಶಗಳಿಗೇ ಹೋದ ಹಾಗೆ ಆಗುತ್ತದೆ." ಅಲ್ಲಿ ಶ್ರೀ ನೆಹರೂ ಅವರು ಮತ್ತು ಮೈಸೂರು ಮಹಾರಾಜರು ತನಗೆ ತೋರಿಸಿದ ಆದರ, ಆತಿಥ್ಯಗಳಿಗಾಗಿ ಅವರಿಗೆ ವಂದನೆಗಳನ್ನು ಅರ್ಪಿಸಿದ. ಅನಂತರ ಬಣ್ಣದ ಚಿತ್ರ ಭಾರತದ ಸಂಗೀತದೊಡನೆ ಪ್ರಾರಂಭವಾಯಿತು. ಹ್ಯಾಂಬೂರ್ಗಿನಿಂದ ಕಾಬೂಲ್‌ವರೆಗೆ ಬಂದ ಚಿತ್ರ ತೋರಿಸಿದ ಮೇಲೆ, ದೆಹಲಿಯಲ್ಲಿ ನೆಹರೂ ಅವರೊಡನೆ ತಾನು ತೆಗೆಸಿದ ಚಿತ್ರ, ದೆಹಲಿಯ ಸುಂದರ ಚಿತ್ರಗಳು, ಕಾಶಿ, ಕಲ್ಕತ್ತ, ಮದರಾಸು, ಮೈಸೂರು, ತಿರುವಾಂಕೂರ್, ಸಿಲೋನ್ ಇವುಗಳ ಚಿತ್ರಗಳನ್ನು ತೋರಿಸಿದ—ಸುಮಾರು ಒಂದೂವರೆ ಗಂಟೆ ಕಾಲ. ಜನರು ಬಹಳ ಸಂತೋಷಗೊಂಡರು. ಅನೇಕರು ಭಾರತವನ್ನು ನೋಡಬೇಕೆಂದು ಇಚ್ಛೆಪಟ್ಟರು. ಭಾಷೆ ಬಾರದಿದ್ದರೂ ಎಲ್ಲಾ ಕಡೆಯಲ್ಲೂ ಆದರದಿಂದ ಕಾಣುತ್ತಾರೆ—ಎಂದು ಕೇಳಿದಮೇಲಂತೂ ಅವರ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ನಾನಿದ್ದ ಕಾಲದಲ್ಲಿ ಇಂಥ ೪-೫ ಪ್ರದರ್ಶನ ನಡೆಯಿತು. ಪ್ರತಿಸಾರಿಯೂ ಜನ ತುಂಬಿರುತ್ತಿದ್ದರು. ಚಿತ್ರ ತೆಗೆದವನು ತಾನು ಮಾಡಿದ ಪ್ರಯಾಣದ ಖರ್ಚನ್ನು ಈ ಚಿತ್ರಪ್ರದರ್ಶನದಿಂದ ಪಡೆದಿರಬೇಕು!

ಬ್ರೌನ್ಸ್‌ವೈಗ್‌ನ ಶಾಲೆಯೊಂದರಲ್ಲಿ ಭಾರತದ ಕೆಲವು ಸುದ್ದಿ ಚಿತ್ರಗಳನ್ನು ಪ್ರದರ್ಶಿಸಿದರು. ಪ್ರವೇಶಧನ ೨೫ ಪೈಸೆ. ಆ ಚಿತ್ರಗಳನ್ನು ಭಾರತದ ರಾಯಭಾರಿಯಿಂದ ತರಿಸಿಕೊಂಡಿದ್ದರು. ಭಾರತದ ಶಾಲೆಗಳು, ಕಾಫಿ ಮತ್ತು ಟೀ ಬೆಳೆಯುವ ವಿಧಾನ, ರೈತರ ಜೀವನ, ನಿರಾಶ್ರಿತರ ಕೆಲಸ, ಭಾರತದ ನೃತ್ಯಗಳು ಇತ್ಯಾದಿ ಜನರ ಮನಸ್ಸನ್ನು ಆಕರ್ಷಿಸಿದವು. ನನ್ನ ಜೊತೆಯಲ್ಲಿ ಬಂದ ಸ್ನೇಹಿತರಂತೂ ಆ ನಾಟ್ಯವನ್ನು ಹೇಗೆ ಕಲಿಯುತ್ತಾರೆ? ಎಷ್ಟು ಕಷ್ಟ! ಎಂದು ಆಶ್ಚರ್ಯಪಡುತ್ತಿದ್ದರು. ಭಾರತದ ಕಲೆ ಮತ್ತು ಸಂಸ್ಕೃತಿಗೆ ಬಹಳ ಗೌರವ ಸೂಚಿಸಿದರು. ಮಧುರೆ ಮೀನಾಕ್ಷಿ ದೇವಸ್ಥಾನದ ಚಿತ್ರಗಳನ್ನು ನೋಡಿದಮೇಲೆ, "ನಮ್ಮ ದೇಶದ ಯಾವ ಚರ್ಚುಗಳೂ ಈ ಹಿಂದಿನ ಕಾಲದ

ದೇವಸ್ಥಾನಗಳನ್ನು ವಿಶಾರಿಸಲಾರವು" ಎಂದು ಹೇಳಿದರು.

ಭಾರತದ ಹಿಂದಿನ ಸಂಸ್ಕೃತಿಯ ವೈಭವ ಅನೇಕರಿಗೆ ತಿಳಿದಿದೆ. ಭಾರತೀಯ ರೆಂದರೆ ಸತ್ಯವಂತರು, ಜ್ಞಾನಿಗಳು ಎಂದು ಅವರ ಭಾವನೆ. ನಾವು ಏನು ಹೇಳಿದರೂ ನಂಬುತ್ತಾರೆ. ಎಲ್ಲರಿಗೂ ಯೋಗಾಭ್ಯಾಸ ಬರುತ್ತದೆ ಎಂದು ಕೆಲವರು ತಿಳಿದುಕೊಂಡಿದ್ದಾರೆ. ಶ್ರೀ ಕಾಲ್‌ಬಸ್ ಅವರು ಯೋಗದ ವಿಚಾರ ಪುಸ್ತಕ ಓದಿದ್ದರು. ಆದರಲ್ಲಿ ಕೆಲವು ಕಡೆ—ಗುರುವಿನಿಂದ ಕಲಿಯಬೇಕು ಎಂದು ಬರೆದಿರುವುದನ್ನು ಓದಿ, ತಕ್ಕ ಗುರುವನ್ನು ಹುಡುಕುತ್ತಿದ್ದರು. ನಾನು ಸ್ವಲ್ಪ ತತ್ವವಿಚಾರ ಮಾತನಾಡುವುದನ್ನು ನೋಡಿ, "ನೀವು ತತ್ವ ವಿಚಾರ ಚೆನ್ನಾಗಿ ತಿಳಿದಿದ್ದೀರಿ. ಯೋಗ ಮುಂತಾದವು ತಮಗೆ ಚೆನ್ನಾಗಿ ತಿಳಿದಿರಬೇಕು. ನಾನು ಒಬ್ಬ ಗುರುವನ್ನು ಹುಡುಕುತ್ತಿದ್ದೆ. ನೀವೇ ಆ ಗುರು ಗಳು. ನನಗೆ ಗುರುಗಳಾಗಿ ಯೋಗಾಭ್ಯಾಸ ಹೇಳಿಕೊಡಿ" ಎಂದು ಕೇಳಿ ಕೊಂಡರು. ನಾನು ಗುರು ಅಲ್ಲವೆಂದೂ, ಯೋಗಾಭ್ಯಾಸ ಮಾಡಿಲ್ಲವೆಂದೂ ಹೇಳಿ ತಪ್ಪಿಸಿಕೊಳ್ಳುವುದು ಕಷ್ಟವಾಯಿತು. ಹೀಗೆ—ಭಾರತದಲ್ಲಿ ಎಲ್ಲರೂ ಯೋಗಿಗಳು, ಜ್ಯೋತಿಷ್ಯಗಾರರು ಎಂದು ತಿಳಿದಿದ್ದಾರೆ. ನನ್ನ ಸ್ನೇಹಿತರ ಮನೆಗೆ ಊಟಕ್ಕೆ ಹೋಗಿದ್ದಾಗ ಈ ಜ್ಯೋತಿಷ್ಯದ ಮಾತು ಬಂತು. ಎಲ್ಲರೂ ನನಗೆ ಕೈತೋರಿಸಲು ಮೊದಲು ಮಾಡಿದರು. ನನಗೆ ಗೊತ್ತಿಲ್ಲವೆಂದರೂ "ನೀವು ಸುಳ್ಳು ಹೇಳಿ ತಪ್ಪಿಸಿಕೊಳ್ಳುತ್ತಿದ್ದೀರಿ. ಬಂದಷ್ಟು ಹೇಳಿ" ಎಂದು ಎಲ್ಲರೂ ಹಿಂಸೆ ಮಾಡತೊಡಗಿದರು. ಕಡೆಗೆ ಬಂದಷ್ಟು ಬುರುಡೆ ಬಿಟ್ಟು ಅವರಿಂದ ತಪ್ಪಿಸಿಕೊಂಡೆ! ತತ್ವಜ್ಞಾನದ ವಿಚಾರ ಎಲ್ಲರೂ ಪ್ರಶ್ನೆ ಕೇಳುತ್ತಾರೆ. ಭಾರತೀಯರು ತತ್ವಜ್ಞಾನಿಗಳು. ಬಡತನದಲ್ಲಿದ್ದರೂ ಸಂತೋಷದಿಂದ ತೃಪ್ತಿ ಯಿಂದ ಇರಬಲ್ಲರು ಎಂದು ಅನೇಕರಿಗೆ ಗೊತ್ತು. ಇದು ಅವರಿಗೆ ಆಶ್ಚರ್ಯ. ಇದಕ್ಕೆ ನಮ್ಮ ಹಿಂದಿನ ಸಂಸ್ಕೃತಿಯೇ ಕಾರಣ ಎಂದು ಅನೇಕರಿಗೆ ಗೊತ್ತಿಲ್ಲ. ಅನೇಕ ಭಾರತೀಯರು ಇಲ್ಲಿ ಬಂದು ಹೋಗಿದ್ದರೂ, ಅವರು ಇವುಗಳನ್ನು ವಿವರಿಸಲು ಪ್ರಯತ್ನಪಡದೆ, ಅವರು ಹೇಳಿದ್ದೇ ಸರಿ ಎಂದು ತಲೆದೂಗಿದ್ದಾರೆ. ಅಲ್ಲದೆ ನಮ್ಮ ದೇಶ ಕೀಳು—ಎಂಬ ಭಾವನೆಯಿಂದ ಮಾತನಾಡುತ್ತಾರೆ. ನಮ್ಮ ದೇಶ ದರಿದ್ರ ದೇಶ; ಸುಖಸಂತೋಷಗಳಿಲ್ಲ; ಯೂರೋಪು ಸ್ವರ್ಗ— ಎಂಬ ಭಾವನೆಯಿಂದ ಮಾತನಾಡುವ ಭಾರತೀಯರನ್ನು ನೋಡಿದರೆ ಸಂಕಟ ವಾಗುತ್ತದೆ. ಇಷ್ಟೇ ಅಲ್ಲ, ಭಾರತ ದೇಶವನ್ನೇ ಬೈಯುವ ದೇಶದ್ರೋಹಿಗಳೂ ಇಲ್ಲದಿಲ್ಲ. ಈ ರೀತಿಯ ಮನೋಭಾವವನ್ನು ನಾನು ಯಾವ ದೇಶದಲ್ಲೂ ನೋಡಿಲ್ಲ. ಭಾರತೀಯರು ತಮ್ಮ ದೇಶವನ್ನು ಬೈಯುವುದು ಬಿಟ್ಟು ಬೇರೆ

ಮಾತನಾಡುವುದು ಕಡಮೆ!

ಭಾರತದ ತತ್ವಜ್ಞಾನ ಐರೋಪ್ಯ ದೇಶಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆ ದಿದೆ. ಅನೇಕ ಪುಸ್ತಕಗಳು ಜರ್ಮನ್ ಭಾಷೆಗೆ ಭಾಷಾಂತರ ಆಗಿವೆ. ಜನ ಕೊಂಡು ಓದುತ್ತಲೂ ಇದ್ದಾರೆ. ಬ್ರೌನ್ಸ್‌ವೈಗ್‌ನ ಪುಸ್ತಕದ ಅಂಗಡಿಯಲ್ಲಿ ನನಗೆ ಬೇಕಾದ ಪುಸ್ತಕ ಹುಡುಕುತ್ತಿದ್ದಾಗ, ಅಂಗಡಿಯ ಯಜಮಾನ ನನ್ನ ದೇಶ, ಊರು, ಬಂದಿರುವ ಕಾರಣ ಎಲ್ಲವನ್ನೂ ಕೇಳಿದ. ನಾನು ಮಾತ ನಾಡುತ್ತಿದ್ದಾಗ ಇಬ್ಬರು ದಂಪತಿಗಳು ಬಂದು ಶಿವಾನಂದರ ಪುಸ್ತಕಗಳನ್ನು ಕೇಳುತ್ತಿದ್ದರು. ಆ ಅಂಗಡಿಯ ಯಜಮಾನ ನನ್ನನ್ನು ಕರೆದು ಅವರಿಗೆ ಪರಿಚಯ ಮಾಡಿಕೊಟ್ಟ. "ಭಾರತದಿಂದ ನೀವು ವಿಜ್ಞಾನ, ಕೈಗಾರಿಕೆ ಕಲಿಯಲು ಇಲ್ಲಿ ಬರುತ್ತೀರಿ. ಇಲ್ಲಿಯ ವಿಜ್ಞಾನದ ಪುಸ್ತಕಗಳನ್ನು ಕೊಳ್ಳು ತ್ತೀರಿ. ಈ ದಂಪತಿಗಳು ಭಾರತದ ತತ್ವಜ್ಞಾನದ ವಿಚಾರ ಪುಸ್ತಕ ಹುಡುಕು ತ್ತಿದ್ದಾರೆ" ಎಂದು ಹೇಳಿದ. ಶ್ರೀ ಶಿವಾನಂದರ ಯೋಗದ ವಿಚಾರ ನೂರಾರು ಪುಸ್ತಕಗಳನ್ನು ಮಾರಿರುವುದಾಗಿ ಆತ ತಿಳಿಸಿದ.

ಮತ್ತೊಂದು ಪುಸ್ತಕದ ಅಂಗಡಿಗೆ ಹೋಗಿ ಭಾರತದ ವಿಚಾರ, ಅವರ ತತ್ವದ ವಿಚಾರದ ಪುಸ್ತಕಗಳನ್ನು ಹುಡುಕುತ್ತಿದ್ದೆ. ಅಂಗಡಿಯ ಯಜಮಾನ "ನಿಮಗೇಕೆ ಆ ಪುಸ್ತಕಗಳು? ನೀವು ಭಾರತದಿಂದಲೇ ಬಂದು ಅದರ ವಿಚಾರ ಪುಸ್ತಕಗಳನ್ನು ಏಕೆ ಕೊಳ್ಳುತ್ತೀರಿ?" ಎಂದು ಕೇಳಿದ. ನಾನೆಂದೆ: "ಈ ಪುಸ್ತಕಗಳು ಬೇಕಾಗಿರುವುದು ನನಗಲ್ಲ, ನನ್ನ ಜರ್ಮನ್ ಸ್ನೇಹಿತರಿಗೆ. ಭಾರತದ ವಿಚಾರ ತಿಳಿದುಕೊಳ್ಳಬೇಕೆಂಬ ಕುತೂಹಲವುಳ್ಳ ಜನರಿಗೆ ಕೊಡಲು ಕೊಳ್ಳುತ್ತೇನೆ." ಹೀಗೆ ಮಾತು ಮೊದಲಾಗಿ ಭಾರತದ ವಿಚಾರ ಪ್ರಸ್ತಾಪ ಮಾಡುತ್ತಾ ಆತ "ಭಾರತದಲ್ಲಿ ಬಹಳ ಬಡತನ; ಯಾವಾಗಲೂ ಬಿಸಿಲು; ಯೂರೋಪು ದೇಶದವರು ಅಲ್ಲಿ ವಾಸಿಸುವುದು ಕಷ್ಟ. ಯಾವಾಗಲೂ ಕ್ಷಾಮ ಇದ್ದೇ ಇರುತ್ತದೆ" ಎಂದು ಹೇಳತೊಡಗಿದ. "ಅವರವರ ದೇಶ ಅವರವರಿಗೆ ಸರಿ. ನೀವು ಯಾವ ವಾತಾವರಣದಲ್ಲಿ ಬೆಳೆದಿರುತ್ತೀರೋ ಆ ವಾತಾವರಣ ನಿಮಗೆ ಸರಿಹೋಗುತ್ತದೆ. ನೀವು ತಿಳಿದಿರುವುದು ತಪ್ಪು. ಪರದೇಶದವರಿಗೆ ಭಾರತವನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ" ಎಂದು ನಾನು ಉತ್ತರಿಸಿದೆ. ಭಾರತದಲ್ಲಿ ಏಳು ವರ್ಷಕಾಲ ಇದ್ದು ಹಿಂದಿರುಗಿದ ಒಬ್ಬಾತ ರೇಡಿಯೋದಲ್ಲಿ ಭಾರತದ ವಿಚಾರ ಭಾಷಣ ಮಾಡುತ್ತಾ, "ಭಾರತ ಬಹಳ ವಿಶಾಲ ದೇಶ. ಅದು ಎಷ್ಟು ವಿಶಾಲವಾಗಿದೆಯೋ ಅಷ್ಟೇ ವಿಧದ ಸಂಸ್ಕೃತಿ, ಕಲೆ, ಭಾಷೆಗಳ ಜನ ಅಲ್ಲಿದ್ದಾರೆ. ನಾನು ೭ ವರ್ಷಗಳಿದ್ದರೂ ನನಗೆ ಭಾರತೀ

ಯರ ಸಂಸ್ಕೃತಿ, ಅವರ ನಡೆನುಡಿಗಳು ಇನ್ನೂ ಅರ್ಥವಾಗಿಲ್ಲ. ಭಾರತವನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ" ಎಂದು ಹೇಳಿದರು. ಹೀಗೆ ವಿದೇಶಕ್ಕೆ ಹೋಗಿಬಂದವರನ್ನು ನಮ್ಮ ದೇಶದಲ್ಲಿ 'ಫಾರಿನ್ ರಿಟರ್ನ್ಡ್' ಎನ್ನುವ ಹಾಗೆ, ಇಲ್ಲಿ ಇಂಡಿಯಾಕ್ಕೆ ಹೋಗಿಬಂದವರನ್ನು 'ಇಂಡಿಯಾ ರಿಟರ್ನ್ಡ್' ಎಂದು ಅನ್ನುತ್ತಾರೆ.

ಕಾರ್ಖಾನೆಯಲ್ಲಿ ಒಬ್ಬ ಕೆಲಸಗಾರ, "ನಾನು ಇಂಡಿಯಾಕ್ಕೆ ಹೋಗಿದ್ದೆ. ಸರ್ಕಸ್‌ನಲ್ಲಿದ್ದೆ. ನನಗೆ ಇಂಡಿಯಾ ದೇಶದ ಭಾಷೆಗಳು ಬರುತ್ತವೆ" ಎಂದು ಎಲ್ಲರಲ್ಲೂ ಹೇಳುತ್ತಿದ್ದ. ಎಲ್ಲರೂ ಅವನು ಹೇಳುತ್ತಿದ್ದ ಕತೆಗಳನ್ನು ಬಹಳ ಕುತೂಹಲದಿಂದ ಕೇಳುತ್ತಿದ್ದರು. ನಾನು ಕಾರ್ಖಾನೆಗೆ ಹೋದಮೇಲೆ ಆತ ನನ್ನು ನನ್ನ ಹತ್ತಿರ ಕರೆತಂದರು. ಆತ ಬರೀ ಬುರುಡೆ ಬಿಡುತ್ತಿದ್ದ! ಯಾವ ಭಾಷೆಯೂ ಬರುತ್ತಿರಲಿಲ್ಲ. ಕಡೆಗೆ ನನ್ನನ್ನು ಕಂಡರೆ ತಲೆ ತಪ್ಪಿಸಿಕೊಂಡು ತಿರುಗಾಡುತ್ತಿದ್ದ. ನಾನು ಹೋಗುವವರೆಗೂ ಆತ ಇಂಡಿಯಾಕ್ಕೆ ಹೋಗಿ ಬಂದಿದ್ದಾನೆ ಎಂದು ತಿಳಿದು ಜನರು ಅವನು ಹೇಳುತ್ತಿದ್ದುದನ್ನೆಲ್ಲಾ ನಂಬು ತ್ತಿದ್ದರು.

ಭಾರತದ ಬಗ್ಗೆ ಜರ್ಮನರಿಗಿದ್ದ ವಿಶ್ವಾಸ ಭಾರತ-ಜರ್ಮನಿ ಸಂಘ ವೊಂದನ್ನು ಸ್ಥಾಪಿಸಲು ಉತ್ತೇಜನ ಕೊಟ್ಟಿತು. ಉಪಾಧ್ಯಾಯಿನಿ ಶ್ರೀಮತಿ ಆಸ್ಮಾನ್ ಈ ವಿಚಾರದಲ್ಲಿ ವಿಶೇಷ ಉತ್ಸಾಹ ತೋರಿಸಿ, ಅವರೇ ಈ ಸಂಘ ಸ್ಥಾಪನೆ ಮಾಡಿದರು. ಭಾರತದ ವಿಚಾರವಾಗಿ ವಿಶ್ವಾಸವುಳ್ಳ ಕುಟುಂಬದವ ರೆಲ್ಲರೂ ಇದಕ್ಕೆ ಸದಸ್ಯರಾದರು. ಆ ಸಂಘಕ್ಕೆ ನನ್ನಲ್ಲಿದ್ದ ಭಾರತದ ವಿಚಾರದ ಪುಸ್ತಕ, ಚಿತ್ರ, ಫೋಟೋಗಳನ್ನು ಕಾಣಿಕೆ ಕೊಟ್ಟೆ. ಇದು ಮುಂದೆ ಹೇಗೆ ಬೆಳೆಯುತ್ತದೆಯೋ ನೋಡಬೇಕು.

೧೪. ಯಾಂತ್ರಿಕ ನಿಪುಣತೆ ಮತ್ತು ಕೈಗಾರಿಕೆ

ಕೆಲಸಕ್ಕೆ ಸಮನಾದ ಬಂಧುವಿಲ್ಲ. ಕೆಲಸಮಾಡುತ್ತಿರುವವರು ಎಂದೂ ಕೆಡುವುದೂ ಇಲ್ಲ.

—ಸುಭಾಷಿತ

"ಮೇಡ್ ಇನ್ ಜರ್ಮನಿ" ಎಂಬ ಮಾತು ಯಾವುದೇ ಒಳ್ಳೆಯ ಯಂತ್ರ, ಉತ್ತಮ ಯಾಂತ್ರಿಕ ಮತ್ತು ವಿಜ್ಞಾನ ಸಂಬಂಧಿತ ವಸ್ತುಗಳಿಗೆ ಅಂಟಿಕೊಂಡೇ ಇರುತ್ತದೆ. ಜರ್ಮನಿಯ ಸಾಮಾನು ಎಂದರೆ ಒಳ್ಳೆಯದು, ಉತ್ತಮವಾದದ್ದು, ಬಾಳಿಕೆ ಬರುವಂಥದ್ದು ಎಂಬ ನಂಬಿಕೆಯೂ ಜೊತೆಗೆ ಸೇರಿರುತ್ತದೆ. ಯುದ್ಧಕ್ಕೆ ಮೊದಲು ಜರ್ಮನಿಯ ವಸ್ತುಗಳು ಹೇರಳವಾಗಿ ನಮ್ಮ ದೇಶದಲ್ಲಿ ಕಾಣಬರುತ್ತಿದ್ದವು. ಜರ್ಮನಿಯ ಸಾಮಾನುಗಳಿಗೆ ಹೆಚ್ಚು ಪ್ರಾಮುಖ್ಯತೆ ಬರಲು ಈ ಜನರ ಯಾಂತ್ರಿಕ ನಿಪುಣತೆಯೇ ಮೂಲಾಧಾರ. ಯಾಂತ್ರಿಕ ಯುಗದ ನಿರ್ಮಾಣದಲ್ಲಿ ಬಹಳ ಪ್ರಮುಖ ಸ್ಥಾನ ವಹಿಸಿದೆ ಜರ್ಮನಿ.

ಜರ್ಮನಿಯಲ್ಲಿ ಇಂಥ ವಸ್ತುವನ್ನು ತಯಾರಿಸುತ್ತಾರೆ, ಇಂಥದು ಇಲ್ಲ ಎಂದು ಹೇಳಲು ಅಸಾಧ್ಯ. ಇವರು ತಯಾರುಮಾಡದ ವಸ್ತುವೇ ಇಲ್ಲ. ಜರ್ಮನಿ ಶೀತಳ ದೇಶ. ಇಲ್ಲಿ ವ್ಯವಸಾಯಕ್ಕೆ ಹೆಚ್ಚು ಅವಕಾಶವಿಲ್ಲ. ಹೆಚ್ಚು ಕೆಲಸ ಮಾಡಿದರೂ ಆಯಾಸವಾಗುವುದಿಲ್ಲ. ಜನಸಂಖ್ಯೆ ಹೆಚ್ಚು. ಬೇರೆ ಕೈಗಾರಿಕೆಗಳಿಲ್ಲದಿದ್ದರೆ ಜನ ಹೊಟ್ಟೆಗಿಲ್ಲದೆ ಸಾಯಬೇಕಾಗುತ್ತದೆ. ಈ ಜನ ಸಂಶೋಧನೆಗೆ ಹೆಚ್ಚಾಗಿ ಗಮನ ಕೊಡುತ್ತಾರೆ. ನಿತ್ಯವೂ ಒಂದೊಂದು ಹೊಸ ವಸ್ತು ಬರುತ್ತಲೇ ಇರುತ್ತದೆ. ನಿನ್ನೆ ಹೊಸದಾಗಿದ್ದುದು ಈ ದಿನ ಆಗಲೇ ಹಳೆಯದು ಎನ್ನುವ ಜನ ಇವರು. ಈ ಮಾರ್ಗನಲ್ಲಿ ಬೆಳೆದುಬಂದಿದೆ ಜರ್ಮನಿಯ ಜನಾಂಗ. ಎಷ್ಟೇ ಕಷ್ಟ ಬಂದರೂ ತಮ್ಮ ಪ್ರಯತ್ನವನ್ನು ಬಿಡರು. ಯಂತ್ರಯುಗ ಬಂದಮೇಲೆ ಅನೇಕ ಹೊಸ ಯಂತ್ರಗಳನ್ನು ಮೊದಲು ಕಂಡುಹಿಡಿದವರು ಈ ಜರ್ಮನರು. ಅದಕ್ಕೆ ತಕ್ಕ ವಾತಾವರಣವನ್ನು ಅವರು ಕಲ್ಪಿಸಿಕೊಂಡಿದ್ದಾರೆ. ಯುದ್ಧದಲ್ಲಿ ಜರ್ಮನಿ ನಾಶವಾಗಿಹೋಗಿತ್ತು. ಪುನಃ ಚೇತರಿಸಿಕೊಳ್ಳುತ್ತೇವೆ, ಎಂಬ ಕನಸು ಸಹ ಜರ್ಮನಿಯವರಿಗಿರಲಿಲ್ಲ. ಆದರೆ ಇವರ ನಿಪುಣತೆ, ದುಡಿಮೆ ಇಂದು ಜರ್ಮನಿಯನ್ನು ಎಲ್ಲಾ ರೀತಿಯಲ್ಲೂ

ಪ್ರಪಂಚದ ಪ್ರಮುಖ ರಾಷ್ಟ್ರಗಳ ಸ್ಥಾನಕ್ಕೆ ತಂದಿದೆ. ಯಾವುದೇ ಸಣ್ಣ ಸಮಸ್ಯೆಯನ್ನು ತೆಗೆದುಕೊಂಡರೂ ಅದನ್ನು ಪರಿಹರಿಸುವವರೆಗೂ ಅವರು ಬಿಡದೆ ದುಡಿಯುತ್ತಾರೆ.

ಈ ದಿನ ಜರ್ಮನಿಯಲ್ಲಿ ಯಾವ ಹಳ್ಳಿಗೇ ಹೋಗಲಿ, ಅಲ್ಲಿ ಒಂದು ಕಾರ್ಖಾನೆಯನ್ನು ನೋಡಬಹುದು. ದೊಡ್ಡ ಪಟ್ಟಣಗಳಲ್ಲಿ ಮಾತ್ರವಲ್ಲದೆ ಹಳ್ಳಿಗಳಿಗೂ ಕೈಗಾರಿಕೆ ಹರಡಿದೆ. ವಿಕೇಂದ್ರೀಕರಣವಾಗಿದೆ. ಪ್ರತಿ ಪಟ್ಟಣದಲ್ಲೂ ಪ್ರತಿ ಹಳ್ಳಿಯಲ್ಲೂ ಕೈಗಾರಿಕೆ ಬೆಳೆಯುತ್ತಿದೆ. ಕಾರ್ಖಾನೆ ಬೆಳೆಯಿತೆಂದರೆ ಅದರ ಸುತ್ತಲೂ ಹಳ್ಳಿ ಬೆಳೆಯುತ್ತದೆ. ಅಲ್ಲಿಯ ಜನ ದೊಡ್ಡ ಪಟ್ಟಣಗಳಿಗಿಂತ ಹಳ್ಳಿಯಲ್ಲಿ, ಸಣ್ಣ ಊರುಗಳಲ್ಲಿ ಇರಲು ಇಷ್ಟಪಡುತ್ತಾರೆ. ದೊಡ್ಡ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳಿಗೆ ಸಹಾಯ ಮಾಡುತ್ತವೆ. ಜರ್ಮನರು ತಮ್ಮಲ್ಲಿ ತಯಾರಾದ ಸಾಮಾನು ಕೊಳ್ಳುವರೇ ಹೊರತು ಬೇರೆ ವಸ್ತುಗಳಿಗೆ ಕೈಹಾಕುವುದಿಲ್ಲ. ಈ ಸ್ವದೇಶಪ್ರೇಮದಿಂದ ಈ ಕೈಗಾರಿಕೆಗಳಿಗೂ ಉತ್ತೇಜನ ಸಿಕ್ಕಿದೆ. ಪರಸ್ಪರ ಸಹಕಾರವಿರುವುದರಿಂದ ಎಲ್ಲಾ ಕೈಗಾರಿಕೆಗಳೂ ಬೆಳೆಯಲು ಅವಕಾಶವಾಗಿದೆ. ತಮ್ಮತಮ್ಮಲ್ಲಿ ಸ್ವಲ್ಪ ಸ್ಪರ್ಧೆ ಇದ್ದರೂ ಹೊರದೇಶಕ್ಕೆ ಸಾಮಾನು ಸರಬರಾಜು ಮಾಡಲು ಎಲ್ಲರೂ ಒಂದುಗೂಡುತ್ತಾರೆ. ಇದು ನಮ್ಮಿಂದ ಸಾಧ್ಯವಿಲ್ಲ ಎಂದು ಹೇಳುವವರು ಕಡಮೆ. ಯಾವುದು ತಾನೆ ಮನುಷ್ಯನಿಗೆ ಅಸಾಧ್ಯ? ಎಂದು ಕೇಳುತ್ತಾರೆ. ಮನುಷ್ಯನ ದುಡಿತ, ಆಯಾಸ, ಕಷ್ಟಗಳನ್ನು ಕಡಮೆ ಮಾಡಲು ಯಂತ್ರಗಳನ್ನು ಕಂಡುಹಿಡಿದರೂ ಈ ಜನ ತಮ್ಮ ಸ್ಥಾನ ಕಳೆದುಕೊಳ್ಳುವುದಿಲ್ಲ. ಯಂತ್ರಕ್ಕಿಂತ ಮನುಷ್ಯನಿಗೆ ಗೌರವ ಹೆಚ್ಚು. ಜರ್ಮನಿಯ ಯಾವ ಮೂಲೆಯಲ್ಲಿದ್ದರೂ ಅವರಿಗೆ ಅದು ತಮ್ಮ ದೇಶದ್ದು ಎಂಬ ಹೆಮ್ಮೆ ಇದ್ದೇ ಇರುತ್ತದೆ. ಮರ್ಸೆಡಿಸ್ ಬೆನ್ಜ್ ಕಾರು ಪಂದ್ಯದಲ್ಲಿ ಪ್ರಪಂಚದಲ್ಲಿ ಮೊದಲನೆಯ ಸ್ಥಾನ ಪಡೆದಾಗ ಅವರ ಸಂತೋಷ ಹೇಳತೀರದು. ಯುದ್ಧದಲ್ಲಿ ಎಲ್ಲವನ್ನೂ ಕಳೆದುಕೊಂಡು, ೭–೮ ವರ್ಷಗಳಲ್ಲೇ ಪುನಃ ಮೊದಲನೇ ಸ್ಥಿತಿಗೆ ಬಂದೆವಲ್ಲಾ ಎಂದು ಹೆಮ್ಮೆ ಪಡುತ್ತಾರೆ. ಭಾಷೆ, ನಡೆನುಡಿಗಳಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವ್ಯತ್ಯಾಸವಿದ್ದರೂ ಕಲಿಯುವ ವಿದ್ಯೆಯಲ್ಲಿ, ಕೈಗಾರಿಕೆಗಳಲ್ಲಿ ಒಂದೇ ತತ್ವವನ್ನು ಅನುಸರಿಸುತ್ತಾರೆ. ಅವರ ಬೆಳವಣಿಗೆಗೆ ಇದು ಬಹಳ ಸಹಕಾರಿಯಾಗಿದೆ. ಜರ್ಮನಿಯಲ್ಲಿ ಎಲ್ಲಿ ಯಾವ ಕಾರ್ಖಾನೆಗೆ ಹೋದರೂ ಒಂದು ಉನ್ನತಮಟ್ಟವನ್ನು ಕಾಣಬಹುದು. ಸರ್ಕಾರದವರು ಕೈಗಾರಿಕೆಗಳೊಡನೆ ಸಹಕರಿಸುತ್ತಾರೆ. ಜರ್ಮನಿಯಲ್ಲಿರುವುದು ಒಂದೇ ಭಾಷೆ. ಹಲವು ಭಾಷೆಗಳ

ತೊಡಕು ಇಲ್ಲವೇ ಇಲ್ಲ. ಕೈಗಾರಿಕೆಗಳಿಗೆ ಬೇಕಾದ ಪುಸ್ತಕಗಳೂ ಪತ್ರಿಕೆಗಳೂ ಹೇರಳ. ಜರ್ಮನಿಯಲ್ಲೇ ಅಲ್ಲದೆ, ಪ್ರಪಂಚದಲ್ಲೇ ಆಯಾ ಕೈಗಾರಿಕೆಗಳಲ್ಲಿ ಏನು ಪ್ರಗತಿ ಆಗಿದೆಯೋ ಎಲ್ಲಾ ತಿಳಿಯುತ್ತದೆ. ಕೈಗಾರಿಕೆಗೆ, ಸಂಶೋಧನೆಗಳಿಗೆ ಇದರಿಂದ ಸಹಾಯವಾಗುತ್ತದೆ. ಯುದ್ಧದಲ್ಲಿ ಅವರ ಪೇಟೆಂಟುಗಳೆಲ್ಲಾ ನಾಶವಾಗಿವೆ. "ಹೀಗೆ ಎಲ್ಲವನ್ನೂ ಕಳೆದುಕೊಂಡಿದ್ದೀರಿ. ಇತರರು ನಿಮ್ಮದನ್ನು ನಕಲು ಮಾಡಿದರೆ ಏನು ಮಾಡುತ್ತೀರಿ?" ಎಂದು ಕೇಳಿದರೆ, "ನಕಲು ಮಾಡಿದರೆ ನಾವು ನಾಳೆ ಬೇರೆ ಮಾಡುತ್ತೇವೆ. ಆ ಶಕ್ತಿ ನಮಗಿದೆ" ಎಂದು ಹೇಳಿದ ಕಾರ್ಖಾನೆಯ ಒಬ್ಬ ಮುಖ್ಯಾಧಿಕಾರಿ.

ಕೈಗಾರಿಕೆ ಬೆಳೆಯಬೇಕಾದರೆ ಅದಕ್ಕೆ ತಕ್ಕ ವಿದ್ಯಾಭ್ಯಾಸ ಬೇಕು. ಜರ್ಮನಿಯಲ್ಲಿ ಕೈಗಾರಿಕೆ ಬೆಳೆಯಲು ಅನುಕೂಲವಾದ ವಿದ್ಯಾಭ್ಯಾಸ ಇದೆ. ಕಾರ್ಖಾನೆಗಳಲ್ಲಿ ಹುಡುಗ–ಹುಡುಗಿಯರಿಗೆ ಚಿಕ್ಕಂದಿನಿಂದಲೇ ತರಪೇತು ನೀಡುತ್ತಾರೆ. ಅವರು ತಮ್ಮ ತಮ್ಮ ವಿಭಾಗಗಳಲ್ಲಿ ವಿಶೇಷ ತರಪೇತು ಪಡೆದು ತಜ್ಞರಾಗುತ್ತಾರೆ. ಹಗಲು ಕೆಲಸಮಾಡಿ ಸಂಜೆ ಓದಲು ಅನುಕೂಲಗಳಿವೆ. ವಿಶ್ವವಿದ್ಯಾನಿಲಯಗಳೂ ಕೈಗಾರಿಕೆಗಳೂ ಹೊಂದಿಕೊಂಡು ಹೋಗುತ್ತವೆ. ಕಾರ್ಖಾನೆಯವರು ತಮ್ಮ ಸಮಸ್ಯೆಗಳನ್ನು ವಿಶ್ವವಿದ್ಯಾನಿಲಯಗಳಿಗೆ ಕಳುಹಿಸುತ್ತಾರೆ. ವಿಶ್ವವಿದ್ಯಾನಿಲಯಗಳು ತಮ್ಮ ವಿದ್ಯಾರ್ಥಿಗಳ ತರಪೇತಿಗೆ ಕಾರ್ಖಾನೆಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ವಿಶ್ವವಿದ್ಯಾನಿಲಯಗಳಲ್ಲಿ ಕೈಗಾರಿಕೆಗಳಿಗೆ ಸಂಬಂಧಿಸಿದ ಭಾಷಣಗಳನ್ನು ಏರ್ಪಡಿಸಿ, ಕಾರ್ಖಾನೆಗಳಿಗೆ ಉಪಯೋಗವಾಗುವಂತೆ ಸಹಾಯಮಾಡುತ್ತಾರೆ. ಜರ್ಮನಿಯ ಯಾವ ಭಾಗದಿಂದಲೇ ಬರಲಿ, ವಿಶ್ವವಿದ್ಯಾನಿಲಯದಲ್ಲಿ ಭಾಷಣ ಏರ್ಪಡಿಸಿ, ಕಾರ್ಖಾನೆಗಳ ಕೆಲಸಗಾರರಿಗೆ ಆಹ್ವಾನ ಕೊಡುತ್ತಾರೆ. ಅವರೂ ಅದನ್ನು ಸದುಪಯೋಗಪಡಿಸಿಕೊಳ್ಳುತ್ತಾರೆ. ಇಂಜಿನಿಯರಿಂಗ್ ಸಮ್ಮೇಳನಕ್ಕೆ ಹೋಗಿ ಬಂದರೆ ತಾವು ತಿಳಿದುಕೊಂಡ ವಿಷಯಗಳನ್ನು ಎಲ್ಲರಿಗೂ ತಿಳಿಸುತ್ತಾರೆ. ಇದಕ್ಕಾಗಿ ಭಾಷಣ ಏರ್ಪಡಿಸುತ್ತಾರೆ. ತಾವೇ ಸ್ವತಃ ಹೋಗದಿದ್ದರೂ ಹೋಗಿಬಂದವರಿಂದ ತಿಳಿದುಕೊಳ್ಳಲು ಪ್ರಯತ್ನಪಡುತ್ತಾರೆ. ತಮ್ಮ ತಮ್ಮ ಕೈಗಾರಿಕೆಗಳಲ್ಲಿ, ಕಾರ್ಖಾನೆಗಳಲ್ಲಿ ಇರುವ, ಬರುವ ಸಮಸ್ಯೆಗಳನ್ನು ಆಗಾಗ ತಂದು ಚರ್ಚಿಸಿ, ಅವನ್ನು ಪರಿಹರಿಸಲು ಪ್ರಯತ್ನಪಡುತ್ತಾರೆ.

ಇಲ್ಲಿ ಆಟದ ಸಾಮಾನಿನ ಅಂಗಡಿಯೂ ಒಂದು ಕೈಗಾರಿಕಾ ಶಾಲೆ. ಅದನ್ನು ನೋಡಿಯೇ ಅನೇಕ ವಿಷಯಗಳನ್ನು ಕಲಿಯಬಹುದು. ಹೊಸದಾಗಿ ಒಂದು ಯಂತ್ರ, ರೈಲು, ಬಸ್ಸು ಬಂದರೆ ಮಾರನೇ ದಿನವೇ ಆಟದ ಸಾಮಾ

ನಿನ ಅಂಗಡಿಯಲ್ಲಿ ಅದೇ ಮಾದರಿಯ, ಅದರಂತೆಯೇ ಕೆಲಸ ಮಾಡುವ ಆಟದ ಸಾಮಾನುಗಳನ್ನು ನೋಡಬಹುದು. ತಂದೆತಾಯಂದಿರು ಮಕ್ಕಳನ್ನು ಅಂಗಡಿಗೆ ಕರೆದುಕೊಂಡು ಹೋದಾಗ, ದಾರಿ ಉದ್ದಕ್ಕೂ ಇರುವ ಈ ಅಂಗಡಿಗಳ ಕಿಟಕಿಗಳಲ್ಲಿ ಕಾಣುವ ಸಾಮಾನುಗಳನ್ನು ತೋರಿಸಿ ಅವುಗಳ ವಿಚಾರ ಹೇಳುತ್ತಾರೆ. ಮಕ್ಕಳು ಚಿಕ್ಕಂದಿನಿಂದಲೇ ಈ ಯಂತ್ರಯುಗದ ವಿದ್ಯೆ ಕಲಿಯುತ್ತಾರೆ. ಕ್ರಿಸ್ಮಸ್ ಹಬ್ಬಕ್ಕೆ ಒಬ್ಬರ ಮನೆಗೆ ಹೋದಾಗ, ೮-೧೦ ವರ್ಷದ ಒಬ್ಬ ಹುಡುಗ ತನ್ನ ಕೊಠಡಿಯಲ್ಲಿ ವಿದ್ಯುತ್ ರೈಲನ್ನು ತೋರಿಸಿದ. ಆ ಸಣ್ಣ ಹುಡುಗನಿಗೆ ವಿದ್ಯುತ್ ರೈಲು ಬಿಡುವುದು, ಅದನ್ನು ಜೋಡಿಸುವುದು ಎಲ್ಲವೂ ಗೊತ್ತಿತ್ತು. ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಹೀಗೆ ಸಣ್ಣದರಿಂದಲೇ ಅಭ್ಯಾಸವಾಗಿ ದೊಡ್ಡವನಾದಾಗ ಆತ ತನ್ನ ಬುದ್ಧಿಶಕ್ತಿಯನ್ನು ಚೆನ್ನಾಗಿ ಉಪಯೋಗಿಸುತ್ತಾನೆ. ಯಂತ್ರ ಬಿಚ್ಚುವುದನ್ನು, ಪುನಃ ಜೋಡಿಸುವುದನ್ನು ಕಲಿಯುತ್ತಲೇ ವಿದ್ಯಾಭ್ಯಾಸ ನಡೆಸುತ್ತಾರೆ. ಇವರಿಗೆ ಯಾವುದೂ ಹೊಸದಾಗಿ ಕಾಣುವುದಿಲ್ಲ. ಹೊಸದನ್ನು ಕಂಡುಹಿಡಿಯಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತಾರೆ. ಯಾವ ದೊಡ್ಡ ಊರಿಗೇ ಹೋಗಲಿ, ಅಲ್ಲಿ ಒಂದು ಮ್ಯೂಸಿಯಂ ಇದ್ದೇ ಇರುತ್ತದೆ. ಆ ಊರಿನಲ್ಲಿ ಏನೇನು ಕಂಡುಹಿಡಿದರೂ ಅವನ್ನು ಅಲ್ಲಿ ನೋಡಬಹುದು. ಕೈಗಾರಿಕಾ ಪ್ರದರ್ಶನಗಳನ್ನೂ ಕಾಣಬಹುದು. ಈ ಸಂಗ್ರಹಾಲಯಗಳಿಗೆ ಹೋದರೆ, ಶಾಲೆಯಲ್ಲಿ ಪುಸ್ತಕದಲ್ಲಿ ಕಲಿತದ್ದನ್ನೆಲ್ಲಾ ಇಲ್ಲಿ ಕಾಣಬಹುದು. ಹಿಂದೆ ಏನೇನು ನಡೆಯಿತು, ಹೇಗೆ ಪ್ರಪಂಚ ಬೆಳೆಯಿತು, ಇತ್ಯಾದಿ ಎಲ್ಲವನ್ನೂ ಕಾಣಬಹುದು. ಸಂಗ್ರಹಾಲಯ ಪ್ರಪಂಚದ ಬಗ್ಗೆ ಜ್ಞಾನಾರ್ಜನೆಯ ಸ್ಥಳ. ಕೈಗಾರಿಕೆಗಳು ಎಲ್ಲೆಲ್ಲಿ ಇದ್ದುವೋ ಆ ಪ್ರದೇಶಗಳು ಯುದ್ಧದಲ್ಲಿ ಪೂರ್ಣವಾಗಿ ನಾಶವಾಗಿದ್ದರೂ, ಪುನಃ ಅಲ್ಲಿ ಈ ಸಂಗ್ರಹಾಲಯಗಳ ನಿರ್ಮಾಣವಾಗಿದೆ.

ಜರ್ಮನಿಯಲ್ಲಿ ಇಂಥ ಪ್ರದರ್ಶನ ಮತ್ತು ಸಂಗ್ರಹಾಲಯಗಳಿಗೆ ಬಹು ಪ್ರಮುಖ ಸ್ಥಾನ. ಈ ಪ್ರದರ್ಶನಗಳಿಂದ ಹೊಸದಾಗಿ ಬಂದ ವಸ್ತುಗಳು, ಅವುಗಳ ಉಪಯೋಗದ ಪರಿಚಯವಾಗುವುದರ ಜೊತೆಗೆ ಅವುಗಳ ವ್ಯಾಪಾರವೂ ಆಗುತ್ತದೆ. ಬೇಸಗೆಯ ಕಾಲ ಬರುವ ಹೊತ್ತಿಗೆ, ಹೊರಗಡೆ ಹೋಗಿ ಬಿಡಾರಮಾಡುವುದಕ್ಕೆ ಬೇಕಾದ ಡೇರೆಗಳು, ಅದಕ್ಕೆ ತಕ್ಕ ಸಲಕರಣೆಗಳು—ಇವುಗಳ ಪ್ರದರ್ಶನ, ಎಲ್ಲಾ ಊರುಗಳಲ್ಲಿಯೂ ನಡೆಯುತ್ತದೆ. ಕೈಗಾರಿಕಾ ಪ್ರದರ್ಶನಗಳಿಗಂತೂ ಲೆಕ್ಕವೇ ಇಲ್ಲ. ಫೋಟೋ ವಸ್ತುಗಳ ಪ್ರದರ್ಶನ, ಗಡಿಯಾರ ಪ್ರದರ್ಶನ, ಪತ್ರಿಕೆಗಳ ಪ್ರದರ್ಶನ, ಯಂತ್ರಗಳ

ಪ್ರದರ್ಶನ—ಹೀಗೆ ಅನೇಕ ಪ್ರದರ್ಶನಗಳು ಬೇರೆ ಬೇರೆ ಕಾಲದಲ್ಲಿ ನಡೆಯು ತ್ತವೆ. ಈ ಪ್ರದರ್ಶನಗಳಿಗೆ ಶಾಶ್ವತ ಕಟ್ಟಡಗಳಿವೆ. ಇವುಗಳಲ್ಲಿ ಸದ್ಯಕ್ಕೆ ಹನೋವರ್‌ನಲ್ಲಿ ಏಪ್ರಿಲ್ ತಿಂಗಳಲ್ಲಿ ನಡೆಯುವ ಕೈಗಾರಿಕಾ ಪ್ರದರ್ಶನವೇ ದೊಡ್ಡದು. ಯುದ್ಧಕ್ಕೆ ಮುಂಚೆ ಲೀಪ್ಜಿಷ್ ಎಂಬ ಕಡೆ ನಡೆಯುತ್ತಿತ್ತು. ಈಗ ಹನೋವರ್‌ನಲ್ಲಿ ನಡೆಯುತ್ತದೆ.

ಯುದ್ಧವಾದ ಮೇಲೆ ಜರ್ಮನಿ ಯಾಂತ್ರಿಕ ಮಾರ್ಗದಲ್ಲಿ ಮುಂದು ವರಿದಿರುವುದನ್ನು, ಈ ೭–೮ ವರ್ಷಗಳಲ್ಲಿ ಅವರು ಹೆಚ್ಚು ದುಡಿದು ತಯಾರಿಸಿದ ಎಲ್ಲಾ ಸಾಮಗ್ರಿಗಳನ್ನು, ಯಂತ್ರಗಳನ್ನು ನೋಡಬೇಕಾದರೆ ಹನೋವರ್ ಕೈಗಾರಿಕಾ ಪ್ರದರ್ಶಕ್ಕೆ ಹೋಗಬೇಕು. ಈ ಪ್ರದರ್ಶನವನ್ನು ನಡೆಸಲು ಒಂದು ಸಂಘ ಏರ್ಪಡಿಸಿದ್ದಾರೆ. ವರ್ಷವೆಲ್ಲಾ ಈ ಸಂಘಕ್ಕೆ ಪ್ರದರ್ಶನ ಏರ್ಪಾಡು ಮಾಡುವುದೇ ಕೆಲಸ. ಈ ವರ್ಷದ ಪ್ರದರ್ಶನ ಮುಗಿದರೆ ಮುಂದಿನ ವರ್ಷದ ಪ್ರದರ್ಶನಕ್ಕೆ ಈಗಿನಿಂದಲೇ ಏರ್ಪಾಡು. ಹೊರದೇಶದಿಂದ ಬರುವವರೆಗೆ ಎಲ್ಲಾ ಬಗೆಯ ಅನುಕೂಲ ಏರ್ಪಡಿಸುತ್ತಾರೆ. ಅವರಿಗೆ ಊಟ, ವಸತಿಸೌಕರ್ಯ ಕಲ್ಪಿಸುತ್ತಾರೆ. ಯಾವ ರೀತಿ ಏರ್ಪಡಿ ಸುತ್ತಾರೆಂದು ಮೊದಲೇ ಪ್ರಚಾರ ಮಾಡಿರುತ್ತಾರೆ. ಪ್ರದರ್ಶನದ ಅನೇಕ ಕಟ್ಟಡಗಳನ್ನು ಪ್ರದರ್ಶನಕಾರರೇ ಕಟ್ಟಿಕೊಂಡಿರುತ್ತಾರೆ. ಪ್ರದರ್ಶನ ಕೇವಲ ೮ ದಿನ ನಡೆದರೂ ಸರ್ಕಾರ ಎಲ್ಲಾ ತರದ ಅನುಕೂಲಗಳನ್ನೂ ಕಲ್ಪಿಸಿಕೊಡು ತ್ತದೆ; ಪ್ರದರ್ಶನದ ಸ್ಥಳಕ್ಕೆ ರೈಲುದಾರಿ, ರಸ್ತೆ ಎಲ್ಲಾ ಇರುತ್ತವೆ. ಪ್ರದರ್ಶನದ ಕಾಲದಲ್ಲಿ ವಿಶೇಷ ರೈಲು, ಬಸ್ಸುಗಳನ್ನು ರಿಯಾಯಿತಿ ದರದಲ್ಲಿ ಓಡಿಸಲಾಗು ತ್ತದೆ. ಅನೇಕ ವೇಳೆ ಹನೋವರ್‌ನಲ್ಲಿ ಪ್ರದರ್ಶನದ ಕಾಲದಲ್ಲಿ ಇಳಿದು ಕೊಳ್ಳಲು ಸ್ಥಳವೇ ಇಲ್ಲದೆ, ಸುತ್ತಮುತ್ತಲ ಪ್ರದೇಶಗಳಲ್ಲಿ ಇದ್ದುಕೊಂಡು ಪ್ರದರ್ಶನಕ್ಕೆ ಬರಬೇಕಾಗುತ್ತದೆ. ನೋಡುವವರ ಜೊತೆಗೆ ಗಿರಾಕಿಗಳೂ ಬರುತ್ತಾರೆ. ಇವರ ಅನುಕೂಲಕ್ಕಾಗಿ ಬ್ಯಾಂಕುಗಳನ್ನೂ ಪೋಸ್ಟ್ ಆಫೀಸ್ ಗಳನ್ನೂ ತೆರೆಯುತ್ತಾರೆ.

ಪ್ರದರ್ಶನದ ದ್ವಾರದಲ್ಲಿ ಸುಮಾರು ೩೮೫ ಅಡಿ ಎತ್ತರದ ಒಂದು ಗೋಪುರ. ಹಗುರವಾದ ಅಲ್ಯೂಮಿನಿಯಂ ಕೊಳವೆಯಿಂದ ಕಟ್ಟಿದ್ದು. ಅಷ್ಟು ಎತ್ತರವಿದ್ದರೂ ಅದರ ತೂಕ ೩೬ ಟನ್ ಮಾತ್ರ. ಟೆಲಿವಿಷನ್ ಮುಂತಾದ ಉಪಕರಣಗಳು ಹೇಗೆ ತಯಾರಾಗುತ್ತವೆ ಎಂದು ತೋರಿಸುತ್ತಾರೆ. ಅಲ್ಲೇ ನಿಂತು ನಮ್ಮ ಚಿತ್ರವನ್ನು ಟೆಲಿವಿಷನ್‌ನಲ್ಲಿ ಕಾಣಬಹುದು. ಸೈಕಲ್ ದೀಪ ದಂತೆ ಒಂದು ರೇಡಿಯೋ ಇದೆ. ಸೈಕಲ್ ಮೇಲೆ ಕುಳಿತು ರೇಡಿಯೋ

ಕೇಳುತ್ತಾ ಹೋಗಬಹುದು. ಜೇಬಿನಲ್ಲಿಡುವಂಥ ಸಣ್ಣ ರೆಕಾರ್ಡರ್ ಇದೆ. ಬಟ್ಟೆಗೆ ನೀರು ಚಿಮುಕಿಸಿ ಇಸ್ತ್ರಿ ಮಾಡುವ ಬದಲು ಇಸ್ತ್ರಿ ಪೆಟ್ಟಿಗೆಯೊಳಗಿಂದಲೇ ನೀರಿನ ಆವಿ ಹಾಯಿಸಿ ಬಟ್ಟೆಯನ್ನು ಇಸ್ತ್ರಿ ಮಾಡುವಂಥ ಇಸ್ತ್ರಿ ಪೆಟ್ಟಿಗೆಯಿದೆ. ಮುಖಕ್ಷೌರ ಮಾಡುವ ವಿದ್ಯುತ್ ಯಂತ್ರಗಳಂತೂ ಹೇರಳ. ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಓಡಾಡಲು ಶಕ್ತಿ ಸಾಲದಿದ್ದರೆ ಸಣ್ಣ ಟ್ರಾಂ ಇದೆ.

ಬೆಳಗ್ಗೆ ೮ ಗಂಟೆಯಿಂದ ಸಂಜೆ ೬ ಗಂಟೆಯುವರೆಗೂ ನಾಲ್ಕು ದಿನ ಒಂದೇ ಸಮನೆ ನೋಡಿದರೂ ಪ್ರದರ್ಶನದ ಕೆಲವು ಭಾಗಗಳನ್ನು ನೋಡಲು ಸಾಧ್ಯವಾಗಲೇ ಇಲ್ಲ. ಕೆಲವು ನಿಪುಣರು, ವ್ಯಾಪಾರಗಾರರು, ತಮಗೆ ಬೇಕಾದ ಭಾಗಗಳನ್ನು ಮಾತ್ರ ನೋಡಿಕೊಂಡು ಹೋಗುತ್ತಾರೆ. ಮರಗೆಲಸ ಮಾಡುವ ಯಂತ್ರದಲ್ಲಿ ಆಗಿರುವ ಬದಲಾವಣೆ ನೋಡಿದರೆ ಆಶ್ಚರ್ಯವಾಗುತ್ತದೆ. ಮಾನವನಿಗೆ ಯಾವುದು ತಾನೆ ಅಸಾಧ್ಯ ಎನಿಸುತ್ತದೆ! ಅಡಿಗೆ ಮಾಡುವ ಉಪಕರಣಗಳಿಂದ ಹಿಡಿದು ಮನೆಯನ್ನು ಅಲಂಕರಿಸುವ ವಸ್ತುಗಳವರೆಗೆ ಎಲ್ಲವನ್ನೂ ಪ್ರದರ್ಶನದಲ್ಲಿ ಕಾಣಬಹುದು. ಮನೆಯ ಕೆಲಸಕ್ಕೆ ಬೇಕಾದ ಸಾಮಗ್ರಿಗಳಿಂದ ಹಿಡಿದು ಕಛೇರಿಗೆ ಬೇಕಾಗುವ ಸಾಮಾನುಗಳವರೆಗೆ, ಮೇಜಿನಿಂದ ಹಿಡಿದು ಟೈಪ್‌ರೈಟಿಂಗ್ ಯಂತ್ರದವರೆಗೆ ಎಲ್ಲಾ ಇವೆ. ಗಡಿಯಾರದ ವಿಭಾಗಕ್ಕೆ ಹೋದರೆ, ಹಿಂದಿನ ಕಾಲದ ಹಳೆಯ ಗಡಿಯಾರದಿಂದ ಹಿಡಿದು ನೂತನ ಮಾದರಿಯ ಗಡಿಯಾರದವರೆಗೂ ಕಾಣಬಹುದು. ದಕ್ಷಿಣ ಜರ್ಮನಿಯಲ್ಲಿ ಕಾಡುಪ್ರದೇಶದಲ್ಲಿ ವಾಸಿಸುವ ಜನರು 'ಕುಕುಕ್' ಎಂಬ ಗಡಿಯಾರಗಳನ್ನು ತಯಾರುಮಾಡುತ್ತಾರೆ. ಅದು ನೋಡುವುದಕ್ಕೆ ಒಂದು ಪಕ್ಷಿಯ ಗೂಡಿನಂತಿದೆ. ಗಂಟೆ ಹೊಡೆದಾಗ ಆ ಗಡಿಯಾರದ ಗೂಡಿನಿಂದ ಒಂದು ಪಕ್ಷಿ ಹೊರಬಂದು, ಎಷ್ಟು ಗಂಟೆಯಾಗಿದೆಯೋ ಅಷ್ಟು ಸಾರೆ ಕೂಗಿ, ಪುನಃ ಗೂಡಿನ ಒಳಗೆ ಸೇರಿ ಬಾಗಿಲು ಮುಚ್ಚಿಕೊಳ್ಳುತ್ತದೆ! ೪೦೦ ದಿನಕ್ಕೆ ಒಂದು ಸಾರಿ ಕೀ ಕೊಡುವ ಗಡಿಯಾರ ಒಂದಿದೆ. ಅದು ಸೆಕೆಂಡ್, ನಿಮಿಷ, ಗಂಟೆ, ದಿನ, ವಾರ, ತಿಂಗಳು ಎಲ್ಲವನ್ನೂ ತೋರಿಸುತ್ತದೆ.

ಜರ್ಮನಿ ಆಟದ ಸಾಮಾನಿಗೆ ಪ್ರಸಿದ್ಧ. ಒಂದು ಸಣ್ಣ ಬೊಂಬೆ; ಜೀವವಿದ್ದಂತೆ ನಟಿಸುತ್ತದೆ. ನಾನು ಒಂದು ಅಂಗಡಿಗೆ ಹೋದಾಗ, ಅಲ್ಲಿದ್ದವನು ನಾನು ಏಷ್ಯಾ ಖಂಡದಿಂದ ಬಂದವನೆಂದು ತಿಳಿದು, "ನಿಮ್ಮ ಭಾಷೆಯ ಅಕ್ಷರದ ಟೈಪ್‌ರೈಟರ್‌ಗಳನ್ನು ಮಾಡುತ್ತೇವೆ" ಎಂದು ಹೇಳಿ ಹಿಂದೀ ಮತ್ತು ತಮಿಳು ಅಕ್ಷರದ ಟೈಪುಗಳನ್ನು ತೋರಿಸಿದ. ಗಾಜಿನ ವಿಭಾಗ

ಗಾಜಿನ ಮನೆ ಇದ್ದಂತೆಯೇ ಇದೆ. ಸುಡದಂತಹ ಒಂದು ಬಟ್ಟೆ ತಯಾರು ಮಾಡಿದ್ದರು. ಹೊರಮೈದಾನದಲ್ಲಿ ಮಣ್ಣು ಎತ್ತುವ, ಅಗೆಯುವ ಮತ್ತು ಸಾಗಿಸುವ ಯಂತ್ರಗಳು, ಕ್ಯಾಮರಾಗಳು, ಕನ್ನಡಕಗಳು, ಲೆನ್ಸ್‌ಗಳು, ತೂಕ ಮಾಡುವ ಯಂತ್ರಗಳೂ ಸಹ ಇದ್ದವು. ಒಂದು ವಿಭಾಗದಲ್ಲಿ ಎರಡೇ ಕೈಬೆರಳು ಅಗಲ–ಉದ್ದ–ದಪ್ಪದ ಒಂದು ಕ್ಯಾಮರಾ ನೋಡಿದೆ. ಈ ಪ್ರದರ್ಶನ ನೋಡಿದಾಗ ಜರ್ಮನಿ ಯುದ್ಧದಲ್ಲಿ ಸೋತಿತೋ ಗೆದ್ದಿತೋ —ಅನುಮಾನವಾಯಿತು. ಈ ಪ್ರದರ್ಶನಗಳಿಂದ, ದೇಶದಲ್ಲಿ ತಯಾರಾದ ವಸ್ತುಗಳನ್ನು ಹೊರದೇಶಗಳಿಗೆ ಮಾರಲು ಅವಕಾಶವಾಗುವುದಲ್ಲದೆ, ಜನರಿಗೆ ತಮ್ಮ ದೇಶದಲ್ಲಿ ಏನೇನಾಗುತ್ತದೆ ಎಂಬುದು ತಿಳಿಯುತ್ತದೆ.

ರೈಲುಗಾಡಿಗಳನ್ನು ರಚಿಸುವ ಮತ್ತು ಕಟ್ಟುವ ವಿಷಯದಲ್ಲಿ ಶಿಕ್ಷಣ ಪಡೆಯಲು ನಾನು ಜರ್ಮನಿಗೆ ಬಂದದ್ದು. ೧೯೫೩ರಲ್ಲಿ ಮ್ಯೂನಿಚ್‌ನಲ್ಲಿ ಸಾಗಣೆಯ ಪ್ರದರ್ಶನ ನಡೆದಾಗ, ಸರ್ಕಾರದವರು ಹೊಸ ಮಾದರಿಯ ರೈಲುಗಾಡಿ ರಚಿಸಲು ಒಂದು ಸಮಿತಿಯನ್ನು ಏರ್ಪಡಿಸಿದರು. ಹಿಂದಿನಿಂದಲೂ ರೈಲುಗಳನ್ನು ಉತ್ತಮಪಡಿಸಬೇಕೆಂದು ಪ್ರಯತ್ನಪಡುತ್ತಿರುವ ಶ್ರೀ ಕುಕನ್ಸ್‌ಬರ್ಗ್‌ರವರ ಸಲಹೆ ಕೇಳಿದರು. ಹೊಸ ರೀತಿಯ ಗಾಡಿಗಳನ್ನು ಕಟ್ಟಲು ಫಾಮಾಸ್ ಲಿಂಕ್, ಹಾಫ್‌ಮನ್ ಬುಷ್ ಮತ್ತು ವೆಗ್‌ಮನ್ ಕಾರ್ಖಾನೆಗಳು ಒಪ್ಪಿಕೊಂಡವು. ಒಂದು ರಾತ್ರಿ ಸಂಚಾರಕ್ಕೆ, ಮತ್ತೊಂದು ಹಗಲು ಸಂಚಾರಕ್ಕೆ ಎಂಬುದಾಗಿ ಒಂದೊಂದು ಕಾರ್ಖಾನೆಯವರು ಒಂದೊಂದು ಮಾದರಿಯ ರೈಲುನಿರ್ಮಾಣಕಾರ್ಯವನ್ನು ಕೈಗೊಂಡು ತಮ್ಮ ಚಾತುರ್ಯವನ್ನು ತೋರಿಸಿದರು. ಗ್ಲೀಡರ್‌ತ್ಸುಗ್ ಎಂಬ ರೈಲು ಪೂರ್ತಿಯಾಗಿ ಅಲ್ಯೂಮಿನಿಯಂನಿಂದ ಕಟ್ಟಿದ್ದು. ಕಬ್ಬಿಣದ ಬದಲು ಅಲ್ಯೂಮಿನಿಯಂ! ಇದು ಪ್ರಪಂಚಕ್ಕೇ ಒಂದು ಹೊಸ ಮಾದರಿ. ವಿಮಾನ ಕಟ್ಟುವ ರೀತಿಯಲ್ಲಿ ಕಟ್ಟಿದ್ದಾರೆ. ಒಟ್ಟು ರೈಲಿನ ಉದ್ದ ಸುಮಾರು ೩೦೦ ಅಡಿ. ಎರಡು ಕೊನೆಗಳಲ್ಲಿ ಇಂಜಿನ್. ಒಟ್ಟು ೭ ಗಾಡಿಗಳು. ಸಾಮಾನ್ಯವಾಗಿ ಎಲ್ಲಾ ರೈಲುಗಾಡಿಗಳಿಗೂ ಸಣ್ಣದಾದರೆ ೪ ಚಕ್ರ, ದೊಡ್ಡದಾದರೆ ೮ ಚಕ್ರ. ಈ ರೈಲುಗಾಡಿಗಳಿಗೆ ಎರಡು ಗಾಡಿ ಸೇರುವ ಕಡೆ ಒಂದು ಜೊತೆ ಚಕ್ರ ಮಾತ್ರ ಇದೆ. ಒಳಗೆ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಸರಾಗವಾಗಿ ಓಡಾಡಬಹುದು. ಗಾಡಿಯ ಎತ್ತರವೂ ಕಡಮೆ. ಮೊದಲನೆಯ ತರಗತಿಯಲ್ಲಿ ಒಟ್ಟು ೧೩೫ ಜನ ಪ್ರಯಾಣಿಕರು ಪ್ರಯಾಣ ಮಾಡುವ ಸೌಕರ್ಯ. ಇಷ್ಟಾದರೂ ೭ ಗಾಡಿಗಳು ಸೇರಿ ಒಟ್ಟು ತೂಕ ೮೭ ಟನ್ ಮಾತ್ರ. ಒಂದು

ಬ್ರಾಡ್‌ಗೇಜ್ ರೈಲುಗಾಡಿ ಸಾಮಾನ್ಯವಾಗಿ ೪೫ರಿಂದ ೫೦ ಟನ್‌ವರೆಗೆ ತೂಕವಿರುತ್ತದೆ. ಒಂದು ಗಂಟೆಗೆ ೧೦೦ ಮೈಲಿ ವೇಗದಲ್ಲಿ ಹೋಗುತ್ತದೆ. ಈ ರೈಲುಗಾಡಿಯ ಇಂಜಿನ್ ಡೀಸಲ್ ಎಣ್ಣೆಯಿಂದ ನಡೆಯುತ್ತದೆ. ಗಾಡಿಗಳಲ್ಲಿ ಚಳಿಗಾಲದಲ್ಲಿ, ಬೇಸಗೆಯಲ್ಲಿ ಒಂದೇ ಸಮನಾದ ಹವೆ ಇರುವಂತೆ ಏರ್ಪಡಿಸಲಾಗಿದೆ.

ಕುಳಿತುಕೊಳ್ಳಲು ಒಳ್ಳೆಯ ಮೆತ್ತನೆಯ ಆಸನಗಳು. ಕೂತಲ್ಲೇ ಊಟ ಮಾಡಲು ಬಿಚ್ಚಿ ಮಡಿಸುವ ಮೇಜುಗಳು ; ಓದಲು ದೀಪ. ಪ್ರಯಾಣಿಕರಿಗೆ ಊಟ ಉಪಚಾರಗಳಿಗೆ ಅಡಿಗೆಮನೆ. ವಿದ್ಯುತ್‌ಶಕ್ತಿಯಿಂದಲೇ ಅಡಿಗೆ. ಪತ್ರವ್ಯವಹಾರಮಾಡಲು ಟೈಪ್‌ರೈಟರ್. ಧ್ವನಿವರ್ಧಕಗಳು ಪ್ರಯಾಣಿಕರಿಗೆ ಸುದ್ದಿಸಮಾಚಾರ ತಿಳಿಸುತ್ತವೆ. ಸಂಗೀತವೂ ಕೇಳಿಸುತ್ತದೆ. ಈ ರೈಲಿನಲ್ಲಿ ಇರುವ ರೇಡಿಯೋ ಟೆಲಿಫೋನ್‌ನಿಂದ ಜರ್ಮನಿಯ ಯಾವ ಭಾಗಕ್ಕಾದರೂ ಟೆಲಿಫೋನ್ ಮಾಡಬಹುದು. ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರೆ ಮನೆಯಲ್ಲಿಯೇ ಇರುವ ಭಾವನೆ ಬರುತ್ತದೆ.

ಜರ್ಮನಿಯ ಉರ್ಪಟಾಲ್ ನಗರ ಸಣ್ಣದಾದರೂ ಕೈಗಾರಿಕೆಯಲ್ಲಿ, ಅದರಲ್ಲೂ ಕಬ್ಬಿಣ ಕೈಗಾರಿಕೆಯಲ್ಲಿ, ಬಹಳ ಪ್ರಸಿದ್ಧಿಪಡೆದಿದೆ. ಅಲ್ಲದೆ ಅಲ್ಲಿ ಊಪರ್ ನದಿಯ ಮೇಲೆ ನೇತುಹಾಕಿಕೊಂಡು ಹೋಗುವ ಉರ್ಪಟಾಲ್ ರೈಲು ಪ್ರಪಂಚದಲ್ಲೇ ಹೆಸರುಪಡೆದಿದೆ. ಊರು ಸಣ್ಣದಾಗಿದ್ದರೂ ಕೈಗಾರಿಕೆ ಬೆಳೆಯುತ್ತಾ ಬಂದಿತು. ಜನರ ಸೌಕರ್ಯಕ್ಕೆ ಬಸ್ಸು, ಟ್ರಾಂಗಳನ್ನು ಹಾಕಿದ್ದರೂ ಸಾಲದೆ ಹೋಯಿತು. ಇಂಜಿನಿಯರುಗಳಿಗೆ ಊರಿನ ಮಧ್ಯೆ ಸುಮಾರು ೮ ಮೈಲಿ ದೂರ ಹರಿದುಹೋಗುವ ಊಪರ್ ನದಿಯ ಮೇಲೆ ಇರುವ ಸ್ಥಳವನ್ನು ಉಪಯೋಗಿಸಿಕೊಳ್ಳುವ ಯೋಚನೆ ಬಂದಿತು. ಇಂಜಿನಿಯರ್ ಈಗನ್ ಲಾಂಗನ್ ಅಪ್‌ಕಲೋನ್ ಎಂಬುವರು ಪ್ರಯೋಗಗಳನ್ನು ನಡೆಸಿ, ೧೮೯೩ರಲ್ಲಿ ನದಿಯ ಮೇಲೆ ಉದ್ದಕ್ಕೂ ತೂಗುರೈಲು ಹಾಕುವ ಏರ್ಪಾಡು ಮಾಡಿದರು. ೧೯೦೩ರ ಹೊತ್ತಿಗೆ ಈ ಕಾರ್ಯ ಮುಕ್ತಾಯವಾಯಿತು. ಹೀಗೆ ಒಟ್ಟು ಎಂಟೂವರೆ ಮೈಲಿ ದೂರ ರೈಲು ಹಾಕಿದ್ದಾರೆ. ಅದರಲ್ಲಿ ಆರೂವರೆ ಮೈಲಿ ನದಿಯ ಮೇಲೆ ಉದ್ದಕ್ಕೂ, ಉಳಿದ ೨ ಮೈಲಿ ರಸ್ತೆಯ ಮೇಲುಭಾಗದಲ್ಲೂ ಹಾಕಿದ್ದಾರೆ. ನದಿಯ ಎರಡೂ ದಡಗಳಿಂದಲೂ ಕಬ್ಬಿಣದ ಕಂಬಗಳನ್ನು ಊರಿಕೊಟ್ಟು ನಿಲ್ಲಿಸಿದ ಮತ್ತು ನೀರಿನ ಮೇಲೆ ಸುಮಾರು ೨೬ ಅಡಿ ಎತ್ತರದಲ್ಲಿ ಹಾಕಿರುವ ಒಂದು ರೈಲುಕಂಬಿಗೆ ತೂಗುಹಾಕಿಕೊಂಡು ರೈಲುಗಾಡಿ ಹೋಗುತ್ತದೆ. ನೆಲದಿಂದ ೧೪–೧೫ ಅಡಿ ಎತ್ತರದಲ್ಲಿ ರೈಲು

ಗಾಡಿಯ ಕೆಳಭಾಗ. ಒಟ್ಟು ೧೮ ರೈಲ್ವೆ ನಿಲ್ದಾಣ. ಎರಡು ಗಾಡಿ ಸೇರಿ ಒಂದು ರೈಲು. ವೇಗ ಗಂಟೆಗೆ ಸರಾಸರಿ ೧೫ ಮೈಲಿ. ಲಂಡನ್ ಮತ್ತು ಪ್ಯಾರಿಸ್‌ಗಳಲ್ಲಿ ಭೂಮಿಯೊಳಗೆ ಓಡುವ ರೈಲಿನ ವೇಗ ಕ್ರಮವಾಗಿ ೧೬ ಮತ್ತು ೧೪ ಮೈಲಿಗಳು. ತೂಗುರೈಲು ಗಂಟೆಗೆ ೩೫ ಮೈಲಿ ವೇಗದಲ್ಲಿ ಹೋಗಬಲ್ಲದು. ಗಾಡಿಗಳು ರೈಲು ಕಂಬಿಗೆ ಕೊಕ್ಕೆಯಂತೆ ತೂಗುಹಾಕಿ ಕೊಂಡು ಹೋಗುವುದರಿಂದ ಸ್ವಲ್ಪವೂ ಅಲುಗಾಡುವುದಿಲ್ಲ. ಸುಮಾರು ೮೫ ಜನ ಒಂದು ಗಾಡಿಯಲ್ಲಿ ಪ್ರಯಾಣಮಾಡಬಹುದು. ರೈಲು ಹೊರಟ ಕೂಡಲೇ ಅದರ ಬಾಗಿಲು ಹಾಕಿಕೊಳ್ಳುತ್ತವೆ. ಒಂದು ದಿನಕ್ಕೆ ಸುಮಾರು ೮೬,೦೦೦ ಜನ ಈ ರೈಲಿನಲ್ಲಿ ಪ್ರಯಾಣ ಮಾಡುತ್ತಾರೆ. ಯುದ್ಧದಲ್ಲಿ ಬಿದ್ದುಹೋಗಿದ್ದನ್ನು ಪುನಃ ಕಟ್ಟಿದ್ದಾರೆ. ಈಗಾಗಲೇ ಈ ರೈಲು ಹಾಕಿ ೫೦ ವರ್ಷಗಳಾಗಿದ್ದರೂ ಇದುವರೆಗೂ ಒಂದೂ ಅಪಘಾತವಾಗಿಲ್ಲ. ತೂಗು ರೈಲು ಹಾಕಲು ಭೂಮಿಯೊಳಗೆ ಹಾಕುವ ರೈಲಿಗಿಂತ ವೆಚ್ಚ ಕಡಮೆ.

ನೇತುಹಾಕಿಕೊಂಡು ಹೋಗುವ ರೈಲಿನ ರಚನೆಯನ್ನನುಸರಿಸಿ ಅನೇಕ ಪ್ರಯೋಗಗಳು ನಡೆದಿವೆ: ವೇಗವನ್ನು ಆದಷ್ಟು ಹೆಚ್ಚಿಸಬೇಕು. ಕ್ಷೇಮಕರ ಸೌಕರ್ಯಪೂರ್ಣ ಪ್ರಯಾಣ ಆಗಬೇಕು. ಹೆಚ್ಚು ಸ್ಥಳ ಹಿಡಿಯಬಾರದು. ಹಗುರವಾಗಿರಬೇಕು. ಈ ಅನುಕೂಲಗಳ ಜೊತೆಗೆ ಪ್ರಯಾಣ ಸೌಕರ್ಯ ಕಲ್ಪಿಸಲು ದುಡ್ಡು ಕಡಮೆಯಾಗಬೇಕು.

ಅಲ್‌ವೆಗ್‌ಬಾನ್ ರೈಲುಗಳು ಭೂಮಿಯಿಂದ ೧೦–೧೫ ಅಡಿ ಎತ್ತರದಲ್ಲಿ ಇರುವ ಒಂದೇ ಒಂದು ರೈಲುಕಂಬಿಯ ಮೇಲೆ ಓಡುತ್ತವೆ. ಈ ಕಂಬಿಗೆ ೪೦ ರಿಂದ ೧೦೦ ಅಡಿ ದೂರದಲ್ಲಿ ಸಿಮೆಂಟ್ ಕಂಬಿಗಳಿಂದ ಊರೆಕೊಡಲಾಗಿದೆ. ಇದರಿಂದ ರೈಲುಕಂಬಿಯ ಕೆಳಗೆ ಓಡಾಡಲು ಯಾವ ತೊಂದರೆಯೂ ಇಲ್ಲ. ಪಟ್ಟಣಗಳಲ್ಲಿ ರಸ್ತೆಗಳ ಮೇಲೆ ಈ ರೈಲನ್ನು ಯಾವ ಅಡಚಣೆಯೂ ಇಲ್ಲದೆ ಹಾಕಬಹುದು. ಇದು ಗಂಟೆಗೆ ೨೦೦ ಮೈಲಿ ವೇಗದಲ್ಲಿ ಹೋಗಬಲ್ಲದು. ನೆಲದಿಂದ ಮೇಲೆ ಹೋಗುವುದರಿಂದ ಹೆಚ್ಚು ಕ್ಷೇಮ. ಈ ರೈಲು ಗಾಡಿಗಳನ್ನು ಸಾಮಾನು ಸಾಗಿಸಲೂ ಸಹ ಉಪಯೋಗಿಸಬಹುದು. ಒಂದು ರೈಲುಗಾಡಿಯಲ್ಲಿ ಎರಡೇ ಡಬ್ಬಿ. ಅಪಘಾತಕ್ಕೆ ಅವಕಾಶವೇ ಇಲ್ಲ. ಎರಡು ಕಂಬಿಯ ರೈಲು ಹಾಕುವುದಕ್ಕಿಂತ ಖರ್ಚು ಕಡಮೆ. ಇಂತಹ ರೈಲುಗಳನ್ನು ಹೆಚ್ಚು ಜನಸಂಖ್ಯೆ ಇರುವ ಪಟ್ಟಣಗಳಲ್ಲಿ ಹಾಕಬಹುದು.

ಬೆಟ್ಟಗುಡ್ಡಗಳಿಗೆ ಎಲ್ಲಾ ಕಡೆಯಲ್ಲೂ ಕೇಬಲ್ ರೈಲ್ವೆ ಹಾಕಿದ್ದಾರೆ. ಸುಲಭವಾಗಿ ಬೆಟ್ಟಗಳ ಮೇಲೆ ಹೋಗಿ ಪ್ರಕೃತಿಸೌಂದರ್ಯವನ್ನು ನೋಡಿ

ಆನಂದಪಡುತ್ತಾರೆ. ಮಂಜಿನಲ್ಲಿ ಜಾರುವ ಆಟವಾಡುತ್ತಾರೆ.

ಬ್ರೌನ್ಸ್‌ವೈಗ್‌ನ ಹತ್ತಿರವೇ ಇರುವ 'ಫೋಕ್ಸ್‌ವಾಗನ್' ಎಂಬ ಕಾರಿನ ಕಾರ್ಖಾನೆಯನ್ನು ನೋಡುವ ಅವಕಾಶ ಸಿಕ್ಕಿತು. ನಮ್ಮ ಕಾರ್ಖಾನೆಯ ಮೂಲಕ ಹೋಗಿದ್ದರಿಂದ, ನಾನು ಹೋಗುವ ಹೊತ್ತಿಗೆ ಸ್ವಾಗತಿಸಲು ಒಬ್ಬರು ಕಾದಿದ್ದರು. ಅವರಿಗೆ ಇಂಗ್ಲಿಷ್ ಬರುತ್ತಿತ್ತು. ಮೊದಲು ಕಾರ್ಖಾನೆಯ ವಿವರವನ್ನು ಕೊಟ್ಟರು: ೨೪,೨೦೦ ಜನ ಕೆಲಸಮಾಡುತ್ತಿದ್ದಾರೆ. ಯುದ್ಧಕ್ಕೆ ಮುಂಚೆ ಕೆಲವು ವಿಮಾನದ ಭಾಗಗಳನ್ನು ತಯಾರುಮಾಡುತ್ತಿದ್ದರು. ಅನಂತರ ಕಾರುಗಳನ್ನು ತಯಾರಿಸಲು ಬ್ರಿಟಿಷ್ ಸರ್ಕಾರ ಅಪ್ಪಣೆ ಕೊಟ್ಟಿತು. ಪ್ರತಿದಿನ ೨೦೦೦ ಕಾರುಗಳು, ೨೦೦ ವ್ಯಾನುಗಳು ತಯಾರಾಗುತ್ತವೆ. ಒಟ್ಟು ಕಾರ್ಖಾನೆ ೧೨೦ ಎಕರೆ ಜಮೀನನ್ನು ಆಕ್ರಮಿಸಿದೆ. ಈ ಕಾರ್ಖಾನೆ ನೋಡಲು ದಿನವೂ ಸರಾಸರಿ ೮೦೦ ಜನ ಬರುತ್ತಾರೆ. ಹೊಸದಾಗಿ ಕಾರನ್ನು ಕೊಳ್ಳುವವರು ಕಾರ್ಖಾನೆಗೆ ಬಂದರೆ, ಆ ದಿನ ಅವರ ಅತಿಥಿಯಾಗಿದ್ದು, ಕಾರ್ಖಾನೆಯನ್ನು ನೋಡಿ, ಸಂಜೆ ಕಾರನ್ನು ಕೊಂಡು ಹೋಗಬಹುದು. ಶೇಕಡ ೫೦ರಷ್ಟು ಕಾರನ್ನು ಜರ್ಮನಿಯ ಜನರೇ ಕೊಳ್ಳುತ್ತಾರೆ. ಕೆಲಸಗಾರರು ವಾಸಿಸಲು ಒಂದು ಊರನ್ನೇ ಕಟ್ಟಿದ್ದಾರೆ. ಜರ್ಮನಿಯ ಎಲ್ಲಾ ಕಾರ್ಖಾನೆಗಳಿಗಿಂತ ಈ ಕಾರ್ಖಾನೆಯ ಕೆಲಸಗಾರರಿಗೆ ಹೆಚ್ಚು ಸಂಬಳ. ಈ ಫೋಕ್ಸ್‌ವಾಗನ್ ಕಾರು ಸಣ್ಣದು. ಸಾಮಾನ್ಯ ಜನ ಉಪಯೋಗಿಸಲು ಅನುಕೂಲವಾಗಿದೆ. ನಾಲ್ಕು ಜನ ಸರಾಗವಾಗಿ ಕೂಡಬಹುದು. ಇಂಜಿನ್ ಹಿಂದುಗಡೆ ಇದೆ. ಜರ್ಮನಿಯ ಯಾವ ಮೂಲೆಯಲ್ಲಿ ನೋಡಿದರೂ ಈ ಕಾರನ್ನು ಕಾಣಬಹುದು.

ಡಿ. ಕೆ. ಡಬ್ಲ್ಯು. ಕಾರಿನ ಕಾರ್ಖಾನೆ ಡುಸೆಲ್‌ಡಾರ್ಫ್‌ನಲ್ಲಿದೆ. ಇಲ್ಲಿ ಪ್ರತಿ ಮೂರು ನಿಮಿಷಕ್ಕೆ ಒಂದು ಕಾರು ಹೊರಗೆ ಬರುತ್ತದೆ. ಬೆಳಗ್ಗೆ ೯ ಗಂಟೆಗೆ ಯಾರು ಹೋದರೂ ಕಾರ್ಖಾನೆಯನ್ನು ತೋರಿಸುತ್ತಾರೆ. ಕಾರಿನ ಎಲ್ಲಾ ಭಾಗಗಳನ್ನೂ ಇಲ್ಲೇ ಮಾಡುವುದಿಲ್ಲ. ಅದಕ್ಕೆ ಬೇಕಾದ ಬಿಡಿಭಾಗಗಳನ್ನು ಹೊರಗಡೆ ಸಣ್ಣ ಕಾರ್ಖಾನೆಗಳಲ್ಲಿ ಮಾಡಿಸಿ ತರಿಸಿ, ಇಲ್ಲಿ ಎಲ್ಲವನ್ನೂ ಒಟ್ಟಿಗೆ ಸೇರಿಸುತ್ತಾರೆ. ಇದರಿಂದ ಸಣ್ಣ ಕೈಗಾರಿಕೆಗಳು ಬೆಳೆಯಲು ಅವಕಾಶವಾಗುತ್ತದೆ.

ಮರ್ಸೆಡೀಸ್ ಬೆನ್ಜ್ ಕಾರಿನ ಕಾರ್ಖಾನೆಯ ಹೆಸರನ್ನು ಯಾರು ತಾನೇ ಕೇಳಿಲ್ಲ! ಪ್ರಪಂಚದಲ್ಲೇ ಬಹಳ ಶ್ರೇಷ್ಠ, ಉತ್ತಮ ಬೆಲೆಬಾಳುವ ಕಾರಿದು. ಈ ಕಾರು ಎಲ್ಲಾ ಪಂದ್ಯಗಳಲ್ಲೂ ಮೊದಲನೆ ಸ್ಥಾನ ಹೊಂದಿ ಹೆಸರುಪಡೆದಿದೆ.

‘ವೆಸ್ಟ್ ವಾಡೂನ್’ ಎಂಬ ಕಾರ್ಖಾನೆಯೊಂದಕ್ಕೆ ನಾನು ಭೇಟಿ ಕೊಟ್ಟಿದ್ದೆ. ಈ ಕಾರ್ಖಾನೆ ಭಾರತಕ್ಕೆ ಅನೇಕ ರೈಲುಗಾಡಿಗಳನ್ನು ಸರಬರಾಜು ಮಾಡಿದೆ. ಇದು ಕಲೋನ್ ನಗರದಲ್ಲಿದೆ. ಕೃಪ್ ಗುಂಪಿಗೆ ಸೇರಿದ ಅನೇಕ ಕೈಗಾರಿಕೆಗಳಲ್ಲಿ ಕೃಪ್ ರೈಲು ಕಾರ್ಖಾನೆ, ಕೃಪ್ ಫೌಂಡ್ರಿಗಳನ್ನು ನೋಡುವ ಅವಕಾಶ ಸಿಕ್ಕಿತ್ತು. ಹೊರಗಡೆಯಿಂದ ನೋಡಿದಾಗ ಬಿದ್ದು ಹೋದ ಹಳೆ ಮನೆಯಂತೆ ಕಂಡರೂ, ಕೆಳಗೆ ಹೋಗಿ ನೋಡಿದರೆ ಕೋಟಿಗಟ್ಟಲೆ ಬೆಲೆಬಾಳುವ ರೈಲು ಇಂಜಿನ್‌ಗಳನ್ನು ಕಟ್ಟುತ್ತಿದ್ದಾರೆ! ಹೋದ ಕೂಡಲೇ ಮ್ಯಾನೇಜರ್ ಎಲ್ಲವನ್ನೂ ವಿಚಾರಿಸಿ ಕೃಪ್ ಫೌಂಡ್ರಿ ನೋಡಲು ಅವಕಾಶ ಕಲ್ಪಿಸಿದರು. “ನೀವು ನನ್ನನ್ನು ಬಹಳ ಆದರದಿಂದ ಕಾಣುತ್ತಿದ್ದೀರಿ” ಎಂದು ಹೇಳಿದ್ದಕ್ಕೆ “ನಾವು ನಿಮ್ಮ ದೇಶಕ್ಕೆ ಬಂದರೆ ಬಹಳ ವಿಶ್ವಾಸ, ಆದರ ತೋರಿಸುತ್ತೀರಿ. ನಾನು ನಿಮಗೆ ತೋರಿಸಬೇಡವೇ ?” ಎಂದು ಹೇಳಿದರು. ಯುದ್ಧದಲ್ಲಿ ನೆಲಸಮವಾಗಿದ್ದು, ೧೯೫೦ರಲ್ಲಿ ಈ ಕಾರ್ಖಾನೆ ಮತ್ತೆ ಪ್ರಾರಂಭವಾಯಿತು. ನಾಲ್ಕು ಜನ ಕೆಲಸ ಆರಂಭಿಸಿ, ದಿನಕ್ಕೆ ಒಂದು ಟನ್ ಕಬ್ಬಿಣ ಎರಕ ಹೊಯ್ಯಲು ಪ್ರಾರಂಭಿಸಿದರು. ಈಗ ೩೦೦ ಜನ ಕೆಲಸಗಾರರು ೪೦ ಟನ್ ಕಬ್ಬಿಣವನ್ನು ಒಂದು ಸಾರಿಗೆ ಎರಕ ಹೊಯ್ಯುವಂಥ ಕಾರ್ಖಾನೆ ಕಟ್ಟಿದ್ದಾರೆ. ಇದು ಕೇವಲ ೪-೫ ವರ್ಷಗಳ ದುಡಿಮೆಯ ಫಲ. ಕಾರ್ಖಾನೆ ನೋಡಲು ಅಷ್ಟು ದೊಡ್ಡದೂ ಅಲ್ಲ, ಚೆನ್ನಾಗಿಯೂ ಕಾಣುವುದಿಲ್ಲ. ಆದರೆ ಅವರು ಮಾಡುವ ಸಾಮಾನು ಪ್ರಪಂಚದ ಎಲ್ಲಾ ಭಾಗಗಳಿಗೂ ಹೋಗುತ್ತದೆ. ೧೯೫೦ರಲ್ಲಿ ಅಲ್ಲಿ ಕೆಲಸಗಾರನಾಗಿ ಪ್ರಾರಂಭಮಾಡಿದವನು ಈ ದಿನ ಮ್ಯಾನೇಜರ್ ಆಗಿದ್ದಾನೆ.

ಬ್ರೌನ್ಸ್‌ವೈಗ್‌ನಲ್ಲೇ ಬುಸ್ಸಿಂಗ್ ಎಂಬ ಬಸ್ಸು ಮತ್ತು ಲಾರಿ ತಯಾರು ಮಾಡುವ ಕಾರ್ಖಾನೆಯೊಂದಿದೆ. ೧೯೦೪ರಲ್ಲಿ ಮೊದಲನೇ ಬಸ್ಸು ತಯಾರು ಆಯಿತು. ಈಗ ಹೊರದೇಶಗಳಿಗೂ ಬಸ್ಸುಗಳನ್ನು, ಲಾರಿಗಳನ್ನು ತಯಾರು ಮಾಡುತ್ತಿದ್ದಾರೆ. ಬಸ್ಸುಗಳಿಗೆ ಬೇಕಾದ ಇಂಜಿನ್ ಸಹ ಇಲ್ಲಿಯೇ ತಯಾರಾಗುತ್ತದೆ. ಸೌಕರ್ಯದಲ್ಲಿ ಒಂದು ರೂಪವನ್ನು ಕೊಟ್ಟಿದ್ದಾರೆ. ರೈಸ್‌ವರ್ಕ್ ಎಂಬ ಕಾರ್ಖಾನೆ ತನಗೆ ಬೇಕಾದ ವಿದ್ಯುತ್‌ಶಕ್ತಿಯನ್ನು ತಾನೇ ತಯಾರಿಸಿಕೊಳ್ಳುತ್ತದೆ. ಕಲ್ಲಿದ್ದಲನ್ನು ನದಿಯ ಕಾಲುವೆಯ ಮೂಲಕ ಸಾಗಿಸಿಕೊಳ್ಳುತ್ತದೆ. ಚಳಿಗಾಲದಲ್ಲಿ ನದಿ ಗಡ್ಡೆ ಕಟ್ಟುವುದರಿಂದ ಬೇಸಗೆಯಲ್ಲೇ ಚಳಿಗಾಲಕ್ಕೂ ಬೇಕಾದ ಕಲ್ಲಿದ್ದಲನ್ನು ಸಾಗಿಸಿಕೊಳ್ಳುತ್ತಾರೆ. ಸುಮಾರು ೨೪ ಗಂಟೆಯಲ್ಲಿ ೫೦೦ ಟನ್ ಕಬ್ಬಿಣ ಉತ್ಪತ್ತಿಯಾಗುತ್ತದೆ. ಅಲ್ಲದೆ ಇಲ್ಲಿ

ಉತ್ಪತ್ತಿಯಾಗುವ ಯಾವ ಗ್ಯಾಸನ್ನೂ ಹೊರಗೆ ಬಿಡುವುದಿಲ್ಲ. ಕಸವನ್ನೂ ಕೂಡ ಉಪಯೋಗಿಸುತ್ತಾರೆ. ಕಬ್ಬಿಣ ತೆಗೆದಮೇಲೆ ಬರುವ ಕಸವನ್ನೂ ಸಹ ಬಿಸಾಡದೆ, ಅದಕ್ಕೆ ಮಣ್ಣು ಸೇರಿಸಿ ಇಟ್ಟಿಗೆ ಮಾಡಿ ಮಾರುತ್ತಿದ್ದಾರೆ. ಈ ಕಾರ್ಖಾನೆಯಿಂದಾಗಿ ಸುತ್ತಮುತ್ತಲೂ ಅನೇಕ ಸಣ್ಣ ಕಾರ್ಖಾನೆಗಳು, ಹಳ್ಳಿಗಳು ಬೆಳೆದಿವೆ. ಆದರೆ ದೊಡ್ಡ ಪಟ್ಟಣ ಯಾವುದೂ ಬೆಳೆದಿಲ್ಲ.

ಈ ರೀತಿ ಕಾರ್ಖಾನೆಗಳಿಗೆ ಇಲ್ಲಿ ಕೊನೆಮೊದಲಿಲ್ಲ. ಊರೂರಿನಲ್ಲೂ ಕೈಗಾರಿಕೆಗಳು ಹರಡಿವೆ. ಯೂರೋಪಿನ ಇತರ ದೇಶಗಳು ಜರ್ಮನಿಯೊಡನೆ ಸ್ಪರ್ಧೆಗೆ ಹೆದರುತ್ತವೆ. ಯಾವುದಕ್ಕೂ ಸಿದ್ಧ ಈ ಜನ.

೧೫. ಜರ್ಮನಿಯ ಶಾಲೆಗಳು, ಯುವಕ ನಿಲಯಗಳು

ತಪ್ಪು ಮಾಡುವುದು ಅರ್ಧ ತಪ್ಪು;
ಅದಕ್ಕೆ ನೆಪ ಹೇಳುವುದು ಇಡೀ ತಪ್ಪು.

—ಗಯಟೆ

ವಿದ್ಯಾಭ್ಯಾಸವೇ ದೇಶದ ಪ್ರಗತಿಗೆ ಅಸ್ತಿಭಾರ. ಜರ್ಮನಿಯ ಪ್ರಗತಿಗೆ ಅಲ್ಲಿಯ ವಿದ್ಯಾಭ್ಯಾಸ ಕ್ರಮವೇ ಕಾರಣ. ಅಲ್ಲಿ ಅನಕ್ಷರಸ್ಥರಿಲ್ಲವೆಂದೇ ಹೇಳಬಹುದು. ಬರಿಯ ಅಕ್ಷರ ಒಂದನ್ನೇ ಕಲಿಯದೆ ಜೊತೆಗೆ ಜೀವನಕ್ಕೆ ಬೇಕಾದ ಎಲ್ಲಾ ವಿದ್ಯೆಗಳನ್ನೂ ಇಲ್ಲಿಯ ಜನ ಕಲಿಯುತ್ತಾರೆ. ಕುಟುಂಬ, ಶಾಲೆ, ದೇವಸ್ಥಾನಗಳನ್ನು ಒಂದುಗೂಡಿಸಿ; ಇವು ಮೂರರಿಂದ ದೇಶದ ಪ್ರಜೆ ವಿಧೇಯತೆ, ಗೌರವಬುದ್ಧಿ, ನಮ್ರತೆ, ವಿನಯ ಕಲಿಯುತ್ತಾನೆಂದು ಇಲ್ಲಿಯವರು ಹೇಳುತ್ತಾರೆ. ಇದರಿಂದ ಹಿರಿಯರಿಗೆ, ಅಧಿಕಾರಿಗೆ ಗೌರವ ಕೊಡುವ ಅಭ್ಯಾಸ ಬರುತ್ತದೆ. ಎಲ್ಲರನ್ನೂ ಅಣ್ಣತಮ್ಮಂದಿರಂತೆ ಕಾಣುವ ರೀತಿಯ ವಿದ್ಯಾಭ್ಯಾಸವನ್ನು ಇಲ್ಲಿ ನೋಡಬಹುದು. ನಮ್ಮ ದೇಶದ ವಿದ್ಯಾಭ್ಯಾಸಕ್ಕೂ ಜರ್ಮನಿಯ ವಿದ್ಯಾಭ್ಯಾಸಕ್ಕೂ ಬಹಳ ವ್ಯತ್ಯಾಸವಿದೆ. ಇಲ್ಲಿಯ ಜನ ತಮ್ಮ ಜೀವನಕ್ಕೆ ಬೇಕಾದ, ತಮಗೆ ಇಷ್ಟವಾದ ವಿದ್ಯೆಯಲ್ಲಿ ಪರಿಶ್ರಮ ಪಡೆದುಕೊಳ್ಳುತ್ತಾರೆ. ಎಲ್ಲವನ್ನೂ ತಮ್ಮ ಮಾತೃಭಾಷೆಯಲ್ಲೇ ಕಲಿಯುವುದರಿಂದ ಅವರಿಗೆ ಯಾವ ಕಷ್ಟವೂ ಕಾಣುವುದಿಲ್ಲ. ಅವರಿಗೆ ದೇಶದ ಎಲ್ಲಾ ಭಾಗಗಳೂ ಒಂದೇ.

ಎಲ್ಲಿ ನೋಡಿದರೂ ಒಂದು ಶಾಲೆ. ಸರ್ಕಾರಿ ಶಾಲೆಗಳಿಲ್ಲವೇ ಇಲ್ಲ. ಎಲ್ಲವೂ ಖಾಸಗಿ ಶಾಲೆಗಳು. ಧರ್ಮ ಮತ್ತು ಮತದ ಹೆಸರಿನಲ್ಲಿ ನಡೆಸುವ ಶಾಲೆಗಳೇ ಹೆಚ್ಚು.

ಸಣ್ಣ ಮಕ್ಕಳನ್ನು ಕಿಂಡರ್‌ಗಾರ್ಟನ್ ಸ್ಕೂಲಿಗೆ ಸೇರಿಸುತ್ತಾರೆ. ಆರು ವರ್ಷದವರೆಗೆ ಅವರನ್ನು ಬೇರೆ ಶಾಲೆಗಳಿಗೆ ಸೇರಿಸುವುದಿಲ್ಲ. ಎಂಟು ವರ್ಷದ ನಂತರ ಮೊದಲನೆಯ ಸಾರಿ ಸಕ್ಕರೆ-ಮಿಠಾಯಿ ಮಾಡಿಕೊಂಡು ಮಕ್ಕಳನ್ನು ತಂದೆತಾಯಿಗಳು ಶಾಲೆಗೆ ಕರೆದುಕೊಂಡು ಹೋಗುತ್ತಾರೆ. ಮೊದಲ ದಿನ ಶಾಲೆಗೆ ಹೋಗುವುದು ಒಂದು ಸಡಗರ. ಮೊದಲು ಸೇರಿಸುವುದು 'ಫೋಕ್ ಶೂಲೆ' ಎಂಬ ಶಾಲೆಗೆ. ಇಲ್ಲಿ ೬ ವರ್ಷದಿಂದ ೧೪ ವರ್ಷ ಆಗುವವರೆಗೆ, ಎಂದರೆ ೮ ವರ್ಷದವರೆಗೆ, ಓದುತ್ತಾರೆ. ಎಲ್ಲಾ ಮಕ್ಕಳಿಗೂ ೧೪ನೇ

ವಯಸ್ಸಿನವರೆಗೆ ಈ ವಿದ್ಯಾಭ್ಯಾಸ ಕಡ್ಡಾಯ. ಈ ಶಾಲೆಯಲ್ಲಿ ದೇವರು, ಚರ್ಚು, ಚರಿತ್ರೆ, ಭೂವಿವರಣೆ—ಈ ರೀತಿ ಎಲ್ಲರಿಗೂ ಬೇಕಾದ ವಿದ್ಯಾಭ್ಯಾಸ ಕಲಿಸುತ್ತಾರೆ.

ಮುಂದೆ ೩–೪–೬ ವರ್ಷಗಳ ಮಿಟಲ್ ಶಾಲೆಗಳಿವೆ. ಇಲ್ಲಿ ಕೈಗಾರಿಕೆ, ವಿಜ್ಞಾನ, ಕಲೆ, ಸಾಹಿತ್ಯ ಹೇಳಿಕೊಡುತ್ತಾರೆ. (ಇವಾದನಂತರ ಹೋಕ್ಸ್ ಎಂಬ ಶಾಲೆ ಇದೆ.) ಇವಲ್ಲದೆ ವಿಶೇಷ ಶಾಲೆಗಳೂ ಸಹ ಇವೆ. ೧೫ ವರ್ಷದಿಂದ ೧೭ ಅಥವಾ ೧೮ ವರ್ಷ ವಯಸ್ಸಾಗುವವರೆಗೆ 'ಬೆರೂಫ್ ಶಾಲೆ' ಎಂಬ ಅವರವರಿಗೆ ಬೇಕಾದ ಕೆಲಸ ಕಲಿಸುವ ಶಾಲೆಗಳಿವೆ. ಕಾರ್ಖಾನೆಗಳಲ್ಲಿ, ಕಛೇರಿಗಳಲ್ಲಿ ಕೆಲಸ ಮಾಡಿಕೊಂಡು, ಅವರವರ ಕೆಲಸಕ್ಕೆ ತಕ್ಕಂಥ ವಿದ್ಯಾಭ್ಯಾಸ ಮಾಡಲು ಈ ಶಾಲೆಗಳಿಗೆ ವಾರಕ್ಕೆ ಒಂದೋ ಎರಡೋ ದಿನ ಹೋಗುತ್ತಾರೆ. ಇಲ್ಲಿ ಪದವೀಧರರಾಗಬಹುದು. ಅದಕ್ಕೆ ಸುಮಾರು ೩ ವರ್ಷದಿಂದ ೫ ವರ್ಷ ಬೇಕಾಗುತ್ತದೆ ಅವರವರ ಶಿಕ್ಷಣದ ವಿಷಯ ಇದ್ದ ಹಾಗೆ ಈ ಕಾಲಾವಧಿ.

ಹುಡುಗಿಯರೂ ಹುಡುಗರೂ ಒಟ್ಟಿಗೇ ವಿದ್ಯಾಭ್ಯಾಸ ಮಾಡುತ್ತಾರೆ. ಯಾವ ಬಗೆಯ ಭೇದಭಾವನೆಯೂ ಇಲ್ಲಿ ಕಾಣುವುದಿಲ್ಲ. ತಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ತಂದೆತಾಯಂದಿರಿಗೆ ಹೆಚ್ಚು ಆಸಕ್ತಿ. ತಿಂಗಳಿಗೊಮ್ಮೆ ತಂದೆತಾಯಂದಿರು ಸೇರಿ ಶಾಲೆಯಲ್ಲಿ ಮಕ್ಕಳ ವಿಚಾರ ಚರ್ಚಿಸುತ್ತಾರೆ. ಯಾವ ವಿಶೇಷ ಕಾರ್ಯಗಳಿದ್ದರೂ ತಂದೆತಾಯಂದಿರು ಬರುತ್ತಾರೆ. ಮಕ್ಕಳು ಕೇಳಿದ ಪ್ರಶ್ನೆಗಳಿಗೆ ಕೆಲವು ಪುಸ್ತಕಗಳನ್ನು ತಂದು ಓದಿ ಉತ್ತರ ಹೇಳುತ್ತಾರೆ. ಮಕ್ಕಳ ಮನೆಗೆ ಉಪಾಧ್ಯಾಯರು ಹೋಗಿ ತಂದೆತಾಯಂದಿರ ಹತ್ತಿರ ಮಕ್ಕಳ ವಿಚಾರ ಮಾತನಾಡುತ್ತಾರೆ.

ಶಾಲೆಗಳು ವರ್ಷದಲ್ಲಿ ಸುಮಾರು ೨೩೩ ದಿನ ಕೆಲಸ ಮಾಡುತ್ತವೆ. ಸಾಮಾನ್ಯವಾಗಿ ಬೆಳಗ್ಗೆ ೮ ರಿಂದ ಮಧ್ಯಾಹ್ನ ೧ ಗಂಟೆಯವರೆಗೆ ತರಗತಿಗಳು ನಡೆಯುತ್ತವೆ. ೧ ರಿಂದ ೪ನೇ ತರಗತಿಯವರೆಗೆ ವಾರಕ್ಕೆ ೧೮ ರಿಂದ ೨೮ ಗಂಟೆ, ೫ ರಿಂದ ೯ನೇ ತರಗತಿಯವರೆಗೆ ೩೦ ರಿಂದ ೩೨ ಗಂಟೆ ಮತ್ತು ೯ ರಿಂದ ೧೩ನೇ ತರಗತಿಯವರೆಗೆ ೩೩ ರಿಂದ ೩೫ ಗಂಟೆಗಳ ಕಾಲ ತರಗತಿಗಳು ನಡೆಯುತ್ತವೆ.

ಈಸ್ಟರ್ ರಜಾದಿನಗಳು ೧೪ ದಿನ; ೮ ದಿನ ಫಿಂಗ್ಸ್ಟನ್ ರಜಾ ಮತ್ತು ೩೫ ದಿನ ಬೇಸಗೆ ರಜಾ. ಇಷ್ಟಲ್ಲದೆ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ೧೦ ದಿನ ರಜಾ ಮತ್ತು ಅಕ್ಟೋಬರ್‌ನಲ್ಲಿ ಒಂದು ದಿನ ಆಲೂಗೆಡ್ಡೆ ರಜಾ.

ಕ್ರಿಸ್ಮಸ್‌ಗೆ ೧೮ ದಿನ ರಜಾ ಕೊಡುತ್ತಾರೆ. ಸಾಮಾನ್ಯವಾಗಿ ಬೇಸಗೆ ರಜಾದಲ್ಲಿ ಹುಡುಗರು ಕಾರ್ಖಾನೆಗಳಲ್ಲಿ ಅಥವಾ ತಮ್ಮ ಮುಂದಿನ ಜೀವನ ನಡೆಸಲು ಅನುಕೂಲವಾದ ಇತರ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾರೆ. ೧ ರಿಂದ ಹಿಡಿದು ೮ನೇ ತರಗತಿಯವರೆಗೆ ವಾರಕ್ಕೆ ೨–೩ ಗಂಟೆ ಧರ್ಮದ ವಿಚಾರ ಬೋಧಿಸುತ್ತಾರೆ; ೫ ರಿಂದ ೯ ಗಂಟೆ ಭಾಷೆ, ೫ ರಿಂದ ೯ ಗಂಟೆ ಚರಿತ್ರೆ, ೧ ರಿಂದ ೨ ಗಂಟೆ ಸಂಗೀತ ಮತ್ತು ೧ ರಿಂದ ೨ ಗಂಟೆ ಚಿತ್ರ ಬರೆಯುವ ಕೆಲಸ ಕಲಿಸುತ್ತಾರೆ. ಹೆಣ್ಣುಮಕ್ಕಳಿಗೆ ೮ ಗಂಟೆ ಮನೆಗೆಲಸ ಹೇಳಿಕೊಡುತ್ತಾರೆ. ಕ್ರೈಸ್ತ ಧರ್ಮವನ್ನೂ ಬೋಧಿಸುತ್ತಾರೆ. ಎಲ್ಲಾ ಮಕ್ಕಳಿಗೂ ಜೀವನದಲ್ಲಿ ಕಳೆ ತುಂಬುವ ಚಿತ್ರಕಲೆ, ಸಂಗೀತ ಹೇಳಿಕೊಡುತ್ತಾರೆ. ಆದ್ದರಿಂದಲೇ ಐರೋಪ್ಯ ದೇಶಗಳಲ್ಲಿ ಸಾಮಾನ್ಯವಾಗಿ ಎಲ್ಲರೂ ಚಿತ್ರಕಲೆಯನ್ನು ನೋಡಿ ಆನಂದಪಡುತ್ತಾರೆ. ಅವರಿಗೆ ಸಂಗೀತದಲ್ಲೂ ಹೆಚ್ಚು ಅಭಿರುಚಿಯಿರುತ್ತದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಹೆಚ್ಚು ಅವಕಾಶ ಕೊಡಲು ವಿದ್ಯಾರ್ಥಿಗಳ ಸಂಘಗಳನ್ನು ಏರ್ಪಡಿಸಿದ್ದಾರೆ. ಯುದ್ಧಕಾಲದಲ್ಲಿ ಹುಟ್ಟಿದ ಮಕ್ಕಳ ಸಲುವಾಗಿ ಯುವಕ ಸಂಘಗಳನ್ನು ಏರ್ಪಡಿಸಿ, ಅವರಿಗೆ ವಿದ್ಯಾಭ್ಯಾಸಕ್ಕೆ, ಜೀವನಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ.

ವಿಶ್ವವಿದ್ಯಾನಿಲಯಗಳಲ್ಲಿ ಅನೇಕ ಭಾಗಗಳಿವೆ ಒಂದೊಂದು ಊರಿಗೂ ಒಂದೊಂದು ಕಾಲೇಜಿದೆ. ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಯಾವಾಗಲೂ ನಿಕಟಸಂಬಂಧ ಇದ್ದೇ ಇರುತ್ತದೆ. ನೀನು ಯಾವ ಪ್ರೊಫೆಸರ್‌ರ ವಿದ್ಯಾರ್ಥಿ ಎಂದು ಕೇಳುತ್ತಾರೆಯೇ ಹೊರತು ಯಾವ ಕಾಲೇಜು ಎಂದು ಕೇಳುವುದಿಲ್ಲ. ಹಾಜರಿ, ಗೈರುಹಾಜರಿ ಹಾಕುವುದಿಲ್ಲ. ತರಗತಿಗೆ ಬಂದರೂ ಬರದಿದ್ದರೂ ಒಂದೇ. ಆತನ ಕೆಲಸ ಮುಖ್ಯ. ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಬೇಕು, ಅಷ್ಟೆ. ವಿದ್ಯಾರ್ಥಿಗಳಿಗೆ ಅನುಕೂಲವಾದಾಗ ಉಪಾಧ್ಯಾಯರು ಪರೀಕ್ಷೆ ಇಟ್ಟುಕೊಳ್ಳುತ್ತಾರೆ. ತನ್ನ ವಿದ್ಯಾರ್ಥಿ ಬೇರೆ ಕಡೆ ಹೋದಾಗ ಒಳ್ಳೆಯ ಹೆಸರುಪಡೆಯಬೇಕೆಂಬ ಕುತೂಹಲ ಉಪಾಧ್ಯಾಯರಿಗಿದೆ. ಅಲ್ಲಿಯ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ೫ ವರ್ಷಕಾಲ ಕಾಲೇಜಿನಲ್ಲಿ ಓದುತ್ತಾನೆ. ಪ್ರತಿವರ್ಷ ೩ ತಿಂಗಳು ಕಾರ್ಖಾನೆಯಲ್ಲೇ ಕೆಲಸ ಮಾಡುತ್ತಾನೆ. ಇದರಿಂದ ಪದವೀಧರನಾಗುವ ವೇಳೆಗೆ ಆತನಿಗೆ ೨ ವರ್ಷದ ತರಪೇತು ಆಗಿರುತ್ತದೆ. ಯಾವ ಜವಾಬ್ದಾರಿಯನ್ನಾದರೂ ವಹಿಸಿಕೊಳ್ಳಬಲ್ಲ. ಕಾಲೇಜಿನ ಉಪಾಧ್ಯಾಯರು ಯಾವ ಕಾರ್ಖಾನೆ, ಆಫೀಸಿಗೆ ಕಾಗದ ಕೊಟ್ಟರೂ ಅದಕ್ಕೆ ಬೆಲೆ ಇದೆ. ಈ ವಿದ್ಯಾರ್ಥಿಗಳು ದೇಶದ ಆಳಿಯಂದಿರೆಂದು ನಾನು ಹಾಸ್ಯ

ಮಾಡುತ್ತಿದ್ದೆ. ಎಲ್ಲಾ ಕಡೆಯಲ್ಲಿಯೂ ಇವರಿಗೆ ರಿಯಾಯಿತಿ, ಗೌರವ. ವಿದ್ಯಾರ್ಥಿಗಳು ಕಾರ್ಖಾನೆ ನೋಡಲು ಹೋದರೆ ಅಲ್ಲಿ ಎಲ್ಲರಿಗೂ ಊಟ ಹಾಕಿ, ಕಾರ್ಖಾನೆಯನ್ನೆಲ್ಲಾ ತೋರಿಸಿ, ಹೋಗುವಾಗ ಬೀಳ್ಕೊಟ್ಟು, "ನೀವು ದೇಶದ ಮುಂದಿನ ಪ್ರಜೆಗಳು. ನಿಮ್ಮಲ್ಲಿ ನಾಲ್ಕಾರು ಜನ ಇದೇ ಕಾರ್ಖಾನೆಯಲ್ಲಿ ಕೆಲಸಕ್ಕೆ ಬರಬಹುದು ಅಥವಾ ಇಂಥ ನಾಲ್ಕಾರು ಕಾರ್ಖಾನೆಗಳನ್ನು ಕಟ್ಟಬಹುದು" ಎನ್ನುತ್ತಾರೆ. ವಿದ್ಯಾರ್ಥಿ ಎಂದರೆ ಸಿಗುವಷ್ಟು ಗೌರವ ಇನ್ನಾವ ಪದವಿಗೂ ಸಿಗುವುದಿಲ್ಲವೆಂದು ನನಗೆ ತೋರುತ್ತದೆ. ವಿದ್ಯಾರ್ಥಿಗಳು ಎಲ್ಲಾ ಕೆಲಸಗಳಿಗೂ ಸಿದ್ಧ. ಹನೋವರ್‌ನಲ್ಲಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳು ಹೋಟೆಲ್‌ನಲ್ಲಿ ಮಾಣಿ (ವೈಟರ್) ಕೆಲಸಮಾಡುವ ಮೂಲಕ ದುಡ್ಡು ಸಂಪಾದನೆ ಮಾಡಿ, ದೇಶಗಳನ್ನು ನೋಡಲು ಹೋಗುತ್ತಿದ್ದರು. ಯಾವ ಕೆಲಸವೂ ಕೀಳು ಎಂಬ ಭಾವನೆ ಇವರಲ್ಲಿಲ್ಲ ಫ್ರಿಟ್ಸ್ ಎಂಬ ಸ್ನೇಹಿತನೊಬ್ಬ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೊನೆಯ ವರ್ಷದಲ್ಲಿ ಓದುತ್ತಿದ್ದ. ಆತ ನೀರು ಸರಬರಾಜು ಮಾಡುವ ವಿದ್ಯಾರ್ಥಿ. ಆತನ ಪ್ರೊಫೆಸರ್ ಒಂದು ಊರಿಗೆ ನೀರು ಸರಬರಾಜು ಮಾಡಲು ಏರ್ಪಾಡುಮಾಡಬೇಕೆಂದೂ, ಅದಕ್ಕೆ ತಕ್ಕ ಅಂದಾಜುಗಳನ್ನು ತಯಾರುಮಾಡಬೇಕೆಂದೂ, ಒಂದು ಬೃಹತ್ ಯೋಜನೆ ಸಿದ್ಧಪಡಿಸಬೇಕೆಂದೂ ಹೇಳಿದರು. ಅದರಂತೆ ಆ ವಿದ್ಯಾರ್ಥಿ ಆ ಊರಿಗೆ ಹೋಗಿ, ಎಲ್ಲಾ ಲೆಕ್ಕಗಳನ್ನೂ ತೆಗೆದುಕೊಂಡು, ಆ ಊರಿಗೆ ನೀರು ಸರಬರಾಜು ಮಾಡಲು, ಆ ನೀರನ್ನು ಶೋಧಿಸಲು ಬೇಕಾದ ಯಂತ್ರ ಮೊದಲುಗೊಂಡು ನೀರು ಹಾಯಿಸುವ ಕೊಳಾಯಿಯವರೆಗೆ ಎಲ್ಲಾ ನಕ್ಷೆಗಳನ್ನೂ ಬರೆದು, ಒಂದು ಬೃಹತ್ ಯೋಜನೆಯನ್ನು ಸಿದ್ಧಪಡಿಸಿ ಪ್ರೊಫೆಸರ್‌ಗೆ ಕೊಟ್ಟ ಇದರಿಂದ ಆತ ಪದವೀಧರ ಆದ ಪ್ರೊಫೆಸರರು ಈ ಯೋಜನೆಯನ್ನು ಆ ಊರಿನ ಮುನಿಸಿಪಾಲಿಟಿಗೆ ಕೊಟ್ಟರು. ಅವರಿಗೂ ಉಪಯೋಗವಾಯಿತು ಹೀಗೆ ದೇಶದಲ್ಲಿರುವ ಅನೇಕ ಕೆಲಸಗಳನ್ನು ವಿದ್ಯಾರ್ಥಿಗಳು ಮಾಡಿಕೊಡುತ್ತಾರೆ. ಇದರಿಂದ ವಿದ್ಯಾರ್ಥಿಗಳಿಗೆ ಕೆಲಸವೂ ಗೊತ್ತಾಗುತ್ತದೆ: ಜವಾಬ್ದಾರಿ ಹೊರಲು ಧೈರ್ಯವೂ ಬರುತ್ತದೆ. ನಿತ್ಯಜೀವನದಲ್ಲಿ ಬರುವ ತೊಡಕುಗಳನ್ನು ಬಿಡಿಸುವ ಕೆಲಸ ವಿದ್ಯಾರ್ಥಿಗಳದು. ಇದರಿಂದ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಹೆದರಿಕೆ ಇಲ್ಲ ಬೇಕಾದ ದಿನ ಪರೀಕ್ಷೆಗೆ ಕೂಡಬಹುದು. ಪರೀಕ್ಷೆ ಮುಗಿದಮೇಲೆ ಸೋಮಾರಿತನದಿಂದ ಕುಳಿತುಕೊಳ್ಳುವ ಸ್ವಭಾವವಿಲ್ಲ. ಹನೋವರ್‌ನಲ್ಲಿ ನಡೆದ ಒಂದು ಕೈಗಾರಿಕಾ ಪ್ರದರ್ಶನದಲ್ಲಿ ವಿದ್ಯಾರ್ಥಿವಿದ್ಯಾರ್ಥಿನಿಯರು

ಹೊಟೇಲ್‌ಗಳಲ್ಲಿ ಹೊರಗಡೆ ಪೆಪ್ಪರ್‌ಮೆಂಟ್ ಮತ್ತು ಸಿಗರೇಟ್ ಮಾರಿ ದುಡ್ಡು ಸಂಪಾದನೆ ಮಾಡುತ್ತಿದ್ದರು.

ಇಲ್ಲಿ ಹುಡುಗರು ವಯಸ್ಸಿಗೆ ಬಂದಮೇಲೆ ಏನು ಮಾಡಿದರೂ ತಂದೆ ತಾಯಿಗಳು ಜವಾಬ್ದಾರರಲ್ಲ. ಸಾಮಾನ್ಯವಾಗಿ ೧೬ರಿಂದ ೧೮ ವರ್ಷದವರೆಗೆ ಹುಡುಗರ ಎಲ್ಲಾ ಆವಶ್ಯಕತೆಗಳನ್ನು ತಂದೆತಾಯಿಗಳು ನೋಡಿಕೊಳ್ಳುತ್ತಾರೆ. ನಂತರ ನೋಡಿಕೊಂಡರೆ ಉಂಟು, ಇಲ್ಲವಾದರೆ ಇಲ್ಲ. ಅವರವರಿಗೆ ಅವರವರ ಜವಾಬ್ದಾರಿ. ಹೆಣ್ಣುಮಕ್ಕಳಾಗಲಿ ಗಂಡುಮಕ್ಕಳಾಗಲಿ ವಯಸ್ಸಿಗೆ ಬಂದ ನಂತರ ಸುಮ್ಮನೆ ಕೂಡದೆ, ದುಡಿದು ತಮ್ಮ ಜೀವನವನ್ನು ಸ್ವಂತವಾಗಿ ನಡೆಸಲು ಯತ್ನಿಸುತ್ತಾರೆ.

ಇಲ್ಲಿಯ ಮಕ್ಕಳಿಗೆ ಒಂದಲ್ಲ ಒಂದು ಹವ್ಯಾಸವಿರುತ್ತದೆ. ಅನೇಕರು ಸ್ಟಾಂಪು, ನಾಣ್ಯ ಕೂಡಿಹಾಕುತ್ತಾರೆ. ಚಿತ್ರ ಬರೆಯುತ್ತಾರೆ. ಬೇರೆ ದೇಶಗಳನ್ನು ನೋಡುವುದೇ ಒಂದು ಹಂಬಲ ಕೆಲವರಿಗೆ. ನನಗೆ ಸಿಕ್ಕಿದ ಮಕ್ಕಳೆಲ್ಲರೂ ಭಾರತವನ್ನು ನೋಡಬೇಕು ಎನ್ನುತ್ತಿದ್ದರು. ಇಷ್ಟಾದರೂ ಶಾಲೆಗಳಲ್ಲಿ ಮತಭೇದ ಹೋಗಿಲ್ಲ. ಧರ್ಮ, ಮತಗಳ ವಿಚಾರದಲ್ಲಿ ಇರುವ ಭೇದಗಳು ಅಲ್ಲಿ ಪ್ರದರ್ಶಿತವಾಗುತ್ತವೆ.

ಬೇರೆ ಬೇರೆ ಊರುಗಳನ್ನು, ದೇಶಗಳನ್ನು ನೋಡಲು ವಿದ್ಯಾರ್ಥಿಗಳಿಗೆ, ಯುವಕರಿಗೆ ಹೆಚ್ಚು ಅವಕಾಶವಾಗಲು ಕಾರಣ ಯೂರೋಪು ದೇಶದಲ್ಲಿ ಬೆಳೆದುಬಂದಿರುವ ಯುವಕ ವಿದ್ಯಾರ್ಥಿನಿಲಯಗಳು (ಯೂತ್ ಹಾಸ್ಟಲ್ಸ್). ಯುವಕರು, ವಿದ್ಯಾರ್ಥಿಗಳು ರಜಾಕಾಲದಲ್ಲಿ ಉಪಯುಕ್ತವಾದ ಕೆಲಸ ಮಾಡಬೇಕು. ಸೋಮಾರಿತನದಿಂದ ಕಾಲ ಕಳೆಯದೆ ದೇಶಕ್ಕಾಗಲಿ, ತಮ್ಮ ಬುದ್ಧಿ ಬೆಳವಣಿಗೆಗಾಗಲಿ ಕಾಲವನ್ನು ಉಪಯೋಗಿಸಿಕೊಳ್ಳಬೇಕು. ನಾಲ್ಕು ಗೋಡೆಗಳ ನಡುವೆ ಶಾಲೆಗಳಲ್ಲಿ ವರ್ಷವೆಲ್ಲಾ ಕಾಲ ಕಳೆದರೆ ಯುವಕರಿಗೆ ಪ್ರಪಂಚದಲ್ಲೆಲ್ಲಾ ಕಾಣುವುದು ಅದು ಒಂದೇ. ಅದರಲ್ಲೂ ಪೇಟೆಗಳಲ್ಲಿರುವ ವಿದ್ಯಾರ್ಥಿಗಳನ್ನು ಕೇಳುವ ಹಾಗೇ ಇಲ್ಲ. ಹಳ್ಳಿಯವರಂತೆ ಪ್ರಕೃತಿಯನ್ನು ನೋಡಿ ಆನಂದಪಡುವ ಅವಕಾಶವೇ ಅವರಿಗಿಲ್ಲ. ಪೇಟೆಯ ಜೀವನ ಯಂತ್ರವಿದ್ದಂತೆ. ಜನ ತಮ್ಮ ತಮ್ಮ ಕೆಲಸ ಮಾಡಿಕೊಂಡು ಹೋಗುತ್ತಾರೆಯೇ ಹೊರತು ಮನುಷ್ಯನ ಸ್ವಭಾವ, ಗುಣ, ನೆರೆಹೊರೆಯವರು, ಸ್ನೇಹಿತರು ಎಂದು ನೋಡುವ ಸ್ವಭಾವ ಕಡಮೆ. ಪಟ್ಟಣದ ಗಡಿಬಿಡಿ ಜೀವನವನ್ನು ಮರೆತು, ಹಳ್ಳಿಗೆ, ಕಾಡುಮೇಡುಗಳಿಗೆ ಹೋಗಿ ಪ್ರಕೃತಿಯ ಆನಂದವನ್ನು ಅನುಭವಿಸುವ ಜನಕ್ಕೆ ಈ ಯುವಕ ಹಾಸ್ಟಲ್‌ಗಳು ಸಹಾಯ ಮಾಡುತ್ತವೆ.

ಅಲ್ಲದೆ ಹಳ್ಳಿಗಳಿಂದ ಬಂದು ಪಟ್ಟಣಗಳನ್ನು ನೋಡಲೂ ಅನುಕೂಲವುಂಟು. ಕೆಲವೇ ದಿನ ಜೊತೆಯಲ್ಲಿ ಪ್ರಯಾಣಮಾಡಿ, ಒಂದೆಡೆ ಇದ್ದು ಬರುವ ವಿಶ್ವಾಸ, ಪ್ರೀತಿ ತರಗತಿಯಲ್ಲಿ ವರ್ಷಗಟ್ಟಲೆ ಓದಿದಮಾತ್ರಕ್ಕೆ ಬರುವುದಿಲ್ಲ. ಬೇರೆ ಊರುಗಳಿಗೆ ಹೋದಾಗ ವಿದ್ಯಾರ್ಥಿಗಳಾಗಲಿ, ಯುವಕರಾಗಲಿ ಒಂದೇ ಕುಟುಂಬದ ಜನರಂತೆ ಜೀವಿಸುವ ಸ್ವಭಾವ ಬರುತ್ತದೆ. ಪ್ರಯಾಣ ಮಾಡಿ ಹೊರದೇಶ ನೋಡುವುದೂ ಒಂದು ಜ್ಞಾನಾರ್ಜನೆಯ ಮಾರ್ಗ. ಹಿಂದಿನ ಕಾಲದಿಂದಲೂ ಬೇರೆ ಬೇರೆ ದೇಶ ನೋಡಿದವರಿಗೆ ಗೌರವ ಸಿಗುತ್ತಿದೆ. ನಮ್ಮ ದೇಶದಲ್ಲಿ ಹಿಂದಿನಿಂದಲೂ ಈ ಪದ್ಧತಿ ಇದೆ. ಸುಮ್ಮನೆ ಬೇರೆ ಊರಿಗೆ ಹೋಗುವುದಿಲ್ಲವೆಂದು ಅಲ್ಲಲ್ಲಿ ಯಾತ್ರಾಸ್ಥಳಗಳನ್ನು ನಿರ್ಮಾಣ ಮಾಡಿದರು. ಉತ್ತರ ಇಂಡಿಯಾದಿಂದ ಹಿಡಿದು ದಕ್ಷಿಣದ ಕೊನೆಯವರೆಗೂ ಎಲ್ಲಿ ನೋಡಿದರೂ ಯಾತ್ರಾಸ್ಥಳಗಳೇ. ಅನುಕೂಲ, ಶಕ್ತಿ ಇದ್ದಷ್ಟು ನೋಡಬಹುದು. ಹಿಂದೆ ಎಲ್ಲರೂ ನಡೆದುಕೊಂಡೇ ಹೋಗುತ್ತಿದ್ದುದರಿಂದ ಅವರಿಗೆ ಹೆಚ್ಚು ಅನುಭವ ಬರುತ್ತಿತ್ತು.

ಈ ಹಾಸ್ಟಲ್‌ಗಳು ಪ್ರಾರಂಭವಾಗಿದ್ದು ಜರ್ಮನಿಯಲ್ಲಿಯೇ ಮೊದಲು. ೧೮೮೪ನೇ ಇಸವಿಯಲ್ಲಿ ಹೆರ್ ರೋಟರ್ ಎಂಬಾತ ಹೊಹನ್ ಎಲ್ಬೆ ಎಂಬಲ್ಲಿ ವಿದ್ಯಾರ್ಥಿಗಳ ಒಂದು ಹಾಸ್ಟಲನ್ನು ಪ್ರಾರಂಭಿಸಿದ. ಪ್ರಾರಂಭಿಸುವುದಕ್ಕೆ ಕಾರಣ, "ಪಟ್ಟಣಗಳಿಂದ ತಪ್ಪಿಸಿಕೊಂಡು ಹೋಗಿ ವಾಸಿಸಲು" ಎಂದು ಹೇಳಿದ. ೧೮೯೬ರಲ್ಲಿ ಹೆರ್ ಕಾರ್ಲ್ ಫಿಷರ್ ಎಂಬಾತ ವಾಂಡರ್ ಪೂಗರ್ (ಅಲೆದಾಡುವ ಪಕ್ಷಿಗಳು) ಎಂಬ ಹೆಸರಿನಲ್ಲಿ ಒಂದು ಸಂಸ್ಥೆ ಕಟ್ಟಿದ. ೧೯೦೯ರ ಆಗಸ್ಟ್ ೨೬ನೇ ತಾರೀಕು ಯುವಕ ಸಂಸ್ಥೆಯ ನಿಜವಾದ ಪ್ರಾರಂಭದ ದಿನ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಆ ದಿನ ಜರ್ಮನಿಯ ರೂಸರ್ತ್ ಎಂಬ ಉಪಾಧ್ಯಾಯ ಅಲ್ಟಾನಾದಲ್ಲಿ ಹುಡುಗರನ್ನು ಕಾಡಿಗೆ ಕರೆದುಕೊಂಡು ಹೋಗಿ ಅಲ್ಲಿ ವಾಸಿಸಿ ಬಂದ. ಹೀಗೆ ಪ್ರಾರಂಭವಾಯಿತು ಯುವಕ ಹಾಸ್ಟಲ್. ಈಗ ೨,೯೦೦ ಇಂಥ ಹಾಸ್ಟಲ್‌ಗಳಿವೆ. ಪ್ರಪಂಚದ ಆದ್ಯಂತವೂ ಆವರಿಸಿಕೊಂಡಿವೆ. ಪ್ರಪಂಚದ ಎಲ್ಲ ಯುವಕ ಹಾಸ್ಟಲ್‌ಗಳೂ ಸೇರಿ ಒಂದು ಸಂಘ ಮಾಡಿಕೊಂಡಿವೆ. ಯಾವ ದೇಶದ ಹಾಸ್ಟಲಿನ ಸದಸ್ಯನಾದರೂ ಇನ್ನೊಂದು ದೇಶದ ಹಾಸ್ಟಲಿನಲ್ಲೂ ತನ್ನ ಸದಸ್ಯತ್ವದ ಕಾರ್ಡನ್ನು ತೋರಿಸಿ ವಾಸಿಸಬಹುದು. ಅಲ್ಲಿ ಎಲ್ಲ ಅನುಕೂಲಗಳನ್ನೂ ಪಡೆಯಬಹುದು.

"ಯುವಕ ಹಾಸ್ಟಲ್ ಒಂದು ಅಗ್ಗದ ಹೊಟೇಲ್ ಅಲ್ಲ" ಎಂದು ಅಂತರ ರಾಷ್ಟ್ರೀಯ ಹಾಸ್ಟಲ್‌ಗಳ ಸಂಘದ ಅಧ್ಯಕ್ಷರು ಒಂದು ಕಡೆ ಹೇಳಿದ್ದಾರೆ.

ಇದೂ ಒಂದು ಹೊಟೇಲ್ ಎಂದು ತಿಳಿಯಬಾರದು. ಒಂದು ದಿನ ಬ್ರೌನ್ಸ್ ವೈಗ್‌ನ ಹಾಸ್ಟಲ್‌ಗೆ ಹೋಗಿ ನಾನು ಸದಸ್ಯನಾದೆ. ನನಗೆ ೨೫ ವರ್ಷ ಗಳಾದ್ದರಿಂದ ೪ ಜರ್ಮನ್ ಮಾರ್ಕು ಕೊಡಬೇಕಾಗಿ ಬಂತು. ೨೫ ವರ್ಷ ಗಳಿಗಿಂತ ಕಡಮೆ ವಯಸ್ಸಾಗಿದ್ದರೆ ೨ ಮಾರ್ಕು ಮಾತ್ರ. ಒಂದು ಅಂತರ ರಾಷ್ಟ್ರೀಯ ಕಾರ್ಡು ಕೊಟ್ಟರು. ಈ ಕಾರ್ಡಿನಲ್ಲಿ ನನ್ನ ಹೆಸರು, ವಯಸ್ಸು, ದೇಶ, ಜರ್ಮನಿಯಲ್ಲಿ ನಾನಿದ್ದ ಊರು-ಎಲ್ಲಾ ವಿವರ ಇತ್ತು. ಈ ಕಾರ್ಡನ್ನು ತೋರಿಸಿದರೆ ಬೇರೆ ಊರಿಗೆ ಹೋದಾಗ ಅಲ್ಲಿ ಇರುವ ಹಾಸ್ಟಲ್‌ನಲ್ಲಿ ಇಳಿದು ಕೊಳ್ಳಲು ಅವಕಾಶ ಕೊಡುತ್ತಾರೆ. ಒಂದು ದಿನ ಇಳಿದುಕೊಳ್ಳಲು ೫೦ ಪೈಸೆ ಕೊಡಬೇಕು ಹಾಸಿಗೆಗೆ ಒಂದು ಬೆಡ್‌ಷೀಟ್ ತೆಗೆದುಕೊಂಡು ಹೋಗಿರ ಬೇಕು. ಹೊದ್ದುಕೊಳ್ಳಲು ಕಂಬಳಿ ಅವರೇ ಕೊಡುತ್ತಾರೆ. ಬೆಡ್‌ಷೀಟ್ ಇಲ್ಲದಿದ್ದರೆ ೫೦ ಪೈಸೆ ಕೊಟ್ಟರೆ ಬಾಡಿಗೆಗೆ ಕೊಡುತ್ತಾರೆ. ಅದನ್ನು ನಿತ್ಯವೂ ಒಗೆಯುತ್ತಾರೆ. ಒಂದು ಕೊಠಡಿಯಲ್ಲಿ ೧೦ರಿಂದ ೩೦–೪೦ ಹಾಸಿಗೆಗಳ ವರೆಗೂ ಇರುತ್ತವೆ. ಎಲ್ಲಿ ಹೋಗಿದ್ದರೂ ರಾತ್ರಿ ೧೦ ಗಂಟೆಯೊಳಗಾಗಿ ಹಾಸ್ಟಲ್‌ಗೆ ಬಂದುಬಿಡಬೇಕು. ಹತ್ತು ಗಂಟೆಯ ಮೇಲೆ ಹೊರಗಡೆಯ ಬಾಗಿಲಿಗೆ ಬೀಗ ಹಾಕಿಬಿಡುತ್ತಾರೆ. ೧೦–೩೦ರಿಂದ ೧೧ರ ಒಳಗೆ ಮಲಗುವ ಮನೆಯ ದೀಪ ಆರಿಸಿಬಿಡುತ್ತಾರೆ. ಎಲ್ಲವೂ ಒಂದು ಶಿಸ್ತಿನಿಂದ ನಡೆಯುತ್ತದೆ. ಬೆಳಗ್ಗೆ ೭ ಗಂಟೆಯೊಳಗೆ ಎಲ್ಲರನ್ನೂ ಎಚ್ಚರಿಸುತ್ತಾರೆ. ಒಂಬತ್ತು ಗಂಟೆ ಯೊಳಗೆ ಮಲಗುವ ಕೋಣೆ ಬಿಡಬೇಕು ಹಾಸ್ಟಲ್ ನಡೆಸುವ ಯಜಮಾನ ನಿಗೆ ಈ ಬಗ್ಗೆ ಪೂರ್ಣ ಅಧಿಕಾರ. ಎಲ್ಲರೂ ಅವನಿಗೆ ವಿಧೇಯರಾಗಿ ನಡೆದು ಕೊಳ್ಳಬೇಕು. ಬೆಳಗ್ಗೆ ಹಾಲು, ಕಾಫಿ, ಬ್ರೆಡ್ ಸಿಗುತ್ತವೆ. ಎಲ್ಲವನ್ನೂ ನಾವೇ ಕಿಟಕಿಯ ಹತ್ತಿರ ಹೋಗಿ ಕೊಂಡುಕೊಳ್ಳಬೇಕು. ಆಮೇಲೆ ಪಾತ್ರೆ ತೊಳೆಯುವ ಕೊಠಡಿಯಲ್ಲಿ ಒಯ್ದು ಇಡಬೇಕು. ಊಟ ಮಾಡುವವರು ಅಲ್ಲಿ ದೊರೆಯುವ ಸುಲಭ ಬೆಲೆಯ ಆಹಾರ ತೆಗೆದುಕೊಳ್ಳಬಹುದು. ಅಡಿಗೆ ಮಾಡಿಕೊಳ್ಳಲು ಪಾತ್ರೆ, ಸ್ಥಳ ಸಹ ಕೊಡುತ್ತಾರೆ. ಈ ಹಾಸ್ಟಲ್‌ಗಳಲ್ಲಿ ಮದ್ಯಪಾನಕ್ಕ ಅವಕಾಶವಿಲ್ಲ. ಸಿಗರೇಟು ಸೇದುವ ಹಾಗಿಲ್ಲ. ಫ್ರಾನ್ಸ್, ಇಟಲಿಗಳಲ್ಲಿ ಮಾತ್ರ ವೈನ್ ಕುಡಿಯಬಹುದು. ಇದು ಅಲ್ಲಿಯ ಜನರ ರೂಢಿ. ಹತ್ತು ವರ್ಷ ವಯಸ್ಸಾಗುವವರೆಗೆ ಈ ಹಾಸ್ಟಲ್‌ಗಳಿಗೆ ಸೇರಿಸುವುದಿಲ್ಲ. ಯುವಕರಿಗೆ ಮೊದಲ ಸ್ಥಾನ ಕೆಲವು ದೇಶಗಳಲ್ಲಿ ೨೫ ವರ್ಷಗಳ ಮೇಲಿನ ಯುವಕರನ್ನು ಹಾಸ್ಟಲ್‌ಗಳಿಗೆ ಸೇರಿಸುವುದಿಲ್ಲ. ವಿದ್ಯಾರ್ಥಿಗಳೂ ಯುವಕರೂ ಇವುಗಳ ಸದಸ್ಯರಾಗಿರುತ್ತಾರೆ. ಇಲ್ಲಿ ಅವರಿಗೆ ದೊರೆಯುವಷ್ಟು ಅನುಕೂಲ

ಇನ್ನೆಲ್ಲೂ ದೊರೆಯುವುದಿಲ್ಲ. ಐಶ್ವರ್ಯವಂತ, ಬಡವನೆಂಬ ಭೇದಭಾವನೆ ಇಲ್ಲ. ಸಾಧ್ಯವಾದಷ್ಟುಮಟ್ಟಿಗೆ ಹಳೆಯ ಕಟ್ಟಡಗಳನ್ನು, ಕೋಟೆ ಮುಂತಾದ ಯಾರೂ ಉಪಯೋಗಿಸದ ಸ್ಥಳಗಳನ್ನು ಹಾಸ್ಟೆಲ್‌ಗಳಾಗಿ ಪರಿವರ್ತನೆ ಮಾಡುತ್ತಾರೆ. ಅಲ್ಲಿ ಬೇಕಾದ ಅನುಕೂಲಗಳನ್ನು ಒದಗಿಸಿಕೊಳ್ಳುತ್ತಾರೆ.

ಹಾಸ್ಟೆಲ್‌ಯಜಮಾನ ರಕ್ಷಕನಾಗಿರಬೇಕು. ಸೇವಾನುನೋಪೃತ್ತಿಯುಳ್ಳವನಾಗಿರಬೇಕು. ಇದಕ್ಕೆ ಅನೇಕರು ಸಿದ್ಧ. ಹುಡುಗರನ್ನೂ ಯುವಕರನ್ನೂ ಒಂದು ಹದದಲ್ಲಿ ಇಟ್ಟು, ಶಿಸ್ತಿನಿಂದ ಹಾಸ್ಟೆಲ್ ನಡೆಸಲು ನೈತಿಕಶಕ್ತಿ ಬೇಕು. ಇದಕ್ಕಾಗಿ. ತರಬೇತು ಕೊಡುವ ವ್ಯವಸ್ಥೆಯಿದೆ. ಬೇಸಗೆಯಲ್ಲಿ, ಮತ್ತಿತರ ರಜಾದಿನಗಳಲ್ಲಿ ಉಪಯುಕ್ತವಾಗಿ ಕಾಲ ಕಳೆಯಲು ಇಲ್ಲಿ ಅನುಕೂಲ ಮಾಡಿಕೊಡುತ್ತಾರೆ.

ನಾನು ನೋಡಿದ ಕೆಲವು ಯುವಕ ಹಾಸ್ಟೆಲ್‌ಗಳ ಪೈಕಿ ಮ್ಯೂನಿಚ್‌ನ ಹಾಸ್ಟೆಲ್ ದೊಡ್ಡದು. ಅಲ್ಲಿ ಎಲ್ಲ ಅನುಕೂಲಗಳೂ ಇದ್ದವು. ಹನೋವರ್‌ನಲ್ಲಿರುವ ಯುವಕರ ಹಾಸ್ಟೆಲ್‌ನಲ್ಲಿ ಯುವಕರು ಸಂಜೆಯ ವೇಳೆ ಕಾಲ ಕಳೆಯಲು ಅವಕಾಶವಿದೆ. ದೊಡ್ಡ ನಾಟಕಶಾಲೆಯಿದೆ. ಅಲ್ಲಿ ಪ್ರತಿ ಸಂಜೆ ಯುವಕರ ನಾಟಕವಿರುತ್ತದೆ. ಸಂಗೀತವನ್ನೂ ಕಲಿಯಬಹುದು. ವಾಚನಾಲಯ, ಪುಸ್ತಕ ಭಂಡಾರಗಳೂ ಇವೆ ಯುದ್ಧದಲ್ಲಿ ಈ ಕಟ್ಟಡ ಪೂರ್ತಿ ಬಿದ್ದುಹೋಗಿತ್ತು. ಹನೋವರಿನ ಯುವಕರು ಸೇರಿ ಇದನ್ನು ಪುನಃ ಕಟ್ಟಿದ್ದಾರೆ. ಇಲ್ಲಿ ಯುವಕರು ಮಾಡದ ಕೆಲಸ ಯಾವುದು ಎಂದು ಆಶ್ಚರ್ಯವಾಗುತ್ತದೆ. ಹನೋವರಿನಲ್ಲೇ ನಾಟೂರ್ ಫ್ರೆಂಚ್ ಪ್ರಕೃತಿಯ ಸ್ನೇಹಿತರ ಒಂದು ಹಾಸ್ಟೆಲ್ ಇದೆ. ಹೆಸರಿಗೆ ತಕ್ಕಂತೆ ಹನೋವರಿನ ಹತ್ತಿರ ಒಂದು ದೊಡ್ಡ ತೋಟ ಇದೆ. ಸುತ್ತಲೂ ಕಾಡಿನಂತಿದ್ದು ಎಲ್ಲಾ ಅನುಕೂಲಗಳೂ ಇವೆ. ಈ ಹಾಸ್ಟೆಲ್ ನಡೆಸುವವಳು ಒಬ್ಬ ಹೆಂಗಸು. ಎಲ್ಲಾ ಕೆಲಸಗಳನ್ನೂ ತಾನೇ ಮಾಡಿಕೊಳ್ಳುತ್ತಾಳೆ. ಹಾಸ್ಟೆಲ್ ದೂರವಾಗಿದ್ದರೂ ಬಹಳ ಸುಂದರವಾಗಿದೆ. ಜರ್ಮನಿಯಲ್ಲಿ ದೊಡ್ಡದೂ ಬಹಳ ಸುಂದರವಾದುದೂ ಎಂದರೆ ಹ್ಯಾಂಬೂರ್ಗ್‌ನ ಹಾಸ್ಟೆಲ್. ಇದು ಎತ್ತರವಾದ ಸ್ಥಳದಲ್ಲಿ ಸಮುದ್ರದ ಎದುರಿಗೆ ಇದೆ. ಬೇಸಗೆಯಲ್ಲಿ ಈ ಹಾಸ್ಟೆಲ್‌ಗಳಲ್ಲಿ ಸ್ಥಳ ಸಿಗುವುದೇ ಕಷ್ಟ. ಅನೇಕ ದೇಶದ ಜನಗಳನ್ನು ಇಲ್ಲಿ ಕಾಣಬಹುದು. ಎಲ್ಲರೂ ಒಂದೇ ಕುಟುಂಬದವರಂತೆ ನಡೆದುಕೊಳ್ಳುತ್ತಾರೆ. ಎಂತಹ ದೊಡ್ಡ ಹಾಸ್ಟೆಲ್‌ಗಳಾದರೂ ಕಾರಿನಲ್ಲಿ ಬಂದವರಿಗೆ ಅವಕಾಶ ಕೊಡುವುದಿಲ್ಲ.

೧೬. ತಾಯ್ನಾಡಿಗೆ

ಒಂದು ವರ್ಷಕಾಲ ಜರ್ಮನಿಯಲ್ಲಿದ್ದು ತಾಯ್ನಾಡಿಗೆ ಹಿಂದಿರುಗಲು ಸಂತೋಷವಾದರೂ, ಇಷ್ಟು ದಿನ ವಿಶ್ವಾಸದಿಂದ ನೋಡಿದ ಸ್ನೇಹಿತರನ್ನು ಬಿಟ್ಟು ಬರಲು ದುಃಖವಾಯಿತು. ಹೊರಡಲು ಒಂದು ತಿಂಗಳ ಮುಂಚೆಯೇ ಪ್ರಯಾಣದ ಏರ್ಪಾಡನ್ನು ಸಿದ್ಧಪಡಿಸಿದೆ. ಜೊತೆಗೆ ಸ್ನೇಹಿತರನ್ನು ಕಂಡು ಬೀಳ್ಕೊಡುವುದೇ ಕೆಲಸವಾಯಿತು ಊರಿನ ಸ್ನೇಹಿತರೆಲ್ಲರೂ "ಜರ್ಮನಿಯನ್ನು ಮರೆಯಬೇಡಿ, ನಾವು ಶಾಂತಿಪ್ರಿಯರು, ನಿಮ್ಮ ಜನಗಳಿಗೆ ನಮ್ಮ ಶುಭಾಶಯಗಳನ್ನು ತಿಳಿಸಿ" ಎಂದು ಹೇಳುವವರೇ. ಕೆಲವರು, "ಒಂದು ವರ್ಷ ಜರ್ಮನಿಯಲ್ಲಿದ್ದಿರಿ. ಇಲ್ಲಿಯ ಜನರ ಜೊತೆ ಜೀವಿಸಿದ್ದೀರಿ. ಬೇರೆಯವರಂತೆ ನಾಲ್ಕು ದಿನ ಇದ್ದು ಹಾರಿಹೋಗಿಲ್ಲ. ನಿಮಗೆ ಜರ್ಮನಿಯ ವಿಚಾರದಲ್ಲಿ ಏನು ಗೊತ್ತಿದೆ?" ಎಂದು ಕೇಳುತ್ತಿದ್ದರು. ಅನೇಕರು ಮನೆಗೆ ಕರೆದು ಸಂಜೆ ಊಟ ಉಪಚಾರ ಏರ್ಪಡಿಸಿದರು. "ಭಾರತ-ಜರ್ಮನಿ ಸ್ನೇಹ ಚಿರಾಯುವಾಗಲಿ, ನಮ್ಮ ಸ್ನೇಹ ಬೆಳೆಯಲಿ" ಎಂದು ಹೇಳಿದವರು ಕೆಲವರು. ನಾನು ಇದ್ದ ಕುಟುಂಬದವರ ಮಗಳು "ನನಗೆ ಕಾಗದ ಬರೆಯಿರಿ, ಒಳ್ಳೆ ಸ್ಟಾಂಪ್ ಕಳಿಸಿರಿ" ಎಂದು ಕೇಳಿದಳು. ಕೊಠಡಿ ಬಿಟ್ಟು ಹೊರಟಾಗ ಮನೆಯ ಯಜಮಾನಿ, "ನಿಮ್ಮಂತಹವರೇ ಈ ಕೊಠಡಿಗೆ ಬಾಡಿಗೆಗೆ ಬರಲಿ" ಎಂದು ಹೇಳಿದಳು. ನಾನು ಬಿಟ್ಟ ದಿನ ಕ್ರಿಸ್ಮಸ್ ಆದರೂ ಸಹ ಕಾರ್ಖಾನೆಯ ಸ್ನೇಹಿತರು ಕಾರ್ಖಾನೆ ವ್ಯಾನನ್ನು ತಂದು ಬ್ರೌನ್ಸ್ವೈಗ್‌ನಿಂದ ೧೭೦ ಕಿ. ಮೀ. ದೂರ ಇದ್ದ ಗೋಬಿನ್ ಊರಿಗೆ ಸೇರಿಸಿ ಬೀಳ್ಕೊಟ್ಟರು.

"ಆಫ್‌ವಿಡರ್ ಸೇ ಎನ್" (ನಾವು ಪುನಃ ನೋಡೋಣ) ಎಂಬ ಬೀಳ್ಕೊಟ್ಟ ಮಾತುಗಳು ಈಗ ಆಡಿದಂತಿವೆ. ಆ ದೃಶ್ಯ ಈಗಲೂ ಕಣ್ಣ ಮುಂದಿದೆ. ಈ ಚಿತ್ರ ಮನಸ್ಸಿಗೆ ಬಂದಾಗಲೆಲ್ಲಾ ಅಧಿಕಾರದ ಅಂತರವಿಲ್ಲದೆ, ವರ್ಣಭೇಧವಿಲ್ಲದೆ, ಇಷ್ಟು ವಿಶ್ವಾಸದಿಂದ ಕಂಡ ಈ ಜನದ ಋಣವನ್ನು ನಾನು ಯಾವಾಗ ತೀರಿಸುವುದೋ ಕಾಣೆ.

ಜಿನೋವಾ

ಇಟಲಿಯ ಜಿನೋವಾಗೆ ರೈಲಿನಲ್ಲಿ ಬಂದು ಸಾಮಾನುಗಳನ್ನೆಲ್ಲಾ ಪ್ರಯಾಣ ಮಾಡಬೇಕಾಗಿದ್ದ ಹಡಗಿನ ಯಜಮಾನರಾದ ಲಾ ಟೆಸ್ಟಿನೋ

ಅವರ ಆಫೀಸಿನಲ್ಲಿ ಕೊಟ್ಟು, ಹಡಗಿನಲ್ಲಿ ಇಡಲು [illegible] ಸಲ [illegible] ಹಡಗು ಹತ್ತುವುದಕ್ಕೆ ಅಪ್ಪಣೆಪಡೆದು ಜಿನೋವಾದಿ [illegible]ಸಾ, ಫ್ಲಾರೆನ್ಸ್ ಮತ್ತು ರೋಮ್ ಮೂಲಕ ನೇಪಲ್ಸ್‌ಗೆ ಬಂದು ಅಲ್ಲಿ 'ವಿಕ್ಟೋರಿಯಾ' ಹಡಗನ್ನು ಹತ್ತಿದೆ. ಹಡಗು ಏಡನ್ ತಲುಪುವ ವೇಳೆಗೆ ಎಲ್ಲರೂ ಚಳಿಗಾಲದ ಉಡುಪನ್ನು ಬಿಟ್ಟು ತೆಳುವಾದ ಉಡುಪನ್ನು ಧರಿಸಲು ಪ್ರಾರಂಭಿಸಿದೆವು.

ಏಡನ್ ಬಿಟ್ಟಕೂಡಲೇ ನನ್ನ ಸಾಮಾನಿನ ಪಟ್ಟಿ ತಯಾರು ಮಾಡಿ ಹಡಗಿನವರಿಗೆ ಕೊಟ್ಟೆವು. ಬೊಂಬಾಯಿಯಲ್ಲಿ ಇಳಿಯುವವರೆಲ್ಲ ಸಾಮಾನು ಸರಿಮಾಡಿಕೊಳ್ಳುವುದರಲ್ಲಿದ್ದರು. ಬೆಂಗಳೂರಿನಿಂದ ಯಾರು ಬಂದಿರುತ್ತಾರೊ ಎಂದು ರಾತ್ರಿಯೆಲ್ಲಾ ಯೋಚನೆ. ಮಧ್ಯರಾತ್ರಿ ೧೨ ಗಂಟೆಯವರೆಗೂ ಮಾತನಾಡುತ್ತಾ ಹಡಗಿನಲ್ಲಿಯ ಕೊನೆಯ ದಿನವನ್ನು ಕಳೆದೆವು. ಬೆಳಗ್ಗೆ ಎದ್ದು ಕಣ್ಣುಬಿಡುವ ಹೊತ್ತಿಗಾಗಲೇ ಕಿಟಕಿಯಲ್ಲಿ ಬೊಂಬಾಯಿಯ 'ಗೇಟ್ ವೇ ಆಫ್ ಇಂಡಿಯಾ'ದ ದೀಪಗಳು ಕಾಣುತ್ತಿದ್ದುವು.

ಬೊಂಬಾಯಿ ಸೇರಿದ ಮಾರನೇ ದಿನವೇ ಬೆಂಗಳೂರಿಗೆ ರೈಲಿನಲ್ಲಿ ಪ್ರಯಾಣ ಮಾಡಿದೆ. ಇಷ್ಟು ದೇಶ, ಊರು ತಿರುಗಿದ ನನಗೆ ಬೆಂಗಳೂರಿನ ಸೊಗಸು ಇನ್ನೆಲ್ಲೂ ಇಲ್ಲ ಎನಿಸಿತು.

VIJAYA EVENING COLLEGE.
LIBRARY
BANGALORE-4.
ACCN. NO (5285)
SECTION
COST Rs. 2=70
Date 6/7/76 Librarian.

Call No :
Author : ಶ್ರೀನಿವಾಸಮೂರ್ತಿ . ಶ್ರೀ
Title ನಾಕಂಡ ಜರ್ಮನಿ

Signature	Borrowing Date
K. R. [illegible]	9/10/80
N. Ramakrishna	2-12-8
B. K. [illegible]	11
V. Srinivasa Rao.	
G. Manjunat	
A. [illegible]	
[illegible]	

5285

ನಾ ಕಂಡ ಜರ್ಮನಿ

ಹೊ. ಶ್ರೀನಿವಾಸಯ್ಯ

ಕೆಲವು ಅಭಿಪ್ರಾಯಗಳು

ಸರಳ ಶೈಲಿ ನೇರವಾಗಿ ಮನಮುಟ್ಟುತ್ತದೆ. ಎಲ್ಲರೂ ಇದನ್ನು ಸ್ವಾಗತಿಸಿ ಕೊಂಡು ಓದಬೇಕಾದ ಪುಸ್ತಕವೆಂದು ಮುಚ್ಚುಮರೆ ಇಲ್ಲದೆ ಹೇಳಬಹುದು.

—ಜೀವನ

ಶ್ರೀನಿವಾಸಯ್ಯನವರ 'ನಾ ಕಂಡ ಜರ್ಮನಿ' ತಮ್ಮ ಪ್ರವಾಸದ ಸಂಪೂರ್ಣ ಅನುಭವ ಕೊಡುವ ಒಂದು ಉತ್ತಮ ಹೊತ್ತಿಗೆ. ಕನ್ನಡಜನ ಹೊರನಾಡಿನಲ್ಲಿ ಹೋದಾಗ ಹೇಗೆ ನಡೆದುಕೊಳ್ಳಬೇಕು ಎಂಬುದಕ್ಕೆ ಇದು ದಾರಿ ತೋರಿಸುತ್ತದೆ.

—ಸಂಯುಕ್ತ ಕರ್ನಾಟಕ

ಇಲ್ಲಿ ಉಪದೇಶವಿಲ್ಲ. ಉದ್ವೇಗವಿಲ್ಲ. ಉತ್ಪ್ರೇಕ್ಷೆಯೂ ಇಲ್ಲ. ಸಹಜವಾದುದನ್ನು ಸಾಮಾನ್ಯನ ಕಣ್ಣಿಗೆ ಕಂಡಂತೆ, ಅನುಭವಕ್ಕೆ ಬಂದಂತೆ ಹಾಗು ಜನಸಾಮಾನ್ಯರಿಗೆ ಅರ್ಥವಾಗುವಂತೆ ಲೇಖಕರು ಸರಳವಾಗಿ ನಿರೂಪಿಸಿದ್ದಾರೆ. ಇದು ಪ್ರಯಾಣಿಕ ಕಣ್ಣಿನಲ್ಲಿ ಕಂಡ ದೃಶ್ಯಗಳ ವರ್ಣನೆಯಲ್ಲ. ವಸ್ತುನಿಷ್ಠ, ಪರಿಚಯ, ಮಾರ್ಮಿಕ ಅನುಭವ ಹಾಗು ಮಾನವೀಯತಾ ಭಾವನೆಗಳಿಂದ ಪ್ರಚೋದಿತ ಗ್ರಂಥ.

—ಪ್ರಜಾವಾಣಿ

ಈ ಕೃತಿಯಲ್ಲಿ ಪುಟ್ಟ ಪುಟ್ಟ ವಾಕ್ಯಗಳಿವೆ. ಎಲ್ಲಿಯೂ ಆಡಂಬರದ ಭಾಷೆಯಿಲ್ಲ. ಹೇರಳವಾದ ವಿಷಯ ಸಂಪತ್ತಿದೆ. ವಿಷಯ ಪ್ರತಿಪಾದನೆಯಲ್ಲಿ ಹೊಂದಾಣಿಕೆಯಿದೆ. ಲೇಖಕರು ಕಂಡ ಜರ್ಮನಿಯನ್ನು ವಾಚಕರೂ ಕಾಣಬಹುದಾಗಿದೆ.

—ಪ್ರಬುದ್ಧ ಕರ್ನಾಟಕ

'ನಾ ಕಂಡ ಜರ್ಮನಿ' ಕನ್ನಡ ಪ್ರವಾಸ ಸಾಹಿತ್ಯಕ್ಕೊಂದು ನಿರಾಭರಣ ಕಾಣಿಕೆ.

—ಕರ್ಮವೀರ

ಬೆಲೆ 2=70

ಸುರುಚಿ ಪ್ರಕಾಶನ :: ಸರಸ್ವತೀಪುರಂ :: ಮೈಸೂರು-೫೭೦೦೦೯